to the Speaker in his chamber later during the day or by submitting a written representation to the Speaker in that behalf. In case the Speaker is satisfied on the submission of the member that there are adequate grounds to bring up the matter before the House, he would either mention it or permit the member to raise it on the following day irrespective of the fact that the notice had been given on the previous day. ಅದಕ್ಕೋಸ್ಕರ ತಾವು ಬೇಕಾದರೆ ನನ್ನ ಛೇಂಬರಿಗೆ ಬನ್ನಿ ನನಗೆ ಕನ್‌ವಿನ್ಸ್ ಮಾಡಿ, ನನಗೆ ಕನ್‌ವಿನ್ಸ್ ಮಾಡಿದರೆ I will permit you. Now discussion and voting on the demands for grants for the year 1986-87.

ಶ್ರೀ ಎಸ್. ಬಂಗಾರಪ್ಪ.—ಮಾನ್ಯ ಅಧ್ಯಕ್ಷರೇ ......

ಅಧ್ಯಕ್ಷರು.—ನೀವು ದಯವಿಟ್ಟು ಕುಳಿತುಕೊಳ್ಳಿ.

ಶ್ರೀ ಎಸ್. ಬಂಗಾರಪ್ಪ.— ದಯವಿಟ್ಟು ನೀವು ಕುಳಿತುಕೊಳ್ಳಿ. ನೀವು ಏಕೆ ಎದ್ದು ನಿಲ್ಲುತ್ತೀರಿ,

ಅಧ್ಯಕ್ಷರು.—ಸ್ಪೀಕರ್ ಎದ್ದು ನಿಲ್ಲುವ ಅರ್ಥವೇನೆಂದರೆ, ಇದರ ಪ್ರಶ್ನೆ ಮುಗಿಯಲಿಕ್ಕೆ ಹಚ್ಚಿದೆ. ಇದು ಮುಗಿದ ಮೇಲೆ ಡಿಮ್ಯಾಂಡ್ ಶುರು ಮಾಡಬೇಕು. ನಂತರ ನಾನು ಛೇಂಬರಿಗೆ ಹೋಗುತ್ತೇನೆ, ತಾವು ನನ್ನ ಛೇಂಬರಿಗೆ ಬನ್ನಿ. ಡಿಸ್ಕಸ್ ಮಾಡಿ ನನಗೆ ಕನ್‌ವಿನ್ಸ್ ಮಾಡಿ, ಈಗ ಬೇಡ. ಈಗ ಮಂತ್ರಿಗಳು ಡಿಮ್ಯಾಂಡ್ಸ್ ಮಂಡಿಸಲಿ.

ಶ್ರೀ ಎಸ್. ಬಂಗಾರಪ್ಪ.—ಮಾನ್ಯ ಅಧ್ಯಕ್ಷರೆ, ನಾನು ತಮ್ಮ ರೂಲಿಂಗನ್ನು ಪ್ರಶ್ನೆ ಮಾಡುವುದಿಲ್ಲ. ಆ ಉದ್ದೇಶ ಕೂಡ ನಮಗೆ ಇಲ್ಲ. ಹಿಂದೆ ಅಡ್ಜರ್ನ್‌ಮೆಂಟ್ ಮೋಷನ್ ಕೊಟ್ಟಾಗ ಸಬ್ಮಿಟ್ ಮಾಡುವುದಕ್ಕೆ ಅವಕಾಶ ಕೊಟ್ಟಿದ್ದೀರಿ. ಆದುದರಿಂದ ಹೇಳುತ್ತಾ ಇದ್ದೇನೆ.

ಅಧ್ಯಕ್ಷರು. —ನನ್ನ ಛೇಂಬರಿಗೆ ಬನ್ನಿ, ಕನ್‌ವಿನ್ಸ್ ಮಾಡಿ.

ಶ್ರೀ ಎಸ್. ಬಂಗಾರಪ್ಪ.—ಮಾನ್ಯ ಅಧ್ಯಕ್ಷರೆ.........

ಅಧ್ಯಕ್ಷರು.—Don't record, ಈಗ ಬಂಗಾರಪ್ಪನವರು ಏನು ಹೇಳಿದರೂ ಅದು ರಿಕಾರ್ಡ್‌ಗೆ ಹೋಗುವುದಿಲ್ಲ.

* * *

ಶ್ರೀ ಎಸ್. ಬಂಗಾರಪ್ಪ.—ನಾವು ಹಾಗಿದ್ದರೆ ಸಭಾತ್ಯಾಗ ಮಾಡುತ್ತೇವೆ.

(ಮಾನ್ಯ ವಿರೋಧಪಕ್ಷದ ನಾಯಕರು ಮೊದಲ್ಗೊಂಡು ಎಲ್ಲಾ ಕಾಂಗ್ರೆಸ್ ಸದಸ್ಯರು ಸಭಾತ್ಯಾಗ ಮಾಡಿದರು)

ವಿತ್ತೀಯ ಕಾರ್ಯಕಲಾಪಗಳು

೧೯೮೬-೮೭ನೇ ಸಾಲಿನ ಬೇಡಿಕೆಗಳ ಮೇಲಿನ ಚರ್ಚೆ

ಅಭಿಯಾಚನೆ ಕ್ರಮಾಂಕ 4 — ಮೀನುಗಾರಿಕೆ

ಶ್ರೀ ಕೆ. ಬೈರೇಗೌಡ (ಮತ್ಸ್ಯೋದ್ಯಮ ಮತ್ತು ಬಂದರು ಖಾತೆಯ ಸಚಿವರು).—
ಮಾನ್ಯ ಅಧ್ಯಕ್ಷರೆ,

(ಮಾನ್ಯ ಸಭಾಧ್ಯಕ್ಷರು ರಿಕಾರ್ಡ್ ಮಾಡಬಾರದೆಂದು ಸೂಚಿಸಿದ್ದರಿಂದ ರಿಕಾರ್ಡ್ ಮಾಡಿಲ್ಲ.)

ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ ೩೧-೩-೧೯೮೭ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ಮೀನುಗಾರಿಕೆಗೆ ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರಕಾರಕ್ಕೆ ರಾಜಸ್ವ ಖಾತೆಯಲ್ಲಿ ೫೪೯,೪೦,೦೦೦ ರೂಪಾಯಿಗಳಿಗಿಂತ ಮೀರದ ಮೊತ್ತವನ್ನು ಮತ್ತು ಬಂಡವಾಳ ಖಾತೆಯಲ್ಲಿ ೯೬,೦೫೦೦೦ ರೂಪಾಯಿಗಳಿಗಿಂತ ಮೀರದ ಮೊತ್ತವನ್ನು ಮಂಜೂರು ಮಾಡಬೇಕೆಂದು ನಾನು ಬಿನ್ನವಿಸಿಕೊಳ್ಳುತ್ತೇನೆ.

ಅಭಿಯಾಚನೆ ಕ್ರಮಾಂಕ 47 — ರೇವು ಮತ್ತು ಜಲ ಸಾರಿಗೆ ಸೇವೆ

ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ ೩೧-೩-೧೯೮೭ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ರೇವು ಮತ್ತು ಜಲ ಸಾರಿಗೆ ಸೇವೆಗಳಿಗೆ ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರಕಾರಕ್ಕೆ ರಾಜಸ್ವ ಖಾತೆಯಲ್ಲಿ ೧೫೯,೩೮,೦೦೦ ರೂಪಾಯಿಗಳಿಗಿಂತ ಮೀರದ ಮೊತ್ತವನ್ನು ಮತ್ತು ಬಂಡವಾಳ ಖಾತೆಯಲ್ಲಿ ೪೯೮,೫೦,೦೦೦ ರೂಪಾಯಿಗಳಿಗಿಂತ ಮೀರದ ಮೊತ್ತವನ್ನು ಮಂಜೂರು ಮಾಡಬೇಕೆಂದು ನಾನು ಬಿನ್ನವಿಸಿಕೊಳ್ಳುತ್ತೇನೆ.

ಅಭಿಯಾಚನೆ ಕ್ರಮಾಂಕ ೧ — ಭೂಸಾರ ಮತ್ತು ಜಲರಕ್ಷಣೆ ವ್ಯವಸಾಯ (ತೋಟಗಾರಿಕೆಯು ಮತ್ತು ಬರಗಾಲಕ್ಕೆ ಗುರಿಯಾದ ಪ್ರದೇಶಗಳ ಯೋಜನೆ ಹೊರತು)

ಶ್ರೀ. ಎ. ಲಕ್ಷ್ಮೀಸಾಗರ್ (ನಗರಾಭಿವೃದ್ಧಿ ಕಾನೂನು ಮತ್ತು ಸಂಸದೀಯ ಸಚಿವರು).—

ಮಾನ್ಯ ಅಧ್ಯಕ್ಷರೆ,

ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ ೩೧-೩-೧೯೮೭ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ಭೂಸಾರ ಮತ್ತು ಜಲರಕ್ಷಣೆ ವ್ಯವಸಾಯಕ್ಕೆ (ತೋಟಗಾರಿಕೆ ಮತ್ತು ಬರಗಾಲಕ್ಕೆ ಗುರಿಯಾದ ಪ್ರದೇಶಗಳ ಯೋಜನೆ ಹೊರತು) ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರಕಾರಕ್ಕೆ ರಾಜಸ್ವ ಖಾತೆಯಲ್ಲಿ ೫೫,೮೦,೦೮,೦೦೦ ರೂಪಾಯಿಗಳಿಗಿಂತ ಮೀರದ ಮೊತ್ತವನ್ನು ಮತ್ತು ಬಂಡವಾಳ ಖಾತೆಯಲ್ಲಿ ೧೬,೭೯,೦೦,೦೦೦ ರೂಪಾಯಿಗಳಿಗಿಂತ ಮೀರದ ಮೊತ್ತವನ್ನು ಮಂಜೂರು ಮಾಡಬೇಕೆಂದು ನಾನು ಬಿನ್ನವಿಸಿಕೊಳ್ಳುತ್ತೇನೆ.

ಅಭಿಯಾಚನೆ ಕ್ರಮಾಂಕ 2 — ತೋಟಗಾರಿಕೆ

ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ ೩೧-೩-೧೯೮೭ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ತೋಟಗಾರಿಕೆಗೆ ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರಕಾರಕ್ಕೆ ರಾಜಸ್ವ ಖಾತೆಯಲ್ಲಿ ೯,೮೨,೩೧,೦೦೦ ರೂಪಾಯಿಗಳಿಗಿಂತ ಮೀರದ ಮೊತ್ತವನ್ನು ಮಂಜೂರು ಮಾಡಬೇಕೆಂದು ನಾನು ಬಿನ್ನವಿಸಿಕೊಳ್ಳುತ್ತೇನೆ.

ಅಭಿಯಾಚನೆ ಕ್ರಮಾಂಕ 3 — ಪಶುಸಂಗೋಪನ ಮತ್ತು ಡೇರಿ ಅಭಿವೃದ್ಧಿ

ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ ೩೧-೩-೧೯೮೭ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ಪಶುಸಂಗೋಪನಾ ಮತ್ತು ಡೈರಿ ಅಭಿವೃದ್ಧಿಗಳಿಗೆ ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರಕಾರಕ್ಕೆ ರಾಜಸ್ವ ಖಾತೆಯಲ್ಲಿ ೨೬,೬೮,೮೪,೦೦೦ ರೂಪಾಯಿಗಳಿಗಿಂತ ಮೀರದ ಮೊತ್ತವನ್ನು ಮತ್ತು ಬಂಡವಾಳ ಖಾತೆಯಲ್ಲಿ ೩,೦೦,೦೦,೦೦೦ ರೂಪಾಯಿಗಳಿಗಿಂತ ಮೀರದ ಮೊತ್ತವನ್ನು ಮಂಜೂರು ಮಾಡಬೇಕೆಂದು ನಾನು ಬಿನ್ನವಿಸಿಕೊಳ್ಳುತ್ತೇನೆ.

ಅಭಿಯಾಚನೆ ಕ್ರಮಾಂಕ 11 — ಯುವಜನ ಸೇವೆ

ಶ್ರೀ ಜೀವರಾಜ ಆಳ್ವ (ವಾರ್ತಾ, ಪ್ರವಾಸೋದ್ಯಮ, ಯುವಜನ, ಕನ್ನಡ ಮತ್ತು ಸಂಸ್ಕೃತಿಖಾತೆಯ ಸಚಿವರು).—

ಮಾನ್ಯ ಅಧ್ಯಕ್ಷರೆ,

ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ ೩೧-೩-೧೯೮೭ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ಯುವಜನ ಸೇವೆಗೆ ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರಕಾರಕ್ಕೆ ರಾಜಸ್ವ ಖಾತೆಯಲ್ಲಿ ೮,೨೫,೧೨,೦೦೦ ರೂಪಾಯಿಗಳಿಗಿಂತ ಮೀರದ ಮೊತ್ತವನ್ನು ಮತ್ತು ಬಂಡವಾಳ ಖಾತೆಯಲ್ಲಿ ೧೦,೦೦,೦೦೦ ರೂಪಾಯಿಗಳಿಗಿಂತ ಮೀರದ ಮೊತ್ತವನ್ನು ಮಂಜೂರು ಮಾಡಬೇಕೆಂದು ನಾನು ಬಿನ್ನವಿಸಿಕೊಳ್ಳುತ್ತೇನೆ.

ಅಭಿಯಾಚನೆ ಕ್ರಮಾಂಕ 12 — ಕಲೆ, ಸಂಸ್ಕೃತಿ ಮತ್ತು ಕನ್ನಡಾಭಿವೃದ್ಧಿ

ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ ೩೧-೩-೧೯೮೭ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ಕಲೆ, ಸಂಸ್ಕೃತಿ ಮತ್ತು ಕನ್ನಡಾಭಿವೃದ್ಧಿಗಳಿಗೆ ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರಕಾರಕ್ಕೆ ರಾಜಸ್ವ ಖಾತೆಯಲ್ಲಿ ೬,೨೭,೯೭,೦೦೦ ರೂಪಾಯಿಗಳಿಗಿಂತ ಮೀರದ ಮೊತ್ತವನ್ನು ಮಂಜೂರು ಮಾಡಬೇಕೆಂದು ನಾನು ಬಿನ್ನವಿಸಿಕೊಳ್ಳುತ್ತೇನೆ.

ಅಭಿಯಾಚನೆ ಕ್ರಮಾಂಕ 27 — ವಾರ್ತಾ ಮತ್ತು ಪ್ರಚಾರ

ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ ೩೧-೩-೧೯೮೭ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ವಾರ್ತಾ ಮತ್ತು ಪ್ರಚಾರಕ್ಕೆ ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರಕಾರಕ್ಕೆ ರಾಜಸ್ವ ಖಾತೆಯಲ್ಲಿ ೫,೮೪,೯೧,೮೦೦ ರೂಪಾಯಿಗಳಿಗಿಂತ ಮೀರದ ಮೊತ್ತವನ್ನು ಮತ್ತು ಬಂಡವಾಳ ಖಾತೆಯಲ್ಲಿ ೬೯,೦೦,೦೦೦ ರೂಪಾಯಿಗಳಿಗಿಂತ ಮೀರದ ಮೊತ್ತವನ್ನು ಮಂಜೂರು ಮಾಡಬೇಕೆಂದು ನಾನು ಬಿನ್ನವಿಸಿಕೊಳ್ಳುತ್ತೇನೆ.

ಪ್ರಸ್ತಾವಗಳನ್ನು ಮಂಡಿಸಲಾಯಿತು

ಅಧ್ಯಕ್ಷರು.—ಬೇಡಿಕೆಗಳನ್ನು ಮಂಡಿಸಲಾಗಿದೆ. ಈಗ ಎಲ್ಲಾ ಬೇಡಿಕೆಗಳು ಸಭೆಯ ಮುಂದೆ ಚರ್ಚೆಗೆ ಇದೆ.

† ಶ್ರೀಮತಿ ಮನೋರಮಾ ಮಧ್ವರಾಜ್ (ಉಡುಪಿ).—ಮಾನ್ಯ ಸಭಾಧ್ಯಕ್ಷರೆ, ಹಲವು ಮಂತ್ರಿಗಳು ಕೆಲವೊಂದು ಇಲಾಖಾ ಬೇಡಿಕೆಗಳನ್ನು ಸದನದ ಮುಂದೆ ಇರಿಸಿದ್ದಾರೆ. ಈ ಎಲ್ಲಾ ಬೇಡಿಕೆಗಳನ್ನೂ ಕೂಡ ವಿರೋಧಿಸಿ ಮುಖ್ಯವಾಗಿ ಮೀನುಗಾರಿಕೆ ಇಲಾಖೆ ಬಗ್ಗೆ ನಾಲ್ಕು ಮಾತುಗಳನ್ನು ಆಡಲಿಕ್ಕೆ ನಾನು ಇಚ್ಛೆಪಡುತ್ತೇನೆ. ಮಾನ್ಯ ಸಭಾಧ್ಯಕ್ಷರೆ, ಈ ಮೀನು ವ್ಯವಸಾಯ, ಅದೇರೀತಿ ಈ ಮೀನು ವ್ಯವಸಾಯದಲ್ಲಿ ತೊಡಗಿರುವಂಥ ಮೀನುಗಾರ ಜನಾಂಗದವರ ಹಿನ್ನಲೆಯನ್ನು ಹೇಳಿದರೆ ಅಪ್ರಸ್ತುತವಾಗಲಿಕ್ಕಿಲ್ಲ ಎಂದು ನನ್ನ ಭಾವನೆ. ಈ ಒಂದು ಜನಾಂಗ ಆರ್ಥಿಕವಾಗಿ, ಶೈಕ್ಷಣಿಕವಾಗಿ, ಸಾಮಾಜಿಕವಾಗಿ ಬಹಳಷ್ಟು ಹಿಂದುಳಿದ ವರ್ಗ. ಇವರು ತಲೆತಲಾಂತರಗಳಿಂದ ತಮ್ಮ ಈ ಮೀನು ವ್ಯವಸಾಯವನ್ನು ಸಂಪ್ರದಾಯಿಕವಾಗಿ ಅಥವಾ ದೇಶೀಯ ಒಂದು ನೆಲೆಯಲ್ಲಿ ನಡೆಸಿಕೊಂಡು ಬಂದಿದ್ದಾರೆ. ಅಲ್ಲದೆ ಇವರು ತಮ್ಮದೇ ಆದ ಕೂಡುಕಟ್ಟಲೆಗಳನ್ನು ತಮ್ಮದೇ ಆದ ನ್ಯಾಯ ಪಂಚಾಯಿತಿಗಳನ್ನು ಬಹಳಷ್ಟು ಅವಿದ್ಯಾವಂತರಾಗಿದ್ದುಕೊಂಡು ನಡೆಸಿಕೊಂಡು ಬಂದಿದ್ದಾರೆ. ಒಂದು ಕಾಲದಲ್ಲಿ ಇದು ಬಹಳ ನಿಕೃಷ್ಟವಾದ ಮತ್ತು ಲಾಭದಾಯಕವಲ್ಲದ ಒಂದು ವ್ಯವಸಾಯವಾಗಿತ್ತು. ಯಾರೂ ಇದರ ಹತ್ತಿರ ಬರುತ್ತಾ ಇರಲಿಲ್ಲ, ಆದರೆ ಸ್ವಾತಂತ್ರ್ಯಾನಂತರ ನಮ್ಮ ಕೇಂದ್ರಸರ್ಕಾರ ಮತ್ತು ರಾಜ್ಯ ಸರ್ಕಾರಗಳು ಬಹುಶಃ ಮಾನ್ಯ ಮುಖ್ಯ ಮಂತ್ರಿಗಳು ಕೂಡ ಹಿಂದೆ ಆರ್ಥಿಕ ಸಚಿವ

---

† ಈ ಚಿಹ್ನೆ ಸಂಬಂಧಪಟ್ಟ ಸದಸ್ಯರು ಟಿಪ್ಪಣಿ ಅಥವಾ ಭಾಷಣವನ್ನು ಪರಿಷ್ಕರಿಸಿಲ್ಲ ಎಂದು ಸೂಚಿಸುತ್ತದೆ.

ರಾಗಿದ್ದಾಗ ಈ ಒಂದು ಇಲಾಖೆಗೆ, ವ್ಯವಸಾಯಕ್ಕೆ ಹೆಚ್ಚಿನ ಪ್ರೋತ್ಸಾಹಕೊಟ್ಟು ಅವರ ಅಭಿವೃದ್ಧಿಗೆ ಕಾರಣೀಭೂತರಾಗಿದ್ದಾರೆ. ಇರುವ ವಿಚಾರವನ್ನು ಹೇಳಬೇಕು, ಗುಣಕ್ಕೆ ಮತ್ಸರವಿಲ್ಲ. ೧೯೫೭–೫೮ ರಲ್ಲಿ ಕೇಂದ್ರ ಸರ್ಕಾರ ಹಾಗೂ ರಾಜ್ಯ ಸರ್ಕಾರವು ಅಂದಿನ ಮಂತ್ರಿಗಳನ್ನು ಜಗತ್ತಿನಲ್ಲೇ ಮುಂದುವರಿದ ರಾಷ್ಟ್ರಗಳಿಗೆ ಕಳುಹಿಸಿ, ಅಲ್ಲಿ ಯಾವರೀತಿಯಲ್ಲಿ ಮೀನುಗಾರಿಕೆಯಲ್ಲಿ ವೈಜ್ಞಾನಿಕವಾದ, ತಾಂತ್ರಿಕವಾದ ನೀತಿಯನ್ನು ಅಳವಡಿಸಿಕೊಂಡು ಮಾಡುತ್ತಿದ್ದಾರೆ ಎಂಬುದನ್ನು ಅಧ್ಯಯನಮಾಡಿಸಿ, ನಮ್ಮ ರಾಜ್ಯ ಹಾಗೂ ನಮ್ಮ ದೇಶದಲ್ಲೇ ಈ ಮೀನುಗಾರಿಕೆಗೆ ಒಂದು ಹೊಸ ಚೈತನ್ಯವನ್ನು ಕೊಟ್ಟಿದ್ದಾರೆ ಎಂದು ಹೇಳಿದರೆ ತಪ್ಪಾಗಲಿಕ್ಕಿಲ್ಲ. ಅದರ ಫಲವಾಗಿ, ಆ ನೆಲೆಯಲ್ಲಿ ಇಲ್ಲಿ ನಮ್ಮ ರಾಜ್ಯದಲ್ಲಿ ಯಾಂತ್ರೀಕೃತ ದೋಣಿಗಳನ್ನು ಇಂಟರ್‌ಡ್ಯೂಸ್ ಮಾಡಿದರು. ಅಂದಿನಿಂದ ಈ ಮೀನು ವ್ಯವಸಾಯ ಲಾಭದಾಯಕ ವಾದದ್ದು ಎಂಬುದನ್ನು ಮನಗಂಡು ಮೀನುಗಾರರಲ್ಲದವರು, ಮೀನು ತಿನ್ನದವರು, ನೋಡದವರು ಈ ವ್ಯವಸಾಯಕ್ಕೆ ತೊಡಗಿದರು. ಈ ಮಾತನ್ನು ನಾನು ಏಕೆ ಹೇಳುತ್ತಿದ್ದೇನೆಂದರೆ, ಕಳೆದ ಅಧಿವೇಶನ ದಲ್ಲಿ ರಾಜ್ಯಪಾಲರ ಭಾಷಣಕ್ಕೆ ವಂದನೆ ಸಲ್ಲಿಸುವ ನಿರ್ಣಯದ ಮೇಲೆ ಮಾತನಾಡುತ್ತಾ ಮಾನ್ಯ ಬೇರೆ ಗೌಡರ ಬಗ್ಗೆ ಹೇಳಿದ್ದೆ. ಮೀನುಗಾರಿಕೆಯಲ್ಲಿ ಹೆಚ್ಚಿನ ಮಾಹಿತಿ ಇಲ್ಲದೇ ಇರತಕ್ಕವರನ್ನು ಮಂತ್ರಿ ಗಳನ್ನಾಗಿ ಮಾಡಿದ್ದಾರೆ ಎಂದು. ಇದು ಹಿಂದಿನಿಂದಲೂ ನಡೆದುಕೊಂಡುಬಂದ ರೀತಿ. ರಾಜ್ಯದಲ್ಲಿ ದಕ್ಷಿಣ ಕನ್ನಡ ಜಿಲ್ಲೆ ಮತ್ತು ಉತ್ತರ ಕನ್ನಡ ಜಿಲ್ಲೆಯ ಕರಾವಳಿ ಪ್ರದೇಶದಿಂದ ಮಾನ್ಯ ರಾಮಕೃಷ್ಣ ಹೆಗಡೆಯವರು, ಶಾಸಕರು ಹೆಚ್ಚಿಗೆ ಬಂದಿದ್ದರೂ ಶ್ರೀಮಾನ್ ದೇವರಾಜ ಅರಸರ ಕಾಲದಲ್ಲಿ ಪಿ. ಎಫ್. ರ್ರೋಡಿಂಗ್ಸ್‌ರವರನ್ನು ಬಿಟ್ಟರೆ ಮಿಕ್ಕೆಲ್ಲಾ ಮೀನುಗಾರಿಕಾ ಮಂತ್ರಿಗಳು ಒಳನಾಡಿನಿಂದ ಬಂದವರು. ಶ್ರೀಮಾನ್ ರಾಚಯ್ಯನವರು ಮೀನುಗಾರಿಕಾ ಮಂತ್ರಿಗಳಾಗಿದ್ದರು. ಅವರಿಗೆ ಹೆಚ್ಚಿನ ಅನುಭವ ಇಲ್ಲದೇ ಇದ್ದರೂ ಮೀನುಗಾರರಿಗೆ ಬಹಳಷ್ಟು ಪ್ರೋತ್ಸಾಹಕೊಟ್ಟು ಹಲವಾರು ಯೋಜನೆಗಳನ್ನು ಹಾಕಿ ಕೊಂಡು ಮೀನುಗಾರರ ಅಭಿನಂದನೆಗೆ ಪಾತ್ರರಾಗಿದ್ದಾರೆ ಅದನ್ನು ಮುಚ್ಚಿಡಲಿಕ್ಕೆ ಸಾಧ್ಯವಿಲ್ಲ. ಅದೇ ರೀತಿ ನಾನು ಹೇಳಿದಾಗ ಶ್ರೀಮಾನ್ ಬೈರೇಗೌಡರಿಗೆ ನನ್ನ ಮೇಲೆ ಸ್ವಲ್ಪ ಸಿಟ್ಟು ಮತ್ತು ಬೇಜಾರಾಗಿತ್ತು. ನನ್ನ ಮೇಲಿನ ಸಿಟ್ಟಿನಿಂದ, ಅವರು ದಕ್ಷಿಣ ಕನ್ನಡ ಜಿಲ್ಲೆಗೆ ಬಂದಾಗ ಮಲ್ಪೆಯಲ್ಲಿ ಮೀನುಗಾರ ಮಹಿಳೆಯರು ಮತ್ತು ಮಹನೀಯರುಗಳು ತಮ್ಮ ಹಲವು ಕಷ್ಟಕಾರ್ಪಣ್ಯಗಳನ್ನು ಇವರ ಮುಂದಿಟ್ಟಾಗ, ಒಂದು ಮಾತು ಕೇಳಿದರು. ಏನೆಂದರೆ, ಏನ್ರಿ ನಿಮ್ಮಿಂದ, ಮೀನುಗಾರರಿಂದ ಸರ್ಕಾರಕ್ಕೆ ಏನು ಲಾಭ ಎಂದು. ಅದಕ್ಕೇ ನಾನು ಹೇಳಿದ್ದು, ಬಹುಶಃ ಮಾನ್ಯ ಸಚಿವರು ಮೀನು ಗಾರರೊಡನೆ ಇದ್ದುಕೊಂಡು ಅವರ ಕಷ್ಟಕಾರ್ಪಣ್ಯಗಳ ಪರಿಚಯವಿದ್ದಿದ್ದರೆ ಖಂಡಿತವಾಗಿ ಅವರು ಈ ರೀತಿ ಹೇಳುತ್ತಾ ಇರಲಿಲ್ಲ, ಆ ರೀತಿ ಅವರು ಆಡಬಾರದಾಗಿತ್ತು.

ಶ್ರೀ ಎ. ಲಕ್ಷ್ಮೀಸಾಗರ್.—ಈಗ ಅವರು ಮೀನು ತಿನ್ನುವುದಕ್ಕೆ ಶುರು ಮಾಡಿದ್ದಾರೆ.

ಶ್ರೀಮತಿ ಮನೋರಮಾ ಮಧ್ವರಾಜ್.—ಮೀನುಗಾರಿಕೆ ವಿಷಯ ಗೊತ್ತಾಗಿದ್ದಲ್ಲಿ ಅದರಲ್ಲಿ ಸಮಸ್ಯೆಗಳಿಲ್ಲ ಎಂದು ಹೇಳುವುದಕ್ಕಾಗುವುದಿಲ್ಲ. ಅದಕ್ಕೆ ಪರಿಹಾರ ಹುಡುಕಬೇಕು. ಮೀನುಗಾರ ಜನಾಂಗದವರು ಅವಿದ್ಯಾವಂತರು. ಈಗ ಇವರು ಹೊಸ ಶಾಸನವನ್ನು ತರಲಿಕ್ಕೆ ಹೊರಟಿದ್ದಾರೆ. ಆದರೆ ಅವರು ಮುಂಚಿನಿಂದಲೇ ತಮ್ಮದೇ ಆದ ಕಟ್ಟುಕಟ್ಟಳೆ ಮಾಡಿಕೊಂಡು, ನ್ಯಾಯಪಂಚಾಯಿತಿ ಮಾಡಿಕೊಂಡು ಕೋರ್ಟು ಕಛೇರಿಗಳಿಗೆ ಹತ್ತಿದವರಲ್ಲ. ಅವರು ತಮ್ಮದೇ ಆದ ನ್ಯಾಯ ಪಂಚಾಯ್ತಿಗಳನ್ನು ನಿರ್ಮಾಣ ಮಾಡಿಕೊಂಡು ತಮ್ಮೊಳಗೇ ತೀರ್ಪು ಮಾಡಿಕೊಳ್ಳುತ್ತಾರೆ. ಒಂದು ವೇಳೆ ದಂಡ ತೆರುವುದಾದರೆ ತೆತ್ತುಕೊಂಡು. ತಮ್ಮಲ್ಲೇ ಒಂದು ನ್ಯಾಯ ಪೀಠವನ್ನು ಮಾಡಿಕೊಂಡು ಜೀವನ ಮಾಡಿಕೊಂಡು ಹೋಗುತ್ತಿದ್ದಾರೆ. ನಾನು ಶಾಸನವನ್ನು ತರಬೇಡಿ ಎಂದು ಹೇಳುವುದಿಲ್ಲ. ಅದನ್ನು ಹಂತಹಂತವಾಗಿ ಜನರಿಗೆ ಅರ್ಥವಾಗುವ ರೀತಿಯಲ್ಲಿ ಸಾಮಾನ್ಯ ಮೀನುಗಾರನು ಅರ್ಥ ಮಾಡಿಕೊಳ್ಳುವ ರೀತಿಯಲ್ಲಿ, ಅದನ್ನು ವಿನಿಯೋಗ ಮಾಡಿಕೊಳ್ಳುವ ರೀತಿಯಲ್ಲಿ ಮಾಡಬೇಕು. ಇದು ಸುಧಾರಿಸುವ ಹೊತ್ತಿಗೆ ಸುಮಾರು ಮೂರು ವರ್ಷಗಳೇ ಆಗಬಹುದು. ಅವರು ರಂಪಣಿ ದೋಣಿ, ಪರ್ಸಿನ್ ಬೋಟ್ಸ್ ಇಟ್ಟುಕೊಂಡಿರುತ್ತಾರೆ. ಅವರನ್ನು ಎಲ್ಲಾ ರೀತಿಯಲ್ಲಿ ಸಮಾಜಾಯಿಷಿಗೆ ತರಬೇಕಾದರೆ ಬಹಳ ಕಷ್ಟಪಟ್ಟಿದ್ದೇವೆ. ಈ ಕಷ್ಟವಾದಂತಹ ಸಂದರ್ಭದಲ್ಲಿ ಒಂದು ಶಾಸನವನ್ನು ತರುವಾಗ ಇಲ್ಲವೇ ಒಂದು ರೂಲ್ ಮಾಡುವಾಗ, ಮೀನುಗಾರಿಕೆಯಲ್ಲಿ ಹೆಚ್ಚಿನ ಅನುಭವವಿರುವಂತಹ, ಮೀನುಗಾರರ ಜನಾಂಗದ ಧುರೀಣರನ್ನು ಕಾನ್‌ಫಿಡೆನ್ಸ್‌ಗೆ ತೆಗೆದುಕೊಂಡು ಮಾಡಬೇಕು. ಹಾಗೂ ದಕ್ಷಿಣ ಕನ್ನಡ ಜಿಲ್ಲೆಯ, ಉತ್ತರ ಕನ್ನಡ ಜಿಲ್ಲೆಯ ಶಾಸಕರನ್ನೂ ಕೂಡ ಕಾನ್‌ಫಿಡೆನ್ಸ್‌ಗೆ

ತೆಗೆದುಕೊಂಡು, ನಮ್ಮ ಸಲಹೆಯನ್ನೂ ತೆಗೆದುಕೊಂಡು ಮಾಡಬೇಕೆಂದು ವಿನಂತಿ ಮಾಡಿಕೊಳ್ಳುತ್ತೇನೆ. ಇನ್ನೊಂದು ವಿಚಾರದ ಬಗ್ಗೆ ಹೇಳಬೇಕಾಗುತ್ತದೆ, ಯಾರು ಮೀನುಗಾರರ ಉದ್ದಿಮೆಗಳನ್ನು ಅವಲಂಬಿಸಿ ಯಾಂತ್ರೀಕೃತ ದೋಣಿಗಳನ್ನು ಇಡಲು ಮುಂದೆ ಬರದಿದ್ದ ಸಂದರ್ಭದಲ್ಲಿ ಬೇಕಾದಷ್ಟು ಪರಿಹಾರವನ್ನು ಕೊಟ್ಟು ಅವರ ಅಭಿವೃದ್ಧಿಗೆ ಕಾರಣೀಭೂತರಾಗಿದ್ದೇವೆ ಎಂದು ಹೇಳಿದ್ದಾರೆ. ಇವತ್ತು ಮೀನುಗಾರರ ಸಮಸ್ಯೆ ಏನೆಂದರೆ, ಈಗ ಡೀಸಲ್ ಮಾರಾಟ ತೆರಿಗೆಯನ್ನು ಅವರು ಕೊಡಬೇಕಾಗುತ್ತದೆ. ಇದರಿಂದ ಅವರಿಗೆ ಬಹಳ ಕಷ್ಟವಾಗುತ್ತದೆ. ಇವತ್ತು ಎರಡು ತಿಂಗಳು ಮೀನು ದೊರೆತರೆ ಮತ್ತೆ ಇನ್ನು ೧೦ ತಿಂಗಳು ಮೀನು ಸಿಗುವಂತಹ ಪರಿಸ್ಥಿತಿ ಇಲ್ಲ. ಜನತಾ ಸರ್ಕಾರ ಆಡಳಿತಕ್ಕೆ ಬಂದ ಮೇಲೆ ಜನರಿಂದ ಬಂದ ಬೇಡಿಕೆಗಳ ಪ್ರಕಾರ ೧೯೭೮-೭೯ರ ಬಡ್ಜೆಟ್ ಭಾಷಣದಲ್ಲಿ ೧೯೭೮ನೇ ಏಪ್ರಿಲ್ ಒಂದರಿಂದ ಮಾರಾಟ ತೆರಿಗೆ ಸಬ್ಸಿಡಿ ಕೊಡುತ್ತೇವೆಂದು ವಾಗ್ದಾನ ಮಾಡಿದ್ದರು. ಆದರೆ ದೇವರು ಕೊಟ್ಟರೂ ಪೂಜಾರಿ ಕೊಡುವುದಿಲ್ಲ. ಆ ರೀತಿಯಾಯಿತು. ಮೀನುಗಾರಿಕಾ ಮಂತ್ರಿಗಳಿಗೆ ಏನು ಹೊಳೆಯಿತೋ ಗೊತ್ತಿಲ್ಲ. ಜನರಿಂದ ಬೇಡಿಕೆಗಳು ಬರುವ ತನಕ, ಕಾನ್ಫಿಡೆನ್ಸ್ ಬರುವ ತನಕ ಕಾಗದ ಪತ್ರಗಳು ಬರುವ ತನಕ ಮಾಡಲಿಲ್ಲ. ಮಾನ್ಯ ರಾಮಕೃಷ್ಣ ಹೆಗಡೆಯವರು ಈ ಘೋಷಣೆಯನ್ನು ಮಾಡಿದ ಕೂಡಲೇ ನಮ್ಮ ಜನರು ಅಭಿನಂದನೆಯ ಸುರಿಮಾಳೆಯನ್ನು ಹರಿಸಿದರು. ಆದರೆ ಅದರ ಫಲ ಬರಲಿಲ್ಲ. ೧೯೭೮ನೇ ಆಗಸ್ಟ್ ತಿಂಗಳಲ್ಲಿ ಒಂದು ಆಜ್ಞೆ ಹೊರಡಿಸಿದರು. ಆದರಲ್ಲಿ ಕೆಲವೊಂದು ಕ್ರಮ ಹಾಗೂ ನಿಬಂಧನೆಗಳನ್ನು ಅಳವಡಿಸಿದ್ದಾರೆ. ಮೀನು ಮಾರಾಟ ಮಾಡುವವರು ಫಿಷರೀಸ್ ಡೆವಲಪ್‌ಮೆಂಟ್ ಕಾರ್ಪೊರೇಷನ್ ಮುಖಾಂತರವಾಗಿ ಮಾರಬೇಕು, ಫೆಡರೇಷನ್ ಮುಖಾಂತರವಾಗಿ ಮಾರಬೇಕು, ಸೊಸೈಟಿ ಮುಖಾಂತರವಾಗಿ ಮಾರಬೇಕು ಎಂದು, ಹಾಗೂ ಇದರ ಬಗ್ಗೆ ಲಾಗ್ ಬುಕ್ ಇಡಬೇಕು, ಲೆಕ್ಕಾಚಾರ ಕೊಡಬೇಕು ಎಂದು ಆಜ್ಞೆ ಮಾಡಿದ್ದಾರೆ. ಈ ರೀತಿಯ ನಿಬಂಧನೆಯನ್ನು ಹಾಕಿದ್ದಾರೆ. ಅವರು ಅನಕ್ಷರಸ್ತರು ಯಾವ ರೀತಿ ನಿಮಗೆ ಲೆಕ್ಕಾಚಾರ ಕೊಟ್ಟು, ಅದರ ಲಾಭವನ್ನು ಪಡೆಯುವುದಕ್ಕೆ ಸಾಧ್ಯವಾಗುತ್ತದೆ? ಇದರ ಬಗ್ಗೆ ಮಾನ್ಯ ಮುಖ್ಯ ಮಂತ್ರಿಗಳು ಯೋಚನೆ ಮಾಡಬೇಕು. ಮಾನ್ಯ ಮಂತ್ರಿಗಳು ಇಲ್ಲೇ ಕೂತಿದ್ದಾರೆ. ಬಹಳ ಸಂತೋಷ. ಈ ನಿಬಂಧನೆಗಳನ್ನು ರದ್ದುಗೊಳಿಸಿ, ಎಷ್ಟು ಮಾರಾಟ ತೆರಿಗೆಯನ್ನು ಕೊಟ್ಟಿದ್ದಾರೆ, ಅಷ್ಟೇ ಸಬ್ಸಿಡಿ ಹಣವನ್ನು ಕೊಡಬೇಕೆಂದು ತಮ್ಮ ಮೂಲಕ ಸರ್ಕಾರಕ್ಕೆ ಮನವಿ ಮಾಡಿಕೊಳ್ಳುತ್ತೇನೆ. ಇನ್ನು ಎರಡನೆಯದಾಗಿ, ನಮ್ಮ ಹಿಂದಿನ ಮೀನುಗಾರಿಕಾ ಮಂತ್ರಿಗಳಾಗಿದ್ದ ಶ್ರೀ ರಾಜವರ್ಧನ್‌ರವರು ಇಲ್ಲಿಯೇ ಇದ್ದಾರೆ, ಅವರು ಹೇಳಿದ್ದರು, ಒಳನಾಡು ಮೀನಿನ ಅಭಿವೃದ್ಧಿಗೋಸ್ಕರ ವಿಶ್ವಬ್ಯಾಂಕ್‌ನವರು ೩೩ ಕೋಟಿ ರೂಪಾಯಿಯನ್ನು ಕೊಡುತ್ತಾರೆ ಎಂದು. ೩೩ ಕೋಟಿ ಅಲ್ಲ ೩೩ ರೂಪಾಯಿ ಕೂಡ ಸಿಗುವ ಸಂದರ್ಭ ಇಲ್ಲ. ಇದನ್ನು ನಂಬಿಕೊಂಡು ಒಳನಾಡು ಫಿಷರೀಸ್ ಡೆವಲಪ್‌ಮೆಂಟ್ ಕಾರ್ಪೊರೇಷನ್ ಎಂದು ಪ್ರಾರಂಭ ಮಾಡಿ ಅವರ ಪಕ್ಷದ ಧುರೀಣರನ್ನು ಅದಕ್ಕೆ ಅಧ್ಯಕ್ಷರನ್ನಾಗಿ ಮಾಡಿದ್ದಾರೆ. ಹಾಗೂ ಆಡಳಿತಾಧಿಕಾರಿಯನ್ನು ನೇಮಕ ಮಾಡಿ ಸಿಬ್ಬಂದಿ ವರ್ಗವನ್ನು ನೇಮಿಸಿ, ಅವರಿಗೆ ಎರಡು ವರ್ಷಗಳಿಂದ ಸಂಬಳ ಕೊಡುತ್ತಾ ಬಂದಿದ್ದಾರೆ. ಅಲ್ಲಿ ಇದುವರೆಗೆ ಏನೂ ಕೆಲಸ ಮಾಡುವುದಕ್ಕೆ ಆಗಿಲ್ಲ. ಏನು ಕೆಲಸ ಮಾಡಿದ್ದೀರಿ ಎನ್ನುವುದನ್ನು ಉತ್ತರದಲ್ಲಿ ಹೇಳಿ. ಇವರಿಗೆ ವಿಶ್ವಬ್ಯಾಂಕ್ ನೆರವು ಸಿಗುವುದಿಲ್ಲವೆಂದು ಖಚಿತ ವಾಯಿತೆಂದು ಕಾಣುತ್ತದೆ. ಹೀಗೆ ಒಳನಾಡು ಜಲಾಶಯಗಳಲ್ಲಿ ಮೀನು ಹಿಡಿಯಲು ಸೊಸೈಟಿ ಮುಖಾಂತರವಾಗಿ ಮೀನುಗಾರರಿಗೆ ಕೊಡುತ್ತಿದ್ದರು. ೧೯ ಮೀನು ಮರಿ ಉತ್ಪಾದನಾ ಕೇಂದ್ರ, ೧೩ ಜಲಾಶಯಗಳನ್ನು ಆ ಕಾರ್ಪೊರೇಷನ್‌ಗೆ ವರ್ಗಾಯಿಸಿದ್ದಾರೆ. ೩೦ ಕೆರೆ ಕುಂಟೆಗಳನ್ನು ಕಾರ್ಪೊರೇಷನ್‌ಗೆ ವರ್ಗಾಯಿಸಿದ್ದಾರೆ. ಒಳನಾಡು ಮೀನುಗಾರರನ್ನು ಹಾಗೂ ಈ ಕಸುಬನ್ನೇ ಅವಲಂಬಿಸಿಕೊಂಡಿರತಕ್ಕಂತಹವರನ್ನು ಎಲ್ಲಿ ಕಳಿಸುತ್ತೀರಿ, ಕೂಲಿಗೆ ಕಳಿಸುತ್ತೀರಾ, ಏನು ಮಾಡುತ್ತೀರಿ! ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಈ ಸೊಸೈಟಿಗಳು ಏನಾಗಿದೆ? ಉತ್ತರ ಕನ್ನಡ ಜಿಲ್ಲೆಯಲ್ಲಿ ಫೆಡರೇಷನ್ ಅನ್ನು ಮಾಡಿ ಅವರ ಮುಖಾಂತರ ಮೀನು ಮಾರಾಟ ಮಾಡುವಂತಹ ವ್ಯವಸ್ಥೆ ಮಾಡಿದರೆ ನೇರವಾಗಿ, ಮೀನುಗಾರರಿಗೆ ಪ್ರಯೋಜನ ಸಿಗುವ ಸಾಧ್ಯತೆ ಉಂಟು. ಫಿಷರೀಸ್ ಡೆವಲಪ್‌ಮೆಂಟ್ ಕಾರ್ಪೊರೇಷನ್ ಅನ್ನು ರದ್ದುಗೊಳಿಸಿ, ಸ್ಥಗಿತಗೊಳಿಸಿ ಬರೀ ಫೆಡರೇಷನ್ ಮುಖಾಂತರವಾಗಿ ಮೀನುಗಾರರಿಗೆ ಉಪಕಾರ ಆಗುವ ಹಾಗೆ ಮಾಡಬೇಕೆಂದು ಮಾನ್ಯ ಸಚಿವರಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ. ಇನ್ನು ನಿರುದ್ಯೋಗ ಸಮಸ್ಯೆಯ ಬಗ್ಗೆ ಒಂದೆರಡು ಮಾತುಗಳನ್ನು ಹೇಳುವುದಕ್ಕೆ ಇಷ್ಟಪಡುತ್ತೇನೆ. ಈ ಇಲಾಖೆಯಲ್ಲಿ ಸುಮಾರು ೨೦ ಸೂಪರಿಂಟೆಂಡೆಂಟ್ ಹುದ್ದೆಗಳು ಖಾಲಿ ಇದೆ. ಸರ್ಕಾರ ಒಂದು ಕಾನೂನನ್ನು ಮಾಡಿ ಎಲ್ಲೆಲ್ಲಿ ಹುದ್ದೆಗಳು ಖಾಲಿ ಇದೆಯೆಂಬುದನ್ನು ಕೆ.ಪಿ.ಎಸ್.ಸಿಗೆ ತಿಳಿಸಬೇಕು ಎಂದು ಮಾಡಿದೆ. ಅದೇ

ಪ್ರಕಾರ ಇಲಾಖೆಯವರು ತಿಳಿಸಿದ್ದಾರೆ. ಮಂಗಳೂರು ಕಾಲೇಜಿನಲ್ಲಿ ಬಿ.ಎಫ್.ಎಸ್.ಸಿ. ಮಾಡಿಕೊಂಡವರು ವಿದ್ಯಾವಂತರು, ಬುದ್ಧಿವಂತರಾದಂತಹವರು ಅರ್ಜಿ ಹಾಕಿದ್ದರು. ಅವರನ್ನೇ ಇಲ್ಲಿ ನೇಮಕ ಮಾಡಬೇಕಾಗುತ್ತದೆ. ಕೆ.ಪಿ.ಎಸ್.ಸಿ.ಯವರು ಅವರನ್ನು ಸಂದರ್ಶಿಸಿ, ಸೆಲೆಕ್ಟ್ ಮಾಡಿ ನೇಮಕಾತಿಗೆ ಇಲಾಖೆಗೆ ಕಳಿಸಿದ್ದಾರೆ. ಆದರೆ ಇಲ್ಲಿಯವರೆಗೆ ನೇಮಕಾತಿ ಆಜ್ಞೆ ಕೊಟ್ಟಿಲ್ಲ. ಅವರಿಗೆ ಬೇರೆಲ್ಲೂ ಕೆಲಸ ಸಿಗುವ ಹಾಗಿಲ್ಲ. ಅವರು ಬೇರೆ ಯಾವ ಇಲಾಖೆಯಲ್ಲೂ ಕೆಲಸ ಮಾಡುವ ಹಾಗಿಲ್ಲ. ಮಾಡಿದರೆ ಮೀನುಗಾರಿಕಾ ಇಲಾಖೆಯಲ್ಲೇ ಕೆಲಸ ಮಾಡಬೇಕಾಗುತ್ತದೆ. ಅವರು ಏನು ಮಾಡುತ್ತಿದ್ದಾರೆಂದರೆ, ಶಾಸಕರಿಂದ ಅಧಿಕಾರಿಗಳಿಂದ ಹೇಳಿಸಿದ್ದಾರೆ. ಕೊನೆಗೆ ಮಂತ್ರಿಗಳನ್ನೂ ಕೂಡ ಭೇಟಿ ಮಾಡಿದ್ದಾರೆ. ನನಗೆ ಅಭ್ಯರ್ಥಿಗಳಿಂದ ತಿಳಿದು ಬಂದ ಮಟ್ಟಿಗೆ ಇದರ ಬಗ್ಗೆ ಮಾನ್ಯ ಮಂತ್ರಿಗಳಿಂದ ಪತ್ರ ಹೋಗಿದೆ, ಅದರಲ್ಲಿ "ನನ್ನ ಅನುಮತಿಯಿಲ್ಲದೆ ಯಾರನ್ನು ನೇಮಕ ಮಾಡಬಾರದು ಎಂದು." ತಿಳಿಸಿದ್ದರೆ ಇದು ನಿಜವಾದರೆ, ಇದರ ಬಗ್ಗೆ ಸಮರ್ಪಕವಾದಂತಹ ಉತ್ತರವನ್ನು ಕೊಡಬೇಕು. ನಿರುದ್ಯೋಗಿ ಪದವೀಧರರ ಬವಣೆ ಏನು ಎಂಬುದನ್ನು ಸ್ವಲ್ಪವೂ ಆಲೋಚನೆ ಮಾಡದೆ ಈ ರೀತಿ ನಿಮ್ಮ ಆಟಿಟ್ಯೂಡ್ ಏನಿದೆ, ಅದನ್ನು ಬದಲಾವಣೆ ಮಾಡಿ ಕೂಡಲೇ ನೇಮಕಾತಿ ಆಜ್ಞೆಯನ್ನು ಕೊಡಿಸಬೇಕೆಂದು ಈ ಸಂದರ್ಭದಲ್ಲಿ ವಿನಂತಿ ಮಾಡಿಕೊಂಡು, ನಿಮ್ಮ ಇಲಾಖೆಯಲ್ಲಿ ಎಸ್.ಡಿ.ಸಿ. ಹಾಗೂ ಎಫ್.ಡಿ.ಸಿ. ಹುದ್ದೆಗಳು ಖಾಲಿಯಿದ್ದು, ಅದನ್ನು ಸಹ ಆದಷ್ಟು ಬೇಗ ಭರ್ತಿ ಮಾಡಬೇಕೆಂದು ವಿನಂತಿ ಮಾಡಿಕೊಳ್ಳುತ್ತೇನೆ. ಇನ್ನು ಮಲ್ಪೆಯ ಬಂದರಿಗೆ ೪೨೦೦ ಲಕ್ಷ ರೂಪಾಯಿಗಳನ್ನು ಕೇಂದ್ರ ಸರ್ಕಾರ ಕೊಟ್ಟಿದೆ. ಇದರ ಸೆಕೆಂಡ್ ಸ್ಟೇಜ್ ಕೂಡ ಸಂಪೂರ್ಣ ಆಗಿಲ್ಲ. ಅದು ಇನ್ನೂ ಪ್ರಾರಂಭವಾಗಿಲ್ಲ. ಅಲ್ಲಿ ಮೀನುಗಾರರಿಗೆ ಯಾವುದೇ ಒಂದು ಸವಲತ್ತುಗಳು ಇಲ್ಲ. ಅಲ್ಲಿ ಒಂದು ಮೈನ್‌ಟೆನೆನ್ಸ್ ಕಮಿಟಿ ಎಂದು ಮಾಡಿ ಅದರಲ್ಲಿ ನನ್ನನ್ನೂ ಕೂಡ ಸದಸ್ಯನನ್ನಾಗಿ ಮಾಡಿದ್ದೀರಿ. ಸರ್ಕಾರದಿಂದಲೇ ಒಂದು ಆಜ್ಞೆಯನ್ನು ಹೊರಡಿಸಿ ಯಾವ ರೀತಿ ಕಾರ್ಯವನ್ನು ಮಾಡಬೇಕೆಂದು ಹೇಳಿ ಸಮಿತಿಗೆ ವರದಿಯನ್ನು ಕಳಿಸಿದ್ದೀರಿ. ಅದನ್ನು ನಾವು ವಿಮರ್ಶೆ ಮಾಡಿ ಸರ್ಕಾರಕ್ಕೆ ವಾಪಸ್ ಕಳಿಸಬೇಕಾಗುತ್ತದೆ. ಅಲ್ಲಿ ಏನಾಗಿದೆಯೆಂದರೆ ಮೀನು ಹಿಡಿಯುವವರೂ, ವ್ಯಾಪಾರಸ್ಥರೂ ಒಂದಾಗಿ ಸರ್ಕಾರದ ವಿರುದ್ಧ ಪ್ರತಿಭಟನೆಯನ್ನು ಮಾಡಿದರು. ಇದನ್ನು ನಾನಾದರೂ ಕೂಡ ಈ ಸಭೆಯಲ್ಲಿ ಹೇಳಿದ್ದೆ. ಸರ್ಕಾರ ಒಂದು ಆಜ್ಞೆಯನ್ನು ಹೊರಡಿಸಿದ ಮೇಲೆ, ಅದನ್ನು ತಿದ್ದುಪಡಿ ಮಾಡುವ ಹಕ್ಕು ನಮಗೆ, ಸಮಿತಿಗೆ ಇಲ್ಲದಿದ್ದರೆ ಆ ಕಮಿಟಿಯನ್ನು ಮಾಡಿದ ಉದ್ದೇಶವಾದರೂ ಏನು? ಜಿಲ್ಲಾಧಿಕಾರಿಯವರು ಅದಕ್ಕೆ ಅಧ್ಯಕ್ಷರಾಗಿದ್ದರು. ಅವರು ಬಹಳ ಬುದ್ಧಿವಂತರು. ಅವರು ನಮ್ಮನ್ನೆಲ್ಲಾ ಸಮಜಾಯಿಷಿ ಮಾಡಿ ನಮ್ಮಿಂದ ಏನಾದರೂ ಆಗುವ ಹಾಗಿದ್ದರೆ ಮಾಡೋಣ, ಅದನ್ನು ಕಳಿಸಲೇ ಬೇಕಾಗಿದೆ. ಸರ್ಕಾರ ಇದರ ಬಗ್ಗೆ ಬಹಳ ತರಾತುರಿಯಿಂದ ಇದೆಯೆಂದು ಹೇಳಿದರು.

ನಾನು ಹೇಳಿದೆ, ಈ ಪರಿಸ್ಥಿತಿಯಲ್ಲಿ ನಾನು ಸಮಿತಿಗೆ ರಾಜೀನಾಮೆ ಕೊಡಬೇಕಾಗುತ್ತದೆ, ಮೀನುಗಾರರನ್ನು ಎದುರಿಸಲು ಸಾಧ್ಯವಿಲ್ಲ. ಆ ಜನಾಂಗದಿಂದಲೇ ನಾನು ಬಂದವನಾದ್ದರಿಂದ, ಸುಮ್ಮನೆ ಕಣ್ಣು ಮುಚ್ಚಿಕೊಂಡು ಒಪ್ಪಿಗೆ ಕೊಟ್ಟರೆ ಬಹಳ ಕಷ್ಟವಾಗುತ್ತದೆ. ಈ ನಮ್ಮ ಶಾಸನದ ಬಗ್ಗೆ ಕೂಡ ಏನು ಅವರು ಸುಗ್ರೀವಾಜ್ಞೆ ತರಬೇಕೆಂದು ಮಾಡಿದರಲ್ಲಾ ಆ ಬಗ್ಗೆ ಕೂಡ ಪ್ರತಿಭಟನೆ ಬಂದಿತು, ಮಾನ್ಯ ಮುಖ್ಯಮಂತ್ರಿಗಳು ಈ ಬಗ್ಗೆ ಮಾನ್ಯ ಮೀನುಗಾರಿಕೆ ಸಚಿವರನ್ನು ಕರೆಸಿ ಹಾಗೂ ಅವರನ್ನೆಲ್ಲಾ ಕರೆಸಿ ನೀವು ಒಂದು ನಿಶ್ಚಯಕ್ಕೆ ಬನ್ನಿ ಎಂದು ಹೇಳಿದರು. ಅದರಂತೆ, ಅವರು, ಅವರನ್ನೆಲ್ಲಾ ಕರೆಸಿ ಮಾತನಾಡಿದರು. ದುರಾದೃಷ್ಟವಶಾತ್, ನಾನು ಆ ದಿನ ಅಸೌಖ್ಯದಲ್ಲಿದ್ದೆ. ಆದರೆ ನಾನು ವೈದ್ಯಕೀಯ ಶುಶ್ರೂಷೆ ಪಡೆದು ಊರಿಗೆ ಹೋದಾಗ ಮೀಟಿಂಗ್‌ಗೆ ಬರಲಾಗಲಿಲ್ಲ. ಪುನಃ ಅವರು ಒಂದೆರಡು ದಿನ ಬಿಟ್ಟು ಇನ್ನೊಂದು ಮೀಟಿಂಗ್ ಕರೆದರು. ಅದಕ್ಕೂ ನಾನು ಬರಲಾಗಲಿಲ್ಲ. ನಾನು ಆಗ ಪತ್ರಿಕಾ ಹೇಳಿಕೆ ಕೊಟ್ಟೆ. ಇದೇ ಮೀನುಗಾರಿಕೆಯ ಬಗ್ಗೆ ಮಾಹಿತಿ ಇಲ್ಲದ ಮಂತ್ರಿಗಳು ಬಂದರೆ, ಅಧಿಕಾರಿಗಳನ್ನು ಕೇಳಿ ಎಂದಿದ್ದಕ್ಕೆ ಅವರಿಗೆ ಸಿಟ್ಟು ಬಂದಿತು, ನಾನೇನು ಕುಂಟುನೆಪ ಮಾಡಿ ಈ ಮೀಟಿಂಗ್‌ಗೆ ಬರಲಿಲ್ಲ, ಅಲ್ಲಿ ಆ ಮೀನುಗಾರರನ್ನು ಸಂಘಟನೆ ಮಾಡಿ ಸರ್ಕಾರದೊಡನೆ ಹೋರಾಟ ನಡೆಸಲು ನಾನೇ ಕಾರಣೀ ಭೂತನೆಂದು ಆ ಬಗ್ಗೆ ಮಾನ್ಯ ಸಚಿವರಿಗೆ ನಾನು ನೇರವಾಗಿ ಹೇಳಬಯಸುತ್ತೇನೆ.

(ಮಾನ್ಯ ಉಪಾಧ್ಯಕ್ಷರು ಪೀಠವನ್ನಲಂಕರಿಸಿದರು)

ನಾನು ಕುಂಟುನೆಪ ಮಾಡಿಕೊಂಡು ಬರಲಿಲ್ಲ ದಯವಿಟ್ಟು ತಾವು ಉತ್ತಮವಾದ ರೀತಿಯಲ್ಲಿ ಬಾಂಧವ್ಯವನ್ನಿಟ್ಟುಕೊಳ್ಳಬೇಕು. ನಾನು ಜನತಾ ಪ್ರತಿನಿಧಿಯಾಗಿ ಎಲ್ಲವನ್ನೂ ಹೇಳಬೇಕಾಗುತ್ತದೆ. ನಾನು ಸುಮ್ಮನೆ ಮಾತು ಕೊಟ್ಟರೆ ಅಪರಾಧಿ ಸ್ಥಾನದಲ್ಲಿ ನಿಲ್ಲಬೇಕಾಗುತ್ತದೆ. ನಿಮಗೇನಾದರೂ ಉಪಕಾರ ಮಾಡುವ ಮನಸ್ಸಿದ್ದರೆ. ದಯವಿಟ್ಟು ಗುಬ್ಬಿಯ ಮೇಲೆ ಬ್ರಹ್ಮಾಸ್ತ್ರ ಬೇಡ ಸ್ವಾಮಿ, ಏನಾದರೂ ಮಾಡಿ ಅವರಿಗೆ ಸಹಾಯ ಮಾಡಿ. ಅವರು ನಿಜವಾಗಿಯೂ ಪ್ರಕೃತಿಯ ವಿರುದ್ಧ ದುಡಿಯುತ್ತಾರೆ. ಹೆಚ್ಚಿನ ವಿಚಾರವೆಂದರೆ, ಮಹಿಳೆಯರು, ಗಂಡಸರು ಮತ್ತು ಮಕ್ಕಳು, ಮೂವರು ಒಟ್ಟಿಗೇ ದುಡಿದರೂ ಬಹಳ ಕಷ್ಟಪಡಬೇಕಾಗುತ್ತದೆ. ಮಲ್ಪೆಯಲ್ಲಿ ಮೀನು ಒಣಗಿಸುವ ಕಾರ್ಯವನ್ನು ಸ್ತ್ರೀಯರು ಮಾಡುತ್ತಿದ್ದರು. ನಾನು ಆಗಲೂ ಸಚಿವೆಯಾಗಿದ್ದೆ. ಆಗ ನಾನು ಅವರಿಗೆ ಹೇಳಿದೆ. ನೀವು ಎದ್ದುಬಿಡಿರಿ, ಅಲ್ಲಿ ಬಂದರಾಗಲಿ. ನಂತರ ನಿಮಗೆ ಮೀನು ಒಣಗಿಸಲಿಕ್ಕೆ ಸ್ಥಳಾವಕಾಶ ಮಾಡಿ ಕೊಡುತ್ತೇವೆಂದು ನಾನು ಹೇಳಿದೆ. ಆಗ ಇವರು ಎದ್ದರು. ಅಲ್ಲಿ ಬಂದರಾಯಿತು. ಅಧಿಕಾರಿಗಳು ದೊಡ್ಡ ದೊಡ್ಡ ವ್ಯಾಪಾರಿಗಳನ್ನು ಉದ್ಧಾರ ಮಾಡಲು ಅವರಿಗೆ ಜಾಗ ಕೊಟ್ಟಿದ್ದರು. ಡಾಕ್ಟರ್ ನನಗೆ ವಿಶ್ರಾಂತಿಗೆ ಹೇಳಿದ್ದರು. ಆದರೂ ನಾನು ಜೀವದ ಹಂಗುತೊರೆದು ಅಲ್ಲಿಗೆ ಹೋಗಿ, ಹೇಳಿದೆ, ನೀವು ಇಲ್ಲಿ ಕೂತುಕೊಳ್ಳಿ. ಏನು ಬಂದರೂ ನಾನು ತಲೆಕೊಡುತ್ತೇನೆ. ಇಲ್ಲದಿದ್ದರೆ ಅವರು ಪಾಪ, ಏನು ಮಾಡಬೇಕು ? ಮಹಿಳೆಯರು ಈಗ ಭಿಕ್ಷೆ ಬೇಡಬೇಕು. ಏನೂ ಕೂಡ ಮಾಡದ ಹಾಗಾಗಿದೆ. ಏಕೆಂದರೆ ಹಿಂದೆ ಸಾಂಪ್ರದಾಯಿಕವಾಗಿ ಮೀನುಗಾರಿಕೆಯಲ್ಲಿ ರಂಪಣಿ ದೋಣಿಯಲ್ಲಿ ಮೀನನ್ನು ಹಿಡಿಯುತ್ತಿದ್ದರು. ಕರಾವಳಿ ಉದ್ದಕ್ಕೂ ಆ ಮಹಿಳೆಯರು ಹೋಗಿ ವ್ಯಾಪಾರ ಮಾಡುತ್ತಿದ್ದರು. ಅಲ್ಲಿ ಬಂದರು ಮಾಡಿದ ಕೂಡಲೇ ಎಲ್ಲರೂ ಅಲ್ಲಿಗೆ ಬಂದು ಜಮಾಯಿಸಬೇಕಾಗುತ್ತದೆ ಇಲ್ಲದಿದ್ದರೆ ಅವರನ್ನು ಎಲ್ಲಿಗೆ ಕಳುಹಿಸುತ್ತೀರಿ ನೀವು? ಮಲ್ಪೆ ಬಂದರೊಳಗೆ ಎಲ್ಲಾದರೂ ಆ ಮಹಿಳೆಯರಿಗೆ ಜಾಗ ಒದಗಿಸಬೇಕು. ಏಕೆಂದರೆ, ಇವತ್ತು ಶ್ರೀಮಂತರಿಗೆಂದರೆ ಎಲ್ಲರೂ ಸಹಕಾರ ಕೊಡುತ್ತಾರೆ. ಬಡವರಿಗೆ ಹಾಗಿಲ್ಲ. ನಿಮಗೆ ಬಡವರ ಬಗ್ಗೆ ಕಾಳಜಿ ಇದ್ದರೆ, ಅವರಿಗೆ ಸಹಕಾರ ಮಾಡುವ ಕಳಕಳಿಯಿದ್ದರೆ ಇದ್ದರೆ ಎಂದೇ ನಾನು ಹೇಳುತ್ತೇನೆ. ಹಾಗೆ ಇದ್ದರೆ, ತಾವು ಪ್ರತಿಷ್ಠೆಯನ್ನು ಬದಿಗೊತ್ತಿ, ಜೀವನ್ಮರಣದ ಪ್ರಶ್ನೆಯಲ್ಲಿ ಅವರು ಹೋರಾಡುತ್ತಿರುವಾಗ ಅವರ ರಕ್ಷಣೆಗೆ ತಾವು ಬರಬೇಕೆಂದು ನಾನು ಸರ್ಕಾರದವರಲ್ಲಿ ವಿನಂತಿಸಿಕೊಳ್ಳುತ್ತೇನೆ. ಇದೇ ರೀತಿ ಈ ಮಲ್ಪೆ ಹಾರ್ಬರ್‌ನಲ್ಲಿ ಸುಮಾರು ೭೦೦ ನಾವೆಗಳಿವೆ. ಅವುಗಳು ಒಂದಕ್ಕೊಂದು ತಾಗಿ, ಎಷ್ಟೋ ಜೀವಹಾನಿಯಾದದ್ದು ಉಂಟು. ಅಷ್ಟೇ ಅಲ್ಲ, ಅವರ ದೋಣಿಗಳಿಗೆ ಕೂಡ ಪೆಟ್ಟಾಗಿ, ಎಷ್ಟೋ ಅವಘಡಗಳಾದದ್ದೂ ಉಂಟು. ಅಲ್ಲಿ ಸೆಕೆಂಡ್ ಸ್ಟೇಜನ್ನು ನೀವು ತಕ್ಷಣ ಪ್ರಾರಂಭಮಾಡಬೇಕು. ನೀವು ಕೇಂದ್ರ ಸರ್ಕಾರದ ಮೇಲೆ ಒತ್ತಾಯ ತನ್ನಿ ನಾವು ಕೂಡ ಒತ್ತಾಯವನ್ನು ತರುತ್ತೇವೆ. ಅಷ್ಟೇ ಅಲ್ಲ, ಈ ಬೋಟುಗಳು ಹಾಳಾದರೆ ಅವುಗಳನ್ನು ಎಳೆದುಕೊಂಡು ಬರಲು ವ್ಯವಸ್ಥೆಯಿಲ್ಲ. ಆದ್ದರಿಂದ ತಾವು ಡಗ್‌ನ್ನು ಮಾಡಿದರೆ ತುಂಬಾ ಅನುಕೂಲವಾಗುತ್ತದೆಂದು ಈ ಸಂದರ್ಭದಲ್ಲಿ ನಾನು ಹೇಳುತ್ತೇನೆ. ಇದೇ ರೀತಿ ಮಂಗಳೂರು, ಮುಲ್ಕಿ, ಮಲ್ಪೆ, ಗಂಗೊಳ್ಳಿ, ಹಂಗಾರಕಟ್ಟೆ ಹಾಗೂ ಉತ್ತರ ಕನ್ನಡದಲ್ಲಿ ಪ್ರಾಕೃತಿಕ ರೇವುಗಳಿರುವುದರಿಂದ, ಅಲ್ಲಿ ಕೂಡ ಈ ದೋಣಿಗಳಿಗೆ ಮರಳು ಬಿದ್ದು ಸಾಕಷ್ಟು ಪ್ರಾಣಹಾನಿ ಆಗಿದೆ. ಅಲ್ಲಿ ಡ್ರೆಜರ್‌ನ್ನು ಇಡಬೇಕಾಗುತ್ತದೆ. ಆಗಾಗ್ಗೆ ಹೂಳೆತ್ತುವ ಕಾರ್ಯವನ್ನು ಮಾಡದಿದ್ದರೆ, ಇನ್ನು ಮೀನುಗಾರಿಕೆ ಮಾಡಲು ಸಾಧ್ಯವೇ ಇಲ್ಲವೆಂದು ನಾನು ಹೇಳಬಯಸುತ್ತೇನೆ. ಅಲ್ಲದೆ, ಮೀನುಗಾರಿಕೆ ರಸ್ತೆಗಳನ್ನು ಕೂಡ ದುರಸ್ತಿ ಮಾಡಿಲ್ಲ. ಪಿಡಬ್ಲ್ಯುಡಿಗೆ ಕೇಳಿದರೆ, ನಮ್ಮದಲ್ಲ ಫಿಶರೀಸ್‌ದು ಎಂದು ಹೇಳುತ್ತಾರೆ. ಅವರನ್ನು ಕೇಳಿದರೆ, ಈ ಕೆಲಸ ಪಿಡಬ್ಲ್ಯುಡಿಯವರದು ಎಂದು ಹೇಳುತ್ತಾರೆ. ಇದು ತಂದೆತಾಯಿಯಿಲ್ಲದ ತಬ್ಬಲಿ ಮಗುವಿನ ಹಾಗಾಗಿದೆ ಪೋರ್ಟ್ ಜಾಗದಲ್ಲಿ ವಾಹನಗಳು ತಿರುಗುವ ಜಾಗದಲ್ಲಿ ದುರಸ್ತಿಯಿಲ್ಲ. ಈ ಬಗ್ಗೆ ನಾನು ಪೋರ್ಟ್ ಡೈರೆಕ್ಟರ್‌ಗೆ ಎರಡು, ಮೂರು ಸಲ ಟೆಲಿಗ್ರಾಂ ಕೊಟ್ಟಿದ್ದೇನೆ. ರಿಪೇರಿ ಮಾಡಲು ಕೋರಿದ್ದೇನೆ. ಆದರೆ, ಮಾಡುತ್ತೇವೆಂದು ಹೇಳುತ್ತಾರೆ. ಆದರೆ ಇವತ್ತಿನವರೆಗೂ ಆ ಕೆಲಸ ಆಗಿಲ್ಲ. ಅದನ್ನು ಮಾಡಬೇಕೆಂದು ನಾನು ಈ ಸಂದರ್ಭದಲ್ಲಿ ಹೇಳಬಯಸುತ್ತೇನೆ. ಮೀನು ಕೃಷಿಕರ ಅಭಿವೃದ್ಧಿ ಸಂಸ್ಥೆ ಎಂಬ ಹೆಸರಿನಲ್ಲಿ ರಾಜ್ಯದಲ್ಲಿ ಕೇಂದ್ರದ ನೆರವಿನಿಂದ ಆರು ಮತ್ತು ರಾಜ್ಯದ ನೆರವಿನಿಂದ ಮೂರು ಸಂಸ್ಥೆಗಳನ್ನು ಸ್ಥಾಪಿಸಲಾಗಿದೆ ಎಂದು ನಿಮ್ಮ ವಾರ್ಷಿಕ ವರದಿಯಲ್ಲಿ ಉಲ್ಲೇಖಿಸಲಾಗಿದೆ. ಆ ಸಂಸ್ಥೆ ಮೀನು ಕೃಷಿಕರಿಗೆ ತರಬೇತಿ ನೀಡಿ, ತರಬೇತಿ ಪಡೆದ ಕೃಷಿಕರಿಗೆ ಕೆರೆಗಳನ್ನು ನೀಡಿ, ಅಲ್ಲಿ ಮತ್ಸ್ಯಪಾಲನೆಯನ್ನು ಅನುಷ್ಠಾನಕ್ಕೆ ತರಲು ಯೋಜನೆ ನಿಮ್ಮದು. ಈ ಮೀನು ಕೃಷಿಕರು ಎಂದರೆ ಯಾರು ? ಒಳನಾಡಿನಲ್ಲಿ ತಮ್ಮ ಜೀವನೋಪಾಯಕ್ಕಾಗಿ ಮೀನುಗಾರಿಕೆಯನ್ನು ತಮ್ಮ ಕಸುಬನ್ನಾಗಿಸಿದ ಮೀನುಗಾರ

ರಲ್ಲವೇ? ಹಾಗಿದ್ದರೂ. ಈ ಅಭಿವೃದ್ಧಿ ಸಂಸ್ಥೆಗಳಲ್ಲಿ ಅಲ್ಲಿ ಮೀನುಗಾರರ ಯುವಕರಿಗೆ ನೀವು ತರಬೇತಿಯನ್ನು ನೀಡಿರುವಿರಾ? ತರಬೇತಿ ಹೊಂದಿದವರಿಗೆ ಎಷ್ಟು ಕೆರೆಗಳನ್ನು ಇತ್ತಿರುವಿರಿ? ಎಂಬ ವಿಚಾರದಲ್ಲಿ ತಾವು ಉತ್ತರದಲ್ಲಿ. ನಿಮ್ಮ ಮನೆ-ಮಾರಿ ಕಾರ್ಯಕ್ರಮದ ಪ್ರಸ್ತಾಪದ ವರದಿಯಲ್ಲಿ ತಿಳಿಸಿರುವಿರಿ. ಅದೇ ರೀತಿ ೧೯೮೪-೮೫ಕ್ಕೆ ೪೦ ಲಕ್ಷ, ೧೯೮೫-೮೬ಕ್ಕೆ ೪೦-೫೦ ಲಕ್ಷಕ್ಕೆ ಏರಿಸಿದೆ ಎಂದು ಅದರಿಂದ ನೀವು ಯಾವ ಕಾರ್ಯಕ್ರಮಗಳನ್ನು ಹಾಕಿಕೊಂಡಿದ್ದೀರಿ ? ನನಗೆ ತಿಳಿದಮಟ್ಟಿಗೆ ಒಂದು ನಯಾಪೈಸೆಯನ್ನೂ ನೀವು ಖರ್ಚು ಮಾಡಲಿಲ್ಲ. ಕೇಂದ್ರದವರು ಹಣ ಕೊಡಲಿಲ್ಲ ಎಂದು ಹೇಳುತ್ತೀರಿ. ಇದಕ್ಕೆ ಜವಾಬ್ದಾರಿ ಯಾರು? ಜವಾಬ್ದಾರಿಯಾದವರ ಮೇಲೆ ನೀವು ಕ್ರಮ ತೆಗೆದುಕೊಳ್ಳುತ್ತೀರಾ ? ಇನ್ನು ನಿಮಗೆ ಕೇಂದ್ರದಿಂದ ಹಣ ಕೇಳಲು ಯಾವ ನೈತಿಕ ಹಕ್ಕಿದೆ ? ಇನ್ನು ೧೯೮೫-೮೬ನೇ ಸಾಲಿಗೆ ಕೇಂದ್ರ ಸರ್ಕಾರದವರು ಗ್ರ್ಯಾಂಟ್ ರೂಪದಲ್ಲಿ ೫೫ ಲಕ್ಷ ರೂಪಾಯಿಗಳನ್ನು ಕೊಟ್ಟಿದ್ದಾರೆ. ಅದರಲ್ಲಿ ನನಗೆ ತಿಳಿದಿರುವ ಪ್ರಕಾರ, ೨೦೦ ಲಕ್ಷ ಮಾತ್ರ ಖರ್ಚುಮಾಡಿ ೧೫೦ ಲಕ್ಷ ಖರ್ಚು ಮಾಡಲಿಲ್ಲ. ಇದಕ್ಕೆ ಕೂಡ ಯಾರು ಜವಾಬ್ದಾರರು ? ಈ ರೀತಿ ಯಾಕೆ ಮಾಡಿದಿರೆಂದು ನೀವು ನಿಮ್ಮ ಉತ್ತರದಲ್ಲಿ ತಿಳಿಸಬೇಕಾಗಿ ನಾನು ಕೋರಲಿಚ್ಛಿಸುತ್ತೇನೆ. ಇನ್ನು ಕೃಷಿ ಕಾಲೇಜಿನಲ್ಲಿ ಕೃಷಿಕರ ಮಕ್ಕಳಿಗೆ ಶೇಕಡ ೧೦ ರಷ್ಟು ಸೀಟುಗಳನ್ನು ಇಡುವುದರ ಜೊತೆಗೆ ೧೦ ಗ್ರೇಸ್ ಮಾರ್ಕ್ಸ್‌ಗಳನ್ನು ಕೊಡುವಂಥ ಒಂದು ವ್ಯವಸ್ಥೆ ಇದೆ. ಮಂಗಳೂರಿನಲ್ಲಿ ಮೀನುಗಾರಿಕಾ ಕಾಲೇಜು ಇದೆ, ಅಲ್ಲಿ ಮೀನುಗಾರರ ಮಕ್ಕಳಿಗೆ ಶೇಕಡ ೧೦ ಸೀಟುಗಳನ್ನು ಇಡುವುದರ ಜೊತೆಗೆ ೧೦ ಗ್ರೇಸ್ ಮಾರ್ಕ್ಸ್‌ಗಳನ್ನು ಕೊಡುವುದಕ್ಕೆ ತಾವು ಮನಸ್ಸು ಮಾಡಬೇಕು. ಈ ಬಗ್ಗೆ ಕಾನೂನಿಗೆ ತಿದ್ದುಪಡಿ ತರಬೇಕೆಂದು ಕೇಳಿಕೊಳ್ಳುತ್ತೇನೆ. ಮಾನ್ಯ ಮೀನುಗಾರಿಕಾ ಮಂತ್ರಿಯವರು ಕಾರವಾರಕ್ಕೆ ಭೇಟಿ ನೀಡಿದ ಬಗ್ಗೆ ಒಂದು ಮಾತನ್ನು ಹೇಳಿದ್ದಾರೆ. ಗ್ರಾಮಾಂತರ ಪ್ರದೇಶಗಳಲ್ಲಿ ನೀರು ಮತ್ತು ಸಂಪರ್ಕ ವ್ಯವಸ್ಥೆ ಪೂರೈಸಬೇಕಾಗಿರುವುದರಿಂದ, ಬಂದರು ನಿರ್ಮಾಣ ಕಾರ್ಯವನ್ನು ಮಾಡುವುದಕ್ಕಾಗುವುದಿಲ್ಲವೆಂದು ಹೇಳಿದ್ದಾರೆ. ಹೀಗಿದ್ದ ಮೇಲೆ ನೀವು ಏತಕ್ಕೆ ಬೇಕು ? ಇಲಾಖೆ ಏತಕ್ಕೆ ಬೇಕು ? ಮೀನುಗಾರರು ತಮ್ಮ ಸರ್ವಸ್ವವನ್ನು ಕಳೆದುಕೊಂಡರೂ ಕೇಳುವವರಿಲ್ಲದ ಮೇಲೆ ಮೀನುಗಾರಿಕಾ ಮಂತ್ರಿಗಳು ಏತಕ್ಕೆ ಬೇಕೆಂದು ಕೇಳುವುದಕ್ಕೆ ಇಚ್ಛೆಪಡುತ್ತೇನೆ. ಇನ್ನು ನಮ್ಮ ಜಿಲ್ಲೆಯಲ್ಲಿ ೧೯೭೮ರಲ್ಲಿ ಪ್ರವಾಸಿಕೇಂದ್ರದ ಕಟ್ಟಡವನ್ನು ಪ್ರಾರಂಭ ಮಾಡಲಾಗಿತ್ತು. ಮೊನ್ನೆ ಮಾನ್ಯ ಮಂತ್ರಿಯವರು ಇದೇ ಸದನದಲ್ಲಿ ಪ್ರವಾಸಿ ಕೇಂದ್ರವನ್ನು ಖಾಸಗೀಯವರಿಗೆ ಮಾರಾಟ ಮಾಡುತ್ತೇವೆಂದು ಹೇಳಿದ್ದಾರೆ. ನನಗೆ ತಿಳಿದಮಟ್ಟಿಗೆ ಪಶ್ಚಿಮಘಟ್ಟ ಅಭಿವೃದ್ಧಿ ಯೋಜನೆ ಯಡಿಯಲ್ಲಿ ಕೇಂದ್ರ ಸರ್ಕಾರ ಪ್ರವಾಸಿ ಕೇಂದ್ರದ ಕಟ್ಟಡಕ್ಕೆ ಹಣ ಕೊಟ್ಟಿದೆ. ರಾಜ್ಯ ಸರ್ಕಾರದ ಕಾರ್ಯವಿಧಾನದಿಂದ ಇನ್ನು ಒಂದೂವರೆ ಕೋಟಿ ರೂಪಾಯಿ ಖರ್ಚುಮಾಡಬೇಕಾಗಿದೆ. ೬೦ ಲಕ್ಷ ರೂಪಾಯಿ ಈಗಾಗಲೇ ಕೇಂದ್ರ ಸರ್ಕಾರ ಕೊಟ್ಟಿದೆ. ಕೇಂದ್ರಸರ್ಕಾರ ಹಣ ತೊಡಗಿಸಿರುವಂಥ ಈ ಒಂದು ಕಟ್ಟಡವನ್ನು ಖಾಸಗೀಯವರಿಗೆ ಮಾರಾಟ ಮಾಡುವುದಕ್ಕೆ ನಿಮಗೆ ಹಕ್ಕು ಉಂಟೋ ? ಏತಕ್ಕೆ ಈ ರೀತಿಯಾದಂಥ ಅಭಿಪ್ರಾಯಕ್ಕೆ ಬಂದಿರಿ ? ಖಾಸಗಿಯವರು ಯಾರು ಎನ್ನುವುದನ್ನು ದಯವಿಟ್ಟು ತಿಳಿಸಬೇಕು. ಇನ್ನು ತಾಲ್ಲೂಕಿಗೆ ಒಂದು ಸ್ಟೇಡಿಯಂ ಕೊಟ್ಟು, ಯುವಜನರನ್ನು ಉದ್ಧಾರ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ. ಮಾನ್ಯ ತೋಟಗಾರಿಕಾ ಮಂತ್ರಿಯವರು ಇದ್ದಾರೆ, ದಕ್ಷಿಣ ಕನ್ನಡ ಮತ್ತು ಉತ್ತರ ಕನ್ನಡದ ಜಿಲ್ಲೆಗಳಲ್ಲಿ ಹೆಚ್ಚಿನ ಪ್ರಮಾಣದಲ್ಲಿ ತೆಂಗಿನ ಮರಗಳು ಬೆಳೆಯುತ್ತಿವೆ. ಅದರ ಜೊತೆಗೆ ಕಾಯಿಲೆಗಳು ಕೂಡ ಬರುತ್ತಿವೆ. ಅಧಿಕಾರಿಗಳನ್ನು ಹೋಗಿ ಕೇಳಿದರೆ ಮದ್ದು ಇಲ್ಲವೆಂದು ಹೇಳುತ್ತಾರೆ. ಪ್ರತಿಯೊಂದು ಜಿಲ್ಲಾ ಕೇಂದ್ರದಲ್ಲಿಯೂ ಬೆಳೆಗಳಿಗೆ ಬರತಕ್ಕ ರೋಗಗಳನ್ನು ತಡೆಯುವಂಥ ಚಿಕಿತ್ಸಾ ಕೇಂದ್ರಗಳನ್ನು ಪ್ರಾರಂಭ ಮಾಡಬೇಕೆಂದು ಹೇಳುತ್ತೇನೆ. ಮಾನ್ಯ ಪ್ರಕಾಶ್‌ರವರು ಕೃಷಿ ಇಲಾಖೆಯ ಬೇಡಿಕೆಗಳನ್ನು ಕೂಡ ಇಟ್ಟಿದ್ದಾರೆ. ಬರಗಾಲ ಬಂದಂಥ ಸಂದರ್ಭದಲ್ಲಿ ಮಳೆ ಕಡಿಮೆಯಾದಾಗ ಯಾವ ಬೆಳೆಯನ್ನು ಬೆಳೆಯಬೇಕೆಂಬ ಬಗ್ಗೆ ಅಧ್ಯಯನ ಮಾಡಿ, ಒಂದು ಯೋಜನೆ ತಯಾರು ಮಾಡಬೇಕೆಂದು ಕೇಳಿಕೊಳ್ಳುತ್ತೇನೆ. ಮಾನ್ಯ ಪಶುಸಂಗೋಪನಾ ಮಂತ್ರಿಯವರು ಹೊಸ ಯೋಜನೆಗಳು ಯಾವುದಾದರೂ ಇದ್ದರೆ ಉಡುಪಿ ತಾಲ್ಲೂಕಿಗೆ ಕೊಡಬೇಕೆಂದು ಕೇಳಿಕೊಂಡು ನನಗೆ ಇಷ್ಟು ವಿಚಾರಗಳನ್ನು ತಿಳಿಸಲಿಕ್ಕೆ ಅವಕಾಶ ಕೊಟ್ಟಿದ್ದಕ್ಕಾಗಿ ತಮಗೆ ವಂದಿಸಿ, ನನ್ನ ಎರಡು ಮಾತುಗಳನ್ನು ಮುಗಿಸುತ್ತೇನೆ.

† ಶ್ರೀ ರಮೇಶ್‌ಕುಮಾರ್ (ಶ್ರೀನಿವಾಸಪುರ).—ಸನ್ಮಾನ್ಯ ಅಧ್ಯಕ್ಷರೇ, ಶಾಸನ ಸಭೆಯಲ್ಲಿ ಪ್ರತಿ ವರ್ಷ ಇಲಾಖೆಗಳಿಗೆ ಸಂಬಂಧಪಟ್ಟ ಬೇಡಿಕೆಗಳನ್ನು ಮಂಡಿಸಿ, ಹಣ ಮಂಜೂರು ಮಾಡಿಸಿಕೊಂಡು ಹೋಗುತ್ತಾರೆ. ಕಳೆದ ವರ್ಷ ಏನು ಖರ್ಚು ಮಾಡಿದ್ದಾರೆ, ಖರ್ಚು ಮಾಡಿದಂಥ ಹಣವನ್ನು ನ್ಯಾಯ ಸಮ್ಮತವಾಗಿ ಖರ್ಚು ಮಾಡಿದ್ದಾರೆಯೇ ? ನಮ್ಮ ಸಮಾಜಕ್ಕೆ ಅದರಿಂದ ಎಷ್ಟು ಉಪಯೋಗವಾಗಿದೆ? ನಾವು ಯಾವ ಜನರನ್ನು ಪ್ರತಿನಿಧಿಸುತ್ತೇವೆಯೋ ಅವರಿಗೆ ಈ ಹಣದಿಂದ ಅವರ ಪಾಲಿಗೆ ಏನಾದರೂ ಉಪಯೋಗವಾಗಿದೆಯೇ ಎನ್ನತಕ್ಕಂಥಾದ್ದನ್ನು ವಿಶ್ಲೇಷಣೆ ಮಾಡಿ, ಮುಂದೆ ನಾವು ಕೊಡತಕ್ಕಂಥ ಮಂಜೂರಾತಿಗೆ ಅರ್ಹತೆ ಇದೆಯೇ ಎಂಬುದನ್ನು ವಿವೇಚನೆ ಇಟ್ಟುಕೊಂಡು ಮಂಜೂರು ಮಾಡಬೇಕು. ಆದರೆ, ವಾಸ್ತವಾಂಶ ಹೀಗೆ ಆಗಿಲ್ಲ, ಮಂಜೂರಾತಿ ಕೊಡುತ್ತೇವೆ. ಇದನ್ನು ತಾವು ಮತಕ್ಕೆ ಹಾಕಿ ಒಪ್ಪಿಗೆ ಪಡೆಯುತ್ತೀರಿ. ಮಾನ್ಯ ಕೃಷಿ ಸಚಿವರು ಇವತ್ತು ವ್ಯವಸಾಯ ಇಲಾಖೆಗಳಿಗೆ ಸಂಬಂಧಪಟ್ಟ ಬೇಡಿಕೆಗಳನ್ನು ಇಟ್ಟಿದ್ದಾರೆ. ಮಾನ್ಯ ಸಚಿವರು ಅವರ ಕೋಣೆಯೊಳಗೆ ದಿವಂಗತ ಲೋಹಿಯಾರವರ ಭಾವಚಿತ್ರವನ್ನು ಇಟ್ಟುಕೊಂಡಿದ್ದಾರೆ. ಅನೇಕ ಸಂದರ್ಭದಲ್ಲಿ ಸಮಾಜವಾದದ ಬಗ್ಗೆ ಚಿಂತನೆ ಇಟ್ಟುಕೊಂಡಿರತಕ್ಕ ಮಾತುಗಳನ್ನು ಹೇಳಿರುವುದನ್ನು ನೋಡಿದ್ದೇವೆ. ಅದು ಪತ್ರಿಗಳಲ್ಲಿ ಕೂಡ ಬಂದಿದೆ. ನಾನು ಅವರನ್ನು ಒಂದು ಪ್ರಶ್ನೆ ಕೇಳುತ್ತೇನೆ. ಈ ದೇಶದಲ್ಲಿ ಅತಿ ಹೆಚ್ಚಿನ ಜನಸಂಖ್ಯೆ ಕೃಷಿಯನ್ನು ಅವಲಂಬಿಸಿದೆ. ಈ ಕೃಷಿಕನ ಸ್ಥಾನ ಮಾನ ಸಮಾಜದಲ್ಲಿ ಏನಿದೆ, ನೀವು ಮಾಡತಕ್ಕ ಚಿಂತನೆಗೂ, ಕೃಷಿಕರಿಗೆ ಸಮಾಜದಲ್ಲಿರತಕ್ಕ ಸ್ಥಾನಕ್ಕೂ ಹೊಂದಾಣಿಕೆ ಇದೆಯೆ ? ಓಲಗ ಊದುವವರಿಗೆ ಇವತ್ತು ಪ್ರತಿಷ್ಠೆ, ಪುರಸ್ಕಾರ ಸಿಗುತ್ತದೆ. ರೈತನಿಗೆ ಯಾವ ಪುರಸ್ಕಾರವೂ ಇಲ್ಲ, ಸನ್ಮಾನವೂ ಇಲ್ಲ. ಜೀವನದಲ್ಲಿ ಬೆಳಕು ಕಾಣತಕ್ಕ ಅವಕಾಶ ಇಲ್ಲ. ವ್ಯವಸಾಯ ಇಲಾಖೆಯ ವ್ಯವಸ್ಥೆ ಹೇಗಿದೆ, ಅವನು ಏನು ಬೆಳೆಯುತ್ತಾನೆ ಅದು ಅವನ ಇಷ್ಟ, ಹೇಗೆ ಬೆಳೆಯುತ್ತಾನೆ ಅದು ಅವನ ಕರ್ಮ. ಬೆಳೆ ಏತಕ್ಕೆ ಆಗಿಲ್ಲ ಅದರ ಹೊಣೆಗಾರಿಗೆ ಇವರಿಗೆ ಇಲ್ಲ. ಅವನು ಬೆಳೆಯುತಕ್ಕ ಬೆಳೆಗೆ ಎಷ್ಟು ಖರ್ಚು ಮಾಡಿದ್ದಾನೆ, ಎಷ್ಟು ಖರ್ಚಾಗಬಹುದು, ನಿಗದಿಯಾದಂಥ ಒಂದು ಅಂದಾಜು ಮಾಡಿಲ್ಲ. ಯಾವುದೇ ಸಂದರ್ಭದಲ್ಲಿ ಬೆಳೆ ನಷ್ಟವಾದರೆ ಸರ್ಕಾರದ ವತಿಯಿಂದ ಸಹಾಯ ಮಾಡುತ್ತೇವೆ, ಅದನ್ನು ತುಂಬಿಕೊಡುತ್ತೇವೆ ಎನ್ನುವ ಮಾತಿಲ್ಲ. ಇದರ ಅರ್ಥ ವ್ಯವಸಾಯ ಇಲಾಖೆಯಲ್ಲಿ ರೈತನ ಸ್ಥಿತಿಗತಿ ಮೇಲೆ ನಿಗಾ ಇಡತಕ್ಕ ಜವಾಬ್ದಾರಿ ಕೂಡ ಇಲ್ಲ. ಬೆಲೆಗಳ ಬಗ್ಗೆ ಅನೇಕ ಕಡೆ ಮಾತನಾಡುತ್ತಿದ್ದೇವೆ. ಕೇಂದ್ರ ಸರ್ಕಾರದವರು ಅಗ್ರಿಕಲ್ಚರ್ ಪ್ರೈಸ್ ಕಮೀಷನ್ ಮಾಡುತ್ತೇವೆಂದು ರಾಜ್ಯ ಸರ್ಕಾರದವರು ಕೂಡ ಆಲೋಚನೆ ಮಾಡಿದ್ದೇವೆಂದು ಹೇಳುತ್ತಿದ್ದಾರೆ. ಇನ್ನೂ ಎಷ್ಟು ವರ್ಷಗಳಾಗುತ್ತದೆ. ಮೊನ್ನೆ ಕಾರ್ಮಿಕ ಸಚಿವರು ಮಾತನಾಡುತ್ತಾ, ಸಂಘಟಿತ ಕಾರ್ಮಿಕರು, ಅಸಂಘಟಿತ ಕಾರ್ಮಿಕರ ಬಗ್ಗೆ ಮಾತನಾಡಿದ್ದಾರೆ. ಸರ್ಕಾರಿ ನೌಕರರಲ್ಲಿ ಕಾರ್ಮಿಕರಲ್ಲಿ ಸಂಘಟನೆ ಮಾಡಿಕೊಳ್ಳುವುದಕ್ಕೆ ಅವಕಾಶ ಇದೆ, ಒತ್ತಡ ತರುವುದಕ್ಕೆ ಅವಕಾಶ ಇದೆ. ತಮ್ಮ ಸಮಸ್ಯೆಗಳನ್ನು ಅಭಿಪ್ರಾಯಗಳನ್ನು ಸಂಘಟನೆ ಮೂಲಕ ಸರ್ಕಾರದ ಮುಂದೆ ಇಡುವುದಕ್ಕೆ ಅವಕಾಶ ಇದೆ. ಆದರೆ, ರೈತರು ಯಾವ ಸಂಘಟನೆಯನ್ನೂ ಮಾಡಿಕೊಂಡಿಲ್ಲ.

ಕೆಲವರು ರೈತರೇ ಅಲ್ಲದವರು ತಾವೇ ಮುಖಂಡರೆಂದು ಹೇಳಿಕೊಳ್ಳುತ್ತಾರೆ. ಮತ್ತೆ ರೈತರಾಗಿರತಕ್ಕಂಥವರಿಗೆ ಸಂಘಟನೆ ಮಾಡಿಕೊಳ್ಳುವುದಕ್ಕೆ ಪುರುಸೊತ್ತು ಇಲ್ಲ ಆದ್ದರಿಂದ ಅವರು ಸಂಘಟಿತರೂ ಆಗಿಲ್ಲ. ಏನೋ ಅಲ್ಪಸ್ವಲ್ಪ ಸಂಘಟಿತರಾಗಿ ಇಂಥ ರೈತರು ಮಾತನಾಡಿದರೂ ಕೂಡ ಅದು ಸಂಬಂಧಪಟ್ಟವರ ಕಿವಿಗೆ ಮುಟ್ಟುವುದೇ ಇಲ್ಲ. ನಾನು ಮಾನ್ಯ ಕೃಷಿ ಮಂತ್ರಿಗಳಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ. ದಯವಿಟ್ಟು ಹಿಂದಿನಿಂದ ನಡೆದುಕೊಂಡು ಬಂದಿರುವ ಪದ್ಧತಿ ಏನಿದೆ ಅದಕ್ಕೆ ಇತಿಶ್ರೀ ಹಾಡಿ. ಒಬ್ಬ ರೈತ ಬೆಳೆಯುವ ಯಾವುದೇ ಬೆಳೆಯಿಂದ ಅವನಿಗೆ ಕನಿಷ್ಠವಾದರೂ ಪ್ರತಿಫಲ ಸಿಗುವಂಥ ಅವನೂ ವಿಶ್ವಾಸದಿಂದ ಬದುಕುವಂಥ ದಾರಿ ಮಾಡಿಕೊಡಿ. ಅಂದರೆ ಒಂದು ಬೆಳೆ ಬೆಳೆಯಲು ಅವನಿಗೆ ಎಷ್ಟು ಖರ್ಚಾಗುವುದೋ ಅಷ್ಟನ್ನು ತುಂಬಿಕೊಟ್ಟು ಅವನೂ ಯಾವರೀತಿ ಜೀವನ ಮಾಡಬೇಕೆಂಬ ಬಗ್ಗೆ ಆಲೋಚನೆ ಮಾಡಿ ಪರಿಹಾರ ಸಿಗುವ ವ್ಯವಸ್ಥೆ ಮಾಡಬೇಕೆಂದು ವಿನಂತಿಸಿ ಕೊಳ್ಳುತ್ತೇನೆ.

ಇನ್ನು ರೈತ ಕಾರ್ಮಿಕನ ವಿಚಾರ. ಕಡಿಮೆ ಹಿಡುವಳಿದಾರರ ಸಮಸ್ಯೆ ಅಷ್ಟೊಂದಿರಬೇಕಾದರೆ ಅಂಥವರ ಮನೆ ಹೊಲಗಳಲ್ಲಿ ಹೋಗಿ ದುಡಿದು ಜೀವನ ಮಾಡುವ ಈ ರೈತ ಕಾರ್ಮಿಕರದು ಇನ್ನೆಷ್ಟಿರ ಬೇಕು ? ರೈತ ಕಾರ್ಮಿಕರ ಬಗ್ಗೆ ನಿಮಗೆ ನಿಜವಾಗಿಯೂ ಕಾಳಜಿ ಇರುವುದಾದರೆ ಅವರ ಸ್ಥಿತಿ ಏನಿರ ಬಹುದೆಂದು ತಾವು ಊಹಿಸಿಕೊಳ್ಳಿ ಎಂದು ಅದರ ಬಗ್ಗೆ ಹೆಚ್ಚಿಗೆ ಮಾತನಾಡುವುದಕ್ಕೆ ಹೋಗುವುದಿಲ್ಲ.

ಇವತ್ತು ರೈತ ಬೆಳೆದಂಥ ಬೆಳೆಯನ್ನು ಮಾರುಕಟ್ಟೆಗೆ ಸಾಗಿಸಲು ವ್ಯವಸ್ಥಿತವಾದ ರಸ್ತೆ ಇಲ್ಲ. ತರಕಾರಿಯನ್ನು ಅವನು ಹಾಳುಬಿದ್ದಿರುವ ರಸ್ತೆಯಲ್ಲಿ ಸೈಕಲ್ ಮೇಲೆ ಸಾಗಿಸಬೇಕಾಗಿದೆ. ಯಾವುದರಲ್ಲೂ ಒಂದು ಇಂಪ್ರೂವ್ಮೆಂಟ್ ಮೆಕ್ಯಾನಿಸಂ ಇಲ್ಲ. ೧೫೦ ವರ್ಷದ ಹಿಂದಿನ ಡೀಸೆಲ್ ಪಂಪ್‌ಸೆಟ್ಟನ್ನು, ಪವರ್ ಪಂಪ್‌ಸೆಟ್ಟನ್ನು ಇವತ್ತಿಗೂ ಇಟ್ಟುಕೊಂಡಿದ್ದಾರೆ. ಇದನ್ನು ಇಂಪ್ರೂವ್ಮೆಂಟ್ ಮಾಡೇ ಇಲ್ಲ. ಈ ಸಂದರ್ಭದಲ್ಲಿ ನಾನು ಅಗ್ರಿಕಲ್ಚರ್ ಯೂನಿವರ್ಸಿಟಿ ಬಗ್ಗೆ ಒಂದು ಮಾತನ್ನು ಹೇಳುವುದಕ್ಕೆ ಇಷ್ಟಪಡುತ್ತೇನೆ. ಇದೊಂದು ಥರ ಕಾರ್ಖಾನೆಯಾಗಿಬಿಟ್ಟಿದೆ. ವರ್ಷಂಪ್ರತಿ ಅಡ್ವರ್ಟೈಸ್ ಮಾಡಿ ಏನೇನು ಕೆಟಗರಿ ಇದೆಯೋ ಅದೆಲ್ಲ ಪೇಪರ್‌ನಲ್ಲಿ ಅನೌನ್ಸ್ ಮಾಡುತ್ತಾರೆ. ಮೆಡಿಕಲ್‌ನಲ್ಲಿ ಇಂಜಿನಿಯರಿಂಗ್‌ನಲ್ಲಿ ಸೀಟ್ ಸಿಕ್ಕದ ಹುಡುಗರು ಕೊನೆಗೆ ಇದಕ್ಕೆ ಅರ್ಜಿ ಹಾಕಿಕೊಳ್ಳುತ್ತಾರೆ. ನಾನು ಮಾನ್ಯ ಪ್ರಕಾಶರವರಲ್ಲಿ ಒಂದು ಪ್ರಶ್ನೆ ಕೇಳುತ್ತೇನೆ. ಪ್ರತಿವರ್ಷ ಈ ಯೂನಿವರ್ಸಿಟಿ ಕಾಲೇಜುಗಳಿಂದ ಹೊರಗಡೆ ಬರುತ್ತಿರುವ ಗ್ರಾಜುಯೇಟ್ಸ್ ಎಷ್ಟು? ಅವರಲ್ಲಿ ಎಷ್ಟು ಜನ ಹಳ್ಳಿಗಳಿಗೆ ವಾಪಸ್ ಹೋಗಿ ವ್ಯವಸಾಯ ಮಾಡುವುದಕ್ಕೆ ಸ್ವಯಂಉದ್ಯೋಗದಲ್ಲಿ ತೊಡಗಿದ್ದಾರೆ ಎಂದು ಹೇಳಿ. ಇವರೆಲ್ಲ ಯಾವುದೋ ಖಾಸಗಿ ಕಾರ್ಖಾನೆಗಳಲ್ಲಿ ಕೆಲಸಕ್ಕೆ ಸೇರಿಕೊಳ್ಳುತ್ತಾರೆ, ಅಷ್ಟೇ. ಇಲ್ಲದಿದ್ದರೆ ಪಿ.ಎಸ್.ಸಿ.ಯಲ್ಲಿ ಸಾಯಿಲ್ ಕನ್‌ಸರ್ವೇಟಿವ್ ಹುದ್ದೆಗೆ ಅರ್ಜಿ ಹಾಕಿಕೊಂಡು ಇಂಟರ್‌ವ್ಯೂ ಬಂದಾಗ ನಮ್ಮ ಪ್ರಾಣ ತಿನ್ನುತ್ತಾರೆ. ಇವರಿಗೆ ದುಡ್ಡು ಸಿಗುವ ಕೆಲಸ ಬೇಕು ಆದರೆ ಹಳ್ಳಿಗೆ ಹೋಗಿ ದುಡಿಯಲು, ಮಾರ್ಗದರ್ಶನ ಮಾಡುವುದು ಬೇಕಿಲ್ಲ. ಏಕೆ ಇದನ್ನು ಹೇಳುತ್ತೇನೆಂದರೆ ನೀವು ಅಗ್ರಿಕಲ್ಚರ್ ಯೂನಿವರ್ಸಿಟಿಯಲ್ಲಿ ಸೀಟ್ ಹಂಚುವಾಗ ಪರ್ಸಂಟೇಜ್ ಫಿಕ್ಸ್ ಮಾಡಿರುತ್ತೀರಿ. ಅದರಲ್ಲಿ ಬೆಂಗಳೂರಿನಲ್ಲೋ ಇನ್ಯಾವುದೋ ಪಟ್ಟಣದಲ್ಲಿ ಓದಿದ ಪ್ರತಿಭಾವಂತ ವಿದ್ಯಾರ್ಥಿ ಹೆಚ್ಚು ಮಾರ್ಕ್ಸ್ ತೆಗೆದುಕೊಂಡಿರುವವನು ಬೇರೆಲ್ಲೂ ಸೀಟ್ ಸಿಗದಿರುವುದರಿಂದ ಸೀಟು ಗಿಟ್ಟಿಸುತ್ತಾನೆ. ಪಾಸ್ ಮಾಡುತ್ತಾನೆ, ಹೋಗುತ್ತಾನೆ. ಆದರೆ ಹಳ್ಳಿಯ ಶಾಲೆಯಲ್ಲಿ ಓದಿದ ಹಳ್ಳಿಯವನು ಪರ್ಸಂಟೇಜ್ ಬರದೆ ನಿಜವಾಗಿಯೂ ವ್ಯವಸಾಯ ಮಾಡುವವನು ಸೀಟು ಪಡೆಯುವುದಿಲ್ಲ. ರೈತ ಕುಟುಂಬದಿಂದ ಬಂದಿರತಕ್ಕವನು ಅಗ್ರಿಕಲ್ಚರ್ ಡಿಗ್ರಿ ತೆಗೊಂಡ ಮೇಲೆ ವ್ಯವಸಾಯದಲ್ಲಿ ತೊಡಗುತ್ತೇನೆ. ಹೊಸ ವಿಧಾನದಲ್ಲಿ ಕೆಲಸ ಮಾಡುತ್ತೇನೆಂದು ಹೇಳುವ ಹುಡುಗರಿಗೆ ನೀವು ಸರ್ಕಾರದಿಂದ ಸಹಾಯ ಕೊಡುವ ಮನಸ್ಸಿದೆಯೇ ನಿಮಗೆ ? ದಯವಿಟ್ಟು ಯೋಚಿಸಿ.

ಇದೊಂದು ಕಡೆ ಅದರೆ ಅಗ್ರಿಕಲ್ಚರ್ ಯೂನಿವರ್ಸಿಟಿಯಲ್ಲಿ ಜಾತಿ ವಾಸನೆ ಬಡಿಯುತ್ತಿದೆ. ಅಲ್ಲಿ ಬ್ರಾಹ್ಮಣರು, ಒಕ್ಕಲಿಗರು, ಲಿಂಗಾಯಿತರು ಸೇರಿಕೊಂಡು ಎಲ್ಲ ಅವರವರ ಜಾತಿ ಬೆಳೆಸುವುದರಲ್ಲೇ ಯೋಚನೆ. ನಾನು ಅಸೋಸಿಯೇಟ್ ಪ್ರೊಫೆಸರ್ ಆಗಬೇಕು, ಪ್ರೊಫೆಸರ್ ಆಗಬೇಕು, ಅಸಿಸ್ಟೆಂಟ್ ಪ್ರೊಫೆಸರ್ ಆಗಬೇಕು ಎಂದು ಒಂದೇ ಸಮನೆ ನಮ್ಮ ಬಳಿ ದೂರು ತರುತ್ತಾರೆ ಇವರು ಯಾರೂ ಪ್ರೊಫೆಸರ್‌ಗಳಾಗಿ ಹೊಲದಲ್ಲಿ ಇರುವ ರೈತನಿಗೆ ಏನು ಪ್ರಯೋಜನ ಮಾಡಿದ್ದಾರೆಂಬುದು ನನಗಂತೂ ಗೊತ್ತಿಲ್ಲ. ಇವರು ಮಾಡುವ ವ್ಯವಸಾಯದ ವಿಧಾನವನ್ನು ನವೀಕರಿಸಿ ಹೆಚ್ಚು ಬೆಳೆ ತೆಗೆಯುವುದಕ್ಕೆ ದಾರಿ ತೋರಿದ್ದಾರಾ ? ಹೊಸ ತಳಿಗಳನ್ನು ಕಂಡುಹಿಡಿದು ಪ್ರಯೋಜನ ಮಾಡಿದ್ದಾರಾ ? ವ್ಯವಸಾಯದಿಂದ ಜೀವನ ಮಾಡುವವರಿಗೆ ಇವರ ಸಂಪರ್ಕವೂ ಇಲ್ಲ, ಸಂಬಂಧವೂ ಇಲ್ಲ, ನೇರವಾಗಿ ಪ್ರಯೋಜನವೂ ಇಲ್ಲ ಇದೆಲ್ಲಕ್ಕೂ ಮಂತ್ರಿಗಳು ಉತ್ತರವನ್ನು ಒಂದೆರಡು ಉದಾಹರಣೆಗಳಿಂದ ಹೇಳಿದರೆ ಸಾಲದು. ನಾನು ಸಾರ್ವಜನಿಕವಾಗಿ ಮಾತನಾಡುತ್ತಿದ್ದೇನೆ. ಆದ್ದರಿಂದ ವಿಶದವಾಗೀ ತಾತ್ವಿಕವಾಗಿ ಉತ್ತರವನ್ನು ಹೇಳಬೇಕು. ಹೇಗೆ ಈ ಓದಿದ ಜನತೆಗೆ ರೈತರ ಬಗ್ಗೆ ಆಸಕ್ತಿಯೇ ಇಲ್ಲವೋ ಅದಕ್ಕೆ ವಿರುದ್ಧವಾಗಿ ಹಳ್ಳಿಯ ಜನತೆ ನಮ್ಮ ಬಗ್ಗೆಯೂ ರಿಸರ್ಚ್ ಮಾಡುವ, ದಾರಿ ತೋರುವ ಯೂನಿವರ್ಸಿಟಿ ಇದೆ, ಅದರಲ್ಲಿ ನಮಗೆ ಹಿತೈಷಿಗಳಿದ್ದಾರೆ ಎಂದು ವಿಶ್ವಾಸ ಬರುವ ಹಾಗೆ, ಕಾರ್ಯಸಾಧನೆ ಆಗುವ ಹಾಗೆ ಮಾಡಿದರೆ ಮಾತ್ರ ಸಾರ್ಥಕತೆ ಉಂಟಾಗುತ್ತದೆ. ಆ ಸ್ಥಿತಿಗೆ ನೀವು ಇದನ್ನು ತೆಗೆದು ಕೊಂಡು ಹೋಗಬೇಕು. ಕೇವಲ ಪ್ರೊಫೆಸರ್, ಅಸಿಸ್ಟೆಂಟ್ ಪ್ರೊಫೆಸರ್‌ಗಳನ್ನೇ ಇಟ್ಟುಕೊಳ್ಳಬಾರದೆಂದು ಅದಕ್ಕೇ ನಿಮ್ಮ ಚಿಂತನೆಯನ್ನು ಸೀಮಿತಗೊಳಿಸಬಾರದೆಂದು ಪ್ರಾರ್ಥನೆ ಮಾಡಿಕೊಳ್ಳುತ್ತೇನೆ. ಈ ಡ್ರೈಲ್ಯಾಂಡ್ ಡೆವಲಪ್‌ಮೆಂಟ್ ಬಗ್ಗೆ ನಾನು ಅಭಿನಂದಿಸುತ್ತೇನೆ. ಈ ಆಲೋಚನೆ ತುಂಬಾ ಒಳ್ಳೆಯದು ಈ ಬೋರ್ಡಿನ ಬಗ್ಗೆ ಈಗತಾನೇ ಮಾನ್ಯ ಸದಸ್ಯರಿಯವರು ಆಫೀಸರ್‌ಗಳ ಬಗ್ಗೆ ಚೇರ್ಮನ್ ಬಗ್ಗೆ ಮಾತನಾಡಿದರು. ನಾನು ಅಷ್ಟು ಕೂಡ ಮಾತನಾಡುವುದಕ್ಕಾಗುವುದಿಲ್ಲ. ಯಾವ ಉದ್ದೇಶಕ್ಕೆ ಈ ಬೋರ್ಡ್‌ಗಳನ್ನು ಸ್ಥಾಪನೆ ಮಾಡಿದರೋ ಅದರ ಉದ್ದೇಶ ಸಾಧನೆಯಾಗಬೇಕು,

ಅಷ್ಟೇ. ಈ ಖುಷ್ಕಿ ಭೂಮಿ ಆಧಾರಿತ ಮಂಡಲಿ ಚಿತ್ರದುರ್ಗ, ಕೋಲಾರ, ತುಮಕೂರು ಇಂಥ ಜಿಲ್ಲೆಗಳಲ್ಲಿ ಆ ಭಾಗದ ರೈತರಿಗೆ ಸಹಾಯವಾಗುವಂತೆ ನೀವು ನೇಮಿಸಿರುವ ಚೇರ್ಮನ್, ಸ್ಟಾಫ್ ಇವರುಗಳಿಂದ ಸಹಾಯವಾಗಬೇಕು. ಅದು ಬಿಟ್ಟು ದಿಲ್ಲಾಗಿ ಕಾರ್ ತೆಗೆದುಕೊಂಡು ಬರೀ ಮೆರವಣಿಗೆ ಮಾಡುವುದಾದರೆ ನೀವು ಏನೂ ಮಾಡಿದಂತಾಗುವುದಿಲ್ಲ, ಬರೀ ಘೋಷಣೆ ಮಾಡಿದಂತಾಗುತ್ತದೆ. ಆದ್ದರಿಂದ ಅನ್ಯಾಯ ಮಾಡಬೇಡಿ. ಈ ಬೋರ್ಡ್ ಬಗ್ಗೆ ಅತಿ ಹೆಚ್ಚಿನ ಆಸಕ್ತಿಯನ್ನು ನೀವು ತೋರಬೇಕು. ಹೆಚ್ಚು ಪರಿಣಾಮಕಾರಿಯಾಗಿ ಕೆಲಸ ಮಾಡುವಂತೆ ನೋಡಬೇಕು ಮತ್ತು ಅಗ್ರಿಕಲ್ಚರ್ ಡಿಪಾರ್ಟ್‌ಮೆಂಟಿನವರು ಒಂದು ಸೆಲ್ಲನ್ನು ಇದಕ್ಕಾಗಿ ಇಟ್ಟುಕೊಳ್ಳಬೇಕು. ಮಹಾರಾಷ್ಟ್ರದವರು ಇವತ್ತು ನಮಗಿಂತ ಉತ್ತಮವಾಗಿ ಕೆಲಸ ಮಾಡುತ್ತಿದ್ದಾರೆ ಎಂದರೆ ತಪ್ಪಾಗುವುದಿಲ್ಲ. ಅವರಂತೆ ಅಗ್ರಿಕಲ್ಚರಲ್ ಸೆಲ್ ಅನ್ನು ಈ ಡ್ರೈ ಲ್ಯಾಂಡ್ ಬಗ್ಗೆ ಇಟ್ಟುಕೊಳ್ಳಿ, ಹೆಚ್ಚೇನೂ ಖರ್ಚಾಗುವುದಿಲ್ಲ.

ಹಾಗೆಯೇ ನೀರಿನ ಬಳಕೆ ಬಗ್ಗೆ ಕೂಡ ನಮ್ಮಲ್ಲಿ ಸ್ಪ್ರಿಂಕ್ಲರ್ ವಿಧಾನ ಬಂದಿದೆ. ಹಳೇ ವಿಧಾನದಲ್ಲಿ ಪಂಪಿನಿಂದ ನೀರು ತಂದು ಕಡಿಮೆ ಬೆಳೆ ತೆಗೆಯುತ್ತಾರೆ ಹೆಚ್ಚು ನೀರನ್ನು ಬಳಸಿ. ಅದು ತಪ್ಪು. ಸ್ಪ್ರಿಂಕ್ಲರ್ ಇರಿಗೇಷನ್‌ನಲ್ಲಿ ಕಡಿಮೆ ನೀರನ್ನು ಬಳಸಿ ಹೆಚ್ಚು ಬೆಳೆ ಬೆಳೆಯಬಹುದು. ಈ ಥರ ಹೊಸ ಮೆಥಡ್ಸ್ ಕಂಡುಹಿಡಿದು ರೈತ ಸಮೂಹಕ್ಕೆ ಸಹಾಯ ಮಾಡಿ ಎಂದು ಕೇಳಿಕೊಳ್ಳುತ್ತೇನೆ. ಅಧ್ಯಕ್ಷರೇ ಇನ್ನೂ ಅನೇಕ ವಿಚಾರ ಮಾತನಾಡುವುದಿದೆ. ಮಾನ್ಯ ಮೊಯಿನುದ್ದೀನವರು ಮಾತನಾಡುವವರಿದ್ದಾರೆ. ಮೊನ್ನೆ ಕೂಡ ಮಾತನಾಡುವಾಗ ಅವರು ಭೂಮಿಯ ಬಳಕೆ ಬಗ್ಗೆ ಚೆನ್ನಾಗಿ ಮಾತನಾಡಿದ್ದಾರೆ. ನಮ್ಮ ಜಿಲ್ಲೆಯವರೇ ಆದ ಈಗ ತಾನೇ ಟೀಕೆಗೆ ಗುರಿಯಾದ ಸನ್ಮಾನ್ಯ ಮಿತ್ರರಾದ ಶ್ರೀ ಬೈರೇಗೌಡರ ನೇತೃತ್ವದ ಮೀನುಗಾರಿಕೆ ಇಲಾಖೆ. ಇದು ನಮ್ಮ ಜಿಲ್ಲೆಯ ಗ್ರಹಚಾರ. ಈ ಇಲಾಖೆ ಬೇಡ ಎಂದರೆ ಬೇರೆ ಪ್ರತಿಸಿದ್ಧ ಇಲ್ಲ. ಬೇಕು ಎನ್ನುವ ಹಾಗೂ ಇಲ್ಲ. ಬೇಡ ಎನ್ನುವ ಹಾಗೂ ಇಲ್ಲ. ಸಾಮಾನ್ಯವಾಗಿ ಈ ಇಲಾಖೆ ಚೆನ್ನಾಗಿ ಕೆಲಸ ಮಾಡಲಿ ಎಂದು ದಕ್ಷಿಣ ಕನ್ನಡದವರನ್ನೋ ಆಜುಬಾಜಿನವರನ್ನೋ ಇದುವರೆಗೂ ಮಂತ್ರಿಯಾಗಿ ಮಾಡುತ್ತಿದ್ದರು. ಆದರೆ ಕೋಲಾರದವರಿಗೆ ಮೀನು ತಿನ್ನುವುದಕ್ಕೆ ಬರುತ್ತದೆಯೇ ವಿನಃ ಬೆಳೆಸುವುದಕ್ಕಲ್ಲ.

ಶ್ರೀ ಕೆ. ಹೆಚ್. ಶ್ರೀನಿವಾಸ್.—ನಿಮ್ಮ ಜಿಲ್ಲೆಗೆ ಏಕೆ ಈ ಖಾತೆ ಕೊಟ್ಟಿದ್ದಾರೆಂದರೆ ನಿಮಗೆ ಚೆನ್ನಾಗಿ ಗಾಳ ಹಾಕಲು ಬರುತ್ತದೆ ಎಂದು ಕೊಟ್ಟಿದ್ದಾರೆ.

—ನಗು—

ಶ್ರೀ ರಮೇಶ್ ಕುಮಾರ್.—ಅವರು ನನಗಿಂತ ಬುದ್ಧಿವಂತರು, ಅವರು ನನಗೆ ಚೆನ್ನಾಗಿ ಗೊತ್ತಿದ್ದಾರೆ, ಅವರ ಜೊತೆ ನಾನು ವಾದಕ್ಕೆ ಇಳಿಯುವುದಿಲ್ಲ. ಮೀನುಗಾರಿಕೆ ಇಲಾಖೆಯಲ್ಲಿ ಎಷ್ಟು ಬೇಡಿಕೆ ಇದೆ ಅಷ್ಟನ್ನು ಪೂರೈಸುವುದಕ್ಕೆ ವಿಫಲರಾಗಿದ್ದಾರೆ. ಈ ಇಲಾಖೆಯವರು ನಮ್ಮ ಊರಿನಲ್ಲಿ ಫಿಶ್‌ಪಾಂಡ್ಸ್ ಕಟ್ಟಿಸಿದ್ದಾರೆ. ಯಾರು ಕಟ್ಟಿಸಿದ್ದಾರೆ, ಯಾವಾಗ ಕಟ್ಟಿಸಿದ್ದಾರೆ ಎಂಬುದು ಗೊತ್ತಿಲ್ಲ. ಅದರಲ್ಲಿ ನೀರೂ ಇಲ್ಲ, ಮೀನೂ ಇಲ್ಲ. ಯಾರು ಕಟ್ಟಿದ್ದಾರೋ, ಎಷ್ಟು ಕೋಟಿ ಖರ್ಚು ಮಾಡಿದ್ದಾರೋ ಆ ಭಗವಂತನಿಗೆ ಗೊತ್ತಾಗಬೇಕು. ಮಾನ್ಯ ಮಂತ್ರಿಗಳು ಇದನ್ನೆಲ್ಲ ನೋಡಿದ್ದಾರೋ ಏನೋ ಗೊತ್ತಿಲ್ಲ. ದಯಮಾಡಿ ಇದರ ಬಗ್ಗೆ ಗಮನಹರಿಸಬೇಕು. ಬೇಡಿಕೆ ಎಷ್ಟು ಇದೆ ಅಷ್ಟು ಪೂರ್ಣ ಸರಬರಾಜು ಮಾಡುವುದಕ್ಕೆ ಆಗದಿದ್ದರೂ ಅದರಲ್ಲಿ ಸ್ವಲ್ಪ ಮಟ್ಟಿಗಾದರೂ ಹತ್ತಿರ ಬರುವಂತಹ ಪ್ರಯತ್ನವನ್ನು ನೀವು ಮಾಡಬೇಕು. ನಮ್ಮ ಕೋಲಾರ ಜಿಲ್ಲೆಯಲ್ಲಿ ಹೆಚ್ಚಿಗೆ ಕೆರೆಗಳು ಇವೆ. ಬರಗಾಲ ಬಂದಿರುವುದರಿಂದ ಆ ಕೆರೆಗಳಲ್ಲಿ ನೀರು ಇಲ್ಲ. ಅಲ್ಲಿ ಒಳ್ಳೆಯ ಮೀನನ್ನು ವೃದ್ಧಿ ಮಾಡುತ್ತಿದ್ದರು. ಆ ಕೀರ್ತಿ ನಮ್ಮ ಜಿಲ್ಲೆಗೆ ಇದೆ. ಅಲ್ಲೊಂದು ಮೀನುಗಾರರ ಸೊಸೈಟಿಯೊಂದು ಮಾಡಿರುತ್ತಾರೆ. ಅಲ್ಲಿ ಮೀನುಗಳನ್ನು ದಳ್ಳಾಳಿಗಳು ಹರಾಜು ಹಾಕುತ್ತಾರೆ. ೯೦ ರೂಪಾಯಿ ೧೩೦, ೧೫೦ ರೂಪಾಯಿಗಳಿಗೆ ಹರಾಜು ಹಾಕುತ್ತಾರೆ. ನಮ್ಮ ಕಡೆ ದುಸ್ರಾ ಹರಾಜು ಎಂದು ಹಾಕುತ್ತಾರೆ ಅಲ್ಲಿ ನಿಜವಾದ ಮೀನುಗಾರರ ಸದಸ್ಯರು ಯಾರಿದ್ದಾರೆ ಅವರಿಗೆ ವಂಚನೆ ಮಾಡಿ ಕೆಲವು ಜನ ದುರುಪಯೋಗ ಮಾಡತಕ್ಕಂಥ ಪ್ರಸಂಗಗಳು ಇವೆ. ಹಿಂದೆ ಈ ಬಗ್ಗೆ ಮಾನ್ಯ ರಾಜವರ್ಧನ್‌ರವರು ಮಂತ್ರಿಗಳಾಗಿದ್ದಾಗ ನಿರ್ದಿಷ್ಟವಾದ ದೂರುಗಳನ್ನು ಅವರ ಗಮನಕ್ಕೆ ತಂದಿದ್ದೇನೆ. ೫೦ ಕೆರೆಗಳನ್ನು ಬಹಿರಂಗವಾಗಿ ೩,೦೦೦ ರೂಪಾಯಿಗಳಿಗೆ ಹರಾಜು ಹಾಕಿ ಊರಿನ ಜನರಿಗೆ ಮೀನುಗಳನ್ನು ಚೀಪಾಗಿ ಕೊಟ್ಟರು. ಇದರಿಂದಾಗಿ ಸಂಘಕ್ಕೆ ಲಾಭ ಬರುವಂಥ ಅವಕಾಶವಾಯಿತು. ದಳ್ಳಾಳಿಗಳು ಸೇರಿಕೊಂಡು ದುರುಪ

ಯೋಗ ಮಾಡಿಕೊಳ್ಳುತ್ತಾರೆ. ನಿಮಗೆ ಮೇಲ್ನೋಟಕ್ಕೆ ಕಾಣತಕ್ಕ ಒಂದು ಉದಾಹರಣೆಯನ್ನು ಕೊಟ್ಟಿದ್ದೇನೆ. ನಿಮ್ಮ ಇಲಾಖೆಯ ಅಧಿಕಾರಿಗಳ ಗಮನಕ್ಕೆ ಈ ವಿಚಾರವನ್ನು ತಂದಾಗ ಅವರು ಶ್ರದ್ಧೆಯಿಂದ ಕೆಲಸ ಮಾಡಿದರು, ಆದರೆ ಕೆಳಮಟ್ಟದಲ್ಲಿರುವವರು ಅವ್ಯವಹಾರದಲ್ಲಿ ತೊಡಗುತ್ತಾರೆ. ಮೀನುಗಾರಿಕೆ ಇಲಾಖೆ ಹೆಚ್ಚು ಉಪಯುಕ್ತವಾದ ಕೆಲಸವನ್ನು ಮಾಡಬೇಕು. ನಮ್ಮ ಕೋಲಾರ ಜಿಲ್ಲೆಗೆ ಅಪಕೀರ್ತಿ ಬಾರದ ಹಾಗೆ ಕೆಲಸ ಮಾಡಬೇಕೆಂದು ಮೀನುಗಾರಿಕೆ ಮಂತ್ರಿಗಳಿಗೆ ಹೇಳುತ್ತೇನೆ.

ಇನ್ನು ಪಶುಸಂಗೋಪನ ಇಲಾಖೆಯ ಬಗ್ಗೆ ಹೇಳುವುದಾದರೆ, ಈ ಖಾತೆಗೆ ಸಂಬಂಧಪಟ್ಟ ಸಚಿವರೇನಿದ್ದಾರೆ ಅವರು ಇರುವ ರೀತಿ ಮತ್ತು ಅವರ ಉಡುಪು ನೋಡಿದರೆ ಅವರು ಇವತ್ತು ಬನ್ನೂರು ಟಗರು ಬಂದಹಾಗೆ ಬಂದಿದ್ದಾರೆ. ಪಶುಸಂಗೋಪನೆ ಏತಕ್ಕೆ ನನಗೆ ಬಹಳ ಪ್ರೀತಿಯಾದ ವಿಚಾರ ಅಂದರೆ ಈ ದೇಶದಲ್ಲಿ ಬಹಳ ಜನ ಅನಕ್ಷರಸ್ಥರು ಇದ್ದಾರೆ. ಜಮೀನು ಇಲ್ಲದವರು ಇದ್ದಾರೆ. ಆರ್ಥಿಕವಾಗಿ ಅತ್ಯಂತ ಕೆಳಮಟ್ಟಕ್ಕೆ ಸೇರಿದವರು ಇದ್ದಾರೆ. ಅವರು ಇಂಜಿನಿಯರ್ ಆಗುವಹಾಗೆ ಇಲ್ಲ. ಡಾಕ್ಟರುಗಳು ಆಗುವ ಹಾಗೆ ಇಲ್ಲ. ಎಂ.ಎಲ್.ಎ. ಎಂ.ಎಲ್.ಸಿ. ಮತ್ತು ಎಂ.ಪಿ.ಗಳು ಆಗುವಹಾಗೆ ಇಲ್ಲ ಇಂತಹ ಅವಕಾಶಗಳು ಇಲ್ಲದಿರುವಾಗ ಕೋಳಿ ಸಾಕುವುದು ಹಂದಿ ಸಾಕುವುದು ಕುರಿ ಮತ್ತು ಮೇಕೆ ಸಾಕುವುದರಿಂದ ಅವರ ಆರ್ಥಿಕಮಟ್ಟ ಮೇಲಕ್ಕೆ ಹೋಗುತ್ತದೆ ಅವರು ಸಮಾಜದಲ್ಲಿ ಗೌರವದಿಂದ ಜೀವನ ನಡೆಸುವುದಕ್ಕೆ ಪೂರಕವಾದಂತಹ ಇಲಾಖೆ, ಈ ದಿಕ್ಕಿನಲ್ಲಿ ತಾವು ಕೆಲಸ ಮಾಡಬೇಕು. ಇವತ್ತಿನ ದಿವಸ ಹಾಲಿನ ಡೈರಿ ಯೂನಿಯನ್‌ಗಳು ಇವೆ, ಅಲ್ಲಿಂದ ಮಾರ್ಕೆಟ್‌ಗೆ ಸಪ್ಲೈ ಆಗುತ್ತದೆ, ಸಹಕಾರ ಸಂಘಗಳನ್ನು ನಮ್ಮ ಜಿಲ್ಲೆಯಲ್ಲಿ ಮಾಡುತ್ತಿದ್ದಾರೆ. ಅದರಿಂದ ಏನು ಪ್ರಯೋಜನವಾಗುತ್ತದೆ ಅಂದರೆ ಹೆಣ್ಣು ಮಕ್ಕಳು ಏನಿದ್ದಾರೆ ಅವರು ಹಳ್ಳಿಗಾಡು ಪ್ರದೇಶಗಳಲ್ಲಿ ಹಸು ಎಮ್ಮೆಗಳನ್ನು ಸಾಲ ಮಾಡಿ ತೆಗೆದುಕೊಂಡರೂ ಅವುಗಳಿಂದ ಹಾಲು ಉತ್ಪಾದನೆ ಮಾಡಿ ಹಾಲನ್ನು ಸಹಕಾರ ಸಂಘಗಳ ಮುಖಾಂತರ ಡೈರಿಗೆ ಹಾಕಿದರೆ ಹಣ ಬರುತ್ತದೆ. ಒಂದು ಹಸುವಿನಿಂದ ಖರ್ಚನ್ನು ಕಳೆದು ತಿಂಗಳಿಗೆ ೫೦೦ ರೂಪಾಯಿಗಳನ್ನು ಸಂಪಾದನೆ ಮಾಡುತ್ತಿದ್ದಾರೆ. ಇವತ್ತು ಗ್ರಾಮಾಂತರ ಪ್ರದೇಶಗಳಲ್ಲಿ ೫೦೦ ರೂಪಾಯಿಗಳನ್ನು ತಿಂಗಳಿಗೆ ಸಂಪಾದನೆ ಮಾಡಿದರೆ ನಿಜವಾಗಿಯೂ ದೊಡ್ಡ ಸಂಪಾದನೆಯಾಗುತ್ತದೆ. ಈ ವಿಷಯದಲ್ಲಿ ಬಹಳ ಗೌರವಯುತವಾಗಿ ನಡೆದುಕೊಂಡಿದ್ದಾರೆ. ಅವರು ಎಷ್ಟೋ ಸಹಕಾರ ಸಂಘಗಳನ್ನು ಮಾಡಿ ಬಂದಿದ್ದಾರೆ. ಅವರು ಎಲ್ಲರ ಅಹವಾಲನ್ನು ಸ್ವೀಕರಿಸಿದ್ದಾರೆ, ಅವರನ್ನು ಅಭಿನಂದಿಸಬೇಕು. ಹಾಲು ಉತ್ಪಾದಕರ ಸಹಕಾರ ಸಂಘಗಳನ್ನು ರಾಜ್ಯಸರ್ಕಾರ ಮಾಡಬೇಕು, ಅವರ ಜವಾಬ್ದಾರಿ ಇನ್ನು ಮುಕ್ತಾಯವಾಗಿಲ್ಲ. ಹಾಲು ಉತ್ಪಾದಕರಿಗೆ ರಾಸುಗಳಿಗೆ ಮೇವನ್ನು ಕರ್ನಾಟಕ ಮಿಲ್ಕ್ ಫೆಡರೇಶನ್ನಿನವರು ಕೊಡುತ್ತಿದ್ದಾರೆ. ನಾನು ಈ ಬಗ್ಗೆ ಕೆಲವು ಅಧಿಕಾರಿಗಳಿಂದ ತಿಳಿದುಕೊಂಡಿದ್ದೇನೆ, ಎಷ್ಟು ಬೇಡಿಕೆ ಇದೆ ಅಷ್ಟನ್ನು ಕೊಡುತ್ತಿದ್ದೇವೆಂದು ಹೇಳುವುದು ವಾಸ್ತವವಾಗಿ ಸತ್ಯಕ್ಕೆ ದೂರವಾದುದು. ದನಗಳ ಮೇವಿಗಾಗಿ ರೈತರಿಂದ ಎಷ್ಟು ಬೇಡಿಕೆ ಇದೆ ಅಷ್ಟು ಮೇವನ್ನು ಪೂರೈಸತಕ್ಕ ಸ್ಥಿತಿಯಲ್ಲಿ ಕೆ.ಎಂ.ಎಫ್. ಇಲ್ಲ. ಎಲ್ಲಾ ಕಡೆಗೂ ಸಹಕಾರ ಸಂಘಗಳನ್ನು ಹೆಚ್ಚು ಮಾಡಬೇಕು. ಹಾಲನ್ನು ಉಪಯೋಗಿಸತಕ್ಕವರು ಇವತ್ತು ದೊಡ್ಡವರು ಮಾತ್ರ ಏತಕ್ಕೆಂದರೆ ಹಾಲು ಲಕ್ಸುರಿ ಐಟಂ. ಸಾಮಾನ್ಯ ಮನುಷ್ಯ ಗುಡಿಸಲಿನಲ್ಲಿ ವಾಸಮಾಡತಕ್ಕ ಕಾರ್ಮಿಕ ತನ್ನ ಮಕ್ಕಳಿಗೆ ಮತ್ತು ತನಗೆ ಬೇಕಾದ ಹಾಲನ್ನು ಉಪಯೋಗಿಸತಕ್ಕ ಸ್ಥಿತಿಯಲ್ಲಿಲ್ಲ. ವಿಧಿ ಇಲ್ಲದೆ ಕಾಫಿ ಟೀ ಮಾಡಬೇಕಾದರೆ ಮಕ್ಕಳಿಗೆ ಕೊಡಬೇಕಾದರೆ ಬಹಳ ಕಷ್ಟವಾಗಿದೆ. ಹಾಲು ಉತ್ಪಾದಕರಿಗೆ ಹಣ ಸರಿಯಾಗಿ ಸಿಗುತ್ತಿಲ್ಲ, ಮಧ್ಯದಲ್ಲಿ ಪೋಲಾಗುತ್ತಿದೆ ಬೆಂಗಳೂರಿನಲ್ಲಿ ಹಾಲು ಉತ್ಪಾದಕರು ಬೆಲೆಯನ್ನು ಜಾಸ್ತಿ ಮಾಡಬೇಕೆಂದು ಎಲ್ಲರೂ ಸಂಘಟನೆ ಮಾಡಿದ್ದರು. ಹಾಲು ಉತ್ಪಾದಕರಿಗೆ ಹಣ ಹೆಚ್ಚಿಗೆ ಸಿಗುತ್ತಿಲ್ಲ, ಒಂದು ಲೀಟರ್‌ಗೆ ರೂ. ೧-೨೦ ಪೈಸೆ ಸಿಗುತ್ತದೆ. ಅವರಿಗೆ ಹೆಚ್ಚಿಗೆ ಸಿಗುವುದಿಲ್ಲ. ಅದರಿಂದ ಹೆಚ್ಚಿನ ಫೀಡ್ಸ್ ಮ್ಯಾನುಫ್ಯಾಕ್ಚರ್ ಮಾಡಬೇಕೆಂದು ಸಲಹೆಯನ್ನು ಕೊಡುತ್ತಿದ್ದೇನೆ. ಗ್ರೀನ್ ಫಾಡರ್ ಮಾಡುತ್ತೇವೆಂದು ಅರಣ್ಯ ಮಂತ್ರಿಗಳು ಹೇಳಿದ್ದಾರೆ. ಅವರು ಕಾಡಿನಲ್ಲಿ ಹೋಗಿ ಹುಲ್ಲು ಬೆಳೆಯುತ್ತಿದ್ದಾರೆಯೋ? ಅಮೃತಮಹಲ್ ಕಾವಲ್‌ನಲ್ಲಿ ಸುಮಾರು ೫೦ ಸಾವಿರ ಎಕರೆ ಭೂಮಿಯಿದೆ. ನನಗೆ ಗೊತ್ತಿರುವ ಹಾಗೆ ಅಲ್ಲಿ ಯಾರು ಆಬ್ಜಕ್ಷನ್ ತೆಗೆದುಕೊಳ್ಳುವುದಿಲ್ಲ. ಜಮೀನು ಇಲ್ಲದೇ ಇರುವವರು ಹಸು ಸಾಕಬೇಕಾದರೆ ಮಾರ್ಕೆಟ್‌ಗೆ ಹೋಗಿ ಹುಲ್ಲನ್ನು ಕೊಂಡು ಕೊಂಡು ಬರಬೇಕಾಗಿದೆ. ಅರಣ್ಯದಲ್ಲಿ ಬೆಳೆಯುತಕ್ಕ ಹುಲ್ಲನ್ನು ಸಂಗ್ರಹ ಮಾಡಿ ಸುಲಭ ದರದಲ್ಲಿ ಮಾರ್ಕೆಟ್‌ನಲ್ಲಿ ದೊರೆಯುವ ಹಾಗೆ ಮಾಡಬೇಕು. ಇದರಿಂದ ಹಾಲು

ಉತ್ಪಾದನೆ ಮಾಡಿ ಜೀವನ ಮಾಡತಕ್ಕವರಿಗೆ ಸಹಾಯ ಮಾಡಿದಂತಾಗುತ್ತದೆ. ಒಡವರಿಗೆ ಸಹಾಯ ಮಾಡುವಂತಹ ಅನೇಕ ಸ್ಕೀಮ್‌ಗಳಿವೆ. ಆರ್ಥಿಕವಾಗಿ ಮುಂದೆ ಬರತಕ್ಕ ಕಾರ್ಯಕ್ರಮಗಳು ಏನಿವೆ, ಅವುಗಳನ್ನು ವ್ಯಾಪಕವಾಗಿ ಹಮ್ಮಿಕೊಳ್ಳಬೇಕೆಂದು ಅವರಲ್ಲಿ ಪ್ರಾರ್ಥನೆ ಮಾಡಿಕೊಳ್ಳುತ್ತೇನೆ,

ಇನ್ನು ಕುರಿ ಡೆವಲಪ್‌ಮೆಂಟ್ ಬೋರ್ಡ್ ಏನಿದೆ ಆ ಬೋರ್ಡ್‌ಗೆ ಹೆಚ್ಚಿನ ಕೆಲಸ ಏನೂ ಇಲ್ಲ. ಇವತ್ತು ಬನ್ನೂರು ಕುರಿ ಈ ಒಂದು ಜಾತಿ ನಶಿಸಿ ಹೋಗುತ್ತಿದೆ. ಕೆಲವು ವರ್ಷಗಳಲ್ಲಿ ಈ ಜಾತಿ ಅದೃಶ್ಯವಾಗುತ್ತದೆ. ಈ ತಳಿ ಇರುವುದಿಲ್ಲ. ಮಾಂಸದಲ್ಲೆಲ್ಲ ಅತ್ಯಂತ ರುಚಿಕರವಾದ ಮಾಂಸ ಅಂದರೆ ಇದು.

ಶ್ರೀ ಡಿ. ಜಿ. ಬಸವನಗೌಡ.—ಇವರು ವೆಜಿಟೇರಿಯನ್ ಬ್ರಾಹ್ಮಣರೋ ನಾನ್ ವೆಜಿಟೇರಿಯನ್ ಬ್ರಾಹ್ಮಣರೋ

ಶ್ರೀ ಕೆ. ಹೆಚ್. ಶ್ರೀನಿವಾಸ್.—ವೇದ ಕಾಲದ ಬ್ರಾಹ್ಮಣರು.

ಶ್ರೀ ರಮೇಶ್ ಕುಮಾರ್.—ನನಗೆ ಯಾವುದರಲ್ಲಿ ರುಚಿ ಇದೆ ಅದನ್ನು ಹೇಳುತ್ತೇನೆ. ನನಗೆ ಜಾತಿಯಲ್ಲಿ ರುಚಿಯಿಲ್ಲ ಅದನ್ನು ಬಿಟ್ಟಿದ್ದೇನೆ. ಮಾಂಸದಲ್ಲಿ ರುಚಿಯಿದೆ ಅದನ್ನು ಹಿಡಿದುಕೊಂಡಿದ್ದೇನೆ. ಅಧ್ಯಕ್ಷರೇ ತಾವು ಕೂಡ ನಮ್ಮ ವರ್ಗಕ್ಕೆ ಬರಬೇಕು.

ಶ್ರೀ ಎ. ಲಕ್ಷ್ಮೀಸಾಗರ್.—ಅಧ್ಯಕ್ಷರೇ, ನಮ್ಮ ಮೇಲೆ ಸಹಾನುಭೂತಿ ತೋರಿಸಬೇಕೆಂದು ಹೇಳುವವರಲ್ಲಿ ನಾನು ಒಬ್ಬ.

ಶ್ರೀ ರಮೇಶ್ ಕುಮಾರ್.—ಬನ್ನೂರು ಕುರಿಮಾಂಸ ಅತ್ಯಂತ ಶ್ರೇಷ್ಠವಾದುದು ಅತ್ಯಂತ ರುಚಿಕರವಾದುದು.

ಇದು ನಶಿಸಿ ಹೋಗುತ್ತಿರುವುದರಿಂದ ಕಷ್ಟಪಟ್ಟು ಆ ತಳಿಯನ್ನು ಬದುಕಿಸುವುದಕ್ಕೆ ಸರ್ಕಾರದವರು ಪ್ರಯತ್ನ ಮಾಡಬೇಕು. ೫ ವರ್ಷಗಳ ಕಾಲ ಸತತವಾಗಿ ಆ ಬಗ್ಗೆ ಪ್ರಯತ್ನ ಪಟ್ಟರೆ ೫ ವರ್ಷಗಳಲ್ಲಿ ಶ್ರೇಷ್ಠ ಮಟ್ಟದ ಉತ್ತಮವಾದ ತಳಿ ನಮಗೆ ಸಿಕ್ಕುತ್ತದೆ. ಅದು ನಾಶವಾಗುವುದಕ್ಕೆ ಬಿಡಬೇಡಿ.

ನಂತರ ಈ ಹಂದಿ. ನಾನು ನಿಮಗೆ ಒಂದು ಪ್ರಶ್ನೆಯನ್ನು ಕೇಳುತ್ತೇನೆ. ಯಾವುದೇ ಕೆಲಸಕ್ಕೆ ಬಾರದ, ಓದಿಲ್ಲದ, ಬುದ್ಧಿ ಇಲ್ಲದ, ಜಮೀನು ಇಲ್ಲದ, ಆಸ್ತಿ–ಪಾಸ್ತಿ ಇಲ್ಲದ ಬಡ ಜನರಿಗೆ ಈ ಹಂದಿ ಸಾಕುವುದಕ್ಕೆ ಬರುವುದಿಲ್ಲವೇ ? ಅಷ್ಟೊಂದು ಮಹತ್ತರವಾದ ಲಾಭ ಇದೆ. ಅದು ಯಾರಿಗೂ ಗೊತ್ತಿಲ್ಲ. ಇದರ ಬಗ್ಗೆ ಇಲಾಖೆ ಸ್ವಲ್ಪ ಕೆಲಸ ಮಾಡಿದೆ. ಅದರಲ್ಲಿ ಯಾರ್ಕ್ ತಳಿ ಎಂಬುದೊಂದು ಇದೆ.

ಶ್ರೀ ವೇದಾಂತ ಹೆಮ್ಮಿಗೆ.—ಅದರ ರುಚಿ ಹೇಗಿದೆ ?

ಶ್ರೀ ರಮೇಶ್ ಕುಮಾರ್.—ಮಾಂಸದಲ್ಲೆಲ್ಲಾ ರುಚಿಕರವಾದ ಮಾಂಸ ಅಂದರೆ ಹಂದಿ ಮಾಂಸ ನಿಮ್ಮಂಥ ತೀರ್ಥ ಬ್ರಾಹ್ಮಣರಿಗೆ ಅದೆಲ್ಲಾ ಹೇಗೆ ಗೊತ್ತಾಗಬೇಕು, ನಮ್ಮ ಸಹವಾಸ ಮಾಡಿ. ಅದರ ರುಚಿ ಗೊತ್ತಾಗುತ್ತದೆ.

ಶ್ರೀ ಕೆ. ಎಚ್. ಪಾಟೀಲ್.—ತೀರ್ಥದ ಬ್ರಾಹ್ಮಣರು ಎಂದು ಮಾನ್ಯ ರಮೇಶ್ ಕುಮಾರ್‌ರವರು ಹೇಳಿದರು. ಅದು ಏನೆಂಬುದು ನನಗೆ ಅರ್ಥವಾಗಲಿಲ್ಲ. ವಿವರಿಸಿ ಹೇಳಬೇಕೆಂದು ಕೇಳುತ್ತೇನೆ

ಶ್ರೀ ರಮೇಶ್ ಕುಮಾರ್.—ಅವರು ನಮ್ಮ ಹಿಂದಿನ ಪಾರ್ಟಿಯ ಅಧ್ಯಕ್ಷರಾಗಿದ್ದವರು. ತೀರ್ಥ ತೆಗೆದುಕೊಳ್ಳುವವರು ಯಾರ್ಯಾರು ಇದ್ದಾರೆ ಅವರನ್ನೆಲ್ಲಾ ಪಾರ್ಟಿಯಿಂದ ಹೊರಗೆ ಹಾಕುತ್ತೇವೆಂದು ಹೇಳಿದವರು. ತೀರ್ಥ ಅಂದರೇನು ಎಂಬುದನ್ನು ಇನ್ನೂ ಅವರು ತಿಳಿದುಕೊಳ್ಳಬೇಕಾಗಿದ್ದರೆ, ಸಂಜೆ ೭ ಗಂಟೆಯ ಮೇಲೆ ನಮ್ಮ ರೂಮಿನ ಹತ್ತಿರ ಬಂದರೆ ಅವರಿಗೆ ತಿಳಿಸಿಕೊಡಲಾಗುವುದು. ಹಂದಿ ಸಾಕಾಣಿಕೆ ನಮ್ಮ ಸಮಾಜದಲ್ಲಿ ಸಣ್ಣ ರೈತರು ಯಾರ್ಯಾರು ಇದ್ದಾರೆ ಅವರು ತಮ್ಮ ಕಸುಬಿನ ಜೊತೆಗೆ ಮಾಡತಕ್ಕಂತಹ ಕಸುಬು. ನಮ್ಮ ಸಮಾಜದಲ್ಲಿ ಇನ್ನೊಂದು ಏನಾಗಿದೆ. ಯಾವ ಜಾತಿಯವರು ಯಾವ ಕೆಲಸ ಮಾಡುತ್ತಾರೆಂಬುದನ್ನು ಗುರುತು ಮಾಡಿ, ಅವರು ಆ ಕೆಲಸವನ್ನೇ ಮಾಡಬೇಕು. ಆ ಒಂದು ಪರಿಸ್ಥಿತಿ ಇವತ್ತು ನಮ್ಮ ಸಮಾಜದಲ್ಲಿದೆ. ಇಂತಹ ಸಮಾಜವನ್ನು ಸೃಷ್ಟಿ ಮಾಡುವುದನ್ನು ಇನ್ನು ಮುಂದಾದರೂ ಬಿಡುವುದು ಒಳ್ಳೆಯದು. ಈ ಒಂದು ಹಂದಿ ಸಾಕಾಣಿಕೆಯನ್ನು ಇನ್ನೂ ಸಾಕಷ್ಟು ವೈಜ್ಞಾನಿಕವಾಗಿ ಮಾಡುವುದಕ್ಕೆ ಸಾಧ್ಯವಾಗುವುದಿಲ್ಲವೇ ? ಯಾರೋ ಕೆಲವರು ಹಳ್ಳಿಗಳಲ್ಲಿ ಹಂದಿ

ಗಳನ್ನು ಇಟ್ಟುಕೊಂಡು ಸಾಕುತ್ತಿದ್ದಾರೆ. ಅವರಿಗೆ ಸರಿಯಾದ ಬೆಲೆ ಕೂಡ ಸಿಕ್ಕುತ್ತಿಲ್ಲ. ಸ್ಲಾಟರ್ ಹೌಸ್ ವ್ಯವಸ್ಥೆ ಇಲ್ಲ. ಅದಕ್ಕೆ ಮಾರ್ಕೆಟಿಂಗ್ ವ್ಯವಸ್ಥೆ ಇಲ್ಲ. ಅವರು ಬೆಂಗಳೂರಿಗೆ ತರಬೇಕು. ಕೋಲಾರಕ್ಕೆ ತೆಗೆದುಕೊಂಡು ಹೋಗಬೇಕು ಇಲ್ಲ ಎಚ್.ಕ್ರಾಸ್‌ನಲ್ಲಿ ನಡೆಯುವ ಸಂತೆಯಲ್ಲಿ ಮಾರಾಟ ಮಾಡಬೇಕು. ಅಲ್ಲಿ ಮಾರಾಟ ಮಾಡಿದರೂ ಒಂದು ಕೇಜಿಗೆ ೬ ರಿಂದ ೭ ರೂ. ಸಿಕ್ಕುತ್ತದೆ. ಅದಕ್ಕೆ ಹುಣಸೇ ಬೀಜ ಹಾಕಿ ಸಾಕಬೇಕು. ಇಲ್ಲ ಅಂದರೆ ಅದು ಹೊಲಸು ತಿಂದು ಬೆಳೆಯುತ್ತದೆ. ಅದನ್ನು ಯಾವ ರೀತಿ ಬೆಳೆಸಬೇಕೆಂಬುದರ ಬಗ್ಗೆ ಆ ಜನರಿಗೆ ಎಜುಕೇಷನ್ ಅನ್ನು ಕೊಡತಕ್ಕಂತಹ ಜವಾಬ್ದಾರಿ ಇಲಾಖೆಯುವರ ಮೇಲೆ ಇದೆ. ಆ ಜವಾಬ್ದಾರಿಯನ್ನು ಇಲಾಖೆಯುವರು ಸರಿಯಾಗಿ ನಿರ್ವಹಿಸುತ್ತಿಲ್ಲ. ನನಗೆ ತಿಳಿದ ಮಟ್ಟಿಗೆ ಹೇಳುವುದಾದರೆ. ಇದಕ್ಕಿಂತ ಹೆಚ್ಚು ಆದಾಯ ಬರತಕ್ಕಂತಹ ಕಸುಬು ಮತ್ತೊಂದಿಲ್ಲ. ಇದು ಕೊಚ್ಚೆ ಪದಾರ್ಥವನ್ನು ತಿನ್ನುವುದರಿಂದ ಅದನ್ನು ಮನುಷ್ಯರು ತಿನ್ನುವುದರಿಂದ ಕೆಲವು ಕಾಯಿಲೆಗಳು ಬರುತ್ತವೆ ಎಂಬುದನ್ನು ಹಿಂದೆ ಪತ್ರಿಕೆಗಳಲ್ಲಿ ಬಂದದ್ದನ್ನು ನಾವು ನೋಡಿದ್ದೇವೆ. ಅದರ ಬಗ್ಗೆ ಸರ್ಕಾರ ಎಚ್ಚರ ವಹಿಸಿ ಮನುಷ್ಯನ ಆರೋಗ್ಯ ಕೆಡದ ರೀತಿಯಲ್ಲಿ ಅದನ್ನು ರಕ್ಷಣೆ ಮಾಡತಕ್ಕಂಥ ವಿಚಾರದಲ್ಲಿ ಯಾವ ಕ್ರಮವನ್ನೂ ಕೈಗೊಂಡಿಲ್ಲ. ಹೆಸರಘಟ್ಟದಲ್ಲಿ ಈ ಹಂದಿ ಮರಿಗಳನ್ನು ಸಾಕತಕ್ಕಂಥ ಕೇಂದ್ರವನ್ನು ಇಟ್ಟುಕೊಂಡಿದ್ದಾರೆ. ಒಂದು ತಿಂಗಳ ಮರಿಗೆ ೨೦೦ ರೂ.ಗಳ ಪ್ರಕಾರ ಅವರು ಮಾರುತ್ತಾರೆ. ಇದು ಬಹಳ ದುಬಾರಿ. ವ್ಯಾಪಾರಸ್ಥರಿಗೆ ಆ ಬೆಲೆಗೆಮಾರಾಟ ಮಾಡಬಹುದು. ಆದರೆ ಯಾರು ಅದನ್ನು ತೆಗೆದುಕೊಂಡು ಹೋಗಿ ಸಾಕುತ್ತಾನೆ. ಅಂತಹ ರೈತರಿಗೆ ಇದು ಬಹಳ ದುಬಾರಿ ಈ ಎಂಟರ್‌ಪ್ರಿನರ್ಸ್‌ಗೆ ಉತ್ತೇಜ ಕಾರಿಯಾಗುವ ರೀತಿಯಲ್ಲಿ ಅವರೂ ಕೂಡ ಇದೇ ಒಂದು ಉದ್ಯೋಗವನ್ನು ಮಾಡಿ ತಮ್ಮ ಆರ್ಥಿಕ ಪರಿಸ್ಥಿತಿಯನ್ನು ಸುಧಾರಣೆ ಮಾಡಿಕೊಳ್ಳುವುದಕ್ಕೆ ಯಾರು ಮುಂದೆ ಬರುತ್ತಾರೋ ಅಂತಹವರಿಗೆ ಸಬ್ಸಿಡಿ ದರದಲ್ಲಿ ಮರಿಗಳನ್ನು ಕೊಡಬೇಕು. ಈ ಒಂದು ಉದ್ದಿಮೆಯನ್ನು ಆಗ್ರೋಬೇಸ್ಡ್ ಇಂಡಸ್ಟ್ರೀ ಎಂಬಂದಾಗಿ ಕರ್ನಾಟಕ ಸರ್ಕಾರ ಇನ್ನೂ ಪರಿಗಣಿಸದೇ ಇರುವುದರಿಂದ ಕೆ.ಎಸ್.ಎಫ್.ಸಿ. ಯವರು ಇದನ್ನು ಕೈಗಾರಿಕೆ ಎಂಬುದಾಗಿ ಪರಿಗಣಿಸಿ ಸಾಲ ಸೌಲಭ್ಯವನ್ನು ಕೊಡುತ್ತಾ ಇಲ್ಲ ಆದ್ದರಿಂದ ಈ ಒಂದು ಉದ್ದಿಮೆಯನ್ನು ಕೈಗಾರಿಕೆ ಎಂಬುದಾಗಿ ಪರಿಗಣಿಸುವುದಕ್ಕೆ ಒತ್ತಾಯವನ್ನು ತಾವು ಹಾಕ ಬೇಕೆಂದು ಈ ಮೂಲಕ ತಮ್ಮನ್ನು ಕೇಳಿಕೊಳ್ಳುತ್ತೇನೆ. ಯಾರು ತಾನೂ ಮನುಷ್ಯನಾಗಿದ್ದುಕೊಂಡು ಜೀವನ ಮಾಡುವುದಕ್ಕೆ ಮುಂದೆ ಬರುತ್ತಾರೋ ಅವರಿಗೆ ಸಹಾಯವನ್ನು ಮಾಡಬೇಕು. All that becomes industry. It should be treated as an industry. ಆಗ್ರೋ ಬೇಸ್ಡ್ ಇಂಡಸ್ಟ್ರೀಸ್ ಅನ್ನು ಮಾಡುವುದಕ್ಕೆ ಯಾರಾದರು ಯುವಕರು ಮುಂದೆ ಬಂದರೆ ಅವರಿಗೆ ಕೆ.ಎಸ್.ಎಫ್.ಸಿ.ಯಿಂದ ಸಹಕಾರ ಕೊಡಬೇಕು. ಅವರಿಗೆ ಸಾಲ ಸೌಲಭ್ಯವನ್ನು ನೀಡಬೇಕು. ನಿನ್ನೆ ದಿವಸ ಇದರ ಬಗ್ಗೆ ಟಿ.ವಿ. ಯಲ್ಲಿ ಬಂದಂಥ ವಿಚಾರವನ್ನು ನಾನು ನೋಡಿದ್ದೇನೆ. ನಮ್ಮ ಸಮಾಜದಲ್ಲಿ ಉತ್ಪಾದನೆ ಮಾಡತಕ್ಕಂತಹ ೮೦ ಪರ್ಸೆಂಟ್ ಜನರು ಯಾರು ಇದ್ದಾರೆಂದರೆ, ಸ್ಮಾಲ್ ಅಂಡ್ ಮಾರ್ಜಿನಲ್ ಫಾರ್ಮರ್ಸ್. ಅವರು ಈ ಸಮಾಜದ ಒಂದು ಪ್ರಮುಖವಾದ ಅಂಗ. ಅವರ ಹಿತರಕ್ಷಣೆಯನ್ನು ಮಾಡುವುದಕ್ಕೆ ತಾವು ಮುಂದಾಗಬೇಕು. ಯಾರು ಏನೇ ಹೇಳಿಕೊಳ್ಳಲಿ, ಈಗ ಕೊಡುತ್ತಾ ಇರತಕ್ಕಂತಹ ಹಾಲಿನ ಬೆಲೆ ಏನು ಇದೆ, ಅದನ್ನು ಇನ್ನೂ ಹೆಚ್ಚಿಸಬೇಕು. ಯಾರು ಆ ಒಂದು ಬೆಲೆ ಯನ್ನು ಕೊಟ್ಟು ಕೊಂಡು ಕೊಳ್ಳುವುದುಕ್ಕೆ ಶಕ್ತಿ ಇಲ್ಲ. ಅಸಮರ್ಥರಿದ್ದಾರೆ. ಅವರಿಗೆ ರಿಯಾಯಿತಿ ದರ ದಲ್ಲಿ ಹಾಲನ್ನು ಕೊಡಿ ನಾನು ಬೇಡ ಎನ್ನುವುದಿಲ್ಲ. ಆದರೆ ಯಾರು ಉತ್ಪಾದನೆ ಮಾಡುತ್ತಾರೆ, ಅವರ ಸಂಕಷ್ಟಗಳನ್ನು ನೋಡಿಕೊಂಡು ಅವರಿಗೆ ನೆರವನ್ನು ಕೊಡುವುದಕ್ಕೆ ತಾವು ಮುಂದಾಗಬೇಕು. ಹಾಲಿನ ಬೆಲೆಯನ್ನು ಹೆಚ್ಚಿಸಬೇಕೆಂದು ಯಾವುದೇ ಲಜ್ಜೆ ಇಲ್ಲದೆ, ನಿರ್ಭಯವಾಗಿ ಹೇಳುತ್ತಿದ್ದೇನೆ. ಏಕೆಂದರೆ ನಮ್ಮ ಸ್ನೇಹಿತರು ಹಾಲಿನ ಬೆಲೆಯನ್ನು ಹೆಚ್ಚು ಮಾಡಿದರೆ ಹೋರಾಟ ಮಾಡು ತ್ತಾರೆ. ಆದರೆ ಸಗಣಿ, ಗಂಜಲವನ್ನು ತೆಗೆದು, ಹುಲ್ಲನ್ನು ಹಾಗೂ ಹಿಂಡಿಯನ್ನು ತಂದು ಹಸುವನ್ನು ಯಾರು ಸಾಕುತ್ತಿದ್ದಾರೆ ಅವರಿಗೆ ಗೊತ್ತಿದೆ ಅದರ ಕಷ್ಟ ನಾವು ಪಡತಕ್ಕಂಥ ಕಷ್ಟಕ್ಕೂ ನಮಗೆ ಸಿಕ್ಕ ತಕ್ಕಂಥ ಬೆಲೆಗೂ ಸಂಬಂಧವೇ ಇಲ್ಲದಂತಾಗಿದೆ. ಆದ್ದರಿಂದ ದಯಮಾಡಿ ಹಾಲಿನ ಬೆಲೆಯನ್ನು ಹೆಚ್ಚು ಮಾಡಿ, ಉತ್ಪಾದಕರಿಗೆ ಅನುಕೂಲವಾಗುವಂತೆ ಮಾಡಬೇಕು. ಬಳಕೆದಾರರಿಗೆ ಯಾರಿಗೆ ಕೊಂಡುಕೊಳ್ಳು ವುದಕ್ಕೆ ಶಕ್ತಿ ಇಲ್ಲವೋ ಅಂತಹವರಿಗೆ ಬೇಕಾದರೆ ರಿಯಾಯಿತಿ ದರದಲ್ಲಿ ಹಾಲನ್ನು ಮಾರಾಟ ಮಾಡಿ. ನಾವು ಬೇಡ ಎನ್ನುವುದಿಲ್ಲ. ಆದರೆ ಉತ್ಪಾದಕರ ಹಿತರಕ್ಷಣೆಯನ್ನು ಕಾಪಾಡುವಂತಹದ್ದು ನಿಮ್ಮ ನೈತಿಕ ಜವಾಬ್ದಾರಿ ಇದೆ, ಆದ್ದರಿಂದ ಈ ವಿಷಯದಲ್ಲಿ ನಮ್ಮ ಜೊತೆ ನೀವು ಬರಬೇಕೆಂದು ವಿನಂತಿ ಮಾಡಿಕೊಳ್ಳುತ್ತೇನೆ,

ಇನ್ನು ತೋಟಗಾರಿಕೆ ವಿಚಾರದಲ್ಲಿ ಹೇಳುವುದಾದರೆ, ೧೯೮೦–೮೧–೮೨ರಲ್ಲಿ ನಾನು ಶಾಸಕನಾಗಿದ್ದಾಗ ನನ್ನ ಕ್ಷೇತ್ರದಲ್ಲಿ ಒಂದು ಕೆಲಸವನ್ನು ಮಾಡಿದ್ದೆ. ತೋಟಗಾರಿಕಾ ಇಲಾಖೆಯಿಂದ ಡಿ.ಪಿ.ಎ.ಪಿ. ಕಾರ್ಯಕ್ರಮದಡಿಯಲ್ಲಿ ಒಂದೊಂದು ಮನೆಗೂ ಎರಡೆರಡು ತೆಂಗಿನ ಗಿಡಗಳನ್ನು ನಿಮ್ಮ ವರ್ಗದವರಿಗೆ, ಹಿಂದುಳಿದವರ್ಗದವರಿಗೆ, ಬಡವರಿಗೆ ಕೊಡಿಸಿದ್ದೆ. ಇವತ್ತು ನಾನು ನನ್ನ ಕ್ಷೇತ್ರದ ಯಾವ ಭಾಗಕ್ಕೆ ಹೋದರೂ ಎದ್ದು ನಿಂತಿರುವ ತೆಂಗಿನ ಮರಗಳನ್ನು ನೋಡುತ್ತಿದ್ದೇನೆ ನಾನು ಶಾಸಕನಾಗಿ ಇರಬಹುದು, ಶಾಸಕನಾಗಿ ಇಲ್ಲದೇ ಇರಬಹುದು. ಆದರೆ ಹಿಂದೆ ನಾನು ನನ್ನ ಕೈಲಾದ ಉಪಕಾರವನ್ನು ಏನು ಮಾಡಿದ್ದೆ, ಅದರ ಕುರುಹಾಗಿ ಇವತ್ತು ನನ್ನ ಕ್ಷೇತ್ರದ ಎಲ್ಲಾ ಕಡೆ ತೆಂಗಿನ ಗಿಡಗಳನ್ನು ನೋಡಬಹುದಾಗಿದೆ. ಇದರಿಂದ ನಮ್ಮನ್ನು ಅವರು ಯಾವಾಗಲೂ ನೆನಸಿಕೊಳ್ಳಬೇಕೆಂದು ನಾನು ಹೇಳುತ್ತಿಲ್ಲ. ಇಂತಹ ಜನರಿಗೆ ನಿಜವಾಗಿ ಸಹಾಯ ಮಾಡಬೇಕಾಗಿದ್ದರೆ, ಪ್ರತಿಯೊಂದು ಮನೆಗೂ ಎರಡೆರಡು ತೆಂಗಿನ ಗಿಡಗಳನ್ನು ಕೊಡಬೇಕು. ಅದನ್ನು ಅವರ್ಯಾರೂ ಮಾರಿಕೊಳ್ಳುವುದಿಲ್ಲ. ಸುಮ್ಮನೆ ಅಪಪ್ರಚಾರವನ್ನು ಮಾಡುತ್ತಿದ್ದಾರೆ. ನಿಮ್ಮ ವರ್ಗದವರಿಗೆ, ಹಿಂದುಳಿದ ವರ್ಗದವರಿಗೆ ಏನೇ ನೆರವು ಕೊಟ್ಟರೂ, ಎಲ್ಲವನ್ನೂ ಅವರು ಮಾರಿಕೊಂಡು ಬಿಡುತ್ತಾರೆಂದು ಸಮಾಜದಲ್ಲಿರುವ ಕೆಲವು ಪಟ್ಟಭದ್ರ ಹಿತಾಸಕ್ತಿಗಳು ಇಲ್ಲದ ಅಪಪ್ರಚಾರ ಮಾಡುತ್ತಿದ್ದಾರೆ. ಅವರು ತಿಂದು ಬಿಡುತ್ತಾರೆ, ಉದ್ಧಾರವಾಗುವುದಿಲ್ಲವೆಂದು ಹೇಳುತ್ತಿದ್ದಾರೆ. ಇದು ಸತ್ಯಕ್ಕೆ ದೂರವಾದ ಮಾತು. ಅವರೂ ಕೂಡ ಗೌರವವಾಗಿ ಬಾಳಬೇಕು, ನಿಜವಾದ ಪ್ರಜೆಯಾಗಿ ಇರಬೇಕು, ಅವರೂ ಕೂಡ ತಮ್ಮ ಆರ್ಥಿಕ ಸ್ಥಿತಿಗತಿಯನ್ನು ಉತ್ತಮಪಡಿಸಿಕೊಳ್ಳುವ ಬಗ್ಗೆ ಮಾನಸಿಕವಾಗಿ ಬದಲಾವಣೆಯಾಗಬೇಕಾಗಿದೆ. ಅವರು ಯಾವಾಗಲೂ ಮುಂದೆ ಬರುವುದಿಲ್ಲ, ಸೋಮಾರಿಗಳು, ಕೊಟ್ಟಿದ್ದೆಲ್ಲವನ್ನೂ ಮಾರಿಕೊಂಡು ಬಿಡುತ್ತಾರೆಂಬ ಗೂಬೆಯನ್ನು ಅವರ ಮೇಲೆ ಕೂರಿಸಿದ್ದಾರೆ. ಇದು ಬಹಳ ತಪ್ಪು. ಈ ಒಂದು ತೆಂಗಿನ ಗಿಡಗಳನ್ನು ಕೊಡುವ ಕೆಲಸವನ್ನು ಏತಕ್ಕೆ ನಿಲ್ಲಿಸಿದ್ದಾರೋ ಗೊತ್ತಿಲ್ಲ ಮಾನ್ಯ ಮಂತ್ರಿಗಳು ನನ್ನ ಮಿತ್ರರು. ಸಾಧ್ಯವಾದಷ್ಟು ಮಟ್ಟಿಗೆ ತೆಂಗಿನ ಸಸಿಗಳನ್ನು ಬೆಳೆಸಿ, ಈ ಜನ ಯಾರು ಇದ್ದಾರೆ, ಪ್ರತಿಯೊಬ್ಬರಿಗೂ ಅವರು ಗುಡಿಸಿಲಿನಲ್ಲಿರಲಿ, ಜನತಾ ಮನೆಯಲ್ಲಿರಲಿ, ಪ್ರತಿಯೊಂದು ಮನೆಗೂ ಎರಡೆರಡು ತೆಂಗಿನ ಗಿಡಗಳನ್ನು ಕೊಡುವಂತಹ ಅವಕಾಶ ಮಾಡಿಕೊಡಿ. ಈ ಒಂದು ಯೋಜನೆ ನಿಂತು ಹೋಗಿದೆ. ನಿಮಗೆ ಅಪಕೀರ್ತಿ ಬರುತ್ತದೆ. ಬಡವರ ಮನಸ್ಸಿನಲ್ಲಿ ನೀವು ಶಾಶ್ವತವಾಗಿ ಉಳಿಯಬೇಕಾದರೆ ಇದು ಬಹಳ ಮಟ್ಟಿಗೆ ಪರಿಣಾಮಕಾರಿಯಾಗುತ್ತದೆ. ಇದನ್ನು ಕೂಡಲೇ ಜಾರಿಗೆ ಕೊಡಬೇಕೆಂದು ನಾನು ತಮ್ಮ ಮೂಲಕ ಮಾನ್ಯ ಮಂತ್ರಿಗಳಲ್ಲಿ ಪ್ರಾರ್ಥನೆ ಮಾಡಿಕೊಳ್ಳುತ್ತೇನೆ.

ಈ ಸರ್ಕಾರ ಒಂದು ಘೋಷಣೆ ಮಾಡಿದೆ. ಅದೇನೆಂದರೆ, ನಾಲೆ ಬದಿಯಲ್ಲಿ ಜಾಗ ಎಲ್ಲಿರುತ್ತದೋ ಅಲ್ಲಿ ತೆಂಗಿನ ಸಸಿಗಳನ್ನು ನೆಟ್ಟು ಸಂರಕ್ಷಣೆ ಮಾಡಿ ನಿರ್ಗತಿಕರು ಯಾರಿರುತ್ತಾರೋ ಅವರಿಗೆ ಅದನ್ನು ಕೊಡುತ್ತೇವೆ ಎಂದು. ಇದು ಘೋಷಣೆಯಾಗಿಯೇ ಉಳಿದರೆ ಇದರ ಶಾಪ ನಿಮಗೆ ತಟ್ಟುತ್ತದೆ. ನೀವು ಏನೂ ಹೇಳದಿದ್ದರೆ ಪರವಾಗಿಲ್ಲ, ಆದರೆ ಹೇಳಿ ಮಾಡದಿದ್ದರೆ ಪರಿಣಾಮ ಕೆಟ್ಟದಾಗಿ ಆಗುತ್ತದೆ. ಯಾರು ನಾಲೆ ಬದಿಯಲ್ಲಿ ಜಮೀನನ್ನು ಹೊಂದಿರುತ್ತಾರೋ ಅವರು ಇದನ್ನು ಇನ್ನಷ್ಟು ಅಭಿವೃದ್ಧಿಪಡಿಸಬೇಕೆಂದಿರುತ್ತಾರೆ. ಆದ್ದರಿಂದ ನೀವು ಎಲೆಕ್ಟ್ರಾನಿಕ್ ವೇಗದಲ್ಲಿ ಹೋಗಬೇಕಾಗುತ್ತದೆಂದು ಹೇಳುತ್ತೇನೆ. ನಾಲೆ ಬದಿ ಜಮೀನಿನಲ್ಲಿ ಈ ಒಂದು ಕಾರ್ಯ ಮಾಡಲು ಯಾರು ಕಾತುರರಾಗಿರುತ್ತಾರೋ ಅವರಿಗೆ ತೆಂಗಿನ ಸಸಿಗಳನ್ನು ನೆಟ್ಟು ಬೆಳೆಸಿ ಅದರ ಪ್ರಯೋಜನ ಪಡೆಯುವುದಕ್ಕೆ ಅನುಕೂಲ ಮಾಡಿಕೊಡಬೇಕೆಂದು ಹೇಳುತ್ತೇನೆ. ಫ್ರೂಟ್ ಪ್ರೊಸೆಸಿಂಗ್ ಯೂನಿಟ್ ಅನ್ನು ಕೆ.ಹೆಚ್.ಪಿ.ಯವರು ಮಾಡಿ ಕೈಸುಟ್ಟುಕೊಂಡಿದ್ದಾರೆ ಮತ್ತು ಒಳ್ಳೆಯ ಅನುಭವವನ್ನು ಹೊಂದಿದ್ದಾರೆ. ನಾವು ಯಾವುದೇ ಕ್ಷೇತ್ರಕ್ಕೆ ಹೋದರೂ, ಅದು ಕೈಗಾರಿಕಾ ನಿಗಮ ಆಗಿರಬಹುದು ಅಥವಾ ಮತ್ತೊಂದು ಆಗಿರಬಹುದು, ಅಲ್ಲಿ ಯಾರು ಬಲಿಷ್ಠರಾಗಿದ್ದಾರೆ, ಯಾರನ್ನು ಮಾನಾಪಲಿಸ್ಟ್ ಎಂದು ಕರೆಯುತ್ತೇವೆ ಅವರ ಕಡೆಗೆ ಒಲವು ತೋರತಕ್ಕ, ಅವರನ್ನು ಪ್ರವರ್ಧಮಾನಕ್ಕೆ ತರತಕ್ಕ ನೀತಿಯನ್ನು ಹೊಂದಿದ್ದೇವೆ. ಎಂಟರ್‌ಪ್ರಿನೂರ್ಸ್ ಆಗಿರತಕ್ಕವರನ್ನು ಮೇಲೆ ತರತಕ್ಕ ವ್ಯವಸ್ಥೆಯನ್ನು ಇಟ್ಟುಕೊಂಡಿಲ್ಲ. ಫ್ರೂಟ್ ಪ್ರೊಸೆಸಿಂಗ್ ಯೂನಿಟ್ ಮಾಡುವುದಕ್ಕೆ ಆಗದೆ ಕೈಸುಟ್ಟುಕೊಂಡಿದ್ದಾರೆ. ಕೇಂದ್ರ ಸರ್ಕಾರದವರು ಸಹಾಯ ಮಾಡುತ್ತೇವೆ. ರಾಜ್ಯ ಸರ್ಕಾರದಿಂದ ೪೦ ಸಾವಿರ ರೂಪಾಯಿ ಖರ್ಚು ಮಾಡಿದರೆ ಸಾಕು. ಫ್ರೂಟ್ ಪ್ರಾಜೆಕ್ಟ್ಸ್ ಮಾಡಿ. ಕಾರ್ಪೊರೇಷನ್ ಮಾಡಿ ಎಂದು ಹೇಳಿದ್ದಾರೆ. ಎಲ್ಲ ಇಲಾಖೆಗಳಲ್ಲೂ ಕಾರ್ಪೊರೇಷನ್ ರಚನೆಯಾಗಿದೆ. ಈ ಫ್ರೂಟ್ ಪ್ರೊಸೆಸಿಂಗ್ ಯೂನಿಟ್‌ಗೋಸ್ಕರ ಹಾರ್ಟಿಕಲ್ಚರ್

ಇಲಾಖೆಯಲ್ಲಿ ಒಂದು ಕಾರ್ಪೊರೇಷನ್ ಅನ್ನು ರಚನೆ ಮಾಡಿ, ಅನೇಕ ಕಡೆ ಹಣ್ಣು ಬೆಳೆಯುತ್ತಿದ್ದಾರೆ. ನಮ್ಮ ತಾಲ್ಲೂಕಿನಲ್ಲಿ ಬೆಳೆಯುತಕ್ಕ ಮಾವಿನ ಹಣ್ಣನ್ನು ಕೊಂಡು ತಿನ್ನುವುದಕ್ಕಾಗುತ್ತಿಲ್ಲ. ಅದನ್ನು ಮಹಾರಾಷ್ಟ್ರ ಮತ್ತು ಗುಜರಾತಿಗೆ ಮಾರಾಟ ಮಾಡುತ್ತಿದ್ದಾರೆ. ಅದರಿಂದ ಏನೂ ಪ್ರಯೋಜನವಾಗುತ್ತಿಲ್ಲ. ದಯವಿಟ್ಟು ಈ ದಿಸೆಯಲ್ಲಿ ತ್ವರಿತ ಗತಿಯಲ್ಲಿ ಕೆಲಸ ಮಾಡಬೇಕೆಂದು ಪ್ರಾರ್ಥಿಸುತ್ತೇನೆ. ಮಾನ್ಯ ಜೀವರಾಜ ಆಳ್ವ ಅವರನ್ನು ನೋಡಿದರೆ ಸಂತೋಷವಾಗುತ್ತದೆ. ಅವರ ಇಲಾಖೆಯ ಬಗ್ಗೆ ಮಾತನಾಡಬೇಕಾಗಿಲ್ಲ. ಅವರು ಎಷ್ಟು ಚಟುವಟಿಕೆಯಿಂದ ಇದ್ದಾರೆ ಅಷ್ಟು ಅವರ ಇಲಾಖೆ ಚಟುವಟಿಕೆಯಿಂದ ಇಲ್ಲ. ಡಿಸೆಂಬರ್ ತಿಂಗಳಿನಲ್ಲಿ ನಾನು ನನ್ನ ಸಂಸಾರದ ಜೊತೆಗೆ ದಕ್ಷಿಣ ಕನ್ನಡ ಜಿಲ್ಲೆಗೆ ಹೋಗಿಬರೋಣವೆಂದು ಮಾಹಿತಿ ಗೋಸ್ಕರ ಇವರ ಕಚೇರಿಗೆ ಹೋದೆ. ಮೊದಲು ಕಾರ್ಪೊರೇಷನ್ ಕಛೇರಿ ಹತ್ತಿರ ಇರತಕ್ಕ ಕಛೇರಿಗೆ ಹೋದೆವು. ಆಗ ಅಲ್ಲಿ ಏನೂ ಮಾಹಿತಿಗಳು ಸಿಗುವುದಿಲ್ಲ, ಸೆಂಟ್ ಮಾರ್ಕ್ಸ್ ರೋಡಿಗೆ ಹೋಗಿ ಎಂದರು. ನಾನು ಶಾಸಕ, ಮಾಹಿತಿ ಬೇಕೆಂದು ಕೇಳಿದರೂ ಅವರು ಕೊಡುವುದಕ್ಕೆ ತಯಾರಿರಲಿಲ್ಲ. ಹೀಗಾಗಿ ನಮ್ಮನ್ನು ಅಲ್ಲಿಂದ ಓಡಿಸಿಬಿಟ್ಟರು. ಮತ್ತೆ ಏನು ಮಾಡುವುದು ಎಂದು ಇವರ ಕಛೇರಿಗೆ ಬಂದವು. ಇವರ ಕಛೇರಿಗೆ ಬಂದರೆ ರೆಸಿಡೆನ್ಸಿ ರಸ್ತೆಯಲ್ಲಿ ಕೇಂದ್ರ ಸರ್ಕಾರದ ಕಛೇರಿ ಇದೆ, ಅಲ್ಲಿಗೆ ಹೋಗಿ ಎಂದರು. ಕೊನೆಗೆ ಅಲ್ಲಿ ಹೋಗಿ ಮಾಹಿತಿ ಪಡೆದೆ, ಕನಿಷ್ಟ ಪಕ್ಷ ತಮಿಳುನಾಡಿನಲ್ಲಿ, ಕೇರಳದಲ್ಲಿ ಯಾವ ಯಾವ ಪ್ರದೇಶಗಳಿವೆ, ಯಾವ ಮಾರ್ಗದಲ್ಲಿ ಹೋಗಬೇಕು ದೂರ ಎಷ್ಟಾಗುತ್ತದೆ, ಅಲ್ಲಿ ಇರುವುದಕ್ಕೆ ಏನು ಸೌಕರ್ಯ ಇದೆ ಎಂಬ ಮಾಹಿತಿ ಕೊಡತಕ್ಕ ವ್ಯವಸ್ಥೆ ಇಲ್ಲದಿದ್ದರೆ ಇವರ ಇಲಾಖೆ ಏತಕ್ಕೆ ಇರಬೇಕು ? ಇವರು ಏತಕ್ಕೆ ಮಂತ್ರಿಯಾಗಿರಬೇಕು ? ಇವರು ಏತಕ್ಕೆ ಇರಬೇಕೆಂದು ಕೇಳುವುದಕ್ಕಾಗುವುದಿಲ್ಲ. ಆದರೆ ಈ ಇಲಾಖೆ ಏತಕ್ಕೆ ಇರಬೇಕೆಂದು ನನಗೆ ದುಃಖವಾಗುತ್ತಿದೆ. ವಾರ್ತಾ ಇಲಾಖೆಯಲ್ಲಿ ಮೊದಲು ಏನಾಗುತ್ತಿತ್ತು ಎಂದರೆ ಸಣ್ಣಪುಟ್ಟ ಪತ್ರಿಕೆಗಳನ್ನು ನಡೆಸತಕ್ಕವರು ತಮ್ಮ ಪತ್ರಿಕೆಗಳ ಮುಖ ಪುಟದಲ್ಲಿ ಇವರ ಫೋಟೋವನ್ನು ಹಾಕುತ್ತಿದ್ದರು. ಆಮೇಲೆ ಇವರು ಅಡ್ವರ್ಟೈಸ್‌ಮೆಂಟುಗಳನ್ನು ರಿಲೀಸ್ ಮಾಡುವುದು, ಹೀಗೆ ಇವರ ಕೃಪಾಕಟಾಕ್ಷದಲ್ಲಿ ಅವರು ಬದುಕುತ್ತಿದ್ದರು, ಇವರ ಭಾವಚಿತ್ರದ ಜೊತೆಗೆ ಪತ್ರಿಕೆಗಳು ಬರುತ್ತಿದ್ದವು. ಈಗ ಕಡಿಮೆ ಮಾಡಿದ್ದಾರೆ, ಆದರೂ ಈ ಇಲಾಖೆ ಸಾಕಷ್ಟು ಸಕ್ರಿಯವಾಗಿ ಕೆಲಸ ಮಾಡುತ್ತಿಲ್ಲ. ರಾಜ್ಯದ ಆಗುಹೋಗುಗಳ ಬಗ್ಗೆ ಸರ್ವತೋಮುಖ ಅಭಿವೃದ್ಧಿ ಬಗ್ಗೆ ರಾಜ್ಯದ ವಿವಿಧ ಭಾಗಗಳಲ್ಲಿ ಬರತಕ್ಕ ಸಮಸ್ಯೆಗಳ ಬಗ್ಗೆ, ಸಾಮಾಜಿಕ ಸಮಸ್ಯೆಗಳ ಬಗ್ಗೆ ಬೆಳಕು ಚೆಲ್ಲತಕ್ಕ ವ್ಯವಸ್ಥೆಯನ್ನು ಮಾಡಬೇಕು. ಆಗ ಈ ಇಲಾಖೆಗೆ ಒಳ್ಳೆಯ ಹೆಸರು ಬರುತ್ತದೆ. ಯಾವುದೋ ಕಾರ್ಯಕ್ರಮಕ್ಕೆ ಮಂತ್ರಿಗಳು ಹೋದರು ಎಂದು ಅವರ ಫೋಟೋ ತೆಗೆದುಕೊಂಡು ಹಾಕಿದರೆ ಆಗುವುದಿಲ್ಲ.

(ಅಧ್ಯಕ್ಷರು ಪೀಠವನ್ನಲಂಕರಿಸಿದರು)

ಹೆಚ್ಚಾಗಿ ನೀವು ಮಾನ್ಯ ಪ್ರಕಾಶ್‌ರವರ ಸಲಹೆ ಪಡೆದು ಅವರ ಸಹಕಾರದಿಂದ ವ್ಯವಸಾಯಗಾರರು ಯಾರಿದ್ದಾರೆ, ಕೃಷಿ ಕಾರ್ಮಿಕರು ಯಾರಿದ್ದಾರೆ ಅವರ ಸಮಸ್ಯೆಗಳನ್ನು ಅಧ್ಯಯನ ಮಾಡುವುದಕ್ಕೆ, ಅವರ ಸಮಸ್ಯೆಗಳಿಗೆ ಪರಿಹಾರ ಕಂಡುಹಿಡಿಯುವುದಕ್ಕೆ ಅವರ ಕಷ್ಟಗಳನ್ನು ನಿವೇದಿಸಿಕೊಳ್ಳುವುದಕ್ಕೆ ವಾರ್ತಾ ಇಲಾಖೆ ಹೊರಡಿಸತಕ್ಕ ಪತ್ರಿಕೆಯನ್ನು ಉಪಯೋಗಿಸಿ ಕೊಳ್ಳುವಂತಾಗಬೇಕು. ಈ ಪತ್ರಿಕೆ ರೈತರಿಗೆ ಮೀಸಲಾಗಿಡಿ. ರೈತ ತಾನಾಗಿ ಪತ್ರಿಕೆಯನ್ನು ನಡೆಸತಕ್ಕ ಪರಿಸ್ಥಿತಿಯಲ್ಲಿ ಇಲ್ಲ. ಇನ್ನು ಕನ್ನಡ ಸಂಸ್ಕೃತಿ ಇಲಾಖೆಯ ಬಗ್ಗೆ ಒಂದೆರಡು ಸಲಹೆಗಳನ್ನು ಕೊಡಬಯಸುತ್ತೇನೆ.

ಅಧ್ಯಕ್ಷರು.—ಇನ್ನೂ ೨೭ ಜನ ಮಾತನಾಡುವವರಿದ್ದಾರೆ. ಇವತ್ತೇ ನಾಲ್ಕು ಜನ ಮಂತ್ರಿಗಳೂ ಉತ್ತರಿಸಬೇಕು. ರಾತ್ರಿ ೧೨ ಆದರೂ ಮುಗಿಯಬೇಕು. ಶ್ರೀಮತಿ ಮನೋರಮ ಮಧ್ವರಾಜ್ ಅವರು ೩೧ ನಿಮಿಷದಲ್ಲಿ ಮುಗಿಸಿದರು. ನೀವು ಏತಕ್ಕೆ ಹೆಚ್ಚಿಗೆ ಸಮಯ ತೆಗೆದುಕೊಳ್ಳುತ್ತಿದ್ದೀರಿ ?

ಶ್ರೀ ರಮೇಶ್ ಕುಮಾರ್.—ಕನ್ನಡ ಮತ್ತು ಸಂಸ್ಕೃತಿ ಇಲಾಖೆಯವರು ಕನ್ನಡವನ್ನು ಬಳಸತಕ್ಕ ಉತ್ಸುಕತೆಯಲ್ಲಿ ಕನ್ನಡವನ್ನು ಪರ್ಷಿಯನ್ ಭಾಷೆಯಾಗಿ ಮಾಡಬೇಡಿ ಎಂದು ಹೇಳುತ್ತೇನೆ. ಆರಕ್ಷಕ, ನಿರೀಕ್ಷಕ ಎಂಬುದಕ್ಕೆ ಬದಲಾಗಿ ಪೋಲೀಸು, ಇಂಜಿನಿಯರ್ ಎಂದರೆ ಅರ್ಥವಾಗುತ್ತದೆ. ಕನ್ನಡವನ್ನು ಬಳಸಬೇಕೆಂದು ಹೋಗಿ ಅದನ್ನು ಪರಭಾಷೆಯಾಗಿ ಮಾಡಬೇಡಿ ಎಂದು ಹೇಳುತ್ತೇನೆ. ನನ್ನ

ಮಾತೃಭಾಷೆ ತೆಲುಗು ಆದರೂ ಕನ್ನಡ ಭಾಷೆಯ ಮೇಲಿನ ಅಭಿಮಾನದಿಂದ ಕನ್ನಡವನ್ನು ಕಲಿತಿದ್ದೇನೆ. ಕನ್ನಡವನ್ನು ಕಲಿಯಬೇಕು, ಕನ್ನಡವನ್ನು ಮಾತನಾಡಬೇಕೆಂದು ಇರುವವರ ಬಗ್ಗೆ ಎಚ್ಚರಿಕೆ ವಹಿಸಬೇಕು. ಕನ್ನಡ ಪರಭಾಷೆಯಾಗಿ ಕಾಣುತ್ತಿದೆ. ಆ ರೀತಿ ಮಾತ್ರ ಮಾಡಬೇಡಿ ಎಂದು ಸಲಹೆ ಕೊಟ್ಟು, ಕಡೆಯದಾಗಿ ಪ್ರಕಾಶ್‌ರವರಿಗೆ ಒಂದು ಸಲಹೆ ಕೊಡುತ್ತೇನೆ. ಆಗ್ರೋ ಇಂಡಸ್ಟ್ರೀಸ್ ಹೇಗೆ ಕೆಲಸ ಮಾಡಿದೆ, ಎಷ್ಟು ಲಾಭ ಹೊಂದಿದೆ, ಎಷ್ಟು ನಷ್ಟ ಹೊಂದಿದೆ ಎಂದು ಹೇಳುವುದಕ್ಕೆ ಹೋಗುವುದಿಲ್ಲ. ಅಲ್ಲಿರತಕ್ಕ ಸಲಕರಣೆಗಳನ್ನು ಸಾಮಾನ್ಯ ರೈತ ಬಳಸತಕ್ಕ ಸ್ಥಿತಿಯಲ್ಲಿ ಇಲ್ಲ. ಬುಲ್ಡೋಜರ್‍ಸ್, ರಿಗ್ಸ್ ಮುಂತಾದ ಯಂತ್ರಗಳನ್ನು ನೀವು ನಿಗದಿಪಡಿಸಿದ ದರವನ್ನು ಕೊಟ್ಟು ಸಾಮಾನ್ಯ ರೈತ ಬಳಸುವುದಕ್ಕಾಗುವುದಿಲ್ಲ. ಬೆಂಗಳೂರಿನ ಸುತ್ತಮುತ್ತ ಕೆಲವರು ತಮ್ಮ ಕಪ್ಪುಹಣವನ್ನು ಬಿಳಿ ಹಣವನ್ನಾಗಿ ಮಾಡುವುದಕ್ಕೆ ಎಸ್ಟೇಟ್‌ಗಳನ್ನು ಮಾಡಿದ್ದಾರೆ. ಅವರು ಉಪಯೋಗಿಸಬಹುದೇ ಹೊರತು ರೈತ ಕಷ್ಟಪಟ್ಟು ದುಡಿದ ಹಣವನ್ನು ವ್ಯಯಿಸುವುದಕ್ಕಾಗುವದಿಲ್ಲ, ನಿಜವಾಗಿ ರೈತನಿಗೆ ಸಹಾಯ ಮಾಡುವುದಕ್ಕೆ ಮುಂದೆ ಬರಬೇಕು. ಸಾಧ್ಯವಾದರೆ ನೀವು ಒಮ್ಮೆ ಚೈನಾಕ್ಕೆ ಹೋಗಿಬನ್ನಿ. ಅದು ಅತ್ಯಂತ ಹೆಚ್ಚಿನ ಜನಸಂಖ್ಯೆ ಇರತಕ್ಕ ದೇಶ. ಅಲ್ಲಿ ವ್ಯವಸಾಯವನ್ನು ಯಾವ ರೀತಿ ನಡೆಸಿಕೊಂಡು ಹೋಗಿದ್ದಾರೆ, ಯಾವ ರೀತಿ ರೈತರಿಗೆ, ರೈತ ಕಾರ್ಮಿಕರಿಗೆ ಸಮಾಜದಲ್ಲಿ ಸ್ಥಾನ ಕೊಟ್ಟಿದ್ದಾರೆ, ಸಾಮಾಜಿಕ ಗೌರವ ಕೊಟ್ಟಿದ್ದಾರೆ ಅದನ್ನು ಇಲ್ಲಿ ಅನುಷ್ಠಾನಕ್ಕೆ ತರಬೇಕೆಂದು ಸೂಚನೆ ಕೊಟ್ಟು, ತಮಗೆ ಇನ್ನು ಬೇಸರ ಮಾಡುವುದಕ್ಕೆ ಇಷ್ಟಪಡದೆ ನನಗೆ ಇಷ್ಟು ಹೊತ್ತು ಮಾತನಾಡಲು ಅವಕಾಶ ಕೊಟ್ಟ ತಮಗೆ ವಂದಿಸಿ ನನ್ನ ಮಾತನು ಮುಗಿಸುತ್ತೇನೆ.

† ಶ್ರೀ ಬಿ. ಎ. ಉಮರಬ್ಬ (ವಿಟಲ).—ಮಾನ್ಯ ಅಧ್ಯಕ್ಷರೆ, ತಾವು ನನಗೆ ಬಹಳಷ್ಟು ಕಡಿಮೆ ಸಮಯ ಕೊಟ್ಟಿದ್ದೀರೆಂದು ಭಾವಿಸುತ್ತೇನೆ. ಆದ್ದರಿಂದ ಅನೇಕ ಇಲಾಖೆಗಳ ಬಗ್ಗೆ ಚರ್ಚೆ ಇದ್ದರೂ ನನಗೆ ಅತ್ಯಂತ ಪ್ರಿಯವಾದ ಒಂದು ಇಲಾಖೆಯ ಬಗ್ಗೆ ಮಾತ್ರ ಮಾತನಾಡಬಯಸುತ್ತಿದ್ದೇನೆ. ಆ ಇಲಾಖೆ ಮಾತ್ರ ಪ್ರಿಯವಲ್ಲ, ಆ ಇಲಾಖೆಯ ಸಚಿವರೂ ಅಷ್ಟೇ ಪ್ರಿಯರು. ಈ ಸಂದರ್ಭದಲ್ಲಿ ಷೇಕ್ಸ್‌ಪಿಯರ್‌ನ ಜೂಲಿಯಸ್ ಸೀಜರ್‌ನ ಮಾತುಗಳು ನೆನಪಾಗುತ್ತವೆ.

"ಸೀಜರ್‌ನನ್ನು ನಾನು ಕಡಿಮೆ ಪ್ರೀತಿಸಿಲ್ಲ. ಅದಕ್ಕಿಂತ ಹೆಚ್ಚು ನಾನು ರೋಂ ನಗರವನ್ನು ಪ್ರೀತಿಸ್ತೀನಿ'' ಎಂದು ಹೇಳಿದ ಹಾಗೆ ಜೀವರಾಜ ಆಳ್ವ ಅವರನ್ನು ಕಡಿಮೆ ಪ್ರೀತಿಸುವವನು ಅಲ್ಲ. ಅವರಿಗೆ ಸಂಬಂಧಪಟ್ಟ ಇಲಾಖೆಯನ್ನು ಹೆಚ್ಚು ಪ್ರೀತಿಸುವುದರಿಂದ ಸ್ವಲ್ಪ ಸಮಯ ಹೆಚ್ಚು ಬೇಕಾಗಬಹುದೆಂದು ಕೋರಿ ನನ್ನ ಭಾಷಣವನ್ನು ಪ್ರಾರಂಭಿಸುತ್ತೇನೆ. ಕನ್ನಡ ಸಂಸ್ಕೃತಿ, ಯುವಜನ ಇವು ಮೂರು ಬಹಳ ಪ್ರಮುಖವಾದ ಮೌಲ್ಯಗಳು. ಭಾಷೆ ಮತ್ತು ಸಂಸ್ಕೃತಿ ಈ ಮೌಲ್ಯಗಳಿಗೆ ಯಾವುದೇ ರೀತಿಯಲ್ಲಿ ಆಘಾತವಾದರೆ ಮೌಲ್ಯಾಧಾರಿತ ರಾಜಕಾರಣಕ್ಕೆ ಆಘಾತವಾದೀತು ಎಂದು ಭಾವಿಸಿಕೊಂಡು ನನ್ನ ಮಾತನ್ನು ಮುಂದುವರಿಸುತ್ತೇನೆ.

ಇವರು ಬೇರೆ ಬೇರೆ ಇಲಾಖೆಗಳಲ್ಲಿ ಘೋಷಣೆಗಳನ್ನು ಬಹಳಷ್ಟು ಮಾಡಿದ್ದರೂ, ಆ ಘೋಷಣೆಗಳಿಗೆ ಪೂರಕವಾಗಿ ಸರಿ ಮಾಡುವಂಥ, ಅದನ್ನು ನೆರವೇರಿಸುವಂಥ ಹಣದ ಒಂದು ಒದಗಣೆ ಇವರಿಗೆ ಇಲ್ಲ. ಘೋಷಣೆ ಮಾತ್ರ ಎಲ್ಲಾ ಕಡೆ ಮಾಡುತ್ತಾರೆ. ಕ್ರೀಡಾಂಗಣ ಮಾಡುವ ಬಗ್ಗೆ ತಾವು ಘೋಷಣೆಯನ್ನು ಮಾಡುತ್ತೀರಿ, ಕ್ರೀಡೆಗೆ ಪ್ರೋತ್ಸಾಹ ಕೊಡುವಂಥ ಪ್ರೋತ್ಸಾಹ ಮಾಡುತ್ತೀರಿ. ಹಣವನ್ನು ಒದಗಿಸಿದ್ದು ಮಾತ್ರ ಎಷ್ಟು ಎಂದು ನೋಡಿದಾಗ ೧೯೮೫-೮೬ರಲ್ಲಿ ಈ ವರ್ಷಕ್ಕೆ ೮೭ ಕೋಟಿ ರೂಪಾಯಿ ಇರಬಹುದು. ನೇರವಾಗಿ ಒಂದು ಪ್ರಮಾಣದಲ್ಲಿ ೧೨.೬೪ ಲಕ್ಷ, ಎರಡನೆಯದು ೧೬.೫೦ ಲಕ್ಷ. ಮೂರನೆಯದು ಈಗ ಇದ್ದಂಥದ್ದನ್ನು ಇನ್ನಷ್ಟು, ಕಡಿಮೆ ಮಾಡಿ ೧೦ ಲಕ್ಷ ಕೊಟ್ಟಿರುತ್ತಾರೆ. ಇದು ತಾವು ರಚಿಸುವಂಥ ಒಂದು ಕ್ರೀಡಾಂಗಣ, ಪೇಪರ್ ವರ್ಕ್ ಎಂದು ಹೇಳಿ ಸ್ಕೆಚ್ ಮಾಡುವುದಕ್ಕೆ ಅಷ್ಟು ಸಾಕಾಗಬಹುದು ಅಷ್ಟೆ. ತಾವು ಘೋಷಿಸುವಂಥ ಕ್ರೀಡಾಂಗಣಗಳ ಒಂದು ತಳಪಾಯ ಹಾಕಲು ಕೂಡ ಹಣ ಕಡಿಮೆಯಾಗಿದೆ ಈ ಘೋಷಣೆಯನ್ನು ಕೊಡುವಾಗ ಮಾಡುವಂಥ ತಮ್ಮ ಸ್ಥಿತಿಗತಿಗಳ ಒಂದು ಪ್ರಜ್ಞೆ ಅಗತ್ಯ ಎಂದು ಹೇಳಿ ನಾನು ಭಾವಿಸಿಕೊಂಡಿದ್ದೇನೆ. ಇದು ನಿಮ್ಮಲ್ಲಿ ಯಾವುದೂ ಇಲ್ಲ. ಹೊಸ ಕಾರ್ಯಕ್ರಮಗಳೂ ಏನೂ ಕಾಣುವುದಿಲ್ಲ, ಹೊಸ ಯೋಜನೆಯೂ ಕಾಣುವುದಿಲ್ಲ. ಒಟ್ಟಿನಲ್ಲಿ ಮಾಡುವಂಥ ಒಂದು ಲಂಪ್‌ಸಮ್ ಅಮೌಂಟ್ ಏನು ಇದೆ. ಅದೂ ಸಹಾ ವಿಕಾಸಗೊಂಡಿಲ್ಲ. ಅದನ್ನು ಮಾಡಲಿಕ್ಕೆ ಸಾಧ್ಯ ಇಲ್ಲ, ಇದನ್ನು ನೇರವಾಗಿ ಒಪ್ಪಿಕೊಳ್ಳುವುದೇ ಒಳ್ಳೆಯದು. ಪ್ರಚಾರ

ಘೋಷಣೆಗಳು ಸರಿಯಲ್ಲ ಎಂದು ಭಾವಿಸಿಕೊಂಡಿದ್ದೇನೆ. ಬೇರೆ ಬೇರೆ ಬಂದಾಗ ನಿಮ್ಮ ಇಲಾಖೆಯಲ್ಲಿ ಸಂಗೀತ ಮತ್ತು ನಾಟಕ ಪ್ರಾಮುಖ್ಯವಾದ ಅಂಗ ಆಗುತ್ತದೆ. ಈ ಸಂಗೀತ ನಾಟಕಕ್ಕೆ ನಿಮ್ಮ ಇಲಾಖೆಯಲ್ಲಿ ಎಷ್ಟು ಹಣ ಕೊಡಿಸಿದ್ದೀರಿ ? ಪ್ರೋತ್ಸಾಹ ಕೊಡುವ ಬಗ್ಗೆ ಏನು ಕಾರ್ಯಕ್ರಮವನ್ನು ರೂಪಿಸಿದ್ದೀರಿ ? ಹಣವೂ ಇಲ್ಲಾ, ಕಾರ್ಯಕ್ರಮವೂ ಇಲ್ಲಾ. ಅವರ ಬಗ್ಗೆ ಆಲೋಚನೆ ಇಲ್ಲದೇ ಇದ್ದಾಗ ನಿಮ್ಮ ಕನ್ನಡ ಸಂಸ್ಕೃತಿ ಅಥವಾ ಯಾವುದೇ ಬಾಯಿ ಮಾತು ಆಗುತ್ತದೆ. ಇಲ್ಲಿಯೂ ಸಹಾ ತಾವು ಪ್ರೋತ್ಸಾಹ ಕೊಡುವಂಥ ಒಂದು ನೇರವಾದ ಕಾರ್ಯಕ್ರಮ ಇಲ್ಲ ಎಂದು ಭಾವಿಸಬೇಕಾಗುತ್ತದೆ. ಯಾವುದಕ್ಕೂ ಹಣದ ಅವಶ್ಯಕತೆ ಇದೆ. ಹಣದ ಒದಗಣೆ ಇಲ್ಲ. ಯಾವುದಕ್ಕೆ ಅವಶ್ಯಕತೆ ಇಲ್ಲವೋ ಅಂಥ ಸಂದರ್ಭದಲ್ಲಿ ಬಹಳಷ್ಟು, ಹಣವನ್ನು ಒದಗಿಸುವ ಪ್ರಯತ್ನವನ್ನು ಮಾಡುತ್ತಿದ್ದೀರಿ, ನಾನು ವಿವರಗಳನ್ನು ಕೇಳಿದ್ದೇನೆ. ತಾವು ನೀಡಿರುವಂಥ ವರದಿಯಲ್ಲಿ ಯುವಜನ ಮೇಳಕ್ಕೆ ೬.೨೫ ಲಕ್ಷ ರೂಪಾಯಿಗಳನ್ನು ತಾವು ಒದಗಿಸಿದ್ದೀರಿ. ಆ ಮಾತು ಹೇಳಿದ್ದು ನಿಜವಾದರೂ ೬.೨೫ ಲಕ್ಷ ರೂಪಾಯಿಗಳು ಖರ್ಚಾಯಿತು ಎಂದು ಹೇಳಿದ್ದೀರಿ. ಯುವಜನ ಮೇಳ ಎಲ್ಲಿ ಆಯಿತು ಎಷ್ಟು ಹಣ ಇದಕ್ಕಾಗಿ ಖರ್ಚಾಯಿತು ? ಯಾರ ಮೂಲಕ ಇದು ನಡೆಯಿತು ? ಇದರ ಬಗ್ಗೆ ಸ್ಪಷ್ಟವಾಗಿ ವಿವರಗಳನ್ನು ಈ ಸಂದರ್ಭದಲ್ಲಿ ಕೇಳುತ್ತಿದ್ದೇನೆ. ಏಕೆಂದು ಹೇಳಿದರೆ ಯುವಜನ ಮೇಳದಲ್ಲಿ ಕೆಲವಾರು ಭಾರಿ ನಾನು ಭಾಗವಹಿಸುವಂಥ ಅನುಭವ ನನಗಿದೆ. ತಮ್ಮ ಜೊತೆಗೂ ಭಾಗವಹಿಸಿದ್ದೇನೆ. ಶ್ರೀಮಾನ್ ದೇವರಾಜ ಅರಸ್ ಮುಖ್ಯಮಂತ್ರಿಗಳಾಗಿದ್ದಾಗ ಬೆಂಗಳೂರು ನಗರದಲ್ಲಿ ಯುವಜನ ಮೇಳ ಆಯಿತು. ನನ್ನ ನೆನಪು ನಿಜ. ೫ ಸಾವಿರ ಮಂದಿ ರಾಜ್ಯದ ಯುವಕರು ಪ್ರತಿನಿಧಿಸಿರುವಂಥ ಯುವಜನ ಮೇಳ ಇದೇ ಬೆಂಗಳೂರಿನ ಲಾಲ್‌ಬಾಗ್‌ನಲ್ಲಿ ನಡೆಯಿತು. ನೋಡಲು ಉತ್ಸಾಹಪೂರ್ಣವಾಗಿತ್ತು. ಅಥವಾ ಪೂರ್ಣವಾಗಿತ್ತು ಕೆಲವು ಪತ್ರಿಕೆಗಳ ಮೂಲಕ ಮತ್ತು ಯಾರೋ ಒತ್ತಾಯಿಸಿ ಅವರನ್ನು ಕರೆತಂದು ಮಾಡುವುದಲ್ಲ. ಯುವಜನ ಮೇಳಕ್ಕೆ ಖರ್ಚಾದದ್ದು ೬.೨೫ ಲಕ್ಷ ರೂಪಾಯಿ. ಅನಂತರದ ವರದಿಯನ್ನು ಕೊಟ್ಟಿದ್ದೀರಿ. ಕನ್ನಡ ಸಂಘ ಸಂಸ್ಥೆಗಳಿಗೆ ೧೦ ಲಕ್ಷ ರೂಪಾಯಿಗಳನ್ನು ನೀಡಿದ್ದೇವೆ ಎಂದು ಹೇಳಿ, ಈ ಕನ್ನಡ ಸಂಘ ಸಂಸ್ಥೆಗಳು ಯಾವುದು ? ಯಾವ ಯಾವ ಕನ್ನಡ ಸಂಸ್ಥೆಗೆ ತಾವು ಹಣವನ್ನು ಕೊಟ್ಟಿದ್ದೀರಿ? ಒಟ್ಟು ಹತ್ತು ಲಕ್ಷ ರೂಪಾಯಿ ವಿತರಣೆಯಾಗಿದೆ ಎಂದು ಕೇಳಿದ್ದೇನೆ. ಆ ವಿತರಣೆ ಹೇಗೆ ಆಗಿದೆ ಎಂದು ಕೇಳುತ್ತೇನೆ, ಒಮ್ಮೊಮ್ಮೆ ಕೆಲವಾರು ತೀರ್ಮಾನಗಳನ್ನು ನೇರವಾಗಿ ಕೈಗೊಳ್ಳುವಂಥ ಅಭ್ಯಾಸ ಮಾನ್ಯ ಸಚಿವರಿಗೆ ಇದೆ. ಹಾಗೆ ಕೈಕೊಳ್ಳುವಾಗ ಒಂದು ರೀತಿಯಲ್ಲಿ ತನಗೆ ಬೇಕಾದ, ತನಗೆ ಕಾಣಿಸಿದ ಒಂದು ಕನ್ನಡ ಸಂಘ ಆಗಬಹುದು ಅಥವಾ ಸಂಸ್ಥೆಗಳು ಆಗಬಹುದು. ಅಂತಹವುಗಳಿಗೆ ಕೊಟ್ಟು ಈ ಹಣವನ್ನು ಯಾವ ರೀತಿ ಉಪಯೋಗ ಮಾಡುತ್ತೀರಿ. ಇದರ ಬಗ್ಗೆ ವಿವರವನ್ನು ಕೊಡಿ ಎಂದು ಕೇಳುತ್ತೇನೆ. ಕನ್ನಡ ಸಂಘ ರೆಕಗ್ನೈಸ್ ಆಗಿರಬೇಡವೆ ? ಅದರ ಇತಿ ಹಾಸ ಏನು ? ಅದಕ್ಕೆ ಹಣವನ್ನು ಕೊಟ್ಟಿದ್ದಾರೆಯೋ ? ಹತ್ತು ಲಕ್ಷ ರೂಪಾಯಿ ಕೊಟ್ಟಂಥ ಕನ್ನಡ ಸಂಘಗಳ ಪಟ್ಟಿಯನ್ನು ನೀವು ಸಭೆಯ ಮುಂದೆ ಇಡಬೇಕೆಂದು ನಾನು ಕೇಳುತ್ತೇನೆ. ವಿಶ್ವಕನ್ನಡ ಸಮ್ಮೇಳನವನ್ನು ಮಾಡಿದಿರಿ ಅದರ ಬಗ್ಗೆ ಚರ್ವಿತಚರ್ವಣವಾಗಿ ಚರ್ಚೆಯನ್ನು ಮಾಡಲಿಕ್ಕೆ ಹೋಗುವುದಿಲ್ಲ. ತಮ್ಮ ಮೂಲಕ ೧.೦೯ ಕೋಟಿ ರೂಪಾಯಿಗಳು ಇದಕ್ಕೆ ಖರ್ಚಾಗಿದೆ. ಕರ್ನಾಟಕ ರಾಜ್ಯದ ವಿಶ್ವಕನ್ನಡ ಸಮ್ಮೇಳನ, ವಿಶ್ವಕ್ಕೇ ಕನ್ನಡದಿಂದ ಕನ್ನಡಿಯಾಗಿರಬೇಕಾಗಿತ್ತೇ ವಿನಹಾ ಈ ರೀತಿಯ ಅವ್ಯವಸ್ಥಿತವಾದ ಒಂದು ಸಮ್ಮೇಳನವನ್ನು ಮಾಡುವುದರ ಮೂಲಕ ಕನ್ನಡ ಸಂಸ್ಕೃತಿಯನ್ನು ವಿಶ್ವಕ್ಕೆ ತೋರಿಸುವ ಒಂದು ಒಡೆದ ಕನ್ನಡಿಯಾಗಬಾರದಾಗಿತ್ತು ಎಂದು ಈ ಸಂದರ್ಭದಲ್ಲಿ ಭಾವಿಸಿಕೊಂಡಿದ್ದೇನೆ. ಕನ್ನಡ ಸಂಸ್ಕೃತಿಯ ಬಗ್ಗೆ ಅನೇಕವಾಗಿ ಮಾತನಾಡುವಂಥ ಜನ, ಅನೇಕ ಕಡೆಯಲ್ಲಿ ಭಾರಿ ಹೇಳಿಕೊಳ್ಳುವಂಥ ಜನ ನೀವು ಇದಕ್ಕೆ ಒದಗಿಸಿಕೊಟ್ಟಿರುವಂಥ ಹಣ ಎಷ್ಟು ? ನಿಮಗೆ ಇದರ ಬಗ್ಗೆ ಆಸಕ್ತಿ ಇದೆಯೋ ? ಇಲ್ಲವೋ ? ಎಂಬ ಅನುಮಾನ ಮೂಲಭೂತವಾಗಿ ಮೂಡುತ್ತಿದೆ. ನಿಜವಾದ ಆಸಕ್ತಿ ಕನ್ನಡದ ಬಗ್ಗೆ ಇದೆಯೋ ? ಸಂಸ್ಕೃತಿಯ ಬಗ್ಗೆ ಇದೆಯೋ ? ಎಂಬ ಪ್ರಶ್ನೆಯನ್ನು ಮಾಡಬೇಕಾಗಿದೆ. ಏಕೆಂದು ಹೇಳಿದರೆ ಸಾರ್ವಜನಿಕರಲ್ಲಿ ಒಂದು ಅಭಿಪ್ರಾಯ ಇದೆ. ನಮ್ಮ ರಾಜ್ಯದ ಮಾನ್ಯ ಮುಖ್ಯಮಂತ್ರಿಗಳು ಹಾಗೂ ಅರ್ಥ ಸಚಿವರು ಆಗಿರುವ ಶ್ರೀಮಾನ್ ರಾಮಕೃಷ್ಣ ಹೆಗಡೆಯವರು ಭಾರೀ ಆತ್ಮೀಯರು. ಈ ಆತ್ಮೀಯರ ಕೈಯಲ್ಲಿ ಹಣ ಇರುವಾಗ ಕನ್ನಡ ಸಂಸ್ಕೃತಿಗೆ ತಾವು ಕಿಂಚಿತ್ತಾದರೂ ಒಂದು ಶಕ್ತಿಯನ್ನು ಕೊಡುವಷ್ಟು ಹಣವನ್ನು ಪಡೆಯಲಿಕ್ಕೆ ಪ್ರಯತ್ನವನ್ನು ಮಾಡಲಿಲ್ಲ ಎಂದರೆ ನಿಮ್ಮ ಪ್ರಯತ್ನಗಳು ನಿಮ್ಮ ಪ್ರಿಯರನ್ನು ಉಳಿಸಿಕೊಂಡು ಹೋಗುವುದರ ಮಿತಿಗೆ ಸೀಮಿತವಾಗಿದೆ. ನಿಮ್ಮ ಪ್ರಯತ್ನಗಳು ನಿಮ್ಮ ಇಲಾಖೆಯನ್ನು ಉಳಿಸಿಕೊಂಡು ಹೋಗುವುದಕ್ಕೆ ಆಗಿಲ್ಲವೆಂದು ಈ

ವಿಚಾರವನ್ನು ವಿಷಾದದಿಂದ ಈ ಸಂದರ್ಭದಲ್ಲಿ ಹೇಳಬೇಕಾಗುತ್ತದೆ. ಕನ್ನಡ ಸಂಸ್ಕೃತಿಗೆ ೧೯೮೪ ರಲ್ಲಿ ೨.೮೬ ಲಕ್ಷ ರೂಪಾಯಿಗಳು ಆದರೆ, ೧೯೮೫ ರಲ್ಲಿ ೩ ಲಕ್ಷ ರೂಪಾಯಿಗಳು, ೧೯೮೬ರಲ್ಲಿ ಮತ್ತೆ ೩ ಲಕ್ಷ ರೂಪಾಯಿಗಳು. ಇದರಿಂದ ಯಾವ ಪ್ರಗತಿಯೂ ಸಾಧ್ಯವಿಲ್ಲ. ಯಾವ ಕನಸುಗಳೂ ನನಸಾಗುವುದಿಲ್ಲ ಎಂದು ಭಾವಿಸಿಕೊಂಡಿದ್ದೇನೆ. ಅಷ್ಟು ಮಾತ್ರ ಅಲ್ಲ. ಬೇರೆ ಮೂಲದಿಂದ ಬಂದಿರುವ ಹಣವನ್ನು ಯಾವ ಉದ್ದೇಶಕ್ಕೆ ತಾವು ಪಡೆದಿರುತ್ತೀರಿ. ಆ ಉದ್ದೇಶಕ್ಕಾಗಿ ಬಳಸುವಂಥ ಒಂದು ಸಮಯಾವಕಾಶ ತವಗಿಲ್ಲ ಎಂದು ನಾವು ಹೇಳಬೇಕಾಗಿದೆ ಇದು ಒಂದು ದುಃಖದ ವಿಚಾರ. ಇದನ್ನು ಏತಕ್ಕೆ ಹೇಳುತ್ತಿದ್ದೇನೆಂದರೆ ಹಿಂದೆ ವೀರಪ್ಪ ಮೊಯಿಲಿಯವರು ಪ್ರವಾಸೋದ್ಯಮ ಸಚಿವರು ಆಗಿರತಕ್ಕಂಥ ಸಂದರ್ಭದಲ್ಲಿ ಅವರು ಕಳಿಸಿದಂಥ ಒಂದು ಯೋಜನೆಗೆ ಪೂರಕವಾಗಿ ಕೇಂದ್ರ ಸರ್ಕಾರದಿಂದ ೬೦ ಲಕ್ಷ ರೂಪಾಯಿಗಳು ಬಂತು. ನನ್ನ ನೆನಪು ಸರಿ ಇದೆ ಎಂದಾದರೆ, ಬೃಂದಾವನದ ಪುನರುಜ್ಜೀವನ ಪ್ರಗತಿಯ ಒಂದು ಯೋಜನೆ. ಈ ೬೦ ಲಕ್ಷ ರೂಪಾಯಿಗಳ ಮೂಲಕ ಈ ಬೃಂದಾವನದ ತೋಟವನ್ನು ಒಂದು ನಿಜವಾದ ಬೃಂದಾವನದಂತೆ ಭ್ರಮಿಸಿಕೊಳ್ಳುವಂತೆ ಸಜ್ಜುಗೊಳಿಸುವಂಥ ಹಿರಿಮೆ ಇವರ ಪಾಲಿಗೆ ಇದೆ. ಹೆಚ್ಚು ಪ್ರವಾಸಿಗರನ್ನು ಆಕರ್ಷಣೆ ಮಾಡುವಂಥ ಒಂದು ಬಣ್ಣದ ಚಿಲುಮೆ, ಇದನ್ನು ಉದ್ಘಾಟನೆ ಮಾಡಿದಂಥ ಹಿರಿಮೆ ಮೊಯಿಲಿಯವರ ಕಾಲದಲ್ಲಿ ಆಯಿತು ಎಂದು ನೆನಪು ಮಾಡಿಕೊಳ್ಳುತ್ತೇವೆ. ಅದನ್ನು ಏತಕ್ಕೆ ಹೇಳುತ್ತಿದ್ದೇನೆಂದರೆ ಇನ್ನೊಂದು ಯೋಜನೆಯ ರೂಪದಲ್ಲಿ ಅದು ಇರುತ್ತದೆ. ಹಂಪಿಯ ಪುನರುಜ್ಜೀವನ ಹಂಪಿಯ ಪುನರುತ್ಥಾನಕ್ಕೆ ಕೇಂದ್ರ ಸರ್ಕಾರದಿಂದ ಹಣವನ್ನು ಪಡೆದಿದ್ದೀರಾ? ಪಡೆದಿದ್ದೀರಿ ಎಂದು ಹೇಳಿದರೆ ಈ ಹಣದ ವಿನಿಯೋಗವನ್ನು ಈ ಸಮಯದಲ್ಲಿ ಮಾಡಿದ್ದೀರಾ ? ಈ ಹಂಪೆ ಎನ್ನುವುದು ಒಂದು ಪುರಾತನವಾದ, ಒಂದು ಇತಿಹಾಸ ಮತ್ತು ನಾಡಿನ ಸಂಸ್ಕೃತಿಯನ್ನು ಸ್ಫುಟಿಸುವಂಥದ್ದು. ಇದರ ಪುನರುತ್ಥಾನವನ್ನು ನಮ್ಮ ರಾಜ್ಯದಲ್ಲಿ ಆಗುತ್ತದೆ ಎಂಬ ಆಶಾ ಭಾವನೆಯನ್ನು ಹೊಂದಿದಂತ ಕೇಂದ್ರದಿಂದ ಬಂದಂಥ ಹಣದಿಂದ ಪುನರುತ್ಥಾನಕ್ಕೆ ತಾವು ಉಪಯೋಗ ಮಾಡದಿದ್ದರೆ ನಿಮ್ಮ ಬಗ್ಗೆ ಅತ್ಯಂತ ಅಸಮಾಧಾನವನ್ನು ವ್ಯಕ್ತಪಡಿಸುವುದರಲ್ಲಿ ತಪ್ಪಾಗಲಿಕ್ಕಿಲ್ಲ ಎಂದು ಭಾವಿಸಿಕೊಂಡಿದ್ದೇನೆ. ಹಾಗೆಯೇ ಸುದ್ದಿ ಪ್ರಚಾರ ಇಲಾಖೆಗಳಲ್ಲಿಯೂ ಕೂಡ ಹೊಸ ಯೋಜನೆಗಳು ಇಲ್ಲ. ಮೊತ್ತವೂ ಇಲ್ಲ. ಪ್ರವಾಸೋದ್ಯಮವೂ ಕೂಡಾ ಅದೇ ರೀತಿಯಾಗಿದೆ. ಅದಕ್ಕೆ ಸರಿಯಾದ ಅಧ್ಯಕ್ಷರನ್ನು ತಾವು ನೇಮಕ ಮಾಡಿರುವುದು ಸ್ವಾಗತಾರ್ಹ. ಇವತ್ತು ಇಂಡಿಯನ್ ಎಕ್ಸ್‌ಪ್ರೆಸ್ ಪತ್ರಿಕೆಯನ್ನು ಬಿಡಿಸಿ ಅದರ ಮುಖಪುಟವನ್ನು ಓದಿದಾಗ ನಿಜವಾಗಿಯೂ ಸಹಾ ಒಂದು ರೀತಿಯಲ್ಲಿ ಎದೆ ನಡುಗಿಸುವಂಥ ವಿಚಾರ ಇದೆ. ಯಾರು ಸಮಾಜವಾದಿ ತತ್ವದರ್ಶಿಗಳ ಮೇಲೆ ಏನು ರಾಜಕಾರಣವನ್ನು ನಿರ್ಮಿಸಿಕೊಂಡು ಬಂದಿದ್ದೇವೆಂದು ಸಾರಿ ಹೇಳುತ್ತಿದ್ದರೋ ಅವರೂ ಸಹ ನನ್ನ ಮಿತ್ರರು, ಲೋಹಿಯಾ ಅವರ ಅನೇಕ ವ್ಯಾಖ್ಯಾನವನ್ನು ಅನೇಕ ವೇದಿಕೆಯ ಮೇಲೆ ಮಾಡುತ್ತಿದ್ದರೋ ಯಾವ ಲೋಹಿಯ ಅವರು ಅತ್ಯಂತ ಮಾನಸಿಕವಾದಂಥ ಕಳವಳವನ್ನು, ಭ್ರಷ್ಟಾಚಾರದ ಬಗ್ಗೆ ಇಟ್ಟಿದ್ದರೋ ಅಂಥ ಮೂಲದಿಂದ ಬಂದವರನ್ನು ಅಧ್ಯಕ್ಷರನ್ನಾಗಿ ಮಾಡಿದ್ದೀರಿ.

ಅವರನ್ನು ಇವತ್ತು ಏನ್ರಿ ಭ್ರಷ್ಟಾಚಾರ ಎಂದರೆ ಭ್ರಷ್ಟಾಚಾರ ಅದು ಸಾರ್ವಜನಿಕವಾದುದು, let us accept it ಎನ್ನುವ ರೀತಿಯಲ್ಲಿ ಹೇಳಿದ್ದಾರೆ. ಪ್ಲೇಗ್ ಬಂದಿದೆ ಎಂದು ಹೇಳಿದರೆ, ಏನ್ರಿ ಎಲ್ಲಕಡೆ ಪ್ಲೇಗ್ ಇರುವಂಥದ್ದು let us accept it ಎಂದು ಹೇಳಿ ಕ್ಯೂರ್ ಮಾಡುವಂಥ ಪ್ರಯತ್ನ ಮಾಡುತ್ತಿಲ್ಲ. ಆದ್ದರಿಂದಲೇ ಯಾವ ಇಬ್ಬರು ಅಧಿಕಾರಿಗಳ ಮೇಲೆ ಸಿ. ಓ. ಡಿ. ಪ್ರೋಬ್ ಇದೆಯೋ ಅಂಥ ಅಧಿಕಾರಿಗಳಿಗೆ ಪ್ರೊಮೋಷನ್ ಕೊಟ್ಟು ಜನರಲ್ ಮ್ಯಾನೇಜರ್ ಮಾಡಿದರೆ ತಪ್ಪೇನಿದೆ, ಯಾರು ಮಾಡುತ್ತಿಲ್ಲ ಎಂದು ಹೇಳತಕ್ಕ ದಾರ್ಷ್ಟ್ಯ, ಅದರ ಹಿಂದಿರುವ ನಿರ್ಲಕ್ಷ್ಯ ಅಥವಾ ಅದರ ಹಿಂದಿರುವ ಹೆಮ್ಮೆಯ ಪ್ರಾತಿದೆಯಲ್ಲ ಇದು ಶೋಭೆಯಲ್ಲ. ತಾವು ಪ್ರಶ್ನೆ ಮಾಡಿದಾಗಲೇ ಇದನ್ನು ಉತ್ತರವಾಗಿ ಹೇಳಿದ್ದಾರೆಂದರೆ ತಮ್ಮ ಇಲಾಖೆಯ ಆಗುಹೋಗುಗಳ ಮೇಲೆ ತಮಗೆ ಎಷ್ಟು ಹಿಡಿತ ಇದೆ ಎಂಬ ಪ್ರಶ್ನೆಯನ್ನು ಮೂಲಭೂತವಾಗಿ ಕೇಳಬೇಕಾಗಿದೆ. ತಮಗೆ ಹಿಡಿತ ಇಲ್ಲದೇ ಇರುವುದಕ್ಕೆ ಕಾರಣ ಇರಬಹುದು. ನಾನೊಬ್ಬ ಅಧಿಕಾರಸ್ಥನಾಗಿ ಈ ಸಭೆಯಲ್ಲಿ ಪ್ರಶ್ನೆ ಮಾಡಬೇಕಾಗುತ್ತದೆ, ತಮ್ಮನ್ನು ನಾವು ವಿಧಾನ ಸಭೆಯಲ್ಲಿ ಮತ್ತು ಕಚೇರಿಯಲ್ಲಿ ಕಾಣುವುದು ಬಹಳ ವಿರಳವಾಗುತ್ತದೆ. ತಮ್ಮ ಮನೆಯಲ್ಲಿ ಕಾಣುವುದು ಬಹಳ ವಿರಳವಾಗುತ್ತದೆ. ಆದರೆ ತಮಗೆ ನೀಡಿರುವ ಜವಾಬ್ದಾರಿ ಬಗ್ಗೆ ತಾವು ಹೆಚ್ಚು ಜವಾಬ್ದಾರಿಯುತವಾಗಿ ಇಲ್ಲದೇ ಇರುವುದರಿಂದ ತಮ್ಮ ಇಲಾಖೆಯ ಜನರೂ ಸಹ ಬೇಜವಾಬ್ದಾರಿಯಿಂದ ಇರುವುದಕ್ಕೆ ಮೂಲಭೂತವಾಗಿ ಕಾರಣವಾಗಿದೆಯೆಂದು ಸ್ಪಷ್ಟವಾಗಿ ಹೇಳ

ಬೇಕಾಗುತ್ತದೆ. ನಿಮಗೆ ಕೇವಲ ರಾಜಕಾರಣ ಮಾಡುವುದು ಬೇಕಾಗಿದೆ. ತಾವು ಟೂರಿಸಂ ಮಂತ್ರಿಗಳಾಗಿರುವುದರಿಂದ ಟೂರ್ ಮಾಡುತ್ತಿದ್ದಾರೆಂದು ಮಾನ್ಯ ಸದಸ್ಯರು ಹೇಳುತ್ತಿದ್ದಾರೆ. ಅದೂ ಕೂಡ ಒಮ್ಮೊಮ್ಮೆ ಎಷ್ಟು ಗೋಪ್ಯವಾಗಿ ಇರುತ್ತದೆ ಎಂದರೆ, ವಿಶ್ವಕನ್ನಡ ಸಮ್ಮೇಳನ ಆಯಿತು. ನನ್ನ ನೆನಪು ಸರಿಯಾಗಿದ್ದರೆ ಸುಮಾರು ಡಿಸೆಂಬರ್ ಇಪ್ಪತ್ತನಾಲ್ಕೋ ಏನೋ ತಾವೇನೋ ಮದ್ರಾಸಿಗೆ ಹೋಗಿದ್ದೀರಿ ಎಂದು ಮನೆಗೆ ಫೋನ್ ಮಾಡಿದಾಗ ಹೇಳಿದರು. ಆದರೆ ತಮ್ಮ ವೇರಬೌಟ್ಸ್ ಯಾರಿಗೂ ಗೊತ್ತಾಗಿಲ್ಲ. ತಾವು ಎಲ್ಲಿ ಹೋಗಿದ್ದೀರಿ ಎಂದು ಯಾರಿಗೂ ಗೊತ್ತಾಗಿಲ್ಲ. ನಾನು ಹೇಳುತ್ತೇನೆ, ಚೆಲುವ ಕನ್ನಡ ನಾಡನ್ನು ಎಲ್ಲಿ ಪ್ರಿಂಟ್ ಮಾಡಿದ್ದರೋ ಆ ಚೆಲುವೆ ನಾಡಿಗೆ ಹೋಗಿದ್ದೀರಿ. ಸಿಂಗಪುರಕ್ಕೆ ಹೋಗಿದ್ದೀರಿ. ಅದನ್ನೂ ಸಹ ಅಧಿಕೃತವಾಗಿ ಹೇಳದೆ, ಪ್ರಕಟಣೆ ಮಾಡದೆ, ತಮ್ಮ ಟೂರಿಸಂ ಕೇವಲ ದೇಶಕ್ಕೇ ಸೀಮಿತಗೊಳಿಸದೆ ವಿದೇಶಕ್ಕೂ ಸೀಮಿತಗೊಳಿಸುವ ಒಂದು ಹಿರಿಮೆಯನ್ನು ತಾವು ಸಂಪಾದನೆ ಮಾಡಿದ್ದೀರಿ. ನಾನು ಹೇಳಿದ್ದು ತಪ್ಪು ಎಂದರೆ ದಯವಿಟ್ಟು ಸರಿಯಲ್ಲ ಎಂದರೆ ತಿದ್ದಿಕೊಳ್ಳುವುದಕ್ಕೆ ನಾನು ತಯಾರಿದ್ದೇನೆ.

ಶ್ರೀ ಎಸ್. ಆರ್. ಬೊಮ್ಮಾಯಿ.—ಅವರು ಪ್ರವಾಸ ಮಾಡಿದ್ದು ಯಾರಿಗೂ ಗೊತ್ತಾಗಿಲ್ಲ ಎಂದು ಹೇಳಿದ್ದು ಸರಿಯಲ್ಲ. ಕೆಲವರಿಗಾದರೂ ಗೊತ್ತಿದೆ.

ಶ್ರೀ ಕೆ. ರಾಮಪ್ಪ.—ಮನೆಯವರಿಗೂ ಗೊತ್ತಿದೆಯೋ ಇಲ್ಲವೋ ನಂಬಿಕೆ ಇಲ್ಲ. ಅವರಿಗೂ ಹೇಳಿದ ಹಾಗಿಲ್ಲ ಅವರು

ಶ್ರೀ ಬಿ. ಎ. ಉಮರಬ್ಬ.—ಒಂದು ರೀತಿಯ ರಂಗುರಂಗಿನ ಜೀವನದ ಅಲೆಗಳಲ್ಲಿ ಹಾದುಬಂದಂಥ ಇತಿಹಾಸದ ತಾವು ಇಂಥ ರಂಗುರಂಗಿನ ರಂಗೂನಿಗೆ ಹೋದದ್ದು ತಪ್ಪು ಎಂದು ಹೇಳುವುದಿಲ್ಲ. ಆದರೆ ಹೋದದ್ದು ಏತಕ್ಕೆ ? ಅಲ್ಲಿ ಏನು ಕಾರ್ಯಕ್ರಮಗಳು ತಮ್ಮಿಂದ ನಡೆಯಿತು ? ಮೊನ್ನೆ ತಾನೆ ಮುಖ್ಯ ಮಂತ್ರಿಗಳು ಹೇಳಿದರು ಯಾವ ಯಾವ ಸಂದರ್ಭದಲ್ಲಿ ವಿದೇಶಕ್ಕೆ ಏಕೆಂದರೆ ತಾವು ಹೆಚ್ಚು ಹೋಗಬೇಕು. ತಾವು ಸಿಂಗಪುರ್, ಜಪಾನ್, ಹಾಂಕಾಂಗ್, ಮತ್ತು ಬಾಂಕಾಂಗ್‌ಗೆ ಹೋದಾಗ ತಮ್ಮಿಂದಲೇ ಹೆಚ್ಚು ಜನ ಆಕರ್ಷಿಸಲ್ಪಟ್ಟು ವಿದೇಶದಿಂದ ನಮ್ಮ ದೇಶಕ್ಕೆ ಪ್ರವಾಸಿಗರು ಬಂದರೆ ಅದು ಬಹಳ ದೊಡ್ಡ ಕೊಡುಗೆ ಎಂದು ನಾವು ಸ್ವೀಕಾರ ಮಾಡುತ್ತೇವೆ. ಆದರೆ ನಿಮ್ಮ ಇಲಾಖೆಯ ಬಗ್ಗೆ ಕೂಡ ಸ್ವಲ್ಪ ಗಂಭೀರವಾಗಿ ಇರಬೇಕು. ಸಣ್ಣ ಪುಟ್ಟ ದೋಷಗಳಾದರೆ ಹೆಚ್ಚಿನ ಅಪಾಯ ಆಗಲಿಕ್ಕಿಲ್ಲ. ಒಬ್ಬ ವೈದ್ಯ ಮಾಡುವ ಚಿಕಿತ್ಸೆಯಲ್ಲಿ ಹೆಚ್ಚುಕಡಿಮೆ ಆದರೆ ಒಬ್ಬ ವ್ಯಕ್ತಿ ಸಾವಿಗೆ ಕಾರಣ ಆಗಬಹುದು. ಆದರೆ ಒಬ್ಬ ಇಂಜಿನಿಯರ್ ಮಾಡುವುದರಲ್ಲಿ ಹೆಚ್ಚುಕಡಿಮೆ ಆದರೆ ಆ ರೂಫ್ ಕೆಳಗೆ ಇರುವವರೆಲ್ಲರೂ ಹೋಗುವ ಪರಿಸ್ಥಿತಿ ಆದೀತು. ಕಳೆದ ಸಲ ಕರ್ನಾಟಕ ರಾಜ್ಯದಲ್ಲಿ ತಯಾರಾದಂಥ ಚಲನಚಿತ್ರಗಳಿಗೆ ಸಬ್ಸಿಡಿ ಹೆಚ್ಚಿಸಿದ್ದೇವೆ ಎಂಬ ಘೋಷಣೆ ಕೊಟ್ಟು ಚಪ್ಪಾಳೆ ಹೊಡೆಸಿಕೊಂಡಿರಿ. ಅದರ ಜೊತೆಗೆ ಕರ್ನಾಟಕದಲ್ಲಿ ತಯಾರಾದ ಎಲ್ಲ ಚಿತ್ರಗಳಿಗೆ ಶೇಕಡ ಇಂತಿಷ್ಟು ತೆರಿಗೆ ವಿನಾಯಿತಿ ಕೊಡುತ್ತೇವೆಂಬ ಘೋಷಣೆ ಕೊಟ್ಟಿರಿ. ಘೋಷಣೆ ಬಜೆಟ್‌ನಲ್ಲಿ ಮತ್ತು ಪತ್ರಿಕೆಗಳಲ್ಲಿ ಬಂದರೆ ಸಾಲದು. ಇಷ್ಟರವರೆಗೆ ಸರ್ಕಾರಿ ಆಜ್ಞೆ ತಾವು ಮಾಡಿದ್ದೀರಾ ? ಯಾವ ಘೋಷಣೆಯಾಗಲೀ ಸರ್ಕಾರದ ಆಜ್ಞೆ ಮೂಲಕ ಕಾರ್ಯಾನುಷ್ಠಾನಕ್ಕೆ ಬರಬೇಕಾಗುತ್ತದೆ.

ಶ್ರೀ. ಜೀವರಾಜ್ ಆಳ್ವ.—ಆಗಿದೆ

ಶ್ರೀ ಬಿ. ಎ. ಉಮರಬ್ಬ.—ಇವತ್ತು ಮಾಡಿದ್ದೀರಾ ?

ಶ್ರೀ. ಬಿ. ಎ. ಜೀವರಾಜ ಆಳ್ವ.—ಒಟ್ಟಿಗೆ ಉತ್ತರ ಕೊಡುತ್ತೇನೆ.

ಶ್ರೀ ಬಿ. ಎ. ಉಮರಬ್ಬ.—ತಾವು ಜಿ. ಓ. ಮಾಡಲಿಲ್ಲ ಎಂಬ ಒಂದೇ ಕಾರಣಕ್ಕಾಗಿ ಟೋಟಲ್ ಫಿಲಂ ಇಂಡಸ್ಟ್ರೀಸ್ ಗೊಂದಲವಾಯಿತು. ಯಾವುದನ್ನು ಕೊಡುಗೆಯಾಗಿ ಕೊಡುತ್ತಾರೋ, ಉತ್ತೇಜಕವಾದ ಕಾರ್ಯಕ್ರಮ ಎಂದು ಘೋಷಣೆ ಮಾಡುತ್ತಾರೋ ಅದಕ್ಕೆ ಕಾರ್ಯದ ವಿಳಂಬ ಇಲ್ಲದೆ, ಕಾರ್ಯದ ಲೋಪ ಇಲ್ಲದೆ ತಕ್ಷಣ ಜಿ ಓ. ಮಾಡುವುದರ ಮೂಲಕ ಅದರ ಪ್ರಯೋಜನ ತಕ್ಷಣ ಸಂಬಂಧಪಟ್ಟವರಿಗೆ ಸಿಗುವಂತೆ ಮಾಡಿದಿದ್ದರೆ ಕೇವಲ ಘೋಷಣೆಯನ್ನು ನಂಬಿ ಕೂರಬೇಕಾಗುತ್ತದೆ. ನಿಮ್ಮ ಘೋಷಣೆ ಕಾರ್ಯಾನುಷ್ಠಾನಕ್ಕೆ ಬರುವಾಗ ನೀವು ಕೊಡುವ ಸವಲತ್ತುಗಳು ಸವಕಲು ನಾಣ್ಯವಾಗಬಹುದು. ಅದನ್ನು ನಂಬಿದ ವ್ಯಕ್ತಿ ಇಲ್ಲದೇ ಇರುವ ಪರಿಸ್ಥಿತಿ ಆದೀತು. ಯಾವುದೇ ಕ್ರೀಡಾ

ಸಂಸ್ಥೆಗೆ ಸಹಾಯಧನ ಕೊಡದೇ ಇರುವುದು ಮತ್ತು ಕೊಡುವ ಬಗ್ಗೆ ದೊಡ್ಡ ಮನಸ್ಸು ಮಾಡದೇ ಇರುವುದು ಬೇಸರದ ವಿಚಾರ. ತಾವು ನೀಡಿದ್ದರೆ ಯಾವ ಕ್ರೀಡಾ ಸಂಸ್ಥೆಗಳಿಗೆ ಎಷ್ಟು ಕೊಟ್ಟಿದ್ದೀರಿ ಎಂದು ಕೇಳುತ್ತೇನೆ. ಅಷ್ಟೇ ಅಲ್ಲ. ತಮ್ಮ ಹುಟ್ಟು ಜಿಲ್ಲೆಯಾದ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ತಾವೇ ಉದ್ಘಾಟಿಸಿದ ಕರ್ನಾಟಕ ರಾಜ್ಯ ಕ್ರೀಡಾ ಸಮ್ಮೇಳನ ನಡೆಯಿತು. ಅದಕ್ಕೆ ಧನಸಹಾಯ ಬೇಕು ಎಂದು ಕೋರಿಕೆ ಸಲ್ಲಿಸಿದರು. ಅದಕ್ಕೆ ಧನಸಹಾಯ ಕೊಡುವ ದೊಡ್ಡ ಮನಸ್ಸು ಮಾಡಲಿಲ್ಲವೆಂದಾಗ ತಮ್ಮ ಹುಟ್ಟೂರನ್ನೇ ನಿರ್ಲಕ್ಷ್ಯ ಮಾಡುವ ತಾವು ಇತರ ಭಾಗದ ಪ್ರದೇಶದ ಬಗ್ಗೆ ಎಷ್ಟರಮಟ್ಟಿಗೆ ಲಕ್ಷ್ಯ ಮಾಡುತ್ತೀರಿ ಎಂಬ ಅನುಮಾನಕ್ಕೆ ಕಾರಣವಾದೀತು ಎಂಬುದನ್ನು ತಮ್ಮ ಗಮನಕ್ಕೆ ತರುತ್ತಿದ್ದೇನೆ. ಕರ್ನಾಟಕ ರಾಜ್ಯ ಕ್ರೀಡಾ ಪರಿಷತ್ತಿನಲ್ಲಿ ೨೧ ಜನ ನೌಕರರು ದಿನಗೂಲಿಯಲ್ಲಿ ಕೆಲಸ ಮಾಡುತ್ತಿದ್ದಾರೆ. ಇದರಿಂದ ಬೇಸರಗೊಂಡು ಕೆಲವರು ಬೇರೆ ಬೇರೆ ಕಡೆ ಕೆಲಸ ಹುಡುಕಿಕೊಂಡು ಹೋದರು. ಈಗ ೧೪ ಮಂದಿ ಉಳಿದಿದ್ದಾರೆ. ಆ ಬಗ್ಗೆ ಅವರು ತಮಗೆ ಪದೇಪದೇ ಮನವಿಗಳನ್ನು ಸಲ್ಲಿಸುತ್ತಿದ್ದಾರೆ. ಅವರು ಕ್ವಾಲಿಫೈಡ್ ಆಗಿದ್ದಾರೆ. ಮಾಸ್ಟರ್ ಡಿಗ್ರಿ ಮಾಡಿರುವವರು, ಡಿಪ್ಲೊಮಾ ಮಾಡಿರುವವರು ದಿನಗೂಲಿಯಲ್ಲಿ ದುಡಿಯುತ್ತಿದ್ದಾರೆ ಎಂದರೆ ಜೀತ ಪದ್ಧತಿಯನ್ನು ತಮ್ಮ ಇಲಾಖೆಯಲ್ಲಾದರೂ ಉಳಿಸಿಕೊಂಡು ಬರುವ ಮನೋಭಾವ ಇದೆ ಎಂದು ದುಃಖದಿಂದ ಹೇಳಬೇಕಾಗಿದೆ, ಅವರ ಬದುಕು, ಭವಿಷ್ಯ ಮತ್ತು ವಯಸ್ಸಿನ ಬಗ್ಗೆ ಯೋಚನೆ ಮಾಡಿ ಅವರನ್ನು ಇಲಾಖೆಯಲ್ಲಿ ತೆಗೆದುಕೊಳ್ಳುವ ದೊಡ್ಡ ಮನಸ್ಸು ಮಾಡಬೇಕೆಂದು ಒತ್ತಾಯಪಡಿಸುತ್ತಿದ್ದೇನೆ.

ಭಾಷೆ ಎನ್ನುವುದು ಅತ್ಯಂತ ಸಂವೇದನೆಯ ವಿಷಯ. ಭಾಷಾವಾರು ಪ್ರಾಂತ್ಯಗಳಾಗಿ ಮಾಡಿರುವಾಗ ತಮ್ಮ ಇಲಾಖೆ ಗಡಿ ಪ್ರದೇಶದ ಬಗ್ಗೆಯೂ ಹೆಚ್ಚಿನ ಗಮನ ಕೊಡಬೇಕಾಗುತ್ತದೆ. ಕಾಸರಗೋಡಿನ ಕನ್ನಡ ಜನರ ದುಡಿತ ಮಿಡಿತ ಏನಿದೆ ಅದರ ಬಗ್ಗೆ ಕಿಂಚಿತ್ತಾದರೂ ಕಾಳಜಿ ನಿಮ್ಮ ಇಲಾಖೆಯಲ್ಲಿ ಇಲ್ಲ, ಯಾವುದೇ ರೂಪದಲ್ಲಿ ಅದರ ಬಗ್ಗೆ ಆಸಕ್ತಿ ವಹಿಸುತ್ತಿಲ್ಲ ಎಂದು ದು:ಖದಿಂದ ಹೇಳಬೇಕಾಗಿದೆ. ಬೆಳಗಾವಿಯಲ್ಲಿ ಕನ್ನಡದ ಫಲಕಗಳಿಗೆ ಡಾಂಬರು ಹಚ್ಚುವಂಥ ಕೆಲಸ, ಕನ್ನಡ ಫಲಕಗಳನ್ನು ಕಿತ್ತೆಸೆಯುವಂಥ ಕೆಲಸ ಆಗುತ್ತಿದೆ. ನಾನು ಲಿಂಗ್ವಿಸ್ಟಿಕ್ ಫೆನೆಟಿಕ್ ಆಗಿ ಮಾತನಾಡುತ್ತಿಲ್ಲ. ನನ್ನ ಮಾತೃಭಾಷೆ ಬೇರೆಯಾದರೂ ಮಾತನಾಡುವಾಗ ನನಗೆ ಭಾಷೆ ಬಗ್ಗೆ ಇರುವ ಮೂಲಭೂತವಾದ ಇಚ್ಛೆ ನನ್ನನ್ನು ಮಾತನಾಡಿಸುತ್ತದೆ. ತಮ್ಮ ಹೇಳಿಕೆಗಳು, ಪತ್ರಿಕೆಗಳಲ್ಲಿನ ಫೋಟೊಗಳು ಒಂದೇ ಕ್ಷೇತ್ರಕ್ಕೆ ಸೀಮಿತವಾಗಿದ್ದು ತಮ್ಮ ಇಲಾಖೆ ಮಾಡಬೇಕಾದ ಇನ್ನಿತರ ಕಾರ್ಯಗಳು ತೀರಾ ನಿರ್ಲಕ್ಷ್ಯವಾಗಿರುವುದು ಕನ್ನಡದ ಬಗ್ಗೆ ತಾವು ತೋರಿಸುವ ನಿರ್ಲಕ್ಷ್ಯ ಎಂದು ಭಾವಿಸುತ್ತೇನೆ. ಕನ್ನಡ ಕಾವಲು ಸಮಿತಿ ಮಾಡಿದ್ದೀರಿ. ಅನೇಕ ಸರ್ಕ್ಯುಲರ್‌ಗಳನ್ನು ನೋಡಿದ್ದೇನೆ. ಇದು ಕೇವಲ ಬೆಂಗಳೂರಿನ ನೆಲದಲ್ಲಿ ಹೊರಳಾಡುವಂಥದ್ದಲ್ಲ. ಕನ್ನಡದ ಗಡಿಯನ್ನು ಕಾವಲು ಮಾಡುವ ಪ್ರಯತ್ನವೂ ಮಾಡಬೇಕು. ಈ ಕಡೆ ದೃಷ್ಟಿ ಹರಿಸುವ ಪ್ರಯತ್ನ ಮಾಡಬೇಕೆಂದು ಈ ಸಂದರ್ಭದಲ್ಲಿ ಒತ್ತಾಯಪಡಿಸುತ್ತಿದ್ದೇನೆ. ಒಲಂಪಿಕ್ಸ್ ಆಯಿತು. ಆಟಗಾರರನ್ನು ಮತ್ತು ಕೆಲವು ಪ್ರತಿನಿಧಿಗಳನ್ನು ಕಳುಹಿಸಿದ್ದೀರಿ. ಬೇರೆ ಬೇರೆ ಪ್ರತಿನಿಧಿಗಳು ಯಾರು ಹೋಗಿದ್ದರು ಅವರಿಗೆ ಸಂದಾಯವಾಗಬೇಕಾದ ಟಿ. ಎ. ಡಿ. ಎ. ಕೊಟ್ಟಿದ್ದೀರಿ. ಆದರೆ ಕ್ರೀಡಾಪಟುಗಳಿಗೆ ಸಲ್ಲಬೇಕಾದ ಹಣ ಸಲ್ಲಿದೆಯೆ ? ಅದುಸಲ್ಲದೇ ಇದ್ದರೆ ಕ್ರೀಡೆ ಬಗ್ಗೆ ಉತ್ತೇಜನ ಕೊಡುವ ಉದ್ದೇಶದಿಂದ ಸ್ಥಾಪಿಸಲ್ಪಟ್ಟ ಇಲಾಖೆ ಯುವಜನರಿಗೆ ಉತ್ತೇಜನ ಕೊಡುವ ಬದಲಾಗಿ ಅವರನ್ನು ನಿರುತ್ಸಾಹಿಗಳನ್ನಾಗಿ ಮಾಡಿ ಇನ್ನೊಮ್ಮೆ ಹೋಗಬೇಕು ಎಂದು ಹೇಳಿದಾಗ ಇದೇ ಸುದ್ದಿಯ ಮೂಲಕ ಒಲಿಂಪಿಕ್ಸ್ ಬೇಡ ಎಂದು ಮನೆಯಲ್ಲೇ ಕೂರುವ ಪ್ರಯತ್ನ ಮಾಡಬಹುದು. ಸಾಕ್ಷ್ಯಚಿತ್ರ ತಯಾರು ಮಾಡುವಾಗ ಅದರಲ್ಲಿ ಪರಿಣತಿ ಇರುವವರು, ಅನುಭವವಿರುವವರನ್ನು ಆರಿಸಿದರೆ ಮಾತ್ರ ಅಂಥ ಸಾಕ್ಷ್ಯಚಿತ್ರ ನೈಜವಾದ ಚಿತ್ರಗಳಾಗಿ ಬರುತ್ತವೆ, ಅದರ ಹಿನ್ನೆಲೆಯಲ್ಲಿರುವ ಉದ್ದೇಶ ಅರ್ಥಪೂರ್ಣವಾದೀತು. ಆದರೆ ತಮ್ಮ ಇಲಾಖೆಯಲ್ಲಿ, ದೂರದರ್ಶನದಲ್ಲಿ ವಾರ್ತೆ ಓದುವವರೊಬ್ಬರು ತಮಗೆ ಬೇಕಾಗಿದ್ದಾರೆನ್ನುವ ಕಾರಣಕ್ಕೆ ಒಂದು ಸಾಕ್ಷ್ಯ ಚಿತ್ರವನ್ನು ತಯಾರಿಸಿ ಎಂದು ಹೇಳಿ ಆಜ್ಞೆಯನ್ನು ಹೊರಡಿಸುತ್ತೀರೆಂದು ಹೇಳಿದರೆ— ಇದು ಅಷ್ಟು ಸರಿಯಾದುದಲ್ಲ,

ಅಧ್ಯಕ್ಷರು.— ೨೨ ನಿಮಿಷ ತಾವು ಮಾತನಾಡಿದ್ದೀರಿ.

ಶ್ರೀ ಬಿ.ಎ. ಉಮರಬ್ಬ —ಇನ್ನು ಒಂದೆರಡು ನಿಮಿಷ ಮಾತನಾಡುತ್ತೇವೆ. ಇನ್ನು ವಿಶ್ವಕನ್ನಡ ಸಮ್ಮೇಳನ. ಈ ವಿಶ್ವ ಕನ್ನಡ ಸಮ್ಮೇಳನದ ಬಗ್ಗೆ ಬಹಳಷ್ಟು ಚರ್ಚೆಗಳಾಗಿವೆ. ಆದರೆ ದುಃಖದಿಂದ

ಹೇಳುತ್ತಿದ್ದೇನೆ, ಗೋರ್ಕಲ್ಲ ಮೇಲೆ ಮಳೆ ಸುರಿದಂತಾಗಿದೆ. ಮಾಡುವುದನ್ನು ಮಾಡಿಬಿಟ್ಟಿದ್ದೀರಿ, ಆಗುಹೋಗುವುದು ಆಗಿಹೋಗಿಬಿಟ್ಟಿದೆ. ಮೈಸೂರಿನಲ್ಲಿ ರಸ್ತೆಯನ್ನು ಮಾಡಿಸಿದಿರಿ. ಮೈಸೂರು ಕಾರ್ಪೊರೇಷನ್ನಿಗೆ ೫೦ ಲಕ್ಷ ರೂಪಾಯಿಗಳನ್ನು ಕೊಡುತ್ತೇವೆಂದು [illegible] ಇರಿ. ಅದು ಒಂದು ಕಡೆಯಲ್ಲಿ ಬಿದ್ದಿದೆ ಇಷ್ಟೆಲ್ಲಾ ಬ್ಯಾಡ್ಜ್ ಬರೀ ೫೦ಲಕ್ಷ ಅಲ್ಲ, ಬೇರೆ ಬೇರೆ ರೀತಿಯ ಪುಸ್ತಕಗಳನ್ನು ಎಲ್ಲಾ ಪ್ರಕಟ ಮಾಡಿದ್ದೀರಿ. ನಿಮ್ಮ ವಿಶ್ವ ಕನ್ನಡ ಸಮ್ಮೇಳನಕ್ಕಾಗಿಯೇ ಪುಸ್ತಕಗಳನ್ನು ಯಾರ್ಯಾರ ಹತ್ತಿರ ಪ್ರಕಟಮಾಡಿಸಿದ್ದೀರೊ ಅವರ ಬಿಲ್‌ನಾದರೂ ಕಂಪ್ಲೀಟ್ ಆಗಿ ಪೇಮೆಂಟ್ ಮಾಡಬಾರದೇ? ಇದರ ಬಗ್ಗೆ ನಿಮಗೆ ನೋಟೀಸ್ ಬಂದಿದೆಯೇ ಎಂದು ಕೇಳುತ್ತಿದ್ದೇನೆ. ನಿಮ್ಮ ಡೈರೆಕ್ಟರ್ ಯಾರು ಇದ್ದಾರೋ ಅವರಿಗೆ ಯಾರಾದರೂ ಮುದ್ರಕರು ಕಳುಹಿಸಿದ್ದಾರೋ ನಮಗೆ ಹಣ ಬಂದಿಲ್ಲ ಎಂದು, ಈ ರೀತಿ ಅನ್ಯಾಯ ಆಗಿದೆ. ಕೆಲವರ ಹತ್ತಿರ ಅಫಿಡವಿಟ್ ಬರೆಸಿಕೊಂಡಿರಿ. ಇನ್ನು ಕೆಲವರ ಹತ್ತಿರ ಅಫಿಡವಿಟ್‌ನ್ನು ಬರೆಸಿಕೊಳ್ಳಲಿಲ್ಲ. ಕೆಲವರಿಗೆ ಸಾಗಾಣಿಕೆ ಹಣವನ್ನು ಕೊಟ್ಟಿರಿ, ಕೆಲವರಿಗೆ ಹಣ ಕೊಟ್ಟಿಲ್ಲ. ಕೆಲವರಿಗೆ ತಮಗೆ ಬೇಕೆನ್ನುವವರಿಗೆ ೨೫ ಪುಸ್ತಕ ನೀವೇ ಪಬ್ಲಿಷ್ ಮಾಡಿ ಎಂದು ಹೋಲ್‌ಸೇಲ್ ಅವರಿಗೆ ಕೊಟ್ಟಿದ್ದೀರಿ. ಅಶ್ವಥ್ ಪ್ರಿಂಟರ್ಸ್ ಬೇರೆ ಬೇರೆ ಹೆಸರಿನಲ್ಲಿ ತೆಗೆದುಕೊಂಡಿದ್ದಾನೆ ಅದನ್ನು ಬೇಕಾದರೆ ನೋಡಿ ನೀವು. ಇನ್ನು ನೀವು ಕೊಟ್ಟ ಮೆಟೀರಿಯಲ್ಸ್ ಮೇಲೆ ೫ ಪರ್ಸೆಂಟ್ ವೇಸ್ಟೇಜ್ ಕೊಡುತ್ತೇವೆಂದು ನಿಮ್ಮ ಡೈರೆಕ್ಟರೇ ಹೇಳಿದರು. ಆದರೆ ನಿಮ್ಮ ಇಲಾಖೆಯ ಸುತ್ತೋಲೆಯಲ್ಲಿ ಕೇವಲ ೨.೫ ಪರ್ಸೆಂಟ್ ಎಂದು ಬಂದಿದೆ. ಮತ್ತೆ ಅವಸರ ಅವಸರವಾಗಿ ಪುಸ್ತಕಗಳನ್ನು ಪ್ರಿಂಟ್ ಮಾಡುವ ಪ್ರಯತ್ನಗಳನ್ನು ಅಲ್ಲಿ ಮಾಡಿದ್ದಾರೆ. ಮತ್ತೆ ವಿಶ್ವ ಕನ್ನಡ ಸಮ್ಮೇಳನಕ್ಕೆ ಸಾರಿಗೆ ಸಂಸ್ಥೆಯ ಆರೋಗ್ಯ ಇಲಾಖೆಯ ಬಹಳ ವಾಹನಗಳನ್ನು ಬಳಸಿಕೊಂಡಿದ್ದೀರಿ. ಅದರ ಆ ಲೆಕ್ಕ [illegible] ನಿಮ್ಮ ಇಲಾಖೆಯ ಖರ್ಚಿನಲ್ಲಿ ಸೇರಿದೆಯೇ ಎಂದು ಕೇಳಬೇಕಾಗಿದೆ ಇಷ್ಟು ಮಾತ್ರವಲ್ಲ, ಬಳಸಿಕೊಂಡ ಬಸ್‌ಗಳಲ್ಲಿ ಯಾರು ಕನ್ನಡ ಸಂಸ್ಕೃತಿಯಲ್ಲಿ ಕಾಳಜಿ ಇರುವ ಜನ ಇದ್ದರು, ಪ್ರೀತಿ ಇರುವ ಜನ ಇದ್ದರು, ಆಹ್ವಾನಿತ ಜನರು ಇದ್ದರು—ಆ ಜನರು ಹೋಗಿ ಬರಲು ಅವಕಾಶ ಮಾಡಿದ್ದಲ್ಲ. ಯಾರು ನಿಮಗೆ ಜೈ ಎಂದು ಹೇಳುವಂತಹ ಜನರು ಇದ್ದರು ಅವರನ್ನು ತೆಗೆದುಕೊಂಡುಹೋಗಿ ಡೆಲಿಗೇಟ್ಸ್ ಎಂದು ಹೇಳಿ ಸುಂದರವಾದ ಬ್ಯಾಡ್ಜ್‌ಗಳನ್ನು ಅವರಿಗೆ ಮೈಸೂರು ನಗರದಲ್ಲಿ ಹಾಕಿ ಓಡಾಡಿಸಿದ್ದಾರೆ, ನಾವು ಏನು ಮಾಡುವುದು, ಅಲ್ಲಿ ಬ್ಯಾಡ್ಜ್ ಫೋಟೋ ಎಲ್ಲಾ ತೋರಿಸಿದರೆ ಅದೆಲ್ಲಾ ನಡೆಯುತ್ತದೆಂದು ಹೊಸಬರಾಗಿರುವ ನಮಗೆ ಗೊತ್ತಾಗಲಿಲ್ಲ. ಇಲ್ಲದಿದ್ದರೆ ನಿಮ್ಮ ಟೇಪ್‌ಗಳು ವಿಶ್ವ ಕನ್ನಡ ಸಮ್ಮೇಳನದ್ದು ನಿಮ್ಮ ಫೋಟೋಗಳನ್ನು ತಂದು ಇಲ್ಲಿ ರಾಶಿ ಹಾಕುತ್ತಿದ್ದೆ. ಏನು ಕನ್ನಡ? ಏನು ಪ್ರಾತಿನಿಧ್ಯ? ಇವರೇನು ಪಂಚತಾರಾ, ರಾಜೇಂದ್ರ ವಿಲಾಸ್ ಹೋಟೆಲ್‌ನಲ್ಲಿ ಕೂರುವಂತಹ ಪ್ರಾತಿನಿಧ್ಯವನ್ನು ಹೊಂದಿರತಕ್ಕಂತಹ ಜನರು? ಅಂಥವರುಗಳ ಫೋಟೋಗಳನ್ನು ತಂದು ನಿಮ್ಮ ಎದುರುಗಡೆ ಇಟ್ಟಿದ್ದೆ ಆಗಿದ್ದರೆ ನಿಮಗೇ ಗೊತ್ತಾಗುತ್ತಿತ್ತು. ಈ ರೀತಿ ಹಣದ ಪೋಲು ಆಗಿದೆ. ಮತ್ತೆ ನೀವು ಟ್ಯಾಬ್ಲೋಗಳನ್ನು ಮಾಡಿಸಿದ್ದೀರಿ. ಒಂದೊಂದಕ್ಕೆ ೩೦ ಸಾವಿರ ರೂಪಾಯಿ ಆಗಿದ್ದು ಯಾರೋ ಬೇಕಾದವರೊಬ್ಬರಿಗೆ ಕಾಂಟ್ರ್ಯಾಕ್ಟ್ ಕೊಟ್ಟು ಮಾಡಿಸಿದ್ದೀರಿ. ಮೆರವಣಿಗೆ ಹೊರಡುತ್ತಿದ್ದ ಹಾಗೆ ಮೊದಲನೇ ಟ್ಯಾಬ್ಲೋ ಮುರಿದು ಬಿದ್ದುಬಿಟ್ಟಿದೆ. ಇಂತಹವರ ಪೇಮೆಂಟ್ ಬಗ್ಗೆ ಯಾವ ತಾಪತ್ರಯವನ್ನೂ ಮಾಡಿಲ್ಲ. ಈ ರೀತಿ ಪ್ರತಿಯೊಂದರಲ್ಲೂ, ಹೆಜ್ಜೆಹೆಜ್ಜೆಯಲ್ಲೂ ಎಡವಿದ್ದೀರಿ. ಪ್ರಾಮುಖ್ಯ ವಿಷಯವೊಂದನ್ನು ಈ ಸದನದಲ್ಲಿ ನಾನು ಹಿಂದೆ ಕೂಡ ಎತ್ತಿದ್ದೆ. ಆಗ ಸರ್ಕಾರದ ಪರವಾಗಿ ಉತ್ತರ ಕೊಟ್ಟ ಮಾನ್ಯ ಜೆ.ಹೆಚ್. ಪಟೇಲರು ಅವರು ಅದರ ಬಗ್ಗೆ ಸರ್ಕಾರ ಗಂಭೀರವಾಗಿ ಪರಿಶೀಲಿಸುತ್ತದೆನ್ನುವ ಮಾತನ್ನು ಸಹಾ ಹೇಳಿದ್ದರು. ಆದರೆ ಇದು ಈಗಾಗಲೇ ಇಡೀ ಕರ್ನಾಟಕ ರಾಜ್ಯದಲ್ಲಿ ಮಾತ್ರ ಅಲ್ಲ ಈ ದೇಶದ ಅನೇಕ ಪತ್ರಿಕೆಗಳು ಹಾಗೂ ಮ್ಯಾಗಜೀನ್‌ಗಳಲ್ಲಿ ಚರ್ಚಿಸಲ್ಪಟ್ಟ ವಿಷಯವಾಗಿದೆ, ಅನೇಕ ಮಂದಿ ಹಾಮಾನಾ ಆಗಿರಬಹುದು, ಕೊ. ಚೆನ್ನಬಸಪ್ಪನವರಾಗಿರಬಹುದು, ಸಾಹಿತ್ಯ ಕ್ಷೇತ್ರದಲ್ಲಿ ಆಳ ಅಧ್ಯಯನ ಮಾಡಿದಂತಹ ಜನರು ಸಹ ಅದರಲ್ಲಿರುವ ವಿಚಾರಧಾರೆಗಳ ಬಗ್ಗೆ ಛೀಮಾರಿ ಹಾಕಿದ್ದನ್ನು ತಾವು ಓದಿರಬಹುದು. ಇವತ್ತು ಪ್ರಜಾವಾಣಿಯಲ್ಲಿ ಸಹಾ ಇದರ ಬಗ್ಗೆ ಬಂದಿದೆ. ಆದುದರಿಂದ ವಿಶ್ವ ಕನ್ನಡ ಸಮ್ಮೇಳನದ ಅಂಗವಾಗಿ ಪ್ರಕಟಿಸಲ್ಪಟ್ಟ 'ಚೆಲುವ ಕನ್ನಡ ನಾಡು' ಇಂದು ಕನ್ನಡದ ಮಾನೆಮಾತಾಗಿದೆ. ಇವತ್ತು ಉಳಿದಿರತಕ್ಕಂತಹ ಪುಸ್ತಕಗಳನ್ನು ಶಾಸಕರಿಗೆ ಪುಕ್ಕಟೆಯಾಗಿ ಮೊದಲು ಹಂಚಿ ತಾವು ಸಿಕ್ಕಿಕೊಂಡರೇ ವಿನಃ ಇವತ್ತು ತಮ್ಮ ನಿರ್ದೇಶನಾಲಯದಲ್ಲಿ ಅದು ರಾಶಿರಾಶಿಯಾಗಿ ಬಿದ್ದಿದೆಯೆಂಬುದು ನನಗೆ ಗೊತ್ತುಂಟು. ಇವತ್ತು ಇವುಗಳ ಹಂಚಿಕೆಯನ್ನು ತಾವು ನಿಲ್ಲಿಸಿದ್ದೀರಾ? ಇವತ್ತು ಹಂಚಿಕೆಯನ್ನು ನಿಲ್ಲಿಸುವುದು ಅಷ್ಟೇ ಅಲ್ಲ.

ಶ್ರೀ ಕೆ.ಹೆಚ್. ಪಾಟೀಲ್.—ಶಾಸಕರಿಗೆ ಪ್ರತ್ಯೇಕವಾಗಿ ಅವರಿಗೆ ಯಾರು ಬೇಕೋ ಅವರಿಗೆ ಕೊಟ್ಟಿದ್ದಾರೆ. ನಮಗೆ ಆ ಪುಸ್ತಕವನ್ನು ಕೊಟ್ಟಿಲ್ಲ.

ಶ್ರೀ ಬಿ.ಎ. ಉಮರಬ್ಬ.—ಈ ಪುಸ್ತಕಗಳನ್ನು ಹಂಚುವ ಕೆಲಸ ಪ್ರಾರಂಭ ಮಾಡಿದಾಗ ಪ್ರಥಮ ಚುಂಬನಂ ದಂತ ಭಗ್ನಮ್ ಆಯಿತು. ಮಾರನೇ ದಿನವೇ ನಾನು ಆ ಪುಸ್ತಕವನ್ನು ಓದಿದೆ.

ಶ್ರೀ ಕೆ.ಹೆಚ್. ಪಾಟೀಲ್.—ಅವರಿಗೆ ಬಹಳ ಪ್ರೀತಿಯಿಂದ ಹೇಳುತ್ತಿದ್ದಾರೆ. ಅದಕ್ಕೆ ಅವರಿಗೆ ಸ್ಪೆಷಲ್ ಕಾಂಪ್ಲಿಮೆಂಟ್ಸ್ ಕೊಟ್ಟು ಸಿಕ್ಕಿಕೊಂಡರು. ಆದರೆ ನಮಗೆಲ್ಲಾ ಆ ಪುಸ್ತಕವನ್ನು ಕಳುಹಿಸಲೇ ಇಲ್ಲ.

ಶ್ರೀ ಬಿ. ಎ. ಉಮರಬ್ಬ.—ಬಾಕಿಯವರಿಗೆ ಹಂಚುವ ಪ್ರಯತ್ನವನ್ನು ಮಾಡದೇ ಇರುವ ಬಗ್ಗೆ ನಾನು ಮೊದಲೇ ಹೇಳಿದ್ದೇನೆ. ಈ ಪುಸ್ತಕಕ್ಕೆ ಮೌಲ್ಯವನ್ನು ನಿಗದಿ ಮಾಡುವಾಗ ೪೫೫ ರೂಪಾಯಿ ಮಾಡಿದ್ದಾರೆ. ಇಲ್ಲದಿದ್ದರೆ ಐದ್ನೂರು ರೂಪಾಯಿ ಎಂದು ಹೇಳುತ್ತೇವಲ್ಲಾ. ಆಗ ಅದು ಅರ್ಧ ಸಾವಿರ ಆಗುತ್ತದಲ್ಲಾ. ಬಾಟಾ ರೇಟ್. ೪೫೫ ರೂಪಾಯಿ ಪುಸ್ತಕದ ರೇಟ್ ಇದ್ದರೆ ಅದನ್ನು ಹಂಚುವುದಕ್ಕೆ ಸಾಧ್ಯವೇ ಇಲ್ಲ. ಅದನ್ನು ನಿಲ್ಲಿಸುವುದು ಒಳ್ಳೆಯದು. ಈ ಪುಸ್ತಕದ ಬಗ್ಗೆ ಆತ್ಮಸಾಕ್ಷಿಯಾಗಿ ನೋಡಿ ಇದು "ಹಣದ ಪೋಲು", "ಇತಿಹಾಸದ ಅಪಭ್ರಂಶ", ಸಾಹಿತಿಗಳು ಮತ್ತು ಸಾಹಿತ್ಯಕ್ಕೆ ಮಾಡಿರುವಂತ ಅಪಚಾರ" ಎನ್ನುವುದು ಸಾಹಿತ್ಯದ ಪರಿಜ್ಞಾನ ಇರುವವರಿಂದಲೂ ಕೂಡ ತಿಳಿದು ಕೊಂಡು ಇದನ್ನು ಹಿಂದೆ ತೆಗೆದುಕೊಳ್ಳುವ ಪ್ರಯತ್ನವನ್ನು ಮಾಡಬೇಕು ಹಾಗೂ ಹಿಂದೆ ತೆಗೆದುಕೊಳ್ಳಬೇಕು. ಬರೀ ಪ್ರಯತ್ನಕ್ಕೆ ಒಪ್ಪುವುದಕ್ಕೆ ಸಾಧ್ಯವಿಲ್ಲ. ಜೊತೆಗೆ ಇದು ಸಿಂಗಪೂರ್‌ನಲ್ಲಿ ಪ್ರಿಂಟ್ ಆಗಿದೆಯೆಂದರೆ ಅದಕ್ಕೆ ಇಂಡಿಯನ್ ರುಪೀಸ್ ಕೊಟ್ಟು ಮಾಡುವುದಕ್ಕೆ ಸಾಧ್ಯವಿಲ್ಲ. I have a basic question. Where you could be able to manage foreign exchange to pay for that book ? ಇಲ್ಲಿ ಖಾಲಿ ಮೊಳೆ ಜೋಡಿಸಿ ಅಲ್ಲಿ ಪ್ರಿಂಟ್ ಮಾಡಿಸಿದ್ದೀರಲ್ಲಾ ಈ ಪುಸ್ತಕಕ್ಕೆ ಫಾರಿನ್ ಎಕ್ಸ್‌ಚೇಂಜ್ ಎಲ್ಲಿಂದ ಬಂತು ? ಈ ಪುಸ್ತಕದ ಪ್ರೂಫ್ ನೋಡುವುದಕ್ಕೆ ಎಷ್ಟು ಜನ ವಿಮಾನದಲ್ಲಿ ತಿರುಗಾಡಿದ್ದೀರಿ ? ಅವರದ್ದು ಖರ್ಚು ಏನಾಯಿತು ?

ಅಧ್ಯಕ್ಷರು.—ಇದನ್ನೆಲ್ಲಾ ತಾವು ಹೋದ ಸಾರಿ ಹೇಳಿದ್ದೀರಿ.

ಶ್ರೀ ಬಿ.ಎ. ಉಮರಬ್ಬ.—ಹೋದಸಾರಿ ಇದನ್ನು ನಾನು ಹೇಳಿರಲಿಲ್ಲ. ತಾವು ಸಿಂಗಪೂರ್‌ಗೆ ಹೋಗಿದ್ದ ಸಂದರ್ಭದಲ್ಲಿ ಈ ಪುಸ್ತಕ ಬಂದಿತ್ತೇ ? ಅಥವಾ ತಾವೇ ಹೋಗಿ ಮತ್ತೆ ಈ ಪುಸ್ತಕವನ್ನು ತಂದಿರೇ ? ಈ ಪುಸ್ತಕದ ಅಚ್ಚಿನ ಎಲ್ಲಾ ಕಾರ್ಯಕ್ರಮಗಳಿಗೆ ಎಷ್ಟು ಸಾರಿ ಹೋಗಿದ್ದೀರಿ ?

ಶ್ರೀ ಜಿ. ನಾರಾಯಣ ಕುಮಾರ್.—ಹೇಳಿದ್ದೇ ಹೇಳೋ ಕಿಸಬಾಯಿದಾಸ ಎನ್ನುವ ರೀತಿಯಲ್ಲಿ ಹೇಳಿದ್ದನ್ನೇ ಹೇಳುತ್ತಿದ್ದಾರೆ. ಅವರು ಬೇರೆ ಏನಾದರೂ ಇದ್ದರೆ ಹೇಳಲಿ. ಹೇಳಿದ್ದೇ ಹೇಳುವುದು ಏಕೆ ?

ಶ್ರೀ ಬಿ.ಎ. ಉಮರಬ್ಬ.—ನನಗೆ ಅವರ ಕನ್ನಡ ಅಭಿಮಾನ ಗೊತ್ತಿದೆ. ಸ್ವಾಮಿ, ನಾರಾಯಣ ಕುಮಾರ್ ಅವರು ಮಾತನಾಡಿದರೆ ನಿರ್ಲಕ್ಷ್ಯ ಮಾಡಿ ಎನ್ನುವ ಹೇಳಿಕೆಯನ್ನು ನೀವು ಈ ಹಿಂದೆ ಕೊಟ್ಟಿರು ವುದರಿಂದ ಅವರನ್ನು ನಿರ್ಲಕ್ಷ್ಯ ಮಾಡಿ ನಾನು ಮಾತನಾಡುತ್ತೇನೆ. ಇದಕ್ಕಿಂತ ಹೆಚ್ಚಿನದೇನನ್ನೂ ನಾನು ಹೇಳುವುದಿಲ್ಲ.

ಶ್ರೀ ಜಿ. ನಾರಾಯಣಕುಮಾರ್.—ತಾವು ಈ ಸಭೆಗೆ ಇಲ್ಲಿನ ಅಧ್ಯಕ್ಷರಾಗಿಲ್ಲ. ನಮ್ಮ ದಣಿಗಳು ಅಧ್ಯಕ್ಷರಿದ್ದಾರೆ. ಅದನ್ನು ಅವರು ಹೇಳಬೇಕು.

ಶ್ರೀ ಬಿ.ಎ. ಉಮರಬ್ಬ.—ಇದನ್ನು ನಾನು ಈ ಸಭೆಯಲ್ಲಿ ಒಂದು ಸಾರಿಯಲ್ಲ, ಹತ್ತಾರು ಸಲ ಹೇಳಿದ್ದೇನೆ. Speaker has told me "don't take him seriously." Therefore you may say whatever you want. I will not take it seriously.

ಶ್ರೀ ಜಿ. ನಾರಾಯಣ ಕುಮಾರ್.—ನಿಮಗೆ ಗೌರವ ಎನ್ನುವ ಪದ ಗೊತ್ತಿದ್ದರೆ ಅದನ್ನು ನಾನು ಹೇಳುವುದಿಲ್ಲ ಬಿಡಿ. ಹೇಳಿದ್ದೇ ಹೇಳೋಕಿಸಬಾಯಿನ ರೀತಿಯಲ್ಲಿ...

(ಗೊಂದಲ)

ಶ್ರೀ ಜೀವರಾಜ ಆಳ್ವ.—ಅಧ್ಯಕ್ಷರೇ ಸದಸ್ಯರು 'ಚೆಲುವ ಕನ್ನಡ ನಾಡು' ಪುಸ್ತಕದ ಬಗ್ಗೆ ಮಾನ್ಯ ಸದಸ್ಯರು ಪುನ: ಪುನ: ಮಾತನಾಡುವ ಬದಲು ಆ ಬಗ್ಗೆ ನಾನು ಈಗಲೇ ಉತ್ತರ ಕೊಟ್ಟರೆ ಚೆನ್ನಾಗಿರುತ್ತದೆನಿಸುತ್ತದೆ. ತಾವು ಅಪ್ಪಣೆ ಕೊಟ್ಟರೆ ನಾನು ಹೇಳುವುದಕ್ಕೆ ಇಷ್ಟಪಡುತ್ತೇನೆ. ಪುನಃ ಈ ಬಗ್ಗೆ ಬೇರೆ ಸದಸ್ಯರು ಮಾತನಾಡಬಹುದೆಂದು ನಾನು ಈಗಲೇ ಉತ್ತರ ಕೊಡುತ್ತೇನೆ. ಸ್ವಾಮಿ, "ಚೆಲುವ ಕನ್ನಡ ನಾಡು" ಪುಸ್ತಕವನ್ನು ಈ ಸರ್ಕಾರ ಅಚ್ಚು ಮಾಡಿಲ್ಲ. ವಿಶ್ವ ಕನ್ನಡ ಸಮ್ಮೇಳನದ ಅಂಗವಾಗಿ ಬಂದ ಪ್ರತಿನಿಧಿಗಳಿಗೆ ವಿಕಾಸ್ ಪಬ್ಲಿಕೇಷನ್ಸ್ ಎನ್ನುವವರು, ನಾವು ಈ ಪುಸ್ತಕವನ್ನು ಅಚ್ಚು ಮಾಡುತ್ತೇವೆ ಹಾಗೂ ಹೆಸರಾಂತ ಒಬ್ಬ ಶ್ರೇಷ್ಟ ಪತ್ರಿಕೋದ್ಯಮಿ ಎಂ.ವಿ. ಕಾಮತ್ ಅವರಿಂದ ಬರೆಸುತ್ತೇವೆ ಹಾಗೂ ಡಾ. ರಂಗನಾಥ್ ಅವರಿಂದ ತರ್ಜುಮೆ ಮಾಡಿಸುತ್ತೇವೆ ಇದನ್ನು ತಾವು ಎಂದರೆ ಸರ್ಕಾರ ತೆಗೆದುಕೊಳ್ಳಬೇಕು, ಇದಕ್ಕೆ ಸುಮಾರು ೪೫೫ ರೂಪಾಯಿ ಬೆಲೆ ಆಗುವುದು ಇದ್ದು ತಮಗೆ ೨೦೦ ರೂಪಾಯಿ ಬೆಲೆಗೆ ಕೊಡುತ್ತೇವೆ ಎಂದಾಗ ಅದಕ್ಕೆ ನಾವು ಒಪ್ಪಿಕೊಂಡು ಸ್ವಲ್ಪ ಪುಸ್ತಕಗಳನ್ನು ಖರೀದಿ ಮಾಡಿದ್ದು ನಿಜ. ಅದು ಸರ್ಕಾರದ ಇಲಾಖೆಯಿಂದ ಅಚ್ಚು ಆದ ಪುಸ್ತಕವಲ್ಲ. ಇದು ಮೊದಲನೇ ವಿಚಾರ, ಇನ್ನು ವಿಕಾಸ್ ಪಬ್ಲಿಕೇಷನ್ಸ್ ಅವರು it is not a regimental society. ನಾವು ಯಾವುದೇ ಒಬ್ಬ ಹಿರಿಯ ಸಾಹಿತಿಯನ್ನು ಈ ತರಹ ಬರಿ, ಹಾಗೆ ಬರಿ ಎಂದು ಹೇಳುವುದಕ್ಕಾಗುವುದಿಲ್ಲ ಇವತ್ತು ಅದರಲ್ಲಿ travel ಆಗಿದೆ. ಇವತ್ತು ಈ ಬಗ್ಗೆ ಶ್ರೀ ಹಾ.ಮಾ. ನಾಯಕ್‌ರವರು ಹೇಳಬಹುದು ಅಥವಾ ಮಾನ್ಯ ಕೊ. ಚೆನ್ನಬಸಪ್ಪನವರು ಹೇಳಬಹುದು. ಶ್ರೀ ಹಾ.ಮಾ. ನಾಯಕ್ ಅವರು ಏಕೆ ಹೇಳುತ್ತಾರೆ ಅದಕ್ಕೆ ನಾನು ಉತ್ತರವನ್ನು ಮೈಸೂರು ವಿಶ್ವವಿದ್ಯಾನಿಲಯದಲ್ಲಿ ಕೊಟ್ಟಿದ್ದೇನೆ. ಆದರೆ ಒಬ್ಬ ವ್ಯಕ್ತಿ ಮತ್ತು ಆತನ ಬರಹದ ಬಗ್ಗೆ ನಮ್ಮ regimentನ್ನು ನಾನು ಪುನಃ repeat ಮಾಡಿದೆ. ನಮ್ಮ time capsule ಅಲ್ಲ ಅದು. ನೀವು India Gateನಲ್ಲಿ ಹುದುಗಿಟ್ಟಂತಹ chronological orderನಲ್ಲಿ ಇಡೀ list out ಮಾಡಿದಂತಹ historical documentನಲ್ಲಿ ಮೋಸ ಮಾಡಿದಂತಹ, ವಂಚನೆ ಮಾಡಿದಂತಹ document ಅಲ್ಲ ಇದು. ಒಬ್ಬ ವ್ಯಕ್ತಿ ಅದನ್ನು ಬರೆದಿದ್ದಾರೆ, ಅದನ್ನು ನಾವು ಒಬ್ಬ free society ಆಗಿ, ಜನತಾ ಪಕ್ಷದ ಒಬ್ಬರ ಭಾವನೆಯ ಮೂಲ ಆಸೆಯನ್ನು ಇಟ್ಟುಕೊಂಡಿದ್ದಂತಹ ಎಂ.ವಿ. ಕಾಮತ್ ಅಂತಹ ಶ್ರೇಷ್ಟ ವ್ಯಕ್ತಿಗಳು ಏನೋ ಒಂದು ವಿಷಯವನ್ನು ಮುಂದೆ ಮಾಡಿ ಬರೆದಿರಬಹುದು. ಆದರೆ ಆ ತಪ್ಪು ನಮ್ಮದಲ್ಲ. ವ್ಯಕ್ತಿ ಹಾಗೂ ಲೇಖಕರಿಗೆ ಅದನ್ನು ಬಿಟ್ಟಿರತಕ್ಕದ್ದು. ಅದನ್ನು ಹಿಂತೆಗೆದುಕೊಳ್ಳುವಂತಹ ಪ್ರಶ್ನೆ ಇಲ್ಲ. ಹಾಗೂ ಅದರಲ್ಲಿ ಅಪಚಾರ ಏನೂ ಆಗಿಲ್ಲ. ಬಹಳಷ್ಟು ಸಾಹಿತಿಗಳು, ಹಿರಿಯ ಕಲಾವಿದರು, ಹಿರಿಯ ಸಾಹಿತಿಗಳು ಒಪ್ಪಿಕೊಂಡು ಮೆಚ್ಚಿಕೊಂಡಿದ್ದಾರೆ. ಆಮೇಲೆ ಅವರು ಆವತ್ತು ಹರಿದು ಬಿಸಾಕಿದರಲ್ಲ, ಅವರಿಗೆ ಕೋಪ ಯಾವುದರ ಮೇಲೆ ಬಂತು ಗೊತ್ತೇ ? ಅವರು ಹರಿದು ಬಿಸಾಕಿದ ಪೇಜಿನಲ್ಲಿ ಇದ್ದದು ಆಸ್ಕರ್ ಫರ್ನಾಂಡಿಸ್ ಅವರ ಹೆಸರು ಮತ್ತು ಮಾರ್ಗರೇಟ್ ಆಳ್ವ ಅವರ ಹೆಸರು. ಅವರ ಮೇಲೆ ಕೋಪ ಇವರಿಗೆ ಅಷ್ಟೇ. ಅವರಿಗೆ ಬೇರೆ ಯಾವ ಕೋಪವೂ ಇರಲಿಲ್ಲ,

ಅವರ ಹಾಗೆ ಫ್ಲವರಿ ಲಾಂಗ್ವೇಜ್‌ನಲ್ಲಿ ಮಾತನಾಡಲಿಕ್ಕೆ ನನಗೆ ಬರುವುದಿಲ್ಲ. ಅವರ ಬ್ರೂಟಸ್ ಪಾತ್ರದ ಬಗ್ಗೆ ಆಮೇಲೆ ಹೇಳುತ್ತೇನೆ. ಇದಕ್ಕೆಲ್ಲಾ ಕಾರಣಗಳಿವೆ. ನಾನು ಪೂರ್ಣವಾಗಿ ಉತ್ತರ ಕೊಡುತ್ತೇನೆ. ಅವರು ಅದಕ್ಕೆ ಉತ್ತರ ಕೊಡುವ ಧೈರ್ಯ ತೋರಿಸಲಿ. ವ್ಯಂಗ್ಯವಾದ, ಹರಿತವಾದ ಮಾತುಗಳಲ್ಲಿ ಏನೇನು ಹೇಳಿದ್ದಾರೆ ನಾನು ಆಗಲೇ ಹೇಳಿದ್ದೇನೆ ವಿಕಾಸ್ ಪಬ್ಲಿಕೇಷನ್‌ನವರು ಪ್ರಕಟ ಮಾಡಿದ್ದ ಪುಸ್ತಕಕ್ಕೆ ನಾವು ಇನ್ನೂರು ರೂಪಾಯಿ ಇಟ್ಟಿದ್ದೇವೆ. ಅದನ್ನು ಹೆಚ್ಚಾಗಿ ಪ್ರತಿನಿಧಿಗಳಿಗೆ ಕೊಟ್ಟಿದ್ದೇವೆ. ಉಳಿದುದನ್ನು ಕೂಡ ಶಾಸಕರಿಗೆ ಕೊಡಬೇಕು ಎನ್ನುವ ಭಾವನೆಯನ್ನು ಇಟ್ಟುಕೊಂಡಿದ್ದೇವೆ ಕೆಲವರಿಗೆ ಈಗಾಗಲೇ ಕಳಿಸಿಕೊಟ್ಟಿದ್ದೇವೆ. ಡಾಕ್ಟರ್ ಹಾ. ಮಾ. ನಾಯಕರ ಮಾತನ್ನು ಕೇಳಿ ನಾವು ಪ್ರಕಟಣೆ ಮಾಡಬೇಕಾಗಿಲ್ಲ. ವಿಶ್ವ ಕನ್ನಡ ಸಮ್ಮೇಳನ ಕೂಡ ಸಾಹಿತಿಗಳನ್ನು ಕರೆದೇ ಮಾಡಿರುವುದು. ಸರ್ಕಾರವೇ ಮಾಡಿಲ್ಲ. ಹಲವಾರು ಸಾಹಿತಿಗಳು ಇದ್ದಾರೆ. ಹಲವಾರು ಹಿರಿಯ ಸಾಹಿತಿಗಳು ಇದ್ದಾರೆ. I donot belong to a regimented society. I belong to a free society Where we do not restrict poets or we will not dictate any terms to them. ಇಂತಹ ಒಂದು ಭಾವನೆಯಿಂದ ಈ ಪುಸ್ತಕವನ್ನು ತೆಗೆದುಕೊಂಡಿದ್ದೇನೆ. ಇದನ್ನು ವಾಪಸ್ಸು ತೆಗೆದುಕೊಳ್ಳಬೇಕು ಎನ್ನುವ ಪ್ರಶ್ನೆ ಯಾವತ್ತೂ ಉದ್ಭವ ಆಗುವುದಿಲ್ಲ.

ಶ್ರೀ ಎಂ. ವೀರಪ್ಪ ಮೊಯಿಲಿ.—ಮಾನ್ಯ ಸಚಿವರಿಗೆ ಸರ್ಕಾರದ ಪರವಾಗಿ ಒಂದು ಟೀಕೆ ಬಂದಾಗ ಅದಕ್ಕೆ ಉತ್ತರ ಕೊಡಲಿಕ್ಕೆ ಹಕ್ಕು ಇದೆ. ಭಾವನೆಗಳು ಹೇಗೆ ಇರಬೇಕು. ಅವುಗಳನ್ನು ತಡೆಹಿಡಿಯುಲಿಕ್ಕೆ ಆಗುವುದಿಲ್ಲ ಎಂದು ಅವರು ಹೇಳಿದರು. ಈ ವಿಷಯವನ್ನು ನಾನು ಒಪ್ಪುತ್ತೇನೆ. ಆದರೆ ಅದೇ ಉಸಿರಿನಲ್ಲಿ ಅವರು ಹೇಳಿದರು. ಅದೇನೆಂದರೆ ಡಾ॥ ಹಾ. ಮಾ. ನಾಯಕರಿಗೆ ಅವರು ಉತ್ತರ ಕೊಟ್ಟಿದ್ದಾರೆ ಎಂದು. ಅವರು ಒಬ್ಬ ಶ್ರೇಷ್ಠ ವೈಸ್‌ಛಾನ್ಸಲರ್ ಆಗಿದ್ದಾರೆ. ಹಾ. ಮಾ. ನಾಯಕರ ಟೀಕೆ ಇವರಿಗೆ ಅಪಥ್ಯ ಆಗಿರಬಹುದು. ಆದರೆ ಅವರು ಒಬ್ಬ ಶ್ರೇಷ್ಠ ಬರಹಗಾರರಾಗಿದ್ದಾರೆ.

ಶ್ರೀ ಜಿ. ನಾರಾಯಣಕುಮಾರ್.—(xxxx) ಅವರಿಗೆ ಹೃದಯವೇ ಇಲ್ಲ...

(ಗೊಂದಲ)

ಶ್ರೀ ಎಂ. ವೀರಪ್ಪ ಮೊಯಿಲಿ.— ಶ್ರೀ ನಾರಾಯಣಕುಮಾರ್ ಅವರು ಹೇಳಿದ ಮಾತನ್ನು ಹಿಂದಕ್ಕೆ ತೆಗೆದುಕೊಳ್ಳಬೇಕು. ಅಥವಾ ಅದನ್ನು ತಾವು ಕಡತದಿಂದ ತೆಗೆದುಹಾಕಬೇಕು. ಡಾ॥ ಹಾ. ಮಾ. ನಾಯಕ ಅವರು ಸರ್ಕಾರದ ಅಥವಾ ನಾರಾಯಣಕುಮಾರ್ ಅವರ ಮನೆಯ ಅನ್ನವನ್ನು ತಿನ್ನುತ್ತಾ ಇಲ್ಲ. ನ್ಯಾಯವಾಗಿ ಅವರು ಒಬ್ಬ ಯೂನಿವರ್ಸಿಟಿ ವೈಸ್‌ಛಾನ್ಸಲರ್ ಆಗಿ ಕೆಲಸ ಮಾಡುತ್ತಿರುವರು. ಹೀಗಿರುವಾಗ ಅವರು (xxx) ಎಂದು ಅವರು ಹೇಳಿದ್ದಾರೆ. ಇದನ್ನು ಅವರು ವಾಪಸ್ಸು ತೆಗೆದುಕೊಳ್ಳಬೇಕು.

ಶ್ರೀ ಪಟಮಕ್ಕಿ ರತ್ನಾಕರ್.—ಈ ಮಾತನ್ನು ನಾರಾಯಣಕುಮಾರ್ ಅವರು ವಾಪಸ್ಸು ತೆಗೆದುಕೊಳ್ಳಬೇಕು. ಅದನ್ನು ತಾವು ಎಕ್ಸಪಂಜ್ ಮಾಡಬೇಕು.

ಶ್ರೀ ಜಿ. ನಾರಾಯಣಕುಮಾರ್.— ಹಾ. ಮಾ. ನಾಯಕರೇನೂ ನನ್ನ ದೊಡ್ಡಪ್ಪನ, ಚಿಕ್ಕಪ್ಪನ ಮಕ್ಕಳಲ್ಲ. ಕನ್ನಡ ಜನತೆ ಬಗ್ಗೆ ಅವರು ತೋರಿಸಿರುವ ವರ್ತನೆ......

ಶ್ರೀ ಪಟಮಕ್ಕಿ ರತ್ನಾಕರ್.—ಅಧ್ಯಕ್ಷರೇ, ಇವರು ಬಾಯಿಗೆ ಬಂದಹಾಗೆ ಮಾತನಾಡುತ್ತಿದ್ದಾರೆ.

(ಗೊಂದಲ)

ಶ್ರೀ ಪಟಮಕ್ಕಿ ರತ್ನಾಕರ್.—ಅವರು ಹೇಳಿದ ಮಾತನ್ನು ವಾಪಸ್ಸು ತೆಗೆದುಕೊಳ್ಳಬೇಕು.

ಅಧ್ಯಕ್ಷರು.—ನಾನು ವರದಿಯನ್ನು ತರಿಸಿ ನೋಡುತ್ತೇನೆ.

ಶ್ರೀ ಜಿ. ನಾರಾಯಣಕುಮಾರ್.— ಶ್ರೀ ಉಮರಬ್ಬನವರು ಕನ್ನಡ ಪುಸ್ತಕವನ್ನು ಹರಿದು ಹಾಕಿದಾಗ ಅದು ಕನ್ನಡದ ಮೇಲಿನ ಅಭಿಮಾನವನ್ನು ಸೂಚಿಸುತ್ತದೆಯೇ ?

(ಗೊಂದಲ)

ಅಧ್ಯಕ್ಷರು.—ಶ್ರೀ ಜಿ. ನಾರಾಯಣಕುಮಾರ್ ಅವರು ಹೇಳಬಾರದ್ದನ್ನು ಅಂದಿದ್ದರೆ ವರದಿಯನ್ನು ತರಿಸಿ ನೋಡುತ್ತೇನೆ. ಅದನ್ನು ಎಕ್ಸ್‌ಪಂಜ್ ಮಾಡಿಸುತ್ತೇನೆ. ಹಿಂದೆ ಕೂಡ ಮಾಡಿಸಿದ್ದೇನೆ, ಶ್ರೀ ಉಮರಬ್ಬನವರೇ ನೀವು ಮಾತನಾಡಿ.

ಶ್ರೀ ಬಿ. ಎ. ಉಮರಬ್ಬ.—ಮಾನ್ಯ ಅಧ್ಯಕ್ಷರೇ, ಕರ್ನಾಟಕ ರಾಜ್ಯದ ಸಾಹಿತ್ಯಕ ದೃಷ್ಟಿಯಿಂದ ಧ್ರುವತಾರೆಯಾದ ಡಾಕ್ಟರ್ ಹಾ. ಮಾ. ನಾಯಕರಿಗೆ...

(ಗೊಂದಲ)

ಶ್ರೀ ಜೀವರಾಜ ಆಳ್ವ.—ಅವರು ಧ್ರುವತಾರೆಯಾದರೆ, ಇವರು ಅರುಂಧತಿ...

ಶ್ರೀ ಬಿ. ಎ. ಉಮರಬ್ಬ.— ಅರುಂಧತಿಯೋ. ಮಂಡೋದರಿಯೋ ನನಗಂತೂ ಗೊತ್ತಿಲ್ಲ. ಇದಕ್ಕೂ ಘೋರವಾದ ಅಪಮಾನ ಡಾ॥ ಕೆ. ವಿ. ಪುಟ್ಟಪ್ಪನವರಿಗೆ ಆಗಿದೆ.

ಶ್ರೀ ಜಿ. ನಾರಾಯಣಕುಮಾರ್.— ಶ್ರೀ ಕೆ. ವಿ. ಪುಟ್ಟಪ್ಪನವರಿಗೆ ಏನು ಅಪಮಾನ ಆಗಿದೆ ? ಅಧ್ಯಕ್ಷರೇ, ಮಾನ್ಯ ಸದಸ್ಯರು ಇದನ್ನು ರಾಜಕೀಯ ವಿಷಯ ಆಗಿ ಮಾಡುತ್ತಿದ್ದಾರೆ.

(ಗೊಂದಲ)

---

*ಅಧ್ಯಕ್ಷರ ಆದೇಶದ ಮೇರೆಗೆ ಈ ಪದಗಳನ್ನು ಕಡತದಿಂದ ತೆಗೆದು ಹಾಕಲಾಗಿರುತ್ತದೆ.

ಅಧ್ಯಕ್ಷರು.—ನೀವು ಹೇಗೆ ಮಾಡಿದರೆ ರೆಕಾರ್ಡ್ ಮಾಡಬೇಡಿ ಎಂದು ನಾನು ಹೇಳಬೇಕಾಗುತ್ತದೆ. ಶ್ರೀ ಉಮರಬ್ಬನವರೇ, ನೀವು ವಾದಗ್ರಸ್ತ ವಿಷಯವನ್ನಾಗಿ ಮಾತನಾಡುವುದಕ್ಕೆ ಹೋಗಬೇಡಿ.

ಶ್ರೀ ಬಿ. ಎ ಉಮರಬ್ಬ.—ಮಾನ್ಯ ಅಧ್ಯಕ್ಷರೇ, ತಮ್ಮ ಮಾತನ್ನು ನಾನು ಮೀರುವುದಿಲ್ಲ. ಇಲ್ಲಿ ಕೋಪೋದ್ರೇಕದ ಅವಶ್ಯಕತೆ ಇಲ್ಲ. ಮಾನ್ಯ ಸಚಿವರು ನನ್ನ ಸ್ನೇಹಿತರು ಎಂದು ನಾನು ಆಗಲೇ ಹೇಳಿದ್ದೇನೆ, ಈಗಲೂ ಹೇಳುತ್ತೇನೆ, ಮತ್ತೆಯೂ ಹೇಳುತ್ತೇನೆ. ವೈಯಕ್ತಿಕವಾದ ವಿಚಾರ ನಾನು ಹೇಳುವಂತಹದ್ದು ಏನೂ ಇಲ್ಲ. ವಿಕಾಶ್ ಪಬ್ಲಿಕೇಷನ್ ಮೂಲಕ ಅಚ್ಚಾದ ಪುಸ್ತಕವನ್ನು ಹಣ ಕೊಟ್ಟು ತಾವು ತೆಗೆದುಕೊಂಡಿದ್ದೇವೆ ಎಂದು ಅವರು ನೀಡಿರುವ ಸ್ಪಷ್ಟೀಕರಣ. ಇದಕ್ಕೆ ಮೊದಲು...

ಅಧ್ಯಕ್ಷರು.—ವಿಷಯವನ್ನು ಪುನಃ ವಾದಗ್ರಸ್ತವಾಗಿ ಮಾಡಲಿಕ್ಕೆ ಹೋಗಬೇಡಿ.

ಶ್ರೀ ಬಿ. ಎ. ಉಮರಬ್ಬ.—ನಾನು ಹಿಂದೆ ಮಾನ್ಯ ರಾಜ್ಯಪಾಲರ ಭಾಷಣದ ಮೇಲೆ ಇದನ್ನು ಉಲ್ಲೇಖಿಸಿದ ಸಂದರ್ಭದಲ್ಲಿ ಮಾನ್ಯ ಮುಖ್ಯಮಂತ್ರಿಗಳ ಪರವಾಗಿ ಉತ್ತರ ಕೊಟ್ಟಂಥ ಮಾನ್ಯ ಸಚಿವರಾದ ಶ್ರೀ ಜೆ. ಹೆಚ್. ಪಟೇಲರು ಸ್ಪಷ್ಟವಾಗಿ ಹೇಳಿದ್ದಾರೆ. ಏನೆಂದರೆ ಕರ್ನಾಟಕ ರಾಜ್ಯ ಸರ್ಕಾರ ಇದಕ್ಕಾಗಿ ಹನ್ನೊಂದು ಲಕ್ಷ ರೂಪಾಯಿ ಖರ್ಚು ಮಾಡಿದೆ ಎಂದು. ಇದನ್ನು ವಿಕಾಶ್ ಪಬ್ಲಿಕೇಷನ್‌ನವರು ಪ್ರಕಟ ಮಾಡಿದ್ದು ಅಲ್ಲವೆಂದು...

ಅಧ್ಯಕ್ಷರು.—ಅಷತ್ತು ನೀವು ಬಹಳ ಚೆನ್ನಾಗಿ ಮಾತನಾಡಿದ್ದೀರಿ. ಇವತ್ತು ಏಕೆ ಹೀಗಾಗುತ್ತಿದೆ ?

ಶ್ರೀ ಬಿ. ಎ. ಉಮರಬ್ಬ.— ಇರಲಿ, ಇದನ್ನು ಯಾರಿಂದ ಪಡೆದರೂ ಕರ್ನಾಟಕ ರಾಜ್ಯದ ಬೊಕ್ಕಸದಿಂದ ತೆಗೆದುಕೊಟ್ಟಂತಹ ಹಣ ಇದೆ. ಇಷ್ಟು ದೊಡ್ಡ ಮೊತ್ತ ಯಾರು ಸಾಹಿತಿಗಳು ಕಷ್ಟದಲ್ಲಿ ಬೇಯುತ್ತಿದ್ದಾರೆ, ಅವರಿಗೆ ಇದು ಸೇರಬೇಕಾಗಿತ್ತು ಎಂಬುದು ನಾನು ಪ್ರಾಮಾಣಿಕವಾಗಿ ಭಾವಿಸುತ್ತೇನೆ, ಇದನ್ನು ಬಿಟ್ಟು ಕನ್ನಡದ ಇತಿಹಾಸವನ್ನು ಇಂಗ್ಲೀಷಿನಲ್ಲಿ ಬರೆಸುವುದು, ಮತ್ತೆ ಇಂಗ್ಲೀಷ್ ಭಾಷೆಯಿಂದ ಕನ್ನಡ ಭಾಷೆಗೆ ತರ್ಜುಮೆ ಮಾಡಿಸುವುದು...

ಅಧ್ಯಕ್ಷರು.—ಶ್ರೀ ಉಮರಬ್ಬನವರೇ, ತಾವು ಸಾಕಷ್ಟು ಸಮಯ ತೆಗೆದುಕೊಂಡಿದ್ದೀರಿ. ಬೇಗ ಮುಗಿಸಿ.

ಶ್ರೀ ಬಿ. ಎ. ಉಮರಬ್ಬ. —ಕರ್ನಾಟಕ ರಾಜ್ಯದಲ್ಲಿ ಅನೇಕ ಸಾಹಿತಿಗಳು ಬರೆದಂಥ ಪುಸ್ತಕಗಳು ಅಚ್ಚಾಗಿದ್ದು ಗೆದ್ದಲುಗಳು ತಿನ್ನುವಂಥ ಸಂದರ್ಭ ಬಂದಿರುವಾಗ, ಕಷ್ಟ ಸಂಕಷ್ಟಗಳಿಗೆ ಸಿಲುಕಿ ಅವರು ಕಾವಲಿಮೇಲೆ ಬೇಯುತ್ತಿರುವಂಥ ಸಂದರ್ಭದಲ್ಲಿ ಯಾರೋ ಬರೆದ ಪುಸ್ತಕಕ್ಕೆ ಹನ್ನೊಂದು ಲಕ್ಷ ರೂಪಾಯಿ ಖರ್ಚು ಮಾಡಿದ್ದಾರೆ. ಅನೇಕ ಜನ ಸಾಹಿತಿಗಳು ಸಂಕಷ್ಟಗಳಿಗೆ ಸಿಕ್ಕಿ ಬಳಲಿ ಬೆಂಡಾಗಿರುವಾಗ ಅವರಿಗೆ ಆಶ್ರಯ ಕೊಡಲಿಕ್ಕೆ ಈ ಹನ್ನೊಂದು ಲಕ್ಷ ರೂಪಾಯಿ ಖರ್ಚಾಗಿಲ್ಲ.

ಸಾಹಿತಿಗಳು ದಿನೇದಿನೇ ಉಸಿರು ಎಳೆಯುದಂಥ ಜನರು ಏನು ಇರುತ್ತಾರೋ ಅವರಿಗೆ ಮಾಡಬೇಕಾದದ್ದು ಸಹಾಯ ಏನು ಇರುತ್ತದೋ ಅದನ್ನು ಮೊದಲು ಮಾಡಲು ಪರಿಶೀಲಿಸಬೇಕೆಂದು ಬಹಳ ದುಃಖದಿಂದ ಈ ಮಾತನ್ನು ಹೇಳುತ್ತಿದ್ದೇನೆ ಹೊರತು ಚಾರಿತ್ರ್ಯಹೀನ ಮಾಡಬೇಕೆಂದು ಮಾತನಾಡುತ್ತಿಲ್ಲ. ನಾನು ಹರಿದಂಥ ಪುಟದಲ್ಲಿ ಮಾನ್ಯ ಆಸ್ಕರ್ ಫರ್ನಾಂಡೀಸ್ ಮತ್ತು ಶ್ರೀಮತಿ ಮಾರ್ಗರೇಟ್ ಆಳ್ವಾರವರ ಹೆಸರೂ ಸಹ ಇತ್ತು ಎನ್ನುವುದನ್ನು ನಾನು ನೋಡಿರಲಿಲ್ಲ. ಇಬ್ಬರ ಫಿಗರ್ಸ್ ಇತ್ತು. ಇದಲ್ಲದೆ ಚೆಲುವ ಕನ್ನಡ ನಾಡಿನ ೫೫ನೇ ಪುಟವನ್ನು ಮಾತ್ರ ನಾನು ಹರಿದದ್ದು ಬೇರೆ ಯಾವ ಹಾಳೆಯನ್ನು ನಾನು ಹರಿಯಲಿಲ್ಲ, ೫೫ನೇ ಪುಟದಲ್ಲಿ ಅಸತ್ಯವಾದ ವಿಚಾರ, ಜನತಾ ಸರ್ಕಾರದ ಸಾಧನೆಯು ಒಂದು ಕೆಟ್ಟಧ್ವನಿಯಲ್ಲಿ ಇದ್ದುದನ್ನು ಓದಿದ್ದೇನೆ. ೫೫ನೇ ಪುಟ.

ಶ್ರೀ ಡಿ. ಟಿ. ಜಯಕುಮಾರ್.—ಯಾರೋ ಬರೆದವರು, ಅವರ ತಪ್ಪಿಗೆ ಮಂತ್ರಿಗಳನ್ನು ಏತಕ್ಕೆ ದೂರುತ್ತೀರಿ ?

ಶ್ರೀ ಬಿ. ಎಂ. ಉಮರಬ್ಬ.—ನಾನು ೫೫ನೇ ಪುಟವನ್ನು ಹರಿದದ್ದಲ್ಲದೆ ಬೇರೆ ಪುಟವನ್ನು ಹರಿದ್ದದು ಇಲ್ಲ.

(ಗೊಂದಲ)

ಅಧ್ಯಕ್ಷರು.—ಮಾನ್ಯ ಉಮರಬ್ಬರವರೇ ತಮ್ಮ ಭಾಷಣವನ್ನು ಮುಕ್ತಾಯಮಾಡಿ......

ಶ್ರೀ ಬಿ. ಎಂ. ಉಮರಬ್ಬ.—ಅಕ್ಷ್ಯಮ ಅಪರಾಧ ಮಾಡಿದ್ದಾರೆ.

ಶ್ರೀ ಜಿ. ನಾರಾಯಣ ಕುಮಾರ್.—ಮಾನ್ಯ ಉಮರಬ್ಬರವರು ೧೯೭೮ನೇ ಇಸವಿಯಲ್ಲಿ ಜನತಾ ಪಕ್ಷದ ಸದಸ್ಯರಾಗಿದ್ದರು. ಈಗ ಅವರು ಕಾಂಗ್ರೆಸ್ ಪಕ್ಷಕ್ಕೆ ಹೋಗಿ ವೃದ್ಧನಾರಿ ಪತಿವ್ರತೆ ಎಂದು ಹೇಳಿಕೊಳ್ಳುತ್ತಿದ್ದಾರೆ.

ಶ್ರೀ ಬಿ. ಎಂ. ಉಮರಬ್ಬ.—ಅಸಂಗತ ವಿಚಾರಧಾರೆ ಬೇಕಾಗಿಲ್ಲ. ೧೯೭೮ನೇ ಇಸವಿಯಲ್ಲಿ ನಾನು ಎಲ್ಲಿದ್ದೆ, ೧೯೮೩ನೇ ಇಸವಿಯಲ್ಲಿ ಅವರು ಎಲ್ಲಿದ್ದರು ಎನ್ನುವುದೆಲ್ಲ ಗೊತ್ತಿರತಕ್ಕಂಥ ವಿಚಾರ.

ನಿಮಗೆ ಸ್ವಲ್ಪ ಧೈರ್ಯವಿದ್ದರೆ ಬೆಳಗಾಮ್‌ಗೆ ಹೋಗಿದ್ದು ಬನ್ನಿ.

(ಗೊಂದಲ)

ಅಧ್ಯಕ್ಷರು.—ಮಾನ್ಯ ಉಮರಬ್ಬರವರೇ ನಿಮಗೆ ಅರ್ಧಗಂಟೆಯ ಮೇಲೆ ಅವಕಾಶವನ್ನು ಕೊಟ್ಟಿರುತ್ತೇನೆ.

ಶ್ರೀ ಬಿ. ಎಂ, ಉಮರಬ್ಬ.—ಮಾನ್ಯ ಸದಸ್ಯರಾದ ನಾರಾಯಣಕುಮಾರ್‌ರವರಿಗೆ ಕಂಡದ್ದನ್ನು ಕಂಡಹಾಗೆ ಹೇಳಿದರೆ ಕೆಂಡದಂಥ ಕೋಪ. ರಾಜೀವ್ ತಾರಾನಾಥ್ ಒಬ್ಬ ಚೀಫ್ ರಿಜಿಸ್ಟ್ರಾರ್ ಎಲ್ಲಕಡೆ ನೋಡುವುದಾದರೆ ನಮ್ಮ ಡೈರೆಕ್ಟರವರ ಅವಶ್ಯಕತೆಯೇ ಇಲ್ಲ. ಆದ್ದರಿಂದ ಅಧ್ಯಕ್ಷರೇ ತಾವು ಸ್ವಲ್ಪ ಕೋಪಿಷ್ಠರು, ಕೋಪಿಷ್ಠರಾದರೂ ತಮ್ಮಲ್ಲಿ ತುಂಬಾ ಪ್ರೀತಿ ಇದೆ ಎಂದು ತಿಳಿದು ತಾವು ಇಷ್ಟೊಂದು ಅವಕಾಶವನ್ನು ಕಲ್ಪಿಸಿಕೊಟ್ಟಿದಕ್ಕಾಗಿ ತಮಗೆ ಹೃತ್ಪೂರ್ವಕವಾದ ಧನ್ಯವಾದಗಳನ್ನು ಅರ್ಪಿಸಿ ತಾವು ಸೂಕ್ತವಾಗಿ ಪರಿಗಣಿಸುತ್ತೀರೆಂಬ ಆಶಾಭಾವನೆಯಿಂದ ನನ್ನ ಮಾತುಗಳನ್ನು ಮುಗಿಸುತ್ತೇನೆ.

† SRI MOHAMMAD MOIENUDDIN (Chamarajapet).—Mr. Speaker, Sir, I would like to speak on Agriculture Demand only because the time allotted to me is very short. I whole-heartedly support the demand of the Agriculture Departmeut. I am very happy to congratulate our Hon'ble Chief Minister for providing in our State VII Five Year Plan Outlay on Agriculture Rs. 57.70 crores which is double than the outlay of the VI Five Year Plan which was Rs. 24.54 crores. If the Centre's Rs. 56 crores is added to this, our total outlay for agriculture for the VII Five Year Plan period will be Rs. 113 crores. At long last our planners and rulers have realised that it is the agriculture which is the only sector that could free our pepole from Proverty, under nutrition and unemployment. Sir, 30 years of planning of encouraging the industrial sector and superimposing it on agrarian economy of India has resulted in more poverty, more under nourishment and more under employment. Now at least our planners have realised that it is only Agriculture which has the potential to change the scenario of poverty to fulfiment, under-nutrition to full-nutrition and under employment to employment. For the first time in the history of Planning Agriculture is made the main lever of growth of the economy. The capital intensive industry sector, the results of which we have seen, has registered during the VI Five Year Plan an overall growth of 6.6% as against 4.3% grown of agricultural sector which

has less capital intensive. Now the emphasis laid on agriculture is really a heartening situation for all the farmers and the people who follow the profession of agriculture. The 7th Plan Document has laid down certain directives as to how the economy has to be expanded with the agriculture sector as the base. I would request the Hon.Minister through you, Sir, to brief his Departmental officers about what exactly the 7th Five Year Plan directives. The Department is moving in just one direction for the last so many years without looking either this way or that way. I am not going to discuses what progress the Agriculture Department has achieved. In order to achieve the desired results as laid down by the planners in the 7th Five Year Plan i.e., poverty to be removed, under-nutrition to be removed and unemployment to be eradicated, tho Hon. Minister should take a class and teach the Department of Agriculture as to what the Officers chould do with reference to the directives given in the 7th Plan. Unless the Minister takes personal interest in educating the departmental officers' I don't think the Department of agriculture could change their views and attitude and their trodden path as a result of which you get the same old Annual Reports.

With this, I come to the salient points which I would like to discuss. It is the soil health again. The Annual Report of this year unfortunately is very much silent about the ailing soil. In the last session I did mention about soil health and you were good enough to permit a half-an-hour discussion on soil health. The Hon.Minister also very generously accepted in toto all my observations. In spite of all that this annual report indicates nothing about soil health. Sir, I don't want to repeat but I request my hon.friend Sri Prakash, the Minister for Agriculture, to see that the reluctancy and hesitancy of the Departmental Officers towards soil health is removed. Let him do that.

Some little work was done last year. But this year not even an acre has been taken over for reclamation of soil from acidity alkalinlty and salinity. This is a very regretting aspect I have to highlight. I can't understand this hesitancy on the part of the Department.

Now about soil survey work As per the report given, soil survey work done is negligible. Against the target of 80,000 hectares, only 15,000 hectares is the achievement. Soil survey work is a very important aspect. Soil survey of Karnataka was done long time back. Now the whole soil structure is changed. Soil analysis has gone to such a scientific extent that

the soil survey of Karnataka must be updated and must be done immediately. Until and unless we do the soil suruey work. what all the Agriculture Department does to direct the farmers, is just a waste because it is doing in a most unscientific manner. If the Department is not competent, let them seek the guidance of the Department of Mines and Geology because they are in a better position with the latest technology. They are in a position to map out the whole structure and characteristics of soil of Karnataka. Soil survey work should be the base to achieve the desired results of the 7th Five Year Plan. Unless this is done, any amount of work by the Department of Agriculture will be a futile exercise and nothing gainful can be achieved.

There are a few suggestions which I would like to offer. I would request the Hon. Minister and the Department, through you, Sir, to identify the areas and lay down the methods to be adopted to increase the crop intensity. Increasing the crop intensity is a must now-a-days The same old type of cropping pattern will not do in view of the growing population of our state. Secondly, identify areas of low productive regions and small farmers and extend to such areas, in a systematic and phased manner, new agricultural technology. Thirdly my suggestion is Diversification of agricultural growth, region-wise, crop-wise, and class-wise. My fourth suggestion is Development of infrastructure. For getting more agricultural growth and economy, the agriculture sector infrastructures like roads, minor irrigation. strengthening the Karnataka Agro Industries Corporation etc., should be done. These are certain infrastructures which should be simultaneously developed. Fifthly, lay down ways and means as to the direct participation of small and marginal farmers so that they could be benefitted from new technology. Sixthly, prepare a blue-print as to how Agriculture Department could co-ordinate with irrigation Department in developing irrigation and water management and in implementation of food-for-work programme. Unless this coordination is there, I don't think there can be satisfying results, Inter-Departmental coordination is a must.

There is a lot of scope in Palm Oil Development. It should be examined and implemented. When I visited Andaman with the Estimates Committee, I could see how they are getting foreign exchange out of palm-oil. Our agroclimatic conditions being the same the Department should take up this palm oil development programme seriously.

Sugarcane development programme should be in all fairness a baby of Agriculture Department. More than Rs. 2,500 crore are available under the sugarcane development fund with the Central

Government. But our Department has not thought of utilising that amount and has never approached the Central Government. Training and visit programme which was done at the cost of Rs. 20 crore and also the first phase of National Agriculture Extension Project at a cost of Rs, 28 crore is a complete failure. What exactly is the effect of spending of Rs. 50 crore? There has been no evalution. Without evalution, we have entered into the second phase by spending another Rs. 25 crore. How far have we succeeded in doing this ? What is the net result ? What was the farmer gained ? What has agriculture gained as a result of this spending ? If there is no evalution, how can you embark on spending further ? I, therefore, request the hon. Minister, through you, Sir, to take immediate measures to evalute the Training and Visit Programme as also the National Hgricultural Extension Programme so that you know what are the lacunae and lapses on the part of the Department and the Officers and they could be rectified and these furtuer programmes are implemented successfully.

There are five Corporations under the Agriculture Department namely, the Karnataka Agro Industries Corporation, the Karnataka State Agro Corn Products, Karnataka Agro Seeds Corporation, Karnataka Compost Development Corporation and Karnatake Agro-Proteins Ltd. The latest information provided for us is 1983-84 and it locks as if these Corporations are jinxed. I would like to point out so many defects but since it will take a lot of time, I can point out only one or two of the several major defects to the Hon. Minister so that he can take immediate speedy action. I will point out one instance in KAIC. In 1972, 56 tractors were purchased from Germany which are most unsuitable for our soil. These tractors were lying in a junkyard till 1983 and they were sold in public auction for Rs. 2.19 lakhs. Two tractors are missing. What happened to these two tractors God only knows. The net result is the German tractor- remained in the junk yard for 15 long years resulting in a loss of Rs. 19 lakh. The hon, Minister may contest this figure but this wiil be the figure after adding 18% interest also. This matter was brought to the notice of the Government in 1984. I would requsst the Hon. Minister to take immediate action on that. One and a half years have already gone. We are not yet aware of what action has been taken because no information has been supplied. When the other information is supplied to thg Legislature they should also supply the information as to what action has been taken. Otherwise we would not waste the Legislator's time in bringing these facts again to the notice of the Hon. Minister.

About Cotton Seeds. Three thousand quintals of Cotton Seeds are lying unsold for the past 20 months. For seed purpose they cannot be used and they are to be destroyed. Instead of destroying, I suggest, distribute it to the needy farmers who can use it as fodder free of cost.

In 1981 a Commission headed by K. Sanjeevaiah, was appointed to look into the affairs of Karnataka Agro Industries Corporation. The Report has been submitted in July 1985.
I would like to know what action Government has taken on this report. How long it will take to process ? What action Government is going to take ? Secondly, Karnataka Agro Industries Corporation has taken up fertiliser sale, Stock proliferation is more than what it has been sold. Therefore I request that when the Marketing Federation has taken it up on the specialised basis, the Karnataka Agro Industries Corporation to stop fertiliser sale. This aspect could be taken care of by the Marketing Federation, Rs. 52 lakhs has been given as unsecured advance by the Karnataka Agro Industries Corporation. I do not know what is the recovery as on to-day, because no material has been supplied to us. To deal with this there is a panel of advocates, Cases have been filed and execution has been taken. To deal with it there is a panel of lawyers and advocates. But, only one lawyer has drawn Rs.5 lakhs as the legal charges When there is a panel of names with 13 to 15 numbers, why this K.A.I C has favoured only one ? I would like to ask the Hon. Minister about this. Rs. 5 lakhs is not a small sum. How can you favour one advocate when the panel of abvocates is there ? What about the execution ? At what stage are they ?

MR. SPEAKER.—Please conclude.

SRI MOHAMMAD MOIENUDDIN.—I am only talking on agriculture. I am not dealing with any other subject. Karnataka seed Corporation had purchased a voriety of paddy called pankaj from Bihar and this variety is more unsuitable to our condition. What is the result ? Again it is sold under loss Shortage in Rs. 98,000 This has been brought to the notice of the Government in 1984 I would like to know what action Government has taken. Regarding Karnataka Agro-corn product the accumulated loss of this Crporation is Rs. 90.85 lakhs as on 1983. This time they haveomade a little bit of profit by selling maize flakes to the distilleries. In stead of selling flakes to the distilleries they could under more service to the farmers. Next thing is to purchase maize from the farmers. They have not done it. They have purchased in the open market. Government have fixed the selling price. they have

flooted its They havegone to the open market. All these things are. there and the purchasewould go to the tune of Rs. 6 lakhs to 7 lakhs No purchase profit But, inspite of it what is the result ? Product has been sold to breveries, distilleries Rather than that I would request the Hon. Minister to start its own distilleries. Employees could be made use of and it can get some more profit.

Now, the Energy Food Product is another story. Government is committed to UNICEF and CENTRAL Government 12,000 tonnes per year for 12 crore beneficiaries i e., 6 lakhs per day for 200 days What is the story here ? The four projects should have been completed by 1979, one project was completed with 9 month's delay, Belgaum project 2½ years delay, Chitradurga 5 years' delay, Raichur Project 5 years' delay and Bangalore project is yet to be commissioned 8 years. What is the net result ? Rs. 18 lakhs cost of project rose to Rs. 30 lakhs Who is responsible for this ? Why this delay of years ? These projects were given as gift by the UNICEF. It is not an investment of the Government. I would like to know at what stage these things have been delayed. This is a very serious matter. I am bringing it to your kind notice. Our corporation, whom soever it is, is not in a position to erect the free given project of Rs. 18 lakhs, What is the net result ? More than the cost of the projects they are spending Rs 12 lakhs more due to escalation. This is something very fantastic. I cannot just understand this.

The karnataka Compost Development Corporation Ltd,, true to its name, is a big garbage bin. There is absolutely no co-ordination between Bangalore City Corporation and the Compost Development Corporation. Raw material has to be supplied by the B.C.C. and it is not being done properly. I, therefore, request as to why the Agri culture Department should take this blame. Let the Compost Corporation be given to BCC. They will take care of it The end product is supposed to enrich our soil. But, unfortunately it is no doing so. It is just adding on more glass pieces, more chappl pieces and more of waste and what not. Let the Agriculture Department not take this blame.

Coming to the Agriculture University what research is being done in the Agriculture University Laboratory is not percolating to the land. There is absolutely no lab to land programme, any where. I would like to bring to the notice of the Hon. Minister that whatever the strains or the paddy developed elsewhere like Orissa, Bihar Cuttak are said to be developed at Mandya. This is one of the biggest, funniest stories of the University of Agricultural

Sciences. To quote exactly as to what are those things Shakti is one type of paddy that is developed in Orissa, now our Agriculture University takes credit of having development it. Another variety Phalguna was developed in Andhra Pradesh, but our University says that they have done. This is something very strange. There are 8 varieties. Why I am pointing out is that this university has said. As I said Abhilash was developed in Cuttak, but Agriculture University takes credit. Karna is developed elsewhere, our univer sity takes it as developed in Mandya. These are the varieties evolved. The Agriculture University is taking credit. The Agricuture Univer sity is now giving awards to farm scientists. It is a good thing that farm scientists should be encouraged. I only confess that awards should be given to right persons. What is heppening in 1986 ? It is a little bit very interesting point. The award was given to one Dr. Naidu. Citation reads.

> "Dr. Balachandra Naidu, presenting working as Regional Associate Director.........He is working mainly on riee in the capacity of Crop Co-ordinator (Rice as well as New Rice Breeder). He is mainly responsible for developing rice varieties Shakti, Phalguna, Pragathi, Mandya vani, Avinash Abhilash. Mahaveer Karna ect.,"

Out of this 4 is not his, and were developed in Orissa, Cuttak, Andhra Pradesh. The citation further reads.

> "Dr. Naidu is not only a good research worker but also a popular teacher. He has got several post-graduates"...

I do not know how many post-graduates he has developed. One doubt leads to so many doubts. It is for the Minister to see. I will pass it on to him. It is for him to find out reality of this. The other peculiar part is that the University of Agricultural Sciences having a full-fledged reserach lab does not co-ordinate, Vice Chancellor does not know what varieties of paddy strains are evolved. This is the funniest part. I do not know what award our Hon. Minister is going to give to the Vice-Chancellor for that. Anyway somebody has done it. Award has been given to Mr. Naidu. I agree. But, what is the award you have given to the Vice-Chancellor who him self does not know as to what are the varieties produced in his own University.

Sir, the Government has waived off the interest on cooperative credit. The Karnataka Agro Industries Corporation has supplied tractors, pumpsets, power-tillers, etc. to the farmers. I appeal to the Government, at least on the same lines (as in the case of cooperative credit), those who pay the principal amount, in those

cases the interest should be waived off because there are poor farmers who are also members of cooperative societies. I once again request the Hon. Minister to waive off the interst to those who pay the principal amount. With these few words, I thank you for giving me this opportunity.

† ಶ್ರೀ ಯು. ಭೂಪತಿ (ಸೊಂಡರು) —ಮಾನ್ಯ ಅಧ್ಯಕ್ಷರೇ, ಇವತ್ತು ಸುಮಾರು ೪ ಇಲಾಖೆ ಬೇಡಿಕೆಗಳನ್ನು ಚರ್ಚೆಗೆ ಇಟ್ಟಿದ್ದೀರಿ. ತಾವು ಪ್ರಾರಂಭದಲ್ಲೇ ಬೇಗ ಚರ್ಚೆಯನ್ನು ಮುಗಿಸಬೇಕೆಂದು ಹೇಳಿ ಮಾತನಾಡುವುದಕ್ಕೆ ಅವಕಾಶ ಕೊಟ್ಟಿದ್ದೀರಿ. ಸಾಂಪ್ರದಾಯಿಕವಾಗಿ ಮಾತನಾಡುವವರಲ್ಲಿ ನಾನೂ ಒಬ್ಬವನಾಗಿ ಈ ಚರ್ಚೆಯಲ್ಲಿ ಭಾಗವಹಿಸಬೇಕಾದಂತಹ ಪರಿಸ್ಥಿತಿ ಬಂದಿದೆ. ಮಾನ್ಯ ಅಧ್ಯಕ್ಷರೇ ಮುಖ್ಯವಾಗಿ ಕೃಷಿ ಇಲಾಖೆ ಬಗ್ಗೆ ಮಾತನಾಡುವುದಕ್ಕೆ ಇಷ್ಟಪಡುತ್ತೇನೆ. ಏಕೆಂದರೆ ಈ ಇಲಾಖೆ ಬಹಳ ಮುಖ್ಯವಾದದು ಈ ಇಲಾಖೆಯ ಮಂತ್ರಿಗಳಂತೂ ನನ್ನ ಜಿಲ್ಲೆಯವರೇ ಆಗಿದ್ದಾರೆ. ಈ ಎರಡೂ ಇಲಾಖೆಗಳ ಬಗ್ಗೆ ನಾನು ಮಾತನಾಡಲು ಬಯಸುತ್ತೇನೆ. ಈ ಸಾರಿಯ ಈ ಇಲಾಖೆಯ ವಾರ್ಷಿಕವರದಿಯನ್ನು ಸಂಪೂರ್ಣವಾಗಿ ನೋಡಿದಾಗ ಇದರಲ್ಲಿ ರೈತರ ಮಕ್ಕಳಿಗೆ, ರೈತರ ಮಹಿಳೆಯರಿಗೆ ಕೃಷಿಗೆ ಸಂಬಂಧಪಟ್ಟಂತೆ ಹೆಚ್ಚಿನ ತರಬೇತಿಯನ್ನು ಕೊಡಬೇಕೆಂದು ಬಹಳ ಒತ್ತುಕೊಟ್ಟು ಹೇಳಿದ್ದಾರೆ. ಆದರೆ ಈ ಪ್ರಯೋಗಗಳು ಎಷ್ಟರಮಟ್ಟಿಗೆ ಸಫಲವಾಗುತ್ತದೆ ಎಂಬುದು ಮುಖ್ಯವಾದ ಪ್ರಶ್ನೆ. ಏಕೆಂದರೆ ಗ್ರಾಮಾಂತರ ಪ್ರದೇಶಗಳಲ್ಲಿ ಕೃಷಿ ಇಲಾಖೆಗೆ ಸಂಬಂಧಪಟ್ಟಂತೆ ಹಳ್ಳಿಗಳಲ್ಲಿ ಗ್ರಾಮ ಸೇವಕರು ಇರುತ್ತಾರೆ. ಆದರೆ ಇವತ್ತಿನ ದಿವಸಗಳಲ್ಲಿ ಅವರ ಸಂಖ್ಯೆ ಬಹಳ ಕಡಿಮೆ ಇರುವುದರಿಂದ ನೇರವಾಗಿ ರೈತರ ಮಕ್ಕಳ ಜೊತೆ ಬೆರೆಯುವ ಅಧಿಕಾರಿಗಳೇ ಇಲ್ಲವಾಗಿದೆ. ಬಹಳಷ್ಟು ಗ್ರಾಮ ಸೇವಕರ ಪೋಸ್ಟ್‌ಗಳು ಖಾಲಿ ಇವೆ. ಈ ಹುದ್ದೆಗಳನ್ನು ಖಾಲಿ ಇಟ್ಟುಕೊಂಡು ನಾವು ರೈತ ಮಕ್ಕಳಿಗೆ ತರಬೇತಿಯನ್ನು ಕೊಡುತ್ತೇವೆಂದು ಇವರು ಹೇಳಿರುವುದು ಬರೀ ಕಾಲ್ಪನಿಕವೇನೋ ಎನಿಸುತ್ತದೆ ಆಗ್ರೋ ಇಂಡಸ್ಟ್ರೀಸ್ ಬಗ್ಗೆ ಮಾನ್ಯ ಸದಸ್ಯರಾದ ಮೋಯಿನುದ್ದೀನ್‌ರವರು ಬಹಳಷ್ಟು ಚೆನ್ನಾಗಿ ಹೇಳಿದ್ದಾರೆ. ಈ ಆಗ್ರೋ ಇಂಡಸ್ಟ್ರೀಗಳಲ್ಲಿ ಭ್ರಷ್ಟಾಚಾರ ಕೇಳಿಬರುತ್ತಿದೆ. ಭ್ರಷ್ಟಾಚಾರಗಳ ವರದಿ ಪದೇ ಪದೇ ಬರುತ್ತಲೇ ಇರುತ್ತವೆ. ಇದರ ಬಗ್ಗೆ ನನ್ನ ಹತ್ತಿರ ದಾಖಲಾತಿಗಳು ಇವೆ, ಬೇಕಾದರೆ ಅವುಗಳನ್ನು ಮಾನ್ಯ ಮಂತ್ರಿಯವರಿಗೆ ಕಳುಹಿಸಿಕೊಡುತ್ತೇನೆ ಇವತ್ತು ಕೃಷಿ ಇಲಾಖೆ ವ್ಯಾಪ್ತಿಯಲ್ಲಿ ಲಕ್ಷಾಂತರ, ಕೋಟ್ಯಾಂತರ ರೂಪಾಯಿಗಳನ್ನು ಕೇಂದ್ರದ ಯೋಜನೆ, ರಾಜ್ಯದ ಯೋಜನೆಗಳಲ್ಲಿ ಖರ್ಚು ಮಾಡುತ್ತಿದ್ದಾರೆ. ಈ ಯೋಜನೆಗಳಿಂದ ಹಳ್ಳಿಯಲ್ಲಿರತಕ್ಕ ಒಬ್ಬ ಸಣ್ಣ ಮತ್ತು ಅತಿ ಸಣ್ಣ ರೈತನಿಗೆ ಯಾವ ರೀತಿ ಉಪಯುಕ್ತವಾಗುತ್ತಿದೆ ಎಂದು ನೋಡಿದರೆ, ಯಾವ ಪ್ರಯೋಜನವೂ ಆಗುತ್ತಿಲ್ಲ ಎನ್ನುವುದು ನೋಡಿದ ತಕ್ಷಣ ಗೊತ್ತಾಗುತ್ತದೆ. ಇದಕ್ಕೆ ಅನೇಕ ಕಾರಣಗಳು ಇವೆ. ರೈತನು ಸಾಮಾಜಿಕವಾಗಿ ಶೈಕ್ಷಣಿಕವಾಗಿ ಹಿಂದೆ ಉಳಿದಿರುವುದರಿಂದ ಅವನಿಗೆ ವೈಜ್ಞಾನಿಕ ಕೃಷಿ ಬಗ್ಗೆ ಆಸಕ್ತಿ ಕಡಿಮೆ ಇರುತ್ತದೆ. ಈ ರೈತರುಗಳಿಗೆ ಸರಿಯಾದ ಮಾರ್ಗದರ್ಶನ ಮಾಡುವುದಕ್ಕೆ ಅಧಿಕಾರಿಗಳು ಸರಿಯಾದ ರೀತಿಯಲ್ಲಿ ಕೆಲಸ ಮಾಡುವುದಿಲ್ಲ. ರೈತರುಗಳಿಗೆ ಸರಿಯಾಗಿ ಮನದಟ್ಟಾಗುವಂತೆ ತರಬೇತಿಯನ್ನು ಕೊಟ್ಟು ಕೃಷಿ ಅಭಿವೃದ್ಧಿ ಆಗುವಂತೆ ಮಾಡಬೇಕು, ನಾವು ಇಷ್ಟು ಹಣವನ್ನು ವ್ಯವಸಾಯ ಇಲಾಖೆಯಲ್ಲಿ ಖರ್ಚು ಮಾಡದ್ದೇವೆಂದು ಹೇಳಿದರೆ ಅದರಿಂದ ವ್ಯವಸಾಯ ಕ್ಷೇತ್ರಕ್ಕೆ ಏನೂ ಪ್ರಯೋಜನವಾಗುವುದಿಲ್ಲ, ವ್ಯವಸಾಯ ಇಲಾಖೆಯಲ್ಲಿ ಸಾಧನೆಯನ್ನು ಮಾಡಬೇಕು. ರೈತರಿಗೆ ಒಂದು ಶಾಶ್ವತವಾದ ಪರಿಹಾರವನು ವ್ಯವಸಾಯ ಇಲಾಖೆ ಕೊಡಬೇಕು, ಇನ್ನು ಬೆಳೆ ವಿಮಾ ಯೋಜನೆಯನ್ನು ಮಾಡಿದ್ದೀರಿ. ಈ ಯೋಜನೆಯನ್ನು ನಾನು ಸ್ವಾಗತ ಮಾಡುತ್ತೇನೆ. ಈ ಬೆಳೆ ವಿಮಾ ಯೋಜನೆಯನ್ನು ಕೇವಲ ನೀರಾವರಿಯಲ್ಲಿ ಬೆಳೆಯುವ ಬೆಳೆಯ ಮೇಲೆ ಕೊಟ್ಟರೆ ಸಾಲದು ಅದನ್ನು ಒಣ ಭೂಮಿಯಲ್ಲಿ ಬೆಳೆಯುವ ಬೆಳೆಗೂ ಕೊಡಬೇಕು. ನಮ್ಮ ರಾಜ್ಯದಲ್ಲಿ ಶೇಕಡಾ ೮೫ ಜನ ವ್ಯವಸಾಯಗಾರರು ಮಳೆಯನ್ನು ನಂಬಿಕೊಂಡು ಒಣ ಬೇಸಾಯವನ್ನು ಮಾಡುತ್ತಿದ್ದಾರೆ. ಮಳೆ ಸಕಾಲದಲ್ಲಿ ಬರದೇ ಇದ್ದರೆ, ಬೆಳೆಯು ರೈತನ ಕೈಗೆ ಸಿಕ್ಕುವುದಿಲ್ಲ. ಆದ್ದರಿಂದ ಬೆಳೆ ವಿಮಾ ಯೋಜನೆಯನ್ನು ಒಣ ಬೇಸಾಯಕ್ಕೂ ವಿಸ್ತರಿಸಬೇಕೆಂದು ಮಾನ್ಯಮಂತ್ರಿಯವರಲ್ಲಿ ಕೇಳಿಕೊಳ್ಳುತ್ತೇನೆ. ಹಾಗೂ ಪರಿಶಿಷ್ಟ ಜಾತಿ ಮತ್ತು ವರ್ಗದ ಜನರವರಿಗೆ ವ್ಯವಸಾಯ ಕ್ಷೇತ್ರದಲ್ಲಿ ಸರಿಯಾದ ಸೌಲಭ್ಯಗಳು ಸಿಕ್ಕುತ್ತಿಲ್ಲ ಇದಕ್ಕೆ ಕಾರಣವೇನೆಂದು ಸಚಿವರು ಉತ್ತರ ಕೊಡಬೇಕು.

ಇನ್ನು ವಾರ್ತಾ ಮತ್ತು ಪ್ರವಾಸೋದ್ಯಮ ಖಾತೆಯ ಮೇಲೆ ಎರಡು ಮಾತುಗಳನ್ನು ಆಡುತ್ತೇನೆ. ಈ ಖಾತೆಯ ವ್ಯಾಪ್ತಿ ಬಹಳ ದೊಡ್ಡದು. ಆದರೆ ಈ ಖಾತೆಯನ್ನು ಸರಿಯಾಗಿ ನೋಡಿಕೊಳ್ಳಲು ಮಾನ್ಯ ಮಂತ್ರಿಯವರಿಗೆ ಸಮಯ ಸಿಕ್ಕುತ್ತಿಲ್ಲ. ಏಕೆಂದರೆ ಇವರು ಯಾವಾಗಲು ಒಂದಲ್ಲ ಒಂದು ಸಮಾರಂಭವನ್ನು ಉದ್ಘಾಟನೆ ಮಾಡಬೇಕಾಗಿರುತ್ತದೆ. ಪ್ರತಿ ದಿನವೂ ಇವರ ಫೋಟೋ ಪೇಪರ್‌ನಲ್ಲಿ ಬರುತ್ತಲೇ ಇರುತ್ತದೆ. ಇವರನ್ನು ಪ್ರತ್ಯೇಕವಾಗಿ ಒಂದು ಉದ್ಘಾಟನಾ ಇಲಾಖೆ ಮಾಡಿ, ಆದಕ್ಕೆ ಉದ್ಘಾಟನಾ ಮಂತ್ರಿಯಾಗಿ ಪ್ರತ್ಯೇಕವಾಗಿ ಮಾಡಿದರೆ ಬಹಳ ಒಳ್ಳೆಯದೆಂದು ಕಾಣಿಸುತ್ತದೆ. ಇವತ್ತಿನ ದಿವಸ ಪ್ರಾಚೀನ ಸಾಹಿತ್ಯವಾದ ಜನಪದ ಕಲೆ, ಮತ್ತು ಸಾಹಿತ್ಯಕ್ಕೆ ಇವರ ಪ್ರಚಾರ ಇಲಾಖೆಯಿಂದ ಸರಿಯಾಗಿ ಪ್ರಚಾರ ಸಿಗದೆ ಕಲೆಗಳು ಬೆಳೆಯುವುದಕ್ಕೇ ಅವಕಾಶ ಇಲ್ಲದಂತಾಗಿದೆ. ಇವರು ಜನಪದ ಕಲೆ ಸಂಗೀತ, ಸಾಹಿತ್ಯ, ನಾಟಕ ಮುಂತಾದ ಕಲೆಗಳನ್ನು ಕಾರ್ಯಕ್ರಮಗಳನ್ನಾಗಿ ಮಾಡಿ ಎಲ್ಲಿ ಪ್ರದರ್ಶನ ಮಾಡಿದ್ದೀರಿ ? ಬೆಂಗಳೂರು ನಗರದಲ್ಲಿ ಇವುಗಳನ್ನು ಪ್ರದರ್ಶನ ಮಾಡಿದರೆ ಸಾಕೆ ? ಗ್ರಾಮಾಂತರ ಪ್ರದೇಶಗಳಲ್ಲಿರತಕ್ಕಂತಹ ಜನರಿಗೆ ಇವುಗಳ ಪರಿಚಯವನ್ನು ಮಾಡಿಸುವುದಕ್ಕೆ ತಾವು ಏಕೆ ಕ್ರಮವನ್ನು ತೆಗೆದುಕೊಂಡಿಲ್ಲ ? ಇನ್ನು ಪತ್ರಿಕೆಗಳಿಗೆ ಸರ್ಕಾರದಿಂದ ಅಡ್‌ವರ್‌ಟೈಸ್‌ಮೆಂಟ್ ಕೊಡುವ ಬಗ್ಗೆ ಹೇಳುವುದಾದರೆ, ನೀವು ಪತ್ರಿಕೆಗಳಿಗೆ ಅಡ್‌ವರ್‌ಟೈಸ್‌ಮೆಂಟ್ ಕೊಡುತ್ತೀರಿ ಆದರೆ ಆದಕ್ಕೆ ಸರಿಯಾದ ಪ್ರಮಾಣದಲ್ಲಿ ಹಣವನ್ನು ಕೊಡುವುದಿಲ್ಲ, ನೆರೆ ರಾಜ್ಯಗಳಾದ ಕೇರಳಾ, ಮಹಾರಾಷ್ಟ್ರ ರಾಜ್ಯಗಳು ಪತ್ರಿಕೆಗಳಿಗೆ ಕೊಡುವ ಅಡ್‌ವರ್‌ಟೈಸ್‌ಮೆಂಟಿಗೆ ಸೂಕ್ತ ಪ್ರಮಾಣದಲ್ಲಿ ಹಣವನ್ನು ಕೊಡುತ್ತವೆ. ಆದ್ದರಿಂದ ತಕ್ಷಣ ಇದರ ಬಗ್ಗೆ ಗಮನ ಹರಿಸಿ ನ್ಯಾಯವಾದ ರೀತಿಯಲ್ಲಿ ಪತ್ರಿಕೆಗಳು ಪ್ರಕಟಿಸುವ ಸರ್ಕಾರದ ಜಾಹಿರಾತುಗಳಿಗೆ ಹಣವನ್ನು ಕೊಡಿ. ಇನ್ನು ಕನ್ನಡದ ಅಭಿವೃದ್ಧಿ ಬಗ್ಗೆ ಈಗಾಗಲೇ ಬಹಳ ಜನ ಸದಸ್ಯರು ಮಾತನಾಡಿದ್ದಾರೆ ಕನ್ನಡವನ್ನು ಎಷ್ಟರಮಟ್ಟಿಗೆ ಜವಾಬ್ದಾರಿಯಿಂದ ಇವರು ಜಾರಿಗೆ ತರುತ್ತಿದ್ದಾರೆ ಎಂದು ನೋಡಿದರೆ ಕನ್ನಡವನ್ನು ಇನ್ನು ಮುಂದೆ ಎಲ್ಲಾ ಹಂತದಲ್ಲೂ ಬಳಸಬೇಕೆಂದು ಎಲ್ಲಾ ಸರ್ಕಾರಿ ಕಛೇರಿಗಳಿಗೂ ಇವರು ಇಂಗ್ಲಿಷ್‌ನಲ್ಲಿ ಆರ್ಡರನ್ನು ಕಳುಹಿಸಿದ್ದಾರೆ. ಈ ಆಜ್ಞೆಯನ್ನು ಕನ್ನಡದಲ್ಲಿ ಕಳುಹಿಸುವುದಕ್ಕೆ ಆಗುತ್ತಿರಲಿಲ್ಲವೇ ? ಆಮೇಲೆ ನಮ್ಮ ವಿಧಾನ ಸಭೆಯ ಲಾಂಜ್‌ನಲ್ಲಿ ಒಂದು ಕನ್ನಡ ಬೋರ್ಡ್ ಇದೆ. ಅದರಲ್ಲಿ ಮಾಜಿ ಸಂಸತ್ ಸದಸ್ಯರು ಮತ್ತು ಶಾಸಕರು ಎಂದು ಬರೆದಿದ್ದಾರೆ, ನಾನು ಮಂತ್ರಿಯವರನ್ನು ಕೇಳುವುದು ಇಷ್ಟೇ, ಸಂಸತ್ ಯಾವಾಗ ಮಾಜಿ ಆಯಿತು ? ಸಂಸತ್ತಿನ ಮಾಜಿ ಸದಸ್ಯರು ಎಂದು ಬರೆಯುವುದನ್ನು ಬಿಟ್ಟು ಮಾಜಿ ಸಂಸತ್ತು ಎಂದು ಬರೆದಿದ್ದಾರೆ. ವಿಧಾನಸಭೆಯ ಆವರಣದಲ್ಲೇ ಕನ್ನಡವನ್ನು ಇಷ್ಟು ಅಭ್ಯಾಸ ಮಾಡಿದ್ದಾದರೆ, ಇನ್ನು ಬೇರೆ ಕಡೆ ಕನ್ನಡದ ಗತಿ ಏನು ? ಈ ಬೋರ್ಡನ್ನು ಮೊದಲು ಸರಿಯಾಗಿ ಬರೆಸಿ.

ಇನ್ನು ತೋಟಗಾರಿಕೆ ಇಲಾಖೆ ಬಗ್ಗೆ ಹೇಳುವುದಾದರೆ, ತೋಟಗಾರಿಕೆ ಇಲಾಖೆಯಲ್ಲಿ ಏನು ಕೆಲಸ ನಡೆದಿದೆ ಎಂದು ಹೇಳುವುದಕ್ಕೆ ನನಗೆ ನಾಚಿಕೆಯಾಗುತ್ತದೆ. ಈ ತೋಟಗಾರಿಕೆ ಇಲಾಖೆಯವರು ನಡೆಸಿದಂತಹ ಅವ್ಯವಹಾರ ಬೇರೆ ಇನ್ಯಾವುದೇ ಇಲಾಖೆಯಲ್ಲಿ ಮಾಡುವುದಿಲ್ಲವೆಂದು ಹೇಳಬಹುದು, ಇದರ ಬಗ್ಗೆ ನಾನು ಈಗಾಗಲೇ ಒಂದು ಪ್ರಶ್ನೆಯನ್ನು ಕಳುಹಿಸಿದ್ದೆ. ಬರಗಾಲಕ್ಕೆ ಹಣವನ್ನು ಕೊಟ್ಟು ಜನರಿಗೆ ಉಪಯೋಗವಾಗಬೇಕೆಂದು...

ಶ್ರೀ ಯಂ. ಭೂಪತಿ.—ಜನರಿಗೆ ಉಪಯೋಗ ಆಗಬೇಕೆಂದು ಮತ್ತು ಅದರಿಂದ ಅಭಿವೃದ್ಧಿ ಕಾರ್ಯಕ್ರಮಗಳನ್ನು ಕೂಡ ಮಾಡಿಕೊಡಬೇಕೆಂದು ಸರಕಾರದ ಯೋಜನೆ ಇದೆ. ಆದರೆ ಅದಕ್ಕೆ ವ್ಯತಿರಿಕ್ತವಾಗಿ ಅಧಿಕಾರಿಗಳು ವರ್ತಿಸಿ ಹಣವನ್ನು ದುರುಪಯೋಗ ಮಾಡಿರುತ್ತಾರೆ. ಇಂತಹ ದುರುಪಯೋಗದ ವಿಚಾರಗಳು ಕಂಡು ಬಂದ ತತ್‌ಕ್ಷಣ ಅಧಿಕಾರಿಗಳ ಮೇಲೆ ಉಗ್ರ ಕ್ರಮವನ್ನು ತೆಗೆದುಕೊಳ್ಳಬೇಕು, ಯಾವುದೇ ನಿಯಮಗಳನ್ನು ಕಾರ್ಯಗತ ಮಾಡುವಾಗ ಜಿಲ್ಲಾಧಿಕಾರಿಯವರು ಮಾಡಬೇಕಾಗುತ್ತದೆ. ಒಂದು ತಪ್ಪುಗಳನ್ನು ಅವರು ಮಾಡಿದ್ದರೂ ಕೂಡ ಅವರ ಮೇಲೆಯೂ ಕ್ರಮತೆಗೆದುಕೊಳ್ಳಬೇಕೆಂದು ಹೇಳುತ್ತೇನೆ.

ಇನ್ನು ಮೀನುಗಾರಿಕೆ ಬಗ್ಗೆ ಹೇಳುವುದಾದರೆ, ಅದರ ಬಗ್ಗೆ ನಮಗೆ ಹೆಚ್ಚು ವಿಷಯಗಳು ಗೊತ್ತಿಲ್ಲ, ಏಕೆಂದರೆ ಮೀನುಗಾರಿಕೆಗೂ ನಮ್ಮ ಜಿಲ್ಲೆಗೂ ಸಂಬಂಧ ಇಲ್ಲ. ಇದ್ದರೆ ನಮ್ಮಲ್ಲಿ ಸ್ವಲ್ಪ ತುಂಗಭದ್ರ ಡ್ಯಾಮ್ ಭಾಗದಲ್ಲಿ ಇರಬಹುದು. ಮಾನ್ಯ ಸಚಿವರು ಇಲ್ಲಿಯೇ ಮೀನುಗಳು ಚಡಪಡಿಸಿದ ಹಾಗೆ ಚಡಪಡಿಸುತ್ತಿದ್ದಾರೆ. ಹಾಗೆಯೇ ಈ ಮೀನುಗಾರಿಕೆ ಇಲಾಖೆಯ ಖಾತೆಯನ್ನು

ವಹಿಸಿಕೊಡುವಾಗ ಮೀನುಗಾರಿಕೆ ಪ್ರದೇಶದಿಂದ ಬಂದಿರತಕ್ಕಂತಹವರಿಗೆ, ಸಮುದ್ರ ಪ್ರದೇಶಗಳಿಂದ ಬಂದಿರತಕ್ಕಂತಹವರಿಗೆ ಮಾತ್ರ ಆ ಖಾತೆಯನ್ನು ವಹಿಸಿಕೊಡುವುದು ಸೂಕ್ತ ಎಂದು ನಾನು ಒಪ್ಪಿಕೊಳ್ಳುತ್ತೇನೆ ಮಾನ್ಯ ರಾಮಕೃಷ್ಣ ಹೆಗಡೆಯವರು ಮಂತ್ರಿಮಂಡಲದ ರಚನೆ, ವಿಸ್ತಾರ ಮಾಡುತ್ತೇನೆ ಎಂದು ಈಗಾಗಲೇ ಹೇಳಿದ್ದಾರೆ, ಆ ಕಾಲದಲ್ಲಿ ಮಾನ್ಯ ಬೈರೇಗೌಡರಿಗೆ ಬೇರೆ ಯಾವುದಾದರೂ ಒಳ್ಳೆಯ ಖಾತೆಯನ್ನು ಕೊಟ್ಟು ಮೀನುಗಾರಿಕೆ ಇಲಾಖೆಯನ್ನು ಸಮುದ್ರ ಭಾಗದಲ್ಲಿಂದ ಬಂದಿರತಕ್ಕಂತಹವರಿಗೆ ಕೊಡಬೇಕೆಂದು ಕೇಳಿಕೊಳ್ಳುತ್ತೇನೆ ಮಾನ್ಯ ಅಧ್ಯಕ್ಷರು ಬೆಲ್ ಹೊಡೆಯುತ್ತಿದ್ದಾರೆ. ಇಷ್ಟಕ್ಕೆ ನನ್ನ ಮಾತುಗಳನ್ನು ಮುಗಿಸಿ, ಅಧ್ಯಕ್ಷರಿಗೆ ಕೃತಜ್ಞತೆಗಳನ್ನು ಅರ್ಪಿಸಿ, ನನ್ನ ಮಾತುಗಳನ್ನು ಮುಗಿಸುತ್ತೇನೆ.

† ಶ್ರೀಮತಿ ಕೆ. ಎಸ್. ನಾಗರತ್ನಮ್ಮ (ಗುಂಡ್ಲುಪೇಟೆ).—ಮಾನ್ಯ ಅಧ್ಯಕ್ಷರೆ, ನಾನು ಈ ವ್ಯವಸಾಯ ಖಾತೆಯ ಮೇಲೆ ನಾಲ್ಕು ಮಾತುಗಳನ್ನು ಮತ್ತು ನನಗೆ ತೋರಿದ ಎರಡು ಸಲಹೆಗಳನ್ನು ಕೊಡಬೇಕೆಂದು ನಿಂತಿದ್ದೇನೆ. ಈ ಅಗ್ರಿಕಲ್ಚರ್, ಉಳಿದ ಎಲ್ಲಾ ಕಲ್ಚರ್‌ಗಳಿಗೂ ಮದರ್ ಕಲ್ಚರ್ ಎಂದು ಹೇಳುತ್ತಾರೆ. ಈ ಮದರ್ ಕಲ್ಚರ್ ಬಗ್ಗೆ ಹೇಳಬೇಕಾದರೆ ಊಟ ಮಾಡುವುದಕ್ಕೆ ಆಹಾರವನ್ನು ಬೆಳೆಯುವಂತಹ, ಬಟ್ಟೆಗಾಗಿ ಹತ್ತಿ ಬೆಳೆಯುವಂತಹ ಪೌಷ್ಟಿಕ ಆಹಾರಗಳನ್ನು, ಅಂದರೆ ಕಬ್ಬು, ಎಣ್ಣೆಕಾಳು, ಇವೆಲ್ಲವನ್ನೂ ಬೆಳೆಯುವಂತಹ ಭೂಮಿ ತಾಯಿಯ ಬಗ್ಗೆ ಬಹಳ ಜನರಿಗೆ ಇದರ ಮೇಲೆ ಉದಾಸೀನ. ಇದರ ಕಸಬು ಮಾಡುವವರಿಗೂ ಹೆಚ್ಚು ಉದಾಸೀನ. ನಾನು ಈಗಲೂ ಒಂದು ಎಚ್ಚರಿಕೆಯನ್ನು ಕೊಡ ಬಯಸುತ್ತೇನೆ, ಎಲ್ಲಿಯವರೆಗೆ ನಮ್ಮ ಚಡ್ಡಿ ರೈತ ಬದುಕಿರುತ್ತಾನೆಯೋ ಅಲ್ಲಿಯವರೆಗೆ ಹೊಟ್ಟೆ ತುಂಬ ಊಟ ಸಿಗುತ್ತದೆ, ಆಮೇಲೆ ಈಗ ನಾವು ಸಿಂಥೆಟಿಕ್ ಬಟ್ಟೆ ಇತ್ಯಾದಿಗಳನ್ನು ಬಳಸುವ ರೀತಿಯಲ್ಲಿ ಫುಡ್ ಕಾಪ್ಸೂಲ್‌ಗಳನ್ನು ಬಳಸಬೇಕಾಗಿ ಬರಬಹುದು. ನಮಗೆ ಈ ದಿಸೆಯಲ್ಲಿ ಸಾಕಷ್ಟು ತೊಂದರೆ ಈಗಾಗಲೇ ಬಂದಿದೆ. ಅದು ಏಕೆ ಬಂದಿದೆ ಅಂದರೆ ನಮ್ಮ ಈ ಪ್ರಜಾಕೋಟಿ ಸಾಕಷ್ಟು ಬೆಳೆದಿದೆ. ಅದಕ್ಕೋಸ್ಕರ, ಮತ್ತು ಫ್ಯಾಕ್ಟರಿಗೋಸ್ಕರ, ಮನೆಗಳನ್ನು ಕಟ್ಟುವುದಕ್ಕೋಸ್ಕರ, ಆಟದ ಮೈದಾನಗಳಿಗೋಸ್ಕರ ಸಾಕಷ್ಟು ಜಾಗಗಳನ್ನು ನಾವು ಅಕ್ರಮ ಮಾಡಿಕೊಂಡಿದ್ದೇವೆ. ಇದರಿಂದ ವ್ಯವಸಾಯಕ್ಕೆ ಸಿಗುವ ಜಾಗವನ್ನು ಕಡಿಮೆ ಮಾಡಿದ್ದೇವೆ ಕಾಲಕ್ಕೆ ತಕ್ಕ ಹಾಗೆ ೧೦ ಎಕರೆಯಲ್ಲಿ ಬೆಳೆಯುತಕ್ಕಂತಹ ಬೆಳೆಯನ್ನು ೨ ಎಕರೆಗಳಲ್ಲಿ ಬೆಳೆಯ ಬಹುದಾಗಿದೆ. ಈ ಹೈಬ್ರಿಡ್ ಬೀಜಗಳು, ಅದರಿಂದ ಆಗತಕ್ಕಂತಹ ಸಾಧನೆ, ಅದರಿಂದ ಆಹಾರದ ಉತ್ಪಾದನೆಯ ಹೆಚ್ಚಳ, ಇದೆಲ್ಲವೂ ನಿಜ, ಆದರೆ ಇದರಿಂದಾಗಿ ಕ್ವಾಂಟಿಟಿ ಹೆಚ್ಚು ಆಯಿತು, ಆದರೆ ಕ್ವಾಲಿಟಿ, ಗುಣಮಟ್ಟ, ಇವುಗಳನ್ನು ನೋಡಿದರೆ ನಮಗೆ ನಿಜಕ್ಕೂ ಗಾಬರಿ ಹುಟ್ಟಿಸುವಂತಹ ಸನ್ನಿವೇಶ ಬರುತ್ತಿದೆ. ಈ ಬೀಜಗಳನ್ನು ಬೆಳೆಯ ಬೇಕಾದರೆ, ಇವುಗಳು ಬಹಳ ಸೂಕ್ಷ್ಮವಾದ ತಳಿಗಳು. ಇವುಗಳನ್ನು ಬಹಳ ಜೋಪಾನವಾಗಿ ಬಿತ್ತನೆ ಮಾಡಿ ಸರಿಯಾಗಿ ಅದಕ್ಕೆ ಗೊಬ್ಬರ ಕೊಟ್ಟು, ಇಷ್ಟೇ ಅಲ್ಲಾ ಈ ಪೈರುಗಳು ತಿಂದು ಕಕ್ಕುವಷ್ಟು ಪೆಸ್ಟಿಸೈಡ್ಸ್ ಹೊಡೆದು ಅವುಗಳನ್ನು ಕಾಪಾಡಬೇಕು. ಅಂಥದ್ದನ್ನು ತಿನ್ನುವುದು ನಮಗೆ ಭಯ. ರೈತರಿಗೆ ಅವರು ಬಿತ್ತಿದ ಬೆಳೆಯು ಕೈಗೆ ಬರಬೇಕು, ಹೆಚ್ಚಿಗೆ ಉತ್ಪನ್ನವಾಗಬೇಕೆಂದು ಆತುರದಿಂದ ಇರುತ್ತಾರೆ ಆದರೆ ಬೆಳೆಗಳಲ್ಲಿ ಔಷಧಿಯ ಪರಿಣಾಮಗಳನ್ನು ಅವರು ಅರಿತಿರುವುದಿಲ್ಲ. ನಾವು ರಾಜಕಾರಣಿಗಳು, ದೇಶದಲ್ಲಿ ಜಾಸ್ತಿ ಬೆಳೆದು ಸಾಧನೆ ಮಾಡಿದ್ದೇವೆ ಎಂದು ಹೇಳಿಕೊಳ್ಳುವುದು, ಅಹಂಕಾರ ಪಡುವುದು. ಹೀಗಾಗಿ ನಮ್ಮ ಮಹಾಜನಗಳಿಗೆ ಬಹುತೇಕವಾಗಿ ನಾವು ಸಾಕಷ್ಟು ಪ್ರಮಾಣದಲ್ಲಿ ಆಹಾರಧಾನ್ಯಗಳ ಮೂಲಕ ವಿಷವನ್ನು ತಿನ್ನಿಸುತ್ತಾ ಇದ್ದೇವೆ. ಕೆಲವು ದಿನಗಳ ಹಿಂದೆ ಅಮೇರಿಕಾದಿಂದ ನನ್ನ ಸ್ನೇಹಿತರು ಬಂದಿದ್ದರು, ಅವರು ಹೇಳುತ್ತಿದ್ದರು, ನಾವು ಅಲ್ಲಿ ಈಗ ಪುನಃ ನವೀನತೆಯಿಂದ ಹಿಂದಕ್ಕೆ ಹೋಗುತ್ತಾ ಇದ್ದೇವೆ, ರೋಗರಹಿತ ಬಿತ್ತನೆ ಕಾಂಪೋಸ್ಟ್ ಮತ್ತು ಮಿನಿಮಮ್ ಡೋಸೇಜ್ ಆಫ್ ಫರ್ಟಿಲೈಸರ್ಸ್, ಮತ್ತು ಪ್ರಾಪರ್ ಮ್ಯಾನೇಜ್‌ಮೆಂಟ್ ಈ ಕಡೆಗೆ ನಮ್ಮ ಲಕ್ಷ ಹೆಚ್ಚು ಆಗುತ್ತಿದೆ ಎಂದು ಹೇಳುತ್ತಿದ್ದರು. ಇಷ್ಟೆಲ್ಲ ಆಯಿತು ಅಂದರೆ ನಮಗೆ ಇವರದ್ದು ಪೆಸ್ಟಿಸೈಡ್ಸ್ ಜರೂರು ಇಲ್ಲ ಎಂದು ಅವರು ಅಭಿಪ್ರಾಯವನ್ನು ಪಡುತ್ತಾ ಇದ್ದಾರೆ. ಇಲ್ಲಿ ನಮಗೆ ಬರುತ್ತಾ ಇರುವ ತೊಗರಿ, ದ್ವಿದಳ ಧಾನ್ಯಗಳು, ಭತ್ತ, ಕಡ್ಲೆಕಾಳು, ಇವೆಲ್ಲವುಗಳಲ್ಲಿಯೂ ಹೆಚ್ಚು ಪ್ರಮಾಣದಲ್ಲಿ ಔಷಧಿಯ ಪರಿಣಾಮಗಳು ಇವೆ. ಎಂದು ಕೂಡ ಅವರು ಹೇಳಿದರು. ಇದನ್ನು ನಾನು ತಂತ್ರಜ್ಞರೊಂದಿಗೆ ಚರ್ಚೆ ಮಾಡಿ ಕೇಳಿದಾಗ ಅವರು ಒಪ್ಪಿಕೊಂಡರು, ಮತ್ತು ತಮ್ಮ ನಿಸ್ಸಹಾಯಕತೆಯನ್ನು ಅವರು ತೋಡಿಕೊಂಡರು.

ಅವರು ಹೇಳುತ್ತಾರೆ. ನಾವು ಹತ್ತಿಗಷ್ಟೆ ಇವುಗಳನ್ನು ಉಪಯೋಗ ಮಾಡಿರಿ, ಎಂದು ಹೇಳಿದರೆ ರೈತರು ನಮ್ಮ ಮಾತು ಕೇಳುವುದಿಲ್ಲ, ಅವರು ತೊಗರಿ, ಕಡಲೆ, ಎಣ್ಣೆಕಾಳು, ಎಲ್ಲಕ್ಕೂ ಔಷಧಿಗಳನ್ನು ಹೊಡೆಯುತ್ತಾರೆ. ಮಾರ್ಕೆಟಿನಲ್ಲಿ ಔಷಧಿ ಸಿಗುತ್ತದೆ ತಂದು ಹೊಡೆಯುತ್ತಾರೆ ಎಂದು ಹೇಳುತ್ತಾರೆ. ನಮಗೆ ತಡೆಯುವುದಕ್ಕೆ ಆಗುವುದಿಲ್ಲ ಎಂದು ಕೂಡ ಹೇಳುತ್ತಾರೆ. ರೈತನಿಗೆ ಬೆಳೆ ಅತಿ ಮುಖ್ಯ, ಎಂದು ಹೇಳುತ್ತಾರೆ. ಅಷ್ಟೇ ಅಲ್ಲದೆ ಇದು ನಮ್ಮ ಜವಾಬ್ದಾರಿ ಅಲ್ಲ, ಎಕ್ಸ್‌ಟೆನ್‌ಷನ್‌ನವರ ಜವಾಬ್ದಾರಿ ಇದು, ಎಂದು ಹೇಳುತ್ತಾರೆ. ಅಂದರೆ ನಮ್ಮಲ್ಲಿ ಎಕ್ಸ್‌ಟೆನ್‌ಶನ್ ಕೆಲಸ ಎಷ್ಟು ನಡೆದಿದೆ ಎಂದು ತಿಳಿದುಕೊಳ್ಳಬಹುದು. ಜಪಾನ್‌ನಲ್ಲಿ ಡಿ.ಡಿ.ಟಿ.ಯನ್ನು ಯಥೇಚ್ಛವಾಗಿ ರೈತರು ಉಪಯೋಗಿಸಿದ್ದರಿಂದ ತಾಯಿಯ ಹಾಲಿನಲ್ಲಿಯೂ ಅದರ ಅಂಶವನ್ನು ಕಂಡುಕೊಂಡು ಅನಂತರ ಅಲ್ಲಿ ಡಿ.ಡಿ.ಟಿ. ಉಪಯೋಗಕ್ಕೆ ಬ್ಯಾನ್ ಮಾಡಿದರು. ಅಂತಹ ಕಡೆಗಳಲ್ಲಿ ಬ್ಯಾನ್ ಮಾಡಿದುದನ್ನು ನಾವು ಇಲ್ಲಿ ಉಪಯೋಗ ಮಾಡುವುದಕ್ಕೆ ಪ್ರಾರಂಭ ಮಾಡುತ್ತೇವೆ. ನಮ್ಮ ಎಕ್ಸ್‌ಟೆನ್‌ಶನ್ ವರ್ಕ ಸ್ವಲ್ಪವೂ ಸರಿಯಾಗಿ ನಡೆಯುತ್ತಾ ಇಲ್ಲ. ಇವೊತ್ತು ಸಂಜೆ ಬೀನ್ಸ್‌ಗಾಗಲಿ, ಟೊಮೊಟೊಗಾಗಲಿ, ಕ್ಯಾಬೇಜ್‌ಗಾಗಲಿ, ಎಲ್ಲಾ ಬೆಳೆಗಳಿಗೂ ಮೆಟಾಸಿಡ್ ಔಷಧಿಯನ್ನು ಹೊಡೆಯುತ್ತಿದ್ದಾರೆ, ಬೆಳಿಗ್ಗೆ ಮಾರ್ಕೆಟಿಗೆ ತರುತ್ತಾರೆ, ಅದನ್ನು ನಾವು ತೆಗೆದುಕೊಂಡು ತಿನ್ನುತ್ತೇವೆ. ಇದರಿಂದಾಗಿ, ಆಸ್ಪತ್ರೆಗಳಲ್ಲಿ ಕ್ಯಾನ್ಸರ್, ಮೆಂಟಲ್ ಆಸ್ಪತ್ರೆಗಳಲ್ಲಿ ಹುಚ್ಚರು, ಮತಿವಿಕಲರು, ಹೀಗೆ ನಾನಾ ರೀತಿಯ ರೋಗಿಗಳು ಬರುತ್ತಾ ಇದ್ದಾರೆ, ಡಾಕ್ಟರ್‌ಗಳು ಇದು ಆಹಾರದ ದೋಷ ಎಂದು ಹೇಳುತ್ತಾ ಇದ್ದಾರೆ. ತಜ್ಞರು, ವಿಜ್ಞಾನಿಗಳು, ಎಲ್ಲರೂ ಹೇಳುತ್ತಾ ಇದ್ದಾರೆ. ಆದರೆ ನಮ್ಮಲ್ಲಿ ನಡೆಯುತ್ತಾ ಇದ್ದದ್ದು ಮುಂದೆ ಹೋಗುತ್ತಿದೆ. ಈ ಡಾನಿಡ ಯೋಜನೆ ಮತ್ತು ಇತರ ತರಬೇತಿ ಕೇಂದ್ರಗಳನ್ನು ತೆಗೆದು ಹೆಣ್ಣುಮಕ್ಕಳಿಗೆ, ಮತ್ತು ಯುವಕರಿಗೆ ಮಾಡರ್ನ್ ಅಗ್ರಿಕಲ್ಚರ್ ವಿಷಯದ ಬಗ್ಗೆ ತರಬೇತಿ ನೀಡುತ್ತಿದ್ದೀರಿ, ಇದು ತುಂಬಾ ಒಳ್ಳೆಯ ಕಾರ್ಯಕ್ರಮವಾಗಿದೆ ಈ ವ್ಯವಸಾಯ ತುಂಬಾ ಶ್ರಮದ ಮತ್ತು ಕಷ್ಟದ ಕೆಲಸ. ಇದಕ್ಕೆ ಅಷ್ಟು ಗೌರವವೂ ಇಲ್ಲ. ವ್ಯವಸಾಯಗಾರರು. ರೈತರು, ಇವರ ಕೈ, ಬಾಯಿ ಎಲ್ಲಾ ಮಣ್ಣು ಕಷ್ಟ ಪಟ್ಟು ದುಡಿದ ಮೈಯ ವಾಸನೆ ಬೆವರಿನ ವಾಸನೆ. ಸೆಗಣಿ ಮುಟ್ಟಿದ ಕೈ ಕೂಡಾ ವಾಸನೆ. ಬಿಸಿಲಿನಲ್ಲಿನ ಕೆಲಸದ ವಾಸನೆ. ಇದು ಫ್ಯಾಷನಬಲ್ ಜಾಬ್ ಅಂತೂ ಅಲ್ಲ. ಹೀಗಾಗಿ ಎಲ್ಲಿ ಹೋದರೂ ಕೂಡ ಈ ರೈತ ಮಕ್ಕಳು, ಎಸ್.ಎಸ್.ಎಲ್.ಸಿ. ಆದವರೂ ಕೂಡ ಒಂದು ಕೆಲಸ ಕೊಡಿಸಿ ಎಂದು ಅಂಗಲಾಚುತ್ತಿದ್ದಾರೆ. ೨೫–೩೦ ಎಕರೆ ಜಮೀನು ಇದ್ದರೂ ಇವರಿಗೆ ಅದು ಬೇಡವಾಗಿದೆ ಅದಕ್ಕಾಗಿ ನೀವು ತರಬೇತಿ ಕೇಂದ್ರದಲ್ಲಿ ಇವರಿಗೆ ತರಬೇತಿಯನ್ನು ಕೊಡುವ ಮೊದಲು, ರೈತನ ಕೆಲಸ ಅತ್ಯಂತ ಗೌರವಯುತವಾದ ಕೆಲಸ ಪ್ರಪಂಚಕ್ಕೆ ಅನ್ನ ಕೊಡುವ ಮಹಾನ್ ಪುಣ್ಯದ ಕೆಲಸ, ನೀನು ಈ ಜಗದ ಪ್ರಭು ಎಂದು ಅವರಿಗೆ ಹೇಳಿ ಮನವರಿಕೆ ಮಾಡಿಕೊಡಬೇಕು. ಅಷ್ಟೆ ಅಲ್ಲ, ರೈತರಿಗೆ ಇರುವ ಬೆಲೆ ಬೇರೆ ಯಾರಿಗೂ ಇಲ್ಲ ಎಂದು ಅವರಲ್ಲಿ ಪ್ರಜ್ಞಾಭಾವನೆ ಬರುವ ಹಾಗೆ ಮಾಡಬೇಕು. ಅಲ್ಲದೇ ಪ್ರಭುವಾದ ರೈತ ಯಾರ ಮರ್ಜಿಗೂ ಕಾಯಬೇಕಾಗಿಲ್ಲ. ಯಾರ ಬೆದರಿಕೆಗೂ ಒಳಪಡಬೇಕಾಗಿಲ್ಲ, ಇದು ಸ್ವತಂತ್ರವಾದ ಉದ್ಯೋಗ ಮಹಾನ್ ಉದ್ಯೋಗ ಎಂದು ಮನವರಿಕೆ ಮಾಡಿಕೊಡಬೇಕು ಅದರ ಜೊತೆಗೆ ಬೇಸಾಯದಲ್ಲಿನ ತಂತ್ರ, ನಿಪುಣತೆಯನ್ನು ಹೇಳಿಕೊಡಬೇಕು. ಇಷ್ಟು ಆದರೆ ಮಾತ್ರ ನಿಮ್ಮ ಲಕ್ಷ ಲಕ್ಷಾಂತರ ರೂಪಾಯಿಗಳ ಹಣವನ್ನು ಖರ್ಚು ಮಾಡಿದ್ದಕ್ಕೆ ಸಾರ್ಥಕವಾಗುತ್ತದೆ.

ನಾವು ಅದನ್ನು ಹೇಳಿಕೊಡದಿದ್ದರೆ ಇಷ್ಟು ಲಕ್ಷಾಂತರ ರೂಪಾಯಿಗಳ ಹಣವನ್ನು ಖರ್ಚುಮಾಡಿ ಈ ಕೇಂದ್ರಗಳಲ್ಲಿ ತರಬೇತಿಯನ್ನು ಕೊಟ್ಟಿದ್ದರ ಸಾರ್ಥಕವಾಗುವುದಿಲ್ಲ. ಆದ್ದರಿಂದ ತಾವು ಆ ಪಾಠವನ್ನು ಈ ತರಬೇತಿ ಕೇಂದ್ರಗಳಲ್ಲಿ ಹೇಳಿಕೊಟ್ಟರೆ ಆಗ ಅದರ ಪ್ರಯೋಜನ ಸ್ವಲ್ಪಮಟ್ಟಿಗಾದರೂ ಆಗುವುದು. ನಮ್ಮ ಭಾರತ ದೇಶದಲ್ಲಿ ನಾನಾ ರೀತಿಯ ಮಣ್ಣು ಅದಕ್ಕೆ ತಕ್ಕಂತಹ ಹವಾಮಾನ ಮತ್ತು ನೀರು ಇದೆ. ಹಾಗಾಗಿ ಒಂದು ಕಡೆ ಬೆಳೆಯುವ ಬಿತ್ತನೆ ಬೀಜ. ಇನ್ನೊಂದು ಕಡೆ ಬೆಳೆಯುವುದಕ್ಕೆ ಆಗುವುದಿಲ್ಲ. ಆದ್ದರಿಂದ ಇವತ್ತು ನಾವು ಈ ಬಗ್ಗೆ ಆಗಿಂದಾಗ್ಗೆ ಒಂದು ರೀಸರ್ಚ್ ನಡೆಸುತ್ತಿರಬೇಕಾಗುತ್ತದೆ, ತಾವು ತಮ್ಮ ವರದಿಯಲ್ಲಿ ಕೆಲವಾರು ವಿಷಯಗಳನ್ನು ಹೇಳಿದ್ದೀರಿ. ಏನು ಹೇಳಿದ್ದೀರಿ ಎಂದರೆ ೯೦ ದಿವಸಗಳಲ್ಲಿ ಮಾಗುವ ತಳಿಗಳು, ೧೧೫ ದಿವಸಗಳಿಗೆ ಮಾಗುವ ತಳಿಗಳು ಇನ್ನು ಅನೇಕ ರೀತಿಯ ಬಿತ್ತನೆ ತಳಿಗಳನ್ನು ಇಲ್ಲಿ ಕೊಟ್ಟಿದ್ದೀರಿ ಇಂತಹ ತಳಿಗಳನ್ನು ನಮ್ಮ ಮೈಸೂರು ಜಿಲ್ಲೆಯ ನಂಜನಗೂಡು ಸಬ್ ಡಿವಿಜನ್‌ಗೂ

ಕೊಡಿ ಅಲ್ಲಿ ಯಂಗಾದಿಗಿಂತ ಮುಂಚಿತವಾಗಿ ಮಳೆ ಬರುತ್ತದೆ. ಆದ್ದರಿಂದ ಅಲ್ಲಿನ ರೈತರು ಮಾರ್ಚಿ ಅಥವಾ ಏಪ್ರಿಲ್ ತಿಂಗಳಿನಲ್ಲಿ ಬಿತ್ತನೆಯನ್ನು ಮಾಡಬೇಕಾಗುತ್ತದೆ. ಅದಕ್ಕೆ ತಕ್ಕಂತೆ ತಾವು ಬಿತ್ತನೆ ಬೀಜಗಳನ್ನು ಒದಗಿಸಿಕೊಡಿ ನಮ್ಮ ಕಡೆ ಹೆಚ್ಚಾಗಿ ಜೋಳ ಬೆಳೆಯುತ್ತಾರೆ ಆ ಬೆಳೆ ಮಣ್ಣಿನಲ್ಲಿ ಬಹಳ ಚೆನ್ನಾಗಿ ಬೆಳೆಯುತ್ತದೆ. ಈಗ ಮಾರ್ಚಿ ಮತ್ತು ಏಪ್ರಿಲ್ ತಿಂಗಳಿನಲ್ಲಿ ಮಳೆ ಪ್ರಾರಂಭವಾದರೆ ಜೂನ್ ಮತ್ತು ಆಗಸ್ಟ್ ತಿಂಗಳಿಗೆ ಮಳೆ ನಿಂತು ಹೋಗುತ್ತದೆ. ಆದ್ದರಿಂದ ಆ ಕಡೆ ಒಳ್ಳೆಯ ಬಿತ್ತನೆ ಬೀಜ ಕೊಡುವುದಕ್ಕೆ ಪ್ರಯತ್ನ ಮಾಡಬೇಕೆಂದು ನಾನು ಸಲಹೆ ಮಾಡುತ್ತೇನೆ. ಈಗ ತಾವು ನಮ್ಮ ಕಡೆ ಕೂಡ ರೇಣುಕ, ಇಂಡಾಫ್-೫, ಇಂಡಾಫ್-೯ ಮತ್ತು ಹೈಬ್ರೀಡ್ ಇತ್ಯಾದಿ ತಳಿಗಳನ್ನು ಒದಗಿಸಿ ಕೊಡುತ್ತಿದ್ದೀರಿ. ಈ ಬೆಳೆಗಳು ಸಹ ಚೆನ್ನಾಗಿ ಬೆಳೆಯುತ್ತಿವೆ. ಆದ್ದರಿಂದ ಇನ್ನು ಹೆಚ್ಚು ಹೆಚ್ಚು ರೀಸರ್ಚ್ ನಡೆಸಿ ಒಳ್ಳೆಯ ಬಿತ್ತನೆ ಬೀಜಗಳನ್ನು ಕೊಡಿ, ಇನ್ನು ನಾನು ಯೂನಿವರ್ಸಿಟಿ ಆಫ್ ಅಗ್ರಿಕಲ್ಚರ್ ಸೈನ್ಸ್ ಬಗ್ಗೆ ಕೆಲವಾರು ವಿಚಾರಗಳನ್ನು ಮಾತನಾಡಬೇಕಾಗಿದೆ. ನಾನು ಈ ಯೂನಿವರ್ಸಿಟಿ ಫೈನಾನ್ಸ್ ಕಮಿಟಿಯಲ್ಲಿ ಕೆಲಸ ಮಾಡುತ್ತಿದ್ದೇನೆ. ತಾವು ೧೯೮೫-೮೬ನೇ ಸಾಲಿನಲ್ಲಿ ಸುಮಾರು ೬೩೨ ಲಕ್ಷ ರೂಪಾಯಿಗಳನ್ನು ಕೊಟ್ಟು ಪುನಃ ೬೭೭.೫೪ ಲಕ್ಷ ರೂಪಾಯಿಗಳಿಗೆ ರಿವೈಜ್ ಮಾಡಿದ್ದೀರಿ. ಈ ಹಣ ಅಲ್ಲಿ ಏತಕ್ಕೂ ಸಹ ಸಾಕಾಗುವುದಿಲ್ಲ. ಅಲ್ಲಿ ಹಣವಿಲ್ಲದೆ ಬೇಕಾಗಿರತಕ್ಕಂಥ ಬಾಬುಗಳಿಗೆ ಹಣವನ್ನು ಕಡಿಮೆ ಖರ್ಚು ಮಾಡುತ್ತಿದ್ದೇವೆ. ಈಗ ನಾವು ೧೯೮೬-೮೭ನೇ ಸಾಲಿಗೆ ೧೦೩೪.೯೪ ಲಕ್ಷ ರೂಪಾಯಿಗಳು ಬೇಕು ಎಂದು ಕಳುಹಿಸಿಕೊಟ್ಟಿದ್ದೇವೆ. ಇದರಲ್ಲಿ ನಮಗೆ ಇಂಟರ್‌ನಲ್ ರಿಸೀಪ್ಟ್ ಏನಾದರೂ ಇದ್ದರೆ ೧೬೦ ಲಕ್ಷ ರೂಪಾಯಿಗಳು ಬೇಕಾಗುತ್ತದೆ ಇನ್ನು ಉಳಿದ ೬೬೩.೭೦ ಲಕ್ಷ ರೂಪಾಯಿಗಳು ಬೇಕಾಗುತ್ತದೆ. This includes D.A. as per the procedure being followed in the State Government for the ensuing year. ಅದಕ್ಕೆ ಪ್ರಾವಿಜನ್ ಕೂಡ ಮಾಡಿದ್ದೇವೆ. ಇದರಲ್ಲಿ ಬಿಲ್ಡಿಂಗ್ ಮೈನ್‌ಟೆನ್ಸ್‌ಗೆ ಸುಮಾರು ೪೯ ಲಕ್ಷ ರೂಪಾಯಿಗಳು ಬೇಕಾಗುತ್ತದೆ. ಈಗ ನಮಗೆ ಸರ್ಕಾರದವರು ಕೊಟ್ಟಿರತಕ್ಕಂಥ ಹಣ ಕೇವಲ ೭೦೦ ಲಕ್ಷ ರೂಪಾಯಿಗಳು ಇದು ಯಾವ ಮೂಲೆಗೆ ಸಾಲುವುದು? ನಾವು ಎಷ್ಟು ಹಣ ಕೇಳುತ್ತೇವೆಯೋ ಅಷ್ಟು ಹಣ ಸರ್ಕಾರ ಕೊಡುವುದಿಲ್ಲ. ಅವರು ಕೊಟ್ಟ ಹಣದಲ್ಲಿ ನಾವು ಡಿ.ಎ. ಕೊಡಬೇಕಾಗುತ್ತದೆ. ಈಗ ನೀವು ಕೊಟ್ಟಿರುವ ೭೧೧ ಲಕ್ಷ ರೂಪಾಯಿಗಳಲ್ಲಿ ಬಾಕಿ ಉಳಿಯುವುದು ಕೇವಲ ೨೫೩ ಲಕ್ಷ ರೂಪಾಯಿಗಳು ನಾವು ಕೇಳಿದ ಹಣದಲ್ಲಿ ಕಡಿಮೆ ಕೊಟ್ಟಿದ್ದೀರಿ, ಇದರಿಂದ ರೀಸರ್ಚ್ ಕಂಟಿಂಜೆಂಟ್ ಎಕ್ಸ್‌ಪೆಂಡೀಚರ್ಸ್‌ಗೆ ಹಣ ಇರುವುದಿಲ್ಲ. ಹೀಗೆ ಫಾರ್ಮ್ ಎಕ್ಸ್‌ಪೆಂಡೀಚರ್‌ಗೆ ನಾವು ಕಡಿಮೆ ಹಣ ಖರ್ಚು ಮಾಡುವುದರಿಂದ ಫಾರಮ್ಸ್‌ನಿಂದ ಬರುವ ರೀಸಿಪ್ಟ್ಸ್ ಕಡಿಮೆಯಾಗುತ್ತದೆ. ಇದರಿಂದ ನಮಗೆ ಬರತಕ್ಕಂಥ ವರಮಾನ ಕಡಿಮೆಯಾಗುತ್ತದೆ.

ಶ್ರೀ ಡಿ ಬಿ. ಬಸವನಗೌಡ ಪಾಟೀಲ್.—ಇದರಲ್ಲಿ ಸುಮಾರು ೮೦ ಪರ್ಸೆಂಟ್‌ನಷ್ಟು ಹಣ ಸಂಬಳಕ್ಕೆ ಹೋಗುತ್ತದೆ. ಇನ್ನು ಯೂನಿವರ್ಸಿಟಿಯಲ್ಲಿ ರೀಸರ್ಚ್‌ಗೆ ಏನು ಖರ್ಚು ಮಾಡುವುದು?

ಶ್ರೀಮತಿ ಕೆ ಎಸ್. ನಾಗರತ್ನಮ್ಮ.—ನೀವು ಕೊಡತಕ್ಕಂಥ ಹಣದಲ್ಲಿ ಪ್ರೊಫೆಸರ್ಸ್ ಮತ್ತು ಅಸೋಸಿಯೇಟೆಡ್ ಪ್ರೊಫೆಸರ್ಸ್ ಅನ್ನು ಅಪಾಯಿಂಟ್ ಮಾಡಿಕೊಂಡು ಅವರನ್ನು ಚೆನ್ನಾಗಿಟ್ಟುಕೊಂಡಿರಬಹುದು ಅಷ್ಟೇ. ಆದರೂ ಸಹ ನಮ್ಮಲ್ಲಿ ಈಗ ಸುಮಾರು ೭೧೨ ಪೋಸ್ಟ್‌ಗಳು ಖಾಲಿ ಇವೆ. ಆದ್ದರಿಂದ ನಮಗೆ ಸರ್ಕಾರ ಹೆಚ್ಚು ಹಣ ಕೊಡಬೇಕು. ಈ ಬಗ್ಗೆ ಹಿಂದಿನ ಸರ್ಕಾರವಿದ್ದಾಗ ಶ್ರೀಮಾನ್ ರಾಮೇಗೌಡರು ದಿನಾಂಕ ೨೫-೭-೮೨ರಲ್ಲಿ ಒಂದು ಪ್ರಶ್ನೆಯನ್ನು ಕೇಳಿದ್ದಾರೆ. ಅದಕ್ಕೆ ಮಾನ್ಯ ಮಂತ್ರಿಗಳಾದಂಥ ಶ್ರೀಮಾನ್ ಶ್ರೀಕಂಠಯ್ಯನವರು ಉತ್ತರ ಕೊಟ್ಟಿದ್ದಾರೆ. ಆಗ ಅವರು ಏನು ಪ್ರಶ್ನೆಯನ್ನು ಕೇಳಿದ್ದಾರೆಂದರೆ ೫೩೭.೪೫ ಲಕ್ಷ ರೂಪಾಯಿಗಳು ತಾವು ಕೊಡಬೇಕು ಅದನ್ನು ಯಾವಾಗ ಕೊಡುತ್ತೀರಿ ಎಂದು. ಏತಕ್ಕೆಂದರೆ ಅಲ್ಲಿ ಕಟ್ಟಡ ಕಟ್ಟಬೇಕಾಗಿದೆ ಯೂನಿವರ್ಸಿಟಿ ಅಭಿವೃದ್ಧಿಗೆ ಸಂಬಂಧಪಟ್ಟಂತಹ ಕೆಲಸಕಾರ್ಯಗಳನ್ನು ಮಾಡಬೇಕಾಗಿದೆ. ಆದ್ದರಿಂದ ಈಗಿರತಕ್ಕಂಥ ಪ್ಲಾನ್‌ನಲ್ಲಿ ತಾವು ಹಣ ಕೊಡದಿದ್ದರೆ ಯೂನಿವರ್ಸಿಟಿಗೆ ಎಷ್ಟು ತೊಂದರೆಯಾಗುತ್ತದೆ ಎಂಬುದನ್ನು ತಾವು ಯೋಚನೆ ಮಾಡಬೇಕು. ಇನ್ನು ಎರಡನೆಯದಾಗಿ ನೀವು ಏನು ಮಾಡುತ್ತಿದ್ದೀರಿ ಎಂದರೆ ಇದರಲ್ಲಿ ಉತ್ಪಾದನೆಯನ್ನು ಕಡಿದು ಹಾಕಿಕೊಳ್ಳುತ್ತಿದ್ದೀರಿ. ಇದನ್ನು ಕಡಿದು ಹಾಕಿಕೊಳ್ಳಬಾರದೆಂದು ನಾನು ಪ್ರಾರ್ಥನೆ ಮಾಡಿಕೊಳ್ಳುತ್ತೇನೆ, ಇವತ್ತಿನ ದಿವಸ ವ್ಯವಸಾಯ ವಿಶ್ವವಿದ್ಯಾನಿಲಯಕ್ಕೆ ಸರ್ಕಾರ ಕೊಡುತ್ತಿರುವ ಗ್ರೋತ್ ರೇಟ್ ಮೂರುವರೆ ಪರ್ಸೆಂಟ್‌ನಿಂದ ೧೦ ಪರ್ಸೆಂಟ್‌ಗೆ ಹೆಚ್ಚು ಮಾಡುತ್ತೇ

ನೆಂದು ಈ ಸದನದಲ್ಲಿ ಮಾನ್ಯ ಮಂತ್ರಿಗಳು ಆಶ್ವಾಸನೆ ಕೊಡಬೇಕು. ಆ ೧೦ ಪರ್ಸೆಂಟ್ ಕೊಡಬೇಕೆಂದು ನಾವು ಸಹ ಈಗ ಕೇಳಿದ್ದೇವೆ. ಆದರೆ ತಾವು ಈಗ ಬರೀ ೫ ಪರ್ಸೆಂಟ್ ಮಾತ್ರ ಕೊಡುತ್ತಿದ್ದೀರಿ. ಆಗ ಅವರು ಕೇಳಿದ್ದಕ್ಕೆ ಸರ್ಕಾರ ಆ ರೀತಿ ಉತ್ತರ ಕೊಟ್ಟಿದ್ದಾರೆ.

ಶ್ರೀ ಬಿ ರಾಚಯ್ಯ.—ಆಗಿನ ಅರ್ಥ ಮಂತ್ರಿಗಳು, ಅದನ್ನು ಮಾಡುತ್ತೇವೆಂದು ಹೇಳಿದ್ದಾರೆ.

ಶ್ರೀಮತಿ ಕೆ. ಎಸ್. ನಾಗರತ್ನಮ್ಮ.—ಏನ್ರಿ ರಾಚಯ್ಯನವರೇ ತಾವು ಈ ರೀತಿ ಮಾತನಾಡುತ್ತೀರಿ. ತಾವು ಈ ರೀತಿ ಮಾತನಾಡಬಹುದೇ? ಆಮೇಲೆ ಮಾನ್ಯ ಸದಸ್ಯರಾದಂಥ ಶ್ರೀಮಾನ್ ರಮೇಶ್‌ಕುಮಾರ್‌ರವರು ಮಾತನಾಡುವಾಗ ಹೇಳಿದರು ಈ ಯೂನಿವರ್ಸಿಟಿ ರೀಸರ್ಚ್‌ನವರು ಏನು ಕೆಲಸ ಮಾಡಿದರೆ ಅವರು ಯಾವ ರೀಸರ್ಚ್ ಮಾಡಿದರು ಎಂದು ಒಂದು ತರಹ ವ್ಯಂಗ್ಯವಾಗಿ ಮಾತನಾಡಿದರು. ಅವರು ಆ ರೀತಿ ಮಾತನಾಡುವುದು ಸರಿಯಲ್ಲ. ವಿಜ್ಞಾನಿಗಳಲ್ಲಿ ಕೆಲವರು ಒಳ್ಳೆಯವರು ಇದ್ದಾರೆ. ಕೆಲವರು ಕೆಟ್ಟವರು ಇದ್ದಾರೆ. ಎಲ್ಲರೂ ಕೆಟ್ಟವರಲ್ಲ ಒಳ್ಳೆಯ ಕೆಲಸ ಮಾಡಿರುವವರನ್ನು ನಾವು ಗುರುತಿಸಬೇಕು. ಎಲ್ಲರನ್ನು ಒಂದೇ ರೀತಿಯಲ್ಲಿ ಕಂಡು ಮಾಡುವುದು ಸರಿಯಲ್ಲ. ಆ ರೀತಿ ಮಾಡಿದರೆ ತಪ್ಪಾಗುತ್ತದೆ. ಉದಾಹರಣೆಗಾಗಿ ಹೇಳುವುದಾದರೆ ನಮ್ಮ ಲಕ್ಷ್ಮಣಯ್ಯನವರು, ಶ್ರೀಮಾನ್ ಕಾರ್ತಿಕೇಯನ್‌ರವರು ಹಾಗೂ ಮಹದೇವಪ್ಪನವರು ಶ್ರೀಮಾನ್ ಶಿವಶಂಕರ್‌ರವರು ಒಳ್ಳೆಯ ವಿಜ್ಞಾನಿಗಳು ಅವರು ಒಳ್ಳೆ ರಿಸರ್ಚ್‌ಗಳನ್ನು ಮಾಡಿದ್ದಾರೆ ಆದುದರಿಂದ ತಾವು ಆರೀತಿಯಾಗಿ ಮಾತನಾಡುವುದು ತಪ್ಪು research is research. You go on researching it, ಇವತ್ತು ಸೈಂಟಿಸ್ಟ್‌ಗಳು ಏನಾದರೂ ಮಾಡಿ ಒಂದು ರೀಸರ್ಚ್ ಮಾಡಿದರೆ ಅದರ ಪ್ರತಿಫಲ ಎಂದಾದರೊಂದು ದಿನ ನಮಗೆ ಸಿಕ್ಕೇ ಸಿಗುತ್ತದೆ. ಈಗ ಪಾರ್ಥೇನಿಯಂ ಕೀಳುವುದಕ್ಕೆ ಸರ್ಕಾರದವರು ಲಕ್ಷಾಂತರ ರೂಪಾಯಿಗಳನ್ನು ಖರ್ಚು ಮಾಡಿದರು. ಈ ಪಾರ್ಥೇನಿಯಂ ಅನ್ನು ಹೋಗಲಾಡಿಸಲು ಈಗ ಶ್ರೀ ಮಹದೇವಪ್ಪ ಅಂಡ್ ಜೋಶಿಯವರು ರೀಸರ್ಚ್ ಮಾಡಿ ಒಂದು ಪರಿಹಾರವನ್ನು ಕಂಡುಹಿಡಿದಿದ್ದಾರೆ. ಈ ಪಾರ್ಥೇನಿಯಂ ಗಿಡಗಳ ಮೇಲೆ ಪಾರ್ಥೇನಿಯಂ ಪ್ಯಾರಾಥೈಟನ್ನು ಹಾಕಿದರೆ ಆ ಗಿಡಗಳು ಸುಟ್ಟು ಹೋಗುತ್ತವೆ ಇದರಿಂದ ಯಾವುದೇ ರೀತಿಯ ಸೈಡ್ ಎಫೆಕ್ಟ್ ಆಗುವುದಿಲ್ಲ. ಇನ್ನು ಮಾನ್ಯ ಸದಸ್ಯರೊಬ್ಬರು ಮಾತನಾಡುತ್ತಾ ಹೇಳಿದರು ಚೈನಾ ದೇಶದಲ್ಲಿ ರೈತರು ಯಾವ ರೀತಿಯಲ್ಲಿ ಕೆಲಸ ಮಾಡುತ್ತಾರೆ. ಅಲ್ಲಿ ಕೆಲಸ ಮಾಡುವ ರೀತಿಯಲ್ಲಿ ನಮ್ಮ ದೇಶದ ಕಾರ್ಮಿಕರು ಕೆಲಸ ಮಾಡುವುದಿಲ್ಲವೆಂದು ಹೇಳಿದರು, ಅಲ್ಲಿ ಕಾರ್ಮಿಕರು ಕೆಲಸ ಮಾಡದಿದ್ದರೆ ಜುಟ್ಟು ಹಿಡಿದುಕೊಂಡು ಹೊಡೆಯುತ್ತಾರೆ. ಅಲ್ಲಿ ಇಂತಿಷ್ಟು ಕೆಲಸ ಮಾಡಬೇಕೆಂದು ನಿಗಧಿ ಮಾಡಿದ್ದಾರೆ. ಆದರೆ ನಮ್ಮಲ್ಲಿ ಆ ರೀತಿ ಎಲ್ಲಿ ಮಾಡಿದ್ದಾರೆ? ನಮ್ಮಲ್ಲಿ ಎಲ್ಲರು ಸರ್ಕಾರಿ ಕೆಲಸವೇ ಬೇಕು ಎಂದು ಸುತ್ತಾಡುವವರೇ ಜಾಸ್ತಿ.

ಆ ಮೇಲೆ ಮಾನ್ಯ ಮೊಯಿನುದ್ದೀನ್ ಅವರು ಮಾತನಾಡುವಾಗ ಸ್ಟೈಪೆಂಡ್ ವಿಚಾರವಾಗಿ ಹೇಳಿದರು ಅದು ನಿಜ. ಯಾರೋ ಮಾಡಿರುವ ಕೆಲಸವನ್ನು ಯಾರೋ ಕದ್ದು ಮಾನ್ಯತೆ ತೆಗೆದುಕೊಳ್ಳಬೇಕೆಂದು ಪ್ರಯತ್ನ ಪಟ್ಟಿದ್ದಾರೆ. ನಾವು ಬೋರ್ಡ್ ಮೆಂಬರ್ಸ್ ಬಾಯಿ ಕಟ್ಟಿ ಬೀಗ ಹಾಕಿಕೊಂಡು ಕೂತಿಲ್ಲ. ಅದು ಎನ್‌ಕ್ವೈರಿ ಸ್ಟೇಜ್‌ನಲ್ಲಿದೆ. ಇದರ ಬಗ್ಗೆ ಏನು ಕ್ರಮ ತೆಗೆದುಕೊಳ್ಳಬೇಕೋ, ಅದನ್ನು ತೆಗೆದುಕೊಳ್ಳುತ್ತೇವೆ. ಇಷ್ಟು ಹೇಳಿ, ನಾನು ಮೊದಲೇ ಹೇಳಿದ ಹಾಗೆ, ೫ ಪರ್ಸೆಂಟ್ ರೇಟ್ ಆಫ್ ಗ್ರೋತನ್ನು ೧೦ ಪರ್ಸೆಂಟ್ ಮಾಡಿಕೊಡಬೇಕು. ನಾವು ಕೇಳಿರುವ ೧,೧೨೪ ಲಕ್ಷ ರೂಪಾಯಿಗಳಲ್ಲಿ ಒಂದು ಕಾಸೂ ಕಡಿಮೆ ಮಾಡದಂತೆ ನಮಗೆ ಕೊಡಬೇಕು. ಮತ್ತೆ ಈಗಿರತಕ್ಕಂಥ ಯೂನಿವರ್ಸಿಟಿ ಸಾಲದೆಂದು. ಇನ್ನೂ ಎರಡು ಯೂನಿವರ್ಸಿಟಿ ಆಗುತ್ತವೆಂದು ಹೇಳಿದ್ದಾರೆ. ಇದನ್ನು ಏಕೆ ಮಾಡಬೇಕು, ಇದರಲ್ಲಿ ನಮಗೊಂದು ಕುರ್ಚಿ, ಅವರಿಗೊಂದು ಕುರ್ಚಿ, ನಮಗೊಂದು ಟೇಬಲ್, ಅವರಿಗೊಂದು ಟೇಬಲ್ ಈ ರೀತಿ ಹಂಚಿಕೆ ಮಾಡುವುದಕ್ಕಾಗುತ್ತದೆಯೋ? ಇದು ಬೆಳೆದು ಆಗಲೇ ದೊಡ್ಡ ಮರವಾಗಿರತಕ್ಕ ಯೂನಿವರ್ಸಿಟಿ. ನೀವು ಯೂನಿವರ್ಸಿಟಿಗಳನ್ನು ಕೊಡಿ, ಆದರೆ ಅವುಗಳಿಗೆ ಸಾಕಷ್ಟು ದುಡ್ಡು ಕೊಡಬೇಕಲ್ಲ. ಯೂನಿವರ್ಸಿಟಿಗಳಲ್ಲಿ ಕನ್ನಡ ಕಲಿಸದೇ ಹೋದರೂ ನಡೆಯುತ್ತವೆ, ಇಂಗ್ಲಿಷ್ ಕಲಿಸದೇ ಹೋದರೂ ನಡೆಯುತ್ತವೆ, ಡಾಕ್ಟರುಗಳನ್ನು ಮಾಡದೇ ಹೋದರೂ ನಡೆಯುತ್ತವೆ. ಆದರೆ ಹೊಟ್ಟೆಗಿಲ್ಲದೇ ಹೋದರೆ ನಡೆಯುವುದಿಲ್ಲ. ಈ ಯೂನಿವರ್ಸಿಟಿ ಭೂಮಿತಾಯಿ ಇದ್ದ ಹಾಗೆ. ಈ ಭೂಮಿತಾಯಿ ಆಶೀರ್ವಾದ ಎಲ್ಲರಿಗೂ ಇರಬೇಕು. ಆದುದರಿಂದ, ಈ ಯೂನಿವರ್ಸಿಟಿಗೆ ನೀವು ಬೇರೆ ಬೇರೆ ಕಡೆಯಿಂದಲಾದರೂ ಹಣ ತೆಗದು ಒದಗಿಸಿ, ಸಹಾಯ ಮಾಡ

ಬೇಕೆಂದು ಪ್ರಾರ್ಥಿಸಿ, ಇಷ್ಟು ಮಾತನಾಡಲು ಅವಕಾಶ ಕೊಟ್ಟ ತಮಗೆ ವಂದಿಸಿ, ನನ್ನ ಮಾತುಗಳನ್ನು ಮುಗಿಸುತ್ತೇನೆ.

† ಶ್ರೀ ಆರ್. ವೆಂಕಟರಾಮಯ್ಯ (ಮುಳಬಾಗಲು).—ಮಾನ್ಯ ಸಭಾಧ್ಯಕ್ಷರೇ, ವ್ಯವಸಾಯ ಇಲಾಖೆಯ ಬಗ್ಗೆ ಹೇಳುವುದಾದರೆ, ಈ ವ್ಯವಸಾಯವನ್ನೇ ಆಧಾರವಾಗಿಟ್ಟುಕೊಂಡಿರತಕ್ಕ ಜನಾಂಗ ೧೦೦ಕ್ಕೆ ೮೦ರಷ್ಟು ಇದ್ದಾರೆ. ಈ ರೈತನ ಬಗ್ಗೆ ಇರತಕ್ಕ ಧೋರಣೆ ಏನು ಎಂದರೆ, ನಾವು ಇದನ್ನು ಬಹಳ ಸಂಕಟದಿಂದ ಹೇಳಬೇಕಾಗುತ್ತದೆ. ನಾವು ಮಲತಾಯಿ ಮಕ್ಕಳು ಆಗಿದ್ದೇವೆ, ನಮ್ಮನ್ನು ಬಹಳವಾಗಿ ಕಡೆಗಣಿಸಿದ್ದಾರೆ. ಈ ರೈತನಿಗೆ ಯಾವುದೇ ವಿಧವಾದ ರಜೆ ಇಲ್ಲ. ಅದೇ ಬೇರೆ ಸರ್ಕಾರಿ ಅಧಿಕಾರಿಗಳು, ಕಾರ್ಖಾನೆ ಕಾರ್ಮಿಕರಿಗೆ ಕೆಲವು ಗಂಟೆಗಳೆಂದು ನಿಗದಿಯಾಗಿರುತ್ತದೆ. ರೈತ ಮಾತ್ರ ವರ್ಷವೆಲ್ಲಾ ದುಡಿದರೂ ಸಹ ಆತನಿಗೆ ತಿಂಡಿಗೆ ಇರುವುದಿಲ್ಲ, ಬಟ್ಟೆಗೆ ಇರುವುದಿಲ್ಲ. ನಾವು ಇಂತಹ ಪರಿಸ್ಥಿತಿಯನ್ನೇ ಮುಂದುವರಿಸಿಕೊಂಡು ಹೋಗುತ್ತಿದ್ದೇವೆ. ಇದನ್ನು ಸರಿಪಡಿಸುತ್ತಾರೆಂದು ಯೋಚನೆ ಮಾಡಿದರೆ, ಆ ರೀತಿ ಕಾಣುತ್ತಾ ಇಲ್ಲ. ಜೊತೆಗೆ ಆತ ಅಷ್ಟು ಕಷ್ಟಪಟ್ಟು, ಬೀಜ ಬಿತ್ತಿ ಬೆಳೆ ಬೆಳೆಯುತ್ತಾನೆ. ಆತನಿಗೆ ನ್ಯಾಯವಾದ ಬೆಲೆ ಸಿಗುತ್ತಿಲ್ಲ. ಮಾನ್ಯ ಗುಂಡೂರಾಯರ ಕಾಲದಲ್ಲಿ, ರೈತರು ಒಂದು ದೊಡ್ಡ ಚಳುವಳಿ ಮಾಡಿದಾಗ ೧೨೦ ಜನ ಸತ್ತರು. ಅನಂತರ ರೈತರ ಕಷ್ಟಸುಖಗಳ ಬಗ್ಗೆ ಅಧ್ಯಯನ ಮಾಡಲು, ಮಾನ್ಯ ಬಂಗಾರಪ್ಪ ಕಮಿಟಿ, ಮಾನ್ಯ ಪ್ರಕಾಶ್ ಕಮಿಟಿ, ಮಾನ್ಯ ಶಂಕರಿಕೊಪ್ಪ ಕಮಿಟಿ ಎಂದು ಮಾಡಿದರು. ಇದು ಮಾನ್ಯ ಶಂಕರಿಕೊಪ್ಪ ಕಮಿಟಿಯೋ ಅಥವಾ ಸಂಕಟಕೊಪ್ಪ ಕಮಿಟಿಯೋ ನನಗೆ ಗೊತ್ತಿಲ್ಲ. ಈ ಎಲ್ಲಾ ಸಮಿತಿಗಳ ರಿಪೋರ್ಟ್‌ಗಳು ಇಲ್ಲಿ ಇವೆ. ಆದರೆ ಆ ವರದಿಗಳು ಕಾರ್ಯರೂಪಕ್ಕೆ ಬರುವ ಅವಕಾಶ ಮಾತ್ರ ಕಾಣುವುದಿಲ್ಲ. ಮಾನ್ಯ ಪ್ರಕಾಶ್ ಅವರು ಮಂತ್ರಿಗಳಾಗಿದ್ದಾರೆ. ಅವರು ಈ ವಿಚಾರದಲ್ಲಿ ನಾಚಿಕೆ ಪಡಬೇಕಾಗುತ್ತದೆ. ರೈತರಿಗೆ ಅವರು ಏನೂ ಮಾಡಿಲ್ಲ ಎಂದು ಸ್ಪಷ್ಟವಾಗಿ ಹೇಳುತ್ತೇನೆ. ಮೂರು ರಿಪೋರ್ಟ್‌ಗಳು ಬಂದರೂ ಯಾವುದಾದರೂ ಒಂದು ಜಾರಿಗೆ ತರುತ್ತೇವೆಂದು ಹೇಳಲಿಲ್ಲ. ಇದಕ್ಕೆಲ್ಲಾ ಕೇಂದ್ರ ಸರ್ಕಾರದ ಒಂದು ಆಧಾರ ಇದೆಯೆಂದು ಹೇಳಿ, ರೈತರಿಗೆ ವಂಚನೆ ಮಾಡಿ ನಡೆಯುತ್ತಾರೆ. ರೈತರು ಇಲ್ಲಿಯೂ ಇದ್ದಾರೆ, ಅಲ್ಲಿಯೂ ಇದ್ದಾರೆ. ಅವನಿಗೆ ಇವತ್ತು ಕನಿಷ್ಠ ಸುಖವೂ ಸಿಗುತ್ತಿಲ್ಲ. ಆತ ಮನುಷ್ಯನಾಗಿ ಬದುಕುತ್ತಿಲ್ಲ ; ಮೃಗವಾಗಿ ಬದುಕುತ್ತಿದ್ದಾನೆ. ವೆಸ್ಟ್ ಬಂಗಾಳದಲ್ಲಿ ಕೊಡತಕ್ಕಂತೆ, ಇಲ್ಲಿ ಅದರ ಕಾಲು ಭಾಗವನ್ನಾದರೂ ಕೊಟ್ಟರೆ ಸಾಕು. ಮಾನ್ಯ ಪ್ರಕಾಶ್‌ರವರು ಇದರ ಬಗ್ಗೆ ಯೋಚನೆ ಮಾಡಬೇಕು. ಅವರು ಸಮಾಜವಾದಿಗಳು, ಅವರದೇ ಒಂದು ಕಮಿಟಿ ಇದೆ. ಈ ಕಮಿಟಿಗಳಿಗಾಗಿ ಲಕ್ಷಾಂತರ ರೂಪಾಯಿ ಖರ್ಚು ಮಾಡಿದ್ದಾರೆ. ಈ ಕಮಿಟಿಗಳು ಕೊಟ್ಟಂಥ ರಿಪೋರ್ಟ್‌ಗಳಲ್ಲಿ ಕೆಲವು ಅನುಕೂಲ ಮಾಡಿ. ನೀವು ಈ ಮೂರು ಕಮಿಟಿಗಳ ರಿಪೋರ್ಟ್‌ಗಳನ್ನು ಹಾಗೆಯೇ ಇಟ್ಟುಕೊಂಡಿದ್ದೀರಿ, ನೀವು ಹೀಗೆ ಇಟ್ಟುಕೊಂಡಿರಿ, ರೈತ ನಿಮಗೆ ಅಭಿನಂದನೆ ಮಾಡುತ್ತಾನೆ, ನೋಬೆಲ್ ಪ್ರೈಸ್‌ಗೆ ರೆಕ್‌ಮೆಂಡ್ ಮಾಡುತ್ತಾನೆ. ಹಿಂದೆ ಮಾನ್ಯ ಗುಂಡೂರಾಯರ ಕಾಲದಲ್ಲಿ ರೈತರು ಚಳುವಳಿ ಎಂದು ಹೇಳಿ, ಭುಗಿಲೆದ್ದರು. ನಂತರ ಜನತಾ ಸರ್ಕಾರಕ್ಕೆ ಅಧಿಕಾರ ಕೊಟ್ಟರು. ಜನತಾ ಸರ್ಕಾರ ಕೆಲವು ಆಶ್ವಾಸನೆಗಳನ್ನು ಕೊಟ್ಟರು. ಆ ಆಶ್ವಾಸನೆಗಳಲ್ಲಿ ಅವರು ನಂಬಿಕೆ ಇಟ್ಟುಕೊಂಡಿರುವುದರಿಂದ ತಾವು ಅದನ್ನು ಉಳಿಸಿಕೊಂಡು ಹೋಗಬೇಕು. ಅದು ಬಿಟ್ಟು ಹೀಗೆಯೇ ಇದ್ದರೆ ರೈತರಿಗೆ ನ್ಯಾಯ ಕೊಡುವುದಕ್ಕೆ ಆಗುವುದಿಲ್ಲ. ಇದನ್ನು ಸೀರಿಯಸ್ಸಾಗಿ ಯೋಚನೆ ಮಾಡಿ, ಆತನಿಗೆ ಎಷ್ಟು ಬೆಲೆ ಕೊಡಬೇಕು, ಉಳುವುದಕ್ಕೆ ಎಷ್ಟು, ಬಿತ್ತನೆಗೆ ಎಷ್ಟು, ಗೊಬ್ಬರಕ್ಕೆ ಎಷ್ಟಾಗುತ್ತದೆ, ಅವನು ಬದುಕುವುದಕ್ಕೆ ಮಿನಿಮಂ ಎಷ್ಟು ಬೇಕಾಗುತ್ತದೆ ಎಂಬುದನ್ನು ಯೋಚನೆ ಮಾಡಬೇಕು. ನೀವು ಬರೀ ೧೨೦ ರೂಪಾಯಿ ಭತ್ತಕ್ಕೆ ಕೊಡುತ್ತೀರಿ, ಇದನ್ನು ೨೦೦ ರೂಪಾಯಿ ಕೊಟ್ಟರೂ ಸಾಕಾಗುವುದಿಲ್ಲ. ಪೂರ್ತಿ ಲೆಕ್ಕಹಾಕಿ ರೈತರ ಬದುಕುವುದಕ್ಕೆ ಒಂದು ನ್ಯಾಯವಾದ ಬೆಲೆ ಕೊಡಿ. ರೈತರು ಮಲತಾಯಿ ಮಕ್ಕಳಲ್ಲ. ಅವರೂ ಬದುಕಬೇಕು. ಅವನು ಮನುಷ್ಯನಾಗಿ ಬದುಕಬೇಕು ಎಂದು ಈಗಲೂ ಕೇಳುತ್ತಿದ್ದೇನೆ. ಅವನು ಎರಡು ಜೊತೆ ಎತ್ತು ಕಟ್ಟಿಕೊಂಡು, ಅದರ ಜೊತೆಗೆ ಅವನೂ ಒಂದು ಎತ್ತಾಗಿ ದುಡಿಯುತ್ತಿದ್ದಾನೆ. ಅವನು ಒಬ್ಬ ಮೃಗವಾಗಿ ಕೆಲಸ ಮಾಡುತ್ತಿದ್ದಾನೆ. ಇಷ್ಟಾದರೂ ಅವನಿಗೆ ರಾತ್ರಿಹೊತ್ತು ಊಟಕ್ಕೆ ಇಲ್ಲ. ನೀವು ಇವತ್ತು ರೂರಲ್ ಏರಿಯಾದ ಶಿಕ್ಷಣಾರ್ಥಿಗಳಿಗಾಗಿ ೬ ಸೀಟುಗಳನ್ನು ಕೊಟ್ಟಿದ್ದೀರಿ. ಅಗ್ರಿಕಲ್ಚರ್ ಯೂನಿವರ್ಸಿಟಿಯಲ್ಲಿ ೬೦ ಪರ್ಸೆಂಟ್ ಮಾರ್ಕ್ಸ್ ಸೇರಿಸುತ್ತಾರೆ. ಆದರೆ ಯಾವ ರೈತನ ಮಗ ೫೦ ಪರ್ಸೆಂಟ್ ತೆಗೆದುಕೊಳ್ಳುತ್ತಾನೆ ? ನಾನು ಕೂಡ

ನಾಮಕಾವಸ್ತೆ ರೈತ, ನಾನು ನಿಜವಾಗಿ ರೈತನ ಕೆಲಸ ಮಾಡುವುದಿಲ್ಲ. ನಮ್ಮ ತಮ್ಮನೋ ಯಾರೋ ಕೆಲಸ ಮಾಡುತ್ತಾರೆ.

ಶ್ರೀ ಜೆ. ಹೆಚ್. ಪಟೇಲ್.—ತಾವು ಭಾಷಣ ಪ್ರಾರಂಭ ಮಾಡಿದಾಗಲೇ ನನಗೆ ಅನುಮಾನ ಬಂತು. ನಿಮಗೆ ಏನೂ ಅನುಭವ ಇಲ್ಲ ಎಂಬ ಅಭಿಪ್ರಾಯ ನಿಮ್ಮಿಂದ ಬರುತ್ತದೆ ಎಂದು ಭಾವಿಸಿದ್ದೆ. ನೀವು ವಕೀಲಿ ಮಾಡುವವರು, ನನಗಿಂತ ಬೇರೆ ಬೇರೆ ಓದಿರಬಹುದು. ಆದರೆ ವ್ಯವಸಾಯದ ಅನುಭವ ಇದೆಯೇ ?

ಶ್ರೀ ಆರ್. ವೆಂಕಟರಾಮಯ್ಯ.—ನಾನು ಎಲ್ಲಾ ವ್ಯವಸಾಯ ಮಾಡಿದ್ದೇನೆ. ನೀವು ಏನು ಮಾಡಿದ್ದೀರಿ ? ಬರೀ ಬೆಂಗಳೂರು ಸುತ್ತಮುತ್ತ ಉಳುತ್ತಿದ್ದೀರಿ. ನನ್ನ ತಮ್ಮ ವ್ಯವಸಾಯ ಮಾಡುವವನು, ನಾವು ಅಲ್ಲಿಗೆ ಹೋಗದೇ ಹೋದರೆ, ಅವನು ನಮ್ಮನ್ನು ಬೈಯುತ್ತಾನೆ. ನಾನು ಸ್ವಂತವಾಗಿ ವ್ಯವಸಾಯ ಮಾಡುತ್ತೇನೆಂದು ಒಪ್ಪಿಕೊಳ್ಳುವುದಿಲ್ಲ. ಮಾನ್ಯ ಬೈರೇಗೌಡರು ದೊಡ್ಡ ಸಾಹುಕಾರರು, ಚೆನ್ನಾಗಿ ಆಸ್ತಿಪಾಸ್ತಿ ಬೆಳೆಸಿಕೊಂಡು ಬಂದಿದ್ದಾರೆ, ಅಂತಹವರು ನಾವಲ್ಲ. ನಾವು ಸಾಧಾರಣ ರೈತರು ನಮಗೆ ಸ್ವಲ್ಪ ಅನುಭವವಿದೆ. ಸ್ವಾಮಿ, ಇವತ್ತು ಸಣ್ಣ ರೈತರಿಗೆ, ಅತಿ ಸಣ್ಣ ರೈತರಿಗೆ ಅನುಕೂಲ ಮಾಡತಕ್ಕಂಥ ಅಭಿಪ್ರಾಯ ನಿಮಗೆ ಇದೆಯೇ ಎಂಬುದರ ಬಗ್ಗೆ ಮನಸ್ಸು ಬಿಚ್ಚಿ ಹೇಳಿ. ಸುಮ್ಮನೆ ಭಾಷಣ ಮಾಡುವುದು ಬೇಡ. ಅವರ ಅಭಿವೃದ್ಧಿಗೆ ನಿಮ್ಮ ವ್ಯವಸಾಯ ಇಲಾಖೆ ಹೋಗಿದೆ ಎಂದರೆ, ಇಲ್ಲ ಎಂದು ಹೇಳಬೇಕಾಗುತ್ತದೆ. ಕೇವಲ ೧೦ ಪರ್ಸೆಂಟ್ ವ್ಯವಸಾಯಗಾರರಿಗೆ ಅನುಕೂಲ ಮಾಡಿಲ್ಲ. ಇನ್ನು ಉಳಿದ ೯೦ ಪರ್ಸೆಂಟ್‌ನ್ನು ಪೂರ್ತಿ ಕೈಬಿಟ್ಟಿದ್ದೀರಿ. ನಮ್ಮ ಸ್ನೇಹಿತರು ಹೇಳಿದರು, ೭೫ ಪರ್ಸೆಂಟ್ ಸಂಬಳಕ್ಕೆ ಹೋಗುತ್ತದೆ ಎಂದು. ವ್ಯವಸಾಯ ಇಲಾಖೆಯಲ್ಲಿ ಸುಳ್ಳು ಅಂಕಿ ಅಂಶಗಳನ್ನು ಕೊಡುತ್ತಾರೆ. ಉದಾಹರಣೆಗೆ ಮುಳಬಾಗಿಲಿನಲ್ಲಿ ೭೦ ಸಾವಿರ ಎಕರೆಯಲ್ಲಿ ರಾಗಿ ಬಿತ್ತಿದ್ದೇವೆ. ೮೦ ಸಾವಿರ ಹೊಸ ತಳಿ ಬೀಜಗಳನ್ನು ಬಿತ್ತುವಂಥ ವ್ಯವಸ್ಥೆ ಮಾಡಿಸಿದ್ದೇವೆಂದು ಹೇಳುತ್ತಾರೆ, ಇದನ್ನು ಕೇಳಿ ನನಗೆ ಆಶ್ಚರ್ಯವಾಯಿತು.

ಇವನು ಯಾವಾಗ ಬಂದನಪ್ಪಾ, ೭೦ ಸಾವಿರ, ಎಂಬತ್ತು ಸಾವಿರ ಅಂತ ಬರೆದಿದ್ದಾನೆ ಎಂದರೆ ನೋಡಿ ಆಶ್ಚರ್ಯವಾಯಿತು. ಹೀಗೆ ಅನೇಕ ಕಡೆಗಳಲ್ಲಿ ಫಾಲ್ಸ್ ಸ್ಟ್ಯಾಟಿಸ್ಟಿಕ್ಸ್‌ನ್ನು ಕೊಟ್ಟಿದ್ದಾರೆ. ಅವರು ಫೀಲ್ಡ್‌ಗೆ ಹೋಗಿ ಸರಿಯಾಗಿ ಕೆಲಸ ಮಾಡುವುದಿಲ್ಲ. ಈ ತರಹ ಅವ್ಯವಹಾರಗಳು ನಡೆಯುತ್ತಾ ಇವೆ. ಇದನ್ನು ಸರಿಪಡಿಸಬೇಕು ಎಂದು ನಾನು ಕೇಳುತ್ತೇನೆ.

ಶ್ರೀ ಕೆ. ಹೆಚ್. ಶ್ರೀನಿವಾಸ್.—ಫಾಲ್ಸ್ ಸ್ಟ್ಯಾಟಿಸ್ಟಿಕ್ ಅಂತ ಮಾನ್ಯ ಸದಸ್ಯರು ಹೇಳುತ್ತಿದ್ದಾರೆ ಸರ್ಕಾರದಲ್ಲಿ ಇರುವುದು ಬರೇ ಸ್ಟ್ಯಾಟಿಸ್ಟಿಕ್ಸ್ ಅಂತ ಫಾಲ್ಸ್ ಸ್ಟ್ಯಾಟಿಸ್ಟಿಕ್ಸ್ ಅಂತ ಇಲ್ಲ.

ಶ್ರೀ ಆರ್. ವೆಂಕಟರಾಮಯ್ಯ.—ಅವರು ಆ ರೀತಿಯಾಗಿ ರಿಪೋರ್ಟ್ ಮಾಡಿದ್ದನ್ನು ನಾನು ನೋಡಿದ್ದರಿಂದ ಹೇಳಿದ್ದೇನೆ. ಇನ್ನು ಅಗ್ರೋ ಇಂಡಸ್ಟ್ರೀಸ್ ಕಾರ್ಪೊರೇಷನ್ ಬಗ್ಗೆ ಹೇಳಬೇಕಾದರೆ ಇದರಲ್ಲಿ ಕೆಲವು ಮಹಾನುಭಾವರು ಸೇರಿಕೊಂಡು ಏನು ಮಾಡಿದ್ದಾರೆ ಎಂದರೆ ಬೇಕಾದಷ್ಟು ಹಣವನ್ನು ನುಂಗುತ್ತಿದ್ದಾರೆ ಇದರಲ್ಲಿ ೪ ರಿಂಗ್ಸ್ ನುಂಗಿದ್ದಾರೆ. ಬುಲ್‌ಡೋಜರ್ ೪-೫ ನುಂಗಿದ್ದಾರೆ ಅಲ್ಲ ಒಂದು ಟ್ರ್ಯಾಕ್ಟರ್ ಅಂತೂ ಸತ್ತು ಹೋಗಿದೆ. ಇದರಲ್ಲಿ ಬೇಕಾದಷ್ಟು ಅವ್ಯವಹಾರಗಳು ನಡೆಯುತ್ತಾ ಇವೆ. ಅದಕ್ಕೋಸ್ಕರ ಇದಕ್ಕೆ ಸಂಜೀವಯ್ಯ ಎನ್ನುವ ಒಂದು ಕಮೀಷನ್ ಮಾಡಿದರು. ಅವರು ಇದನ್ನೆಲ್ಲಾ ಪರಿಶೀಲಿಸಿ ಇದರಲ್ಲಿ ೧೩ ಜನ ತಪ್ಪಿತಸ್ಥರು ಇದ್ದಾರೆ ಎಂದು ಫೈಂಡಿಂಗ್ಸ್ ಕೊಟ್ಟರು. ಈಗ ಟೈಂ ಇಲ್ಲದೇ ಇರುವುದರಿಂದ ನಾನು ಎಲ್ಲರ ಹೆಸರನ್ನೂ ಓದುವುದಿಲ್ಲ. ಒಂದೆರಡು ಹೆಸರು ಮಾತ್ರ ಹೇಳುತ್ತೇನೆ. ಅದರಲ್ಲಿ ನಾಗಭೂಷಣ. ಎಸ್. ಗುರಪ್ಪ ಇನ್ನೂ ಮುಂತಾದವರು ಇದ್ದಾರೆ ಈ ಕಮೀಷನ್ ಆದದ್ದು ೧೯೬೭ರಲ್ಲಿ ೫ ವರ್ಷ ಕಳೆದರೂ ಆ ತಪ್ಪಿತಸ್ಥರ ಮೇಲೆ ಏನೂ ಕ್ರಮ ತೆಗೆದುಕೊಂಡಿಲ್ಲ.

ಶ್ರೀ ಎಂ. ಪಿ ಪ್ರಕಾಶ್.—ಆ ಕಮೀಷನ್ ನೇಮಕ ಮಾಡಿ ೪-೫ ವರ್ಷವಾಗಿದ್ದರೂ ಅವರು ವರದಿ ಕೊಟ್ಟದ್ದು ೪-೫ ತಿಂಗಳ ಹಿಂದೆಯಷ್ಟೆ!

ಶ್ರೀ ಆರ್ ವೆಂಕಟರಾಮಯ್ಯ.—೪-೫ ತಿಂಗಳಾದರೂ ಸಹ ಏತಕ್ಕೆ ಆಕ್ಷನ್ ತೆಗೆದುಕೊಂಡಿಲ್ಲ? ಅವರು ರಿಂಗ್ಸ್ ಎಷ್ಟು ನುಂಗಿದ್ದಾರೆ, ಬುಲ್‌ಡೋಜರ್ಸ್ ಎಷ್ಟು ನುಂಗಿದ್ದಾರೆ, ಹೀಗೆಲ್ಲಾ ಹೇಳಿದ್ದಾರೆ, ಇದು ಬಹಳ ಇಂಟರೆಸ್ಟಿಂಗ್ ಆಗಿರುವುದರಿಂದ ಮುಖ್ಯವಾದುದನ್ನು ಮಾತ್ರ ಓದುತ್ತೇನೆ.

ಅಧ್ಯಕ್ಷರು.—ನೀವು ಅದನ್ನೆಲ್ಲಾ ಓದುವುದಾದರೆ ಬಹಳ ಸಮಯ ಬೇಕಾಗುತ್ತದೆ. ನೀವು ಮೊದಲೇ ಇದರ ಬಗ್ಗೆ ಒಂದು ನೋಟು ಮಾಡಿಕೊಂಡು ಬರಬೇಕಾಗಿತ್ತು. ಹಾಗೆ ಮಾಡಿದ್ದರೆ ಇಲ್ಲಿ ಹೇಳುವುದಕ್ಕೆ ಬಹಳ ಸುಲಭವಾಗುತ್ತಿತ್ತು.

ಶ್ರೀ ಆರ್. ವೆಂಕಟರಾಮಯ್ಯ.—ನಾನು ಎಲ್ಲವನ್ನೂ ಓದುವುದಿಲ್ಲ. ಇಂಟರೆಸ್ಟ್ ಆಗಿರುವುದು ಒಂದೇ ಒಂದು ಪ್ಯಾರಾ ಓದುತ್ತೇನೆ. ಅದರಲ್ಲಿ ಈ ರೀತಿ ಇದೆ :

During the tenure of General Manager two bulldozers four rig and two blasting units were physically not available in accordanc with the assets and connected records...

ಅಂತ ಇದೆ. ಇದರ ಬಗ್ಗೆ ಯೂನಿಯನ್‌ನವರೂ ಸಹ ಒಂದು ಮೆಮೋರಾಂಡಂ ಕೊಟ್ಟಿದ್ದಾರೆ. ಇದನ್ನು ಮಾನ್ಯ ಅಧ್ಯಕ್ಷರ ಮುಖಾಂತರ ಮಾನ್ಯ ಸಚಿವರಿಗೆ ಕಳುಹಿಸಿ ಕೊಡುತ್ತಿದ್ದೇನೆ. ಇದನ್ನು ನೋಡಿ.

ಅಧ್ಯಕ್ಷರು.—ಪಾಸಾನ್ ಮಾಡಿ.

ಶ್ರೀ ಆರ್. ವೆಂಕಟರಾಮಯ್ಯ.—ದಯವಿಟ್ಟು ಇದರ ಬಗ್ಗೆ ತಾವು ತಕ್ಷಣ ಆಕ್ಷನ್ ತೆಗೆದುಕೊಳ್ಳಬೇಕು ಎಂದು ನಾನು ಕೇಳಿಕೊಳ್ಳುತ್ತೇನೆ.

ಇನ್ನು ತೋಟಗಾರಿಕೆ ಇಲಾಖೆ ಬಗ್ಗೆ ೨-೩ ಸಾರಿ ಹೇಳಿದ್ದೇನೆ. ಇವನ್ನು ಹೇಳಿದರೆ ಮಾನ್ಯ ಸಚಿವರಿಗೆ ಕೋಪ ಬರಬಹುದು. ಕೋಪ ಬಂದರೆ ಅವರು ಕೆಲಸ ಮಾಡುತ್ತಾರೆನ್ನುವ ದೃಷ್ಟಿಯಿಂದ ಹೇಳುತ್ತೇನೆ. ಸುಮಾರು ೪೦ ಲಕ್ಷ ರೂಪಾಯಿ ಖರ್ಚು ಮಾಡಿ ಒಂದು ಕೋಲ್ಡ್ ಸ್ಟೋರೇಜ್ ಅನ್ನು ಕಟ್ಟಿದ್ದಾರೆ, ಇದನ್ನು ಏಪ್ರಿಲ್‌ನಲ್ಲಿ ಮಾಡಿದರು, ಇದುವರೆಗೂ ಅದನ್ನು ಇನ್ನೂ ಪ್ರಾರಂಭ ಮಾಡಿಲ್ಲ. ಅದು ಹಾಗೆಯೇ ಇದೆ. ಅದೇ ಪ್ರೈವೇಟ್ ಇಂಡಸ್ಟ್ರೀಸ್‌ನವರು ಮಾಡಿ ಅದನ್ನು ಹಾಗೆಯೇ ಬಿಟ್ಟಿದ್ದರೆ ಅವನು ಇಷ್ಟು ಹೊತ್ತಿಗೆ ವಿಷ ತೆಗೆದುಕೊಂಡು ಸತ್ತು ಹೋಗುತ್ತಿದ್ದ. ಅವನು ೪೦ ಲಕ್ಷ ರೂಪಾಯಿಗೆ ಬಡ್ಡಿಯನ್ನೂ ಸಹ ಕಟ್ಟುವುದಕ್ಕೆ ಆಗದೇ ಸತ್ತು ಹೋಗುತ್ತಿದ್ದ. ಕೋಲ್ಡ್ ಸ್ಟೋರೇಜ್ ೪೦ ಲಕ್ಷ ರೂಪಾಯಿ ಖರ್ಚು ಮಾಡಿ ಜಯನಗರದಲ್ಲಿ ಒಂದು ಕಟ್ಟಿದ್ದಾರೆ, ಅದು ನಡೆಯುತ್ತಾ ಇದೆ. ಇದೇ ಕೆ. ಜಿ. ರೋಡ್‌ನಲ್ಲಿ ಒಂದು ಕಟ್ಟಿದ್ದಾರೆ, ಅದಕ್ಕೆ ೨೦ ಲಕ್ಷ ಖರ್ಚು ಮಾಡಿದ್ದಾರೆ. ಅದು ಹಾಗೆಯೇ ಇದೆ. ಹೀಗಿದ್ದ ಮೇಲೆ ಅದನ್ನು ಏತಕ್ಕೆ ಕಟ್ಟಬೇಕಾಗಿತ್ತು. ಮಾನ್ಯ ಸಚಿವರು ಇನ್ನೂ ಯುವಕರಾಗಿದ್ದಾರೆ, ಸ್ವಲ್ಪ ಬಿಸಿ ರಕ್ತ ಇದೆ. ಈ ಬಗ್ಗೆ ಏನಾದರೂ ಕೆಲಸ ಮಾಡಲಿ ಎಂದು ಹೇಳುತ್ತೇನೆ. ಇದೇ ತರಹ ಕೆಲವು ಇಂಡಸ್ಟ್ರೀಸ್ ಇವೆ, ಈಗ ಟೈಂ ಇಲ್ಲದೇ ಇರುವುದರಿಂದ ನಾನು ಹೇಳುವುದಕ್ಕೆ ಹೋಗುವುದಿಲ್ಲ.

ಇನ್ನು ಮಾನ್ಯ ಕೆ. ಹೆಚ್. ಪಾಟೀಲರು ಕೋಲಾರದಲ್ಲಿ ಈ ಹಣ್ಣು ತರಕಾರಿ ಬಗ್ಗೆ ಒಂದು ಮಾರ್ಕೆಟ್ ಆಗಬೇಕು ಎಂದು ಹೇಳಿದ್ದಾರೆ. ನಾನೂ ಸಹ ಅದನ್ನು ಹೇಳುತ್ತೇನೆ. ಕೋಲಾರದಲ್ಲಿ ವಿಪರೀತವಾಗಿ ಹಣ್ಣು ತರಕಾರಿ ಬೆಳೆಯುತ್ತಾರೆ. ಒಂದೊಂದು ಸಾರಿ ಒಂದು ಕೆಜಿಗೆ ೫ ರೂ ತನಕ ಹೋಗುತ್ತದೆ, ಒಂದೊಂದು ಸಾರಿ ಒಂದು ಕೆಜಿ ೫೦ ಪೈಸೆಗೂ ಹೋಗುವುದಿಲ್ಲ. ಇಂತಹ ಒಂದು ಪರಿಸ್ಥಿತಿ ಇದೆ, ಅದಕೋಸ್ಕರವಾಗಿ ಅಲ್ಲಿ ಒಂದು ಮಾರ್ಕೆಟ್ ಅನ್ನು ಕಟ್ಟಿಸಿ ನ್ಯಾಯವಾದ ಬಿಸಿನೆಸ್ ಮಾಡುವ ಹಾಗೆ ಮಾಡಬೇಕೆಂದು ನಾನು ಬಹಳ ಸಾರಿ ಹೇಳಿದೆ. ಆದರೆ ಇದುವರೆಗೂ ತಾವು ಏನೂ ಪ್ರಯತ್ನ ಮಾಡಲಿಲ್ಲ. ನನಗೆ ಹೇಳಬೇಕಾದರೆ ಇಲ್ಲಿ ಬೆಳೆದಂಥಾ ತರಕಾರಿಗಳು ವಿಜಯವಾಡ, ಕಲ್ಕತ್ತಕ್ಕೆ ಹೋಗುತ್ತದೆ ಹಾಗೆಯೇ ಅಲ್ಲಿ ಬೇಕಾದಷ್ಟು ಆಲೂಗಡ್ಡೆಯನ್ನು ಬೆಳೆಯುತ್ತಾರೆ. ಒಂದೊಂದು ಸಾರಿ ಆಲೂಗಡ್ಡೆ ೧೫೦ ರೂಪಾಯಿ ಆಗುತ್ತದೆ, ಒಂದೊಂದು ಸಾರಿ ಅದರ ಬೆಲೆ ಕಡಿಮೆಯಾಗಿ ೬೦ ರೂಪಾಯಿ ಆಗಿ ಬಿಡುತ್ತದೆ. ಇದರಿಂದ ಆ ರೈತರಿಗೆ ಬಹಳ ತೊಂದರೆಯಾಗಿದೆ. ಅವನು ಕಷ್ಟಪಟ್ಟು ಬಹಳ ಶ್ರದ್ಧೆಯಿಂದ ಕೆಲಸ ಮಾಡಿದರೂ ಸಹ ಅದಕ್ಕೆ ತಕ್ಕ ಪ್ರತಿಫಲ ಸಿಕ್ಕುವುದಿಲ್ಲ, ಆದುದರಿಂದ ನೀವು ಅಲ್ಲಿ ಒಂದು ಮಾರ್ಕೆಟ್ ಅನ್ನು ಕಟ್ಟಿಸಿಕೊಟ್ಟರೆ ಬಹಳ ಅನುಕೂಲವಾಗುತ್ತದೆ. ಅದನ್ನು ಮಾಡಿಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

ಇನ್ನು ಹಾರ್ಟಿಕಲ್ಚರ್ ಬಗ್ಗೆ ಹೇಳಬೇಕಾದರೆ ಇದರ ಬಗ್ಗೆನೂ ಒಂದು ಸ್ಟ್ಯಾಟಿಸ್‌ಟಿಕ್ಸ್ ಹೋಗಿದೆ. ಇದರಲ್ಲಿ ಬಹಳ ಅನ್ಯಾಯ ನಡೆಯುತ್ತಾ ಇದೆ. ಇದನ್ನು ಸರಿಪಡಿಸಬೇಕೆಂದು ನಾನು ಕೇಳಿ ಕೊಳ್ಳುತ್ತೇನೆ.

ಇನ್ನು ಪಶುಸಂಗೋಪನಾ ಇಲಾಖೆ ಬಗ್ಗೆ ಹೇಳಬೇಕಾದರೆ ನಮ್ಮ ಮಂತ್ರಿಗಳು ಚಿಲ್ಲಿಂಗ್ ಪ್ಲಾಂಟ್ ಅನ್ನು ಹೊಸದಾಗಿ ಪ್ರಾರಂಭ ಮಾಡಿದ್ದಾರೆ. ನಮ್ಮ ಜಿಲ್ಲೆಯಲ್ಲಿ ಹಾಲು ಉತ್ಪಾದನೆಯಲ್ಲಿ ಕರ್ನಾಟಕದಲ್ಲೇ ಫಸ್ಟ್. ಒಟ್ಟಿನಲ್ಲಿ ಹೇಳಬೇಕಾದರೆ ರಾಜ್ಯದಲ್ಲಿ ಈ ಹಾಲು ಉತ್ಪಾದನೆ ಆಗುವುದು ಬಹಳ ಮುಖ್ಯವಾದ ಅಂಗವಾಗಿದೆ. ಆದುದರಿಂದ ದಯವಿಟ್ಟು ಒಂದೊಂದು ತಾಲ್ಲೂಕಿಗೆ ಈಗ ೨೦ ಸೊಸೈಟಿಗಳು ಇವೆ, ಇದರ ಜೊತೆಗೆ ಇನ್ನೂ ೨೦ ಸೊಸೈಟಿಗಳು ಬೇಕಾಗುತ್ತದೆ. ಇದರ ಬಗ್ಗೆ ಸರ್ವೆ ಮಾಡುವುದರಲ್ಲಿದ್ದಾರೆ. ಈ ಚಿಲ್ಲಿಂಗ್ ಸೆಂಟರ್ ೧೭ನೇ ತಾರೀಖು ಪ್ರಾರಂಭವಾಗಬೇಕಾಗಿದೆ. ಇದರ ಬಗ್ಗೆಯೂ ಸರ್ವೆ ಕೆಲಸ ನಡೆಯುತ್ತಾ ಇದೆ. ಹಾಲು ಉತ್ಪಾದನೆ ಜಾಸ್ತಿ ಮಾಡಬೇಕಾಗಿರುವುದರಿಂದ ರೈತರಿಗೆ ಅನುಕೂಲವಾಗುವ ಹಾಗೆ ಚಿಲ್ಲಿಂಗ್ ಸೆಂಟರ್ಸ್‌ನ್ನು ಜಾಸ್ತಿ ಮಾಡಿದರೆ ಆ ರೈತರೂ ಸಹ ಹೆಚ್ಚು ಶ್ರದ್ಧೆ ವಹಿಸಿ ಕೆಲಸ ಮಾಡುತ್ತಾನೆ. ಅಲ್ಲದೆ ಇದಕ್ಕೆ ವಿಶ್ವ ಬ್ಯಾಂಕ್ ಸಾಲ ಏನು ಬರುತ್ತದೆ. ಅದರಿಂದಲಾದರೂ ಮಾಡಿಸಬೇಕು. ಬೆಂಗಳೂರಿನಲ್ಲಿ ಕೆಡಿಡಿಸಿ ಏನು ಇದೆ ಅದು ಚೆನ್ನಾಗಿ ಕೆಲಸ ಮಾಡುತ್ತಾ ಇದೆ. ಅವರ ಹತ್ತಿರ ಹೋಗಿ ಕೆಲಸ ಮಾಡಿಕೊಂಡು ಈ ಹಾಲು ಉತ್ಪಾದನಾ ಸಂಘಗಳನ್ನು ಜಾಸ್ತಿ ಮಾಡಿಸಬೇಕು. ಈಗ ಬೆಂಗಳೂರು ಮತ್ತು ಕೋಲಾರದಲ್ಲಿ ಸರಾಸರಿ ೨೫ ಇದೆ, ಅದನ್ನು ೫೦ಕ್ಕೆ ಹೆಚ್ಚಿಸಬೇಕು. ಹಾಗಾದರೆ ರೈತರು ಶ್ರದ್ಧೆ ವಹಿಸಿ ಕೆಲಸ ಮಾಡುತ್ತಾರೆ. ಇದನ್ನು ಮಾಡಿಕೊಡ ಬೇಕು ಎಂದು ಹೇಳುತ್ತೇನೆ.

ಇನ್ನು ವಾರ್ತಾ ಇಲಾಖೆಯ ಬಗ್ಗೆ ಒಂದೆರಡು ವಿಷಯಗಳನ್ನು ಮಾತ್ರ ಹೇಳುತ್ತೇನೆ. ಕನ್ನಡದಲ್ಲಿ ತಯಾರಾಗತಕ್ಕಂಥಾ ಚಿತ್ರಗಳಿಗೆ ಸಬ್ಸಿಡಿ ಕೊಡುವುದಕ್ಕೆ ಇದಕ್ಕೆ ಒಂದು ಸಬ್ಸಿಡಿ ಸ್ಕೀಂ ಅಂತ ಇಟ್ಟಿದ್ದಾರೆ. ಈಗ ಕರ್ನಾಟಕದಲ್ಲಿ ಏನಾಗಿದೆ ಎಂದರೆ ವರ್ಷಕ್ಕೆ ೧೨೦ ಫಿಲಂಸ್ ಅನ್ನು ಪ್ರೊಡ್ಯೂಸ್ ಮಾಡುತ್ತಿದ್ದಾರೆ. ಇದರಲ್ಲಿ ಒಳ್ಳೆಯ ಚಿತ್ರಗಳು ೪-೫ ಬಿಟ್ಟರೆ ಬಾಕಿದೆಲ್ಲಾ ಕಳಪೆಯವು. ಅದರ ಮೇಲೆ ಸರಿಯಾದ ಕಂಟ್ರೋಲ್ ಇಲ್ಲ. ಏತಕ್ಕೆ ಹೀಗಾಯಿತು? ೧೯೭೧-೭೨ರಲ್ಲಿ ಇದರ ಬಗ್ಗೆ ಒಂದು ಟ್ರೆಂಡ್ ಬಂತು. ಆವಾಗ ಈ ಕನ್ನಡ ಚಿತ್ರವನ್ನು ತೆಗೆಯುವುದಕ್ಕೆ ಶುರು ಮಾಡಿದರು. ಇತ್ತೀಚೆಗೆ ಸರ್ಕಾರದವರು ಅವರಿಗೆ ಸಬ್ಸಿಡಿ ಕೊಡುವುದಕ್ಕೆ ಶುರು ಮಾಡಿರುವುದರಿಂದ ಕನ್ನಡ ಚಿತ್ರಗಳು ಬರುವುದು ಹೆಚ್ಚಾಗುತ್ತಾ ಇವೆ. ಈಗ ಅದನ್ನು ಪ್ರದರ್ಶಿಸಲು ತೆಗೆದುಕೊಂಡು ಹೋಗುವವರೇ ಇಲ್ಲ. ತಮಗೆ ಹೇಳಬೇಕಾದರೆ ಈ ವರ್ಷ ೮೦ ಚಿತ್ರಗಳನ್ನು ತಯಾರು ಮಾಡಿದ್ದಾರೆ. ಈ ಚಿತ್ರಗಳಿಗೆ ಇವರು ಏನು ಸಬ್ಸಿಡಿ ಕೊಡುತ್ತಾರೋ ಒಂದು ಲಕ್ಷ ರೂಪಾಯಿ ಸಬ್ಸಿಡಿ ಬಂದ ತಕ್ಷಣವೇ ಈ ಹೊಸ ಚಿತ್ರಗಳನ್ನು ಅಲ್ಲಿಗೇ ಬಿಟ್ಟು ಬಿಡುತ್ತಾರೆ. ಇದನ್ನು ಎಕ್ಸಿಬಿಟ್ ಮಾಡುವುದಿಲ್ಲ. ಬೆಂಗಳೂರಿನಲ್ಲಿ ಇದೇ ತರಹ ಬೇಕಾದಷ್ಟು ಆಗಿದೆ. ಆದುದರಿಂದ ಇದರ ಬಗ್ಗೆ ಸರ್ಕಾರದವರ ಒಂದು ಕಂಟ್ರೋಲ್ ಇರಬೇಕು ಎಂದು ಹೇಳುತ್ತೇನೆ. ಅಲ್ಲದೆ ಇದಕ್ಕೆ ಫಿಲಂ ಚೇಂಬರ್ ಆಫ್ ಕಾಮರ್ಸ್‌ನವರ ಒಂದು ಕಂಟ್ರೋಲ್ ಸಹ ಹೋಗಿದೆ. ಇವರು ಎಕ್ಸಿಬಿಟ್ ಮಾಡಬೇಕಾದರೆ ಕಾಪಿರೈಟ್ಸ್ ತೆಗೆದುಕೊಳ್ಳಬೇಕು. ಅದನ್ನು ತೆಗೆದು ಕೊಳ್ಳುತ್ತಾ ಇಲ್ಲ. ಇದರಲ್ಲಿ ಬ್ಲೂ ಫಿಲಂ ಬೇರೆ ಶುರುವಾಗಿದೆ. ಇದರಿಂದ ವಿಡಿಯೋ ಹಾವಳಿ ಹೆಚ್ಚಾಗಿದೆ. ಅಲ್ಲಿ ೨ ರೂಪಾಯಿ ೪ ರೂಪಾಯಿ ಕೊಟ್ಟರೆ ಸಾಕು, ನೋಡಿಕೊಳ್ಳಬಹುದು. ಈ ಹಾವಳಿ ವಿಪರೀತವಾಗಿರುವುದರಿಂದ ಇದರ ಬಗ್ಗೆ ಒಂದು ಕಂಟ್ರೋಲ್ ಇಡಬೇಕು ಎಂದು ಹೇಳುತ್ತೇನೆ. ಕಾಪಿರೈಟ್ಸ್ ಮೂಲಕ ಅವರು ಇವನ್ನು ಪ್ರದರ್ಶಿಸಬೇಕು. ಈಗ ಇವಕ್ಕೆ ಸರಿಯಾದ ಒಂದು ಕಂಟ್ರೋಲೇ ಇಲ್ಲ. ಈಗ ವಿಡಿಯೋ ಹಾವಳಿ ಜಾಸ್ತಿಯಾಗಿರುವುದರಿಂದ ಬ್ಲೂ ಫಿಲಂಸ್ ತೋರಿಸುವುದಕ್ಕೆ ಕಾಪಿರೈಟ್ಸ್ ತೆಗೆದುಕೊಳ್ಳದೇ ಇದನ್ನು ತೋರಿಸುತ್ತಾ ಇರುವುದರಿಂದ ಇದರ ಬಗ್ಗೆ ತಾವು ಒಂದು ಕಂಟ್ರೋಲ್ ಇಡಬೇಕೆಂದು ಹೇಳುತ್ತೇನೆ. ಈ ಬ್ಲೂ ಫಿಲಂಸ್‌ನಿಂದ ಈವೊತ್ತಿನ ದಿವಸ ಯುವ ಜನಾಂಗದವರು ಕೆಟ್ಟು ಹೋಗುವ ಪರಿಸ್ಥಿತಿ ಇದೆ. ಆದುದರಿಂದ ಇದರ ಬಗ್ಗೆ ತಾವು ಪರಿಶೀಲನೆ ಮಾಡಬೇಕೆಂದು ಹೇಳುತ್ತೇನೆ.

ಹಾಗೂ ಇದನ್ನು ತಾವು ಸ್ವಲ್ಪ ಕಂಟ್ರೋಲ್ ಮಾಡಬೇಕು. ಆಮೇಲೆ ಸಬ್ಸಿಡಿ ಕೊಡುವ ನೀತಿಯನ್ನು ಬಿಟ್ಟು, ಒಳ್ಳೆಯ ಪಿಕ್ಚರ್ ಇದ್ದರೆ ಕೊಡಿ. ಒಳ್ಳೆಯ ಪಿಕ್ಚರ್ ಇದ್ದರೆ, ಮಾರಲ್ ಆಗಿ ಒಳ್ಳೆಯ ಕತೆ ಇದ್ದರೆ ಸಾಕು, ಸಕ್ಸಸ್ ಆಗಬೇಕು ಎಂದು ಹೇಳುತ್ತಿದ್ದಿಲ್ಲ. ಬೆಂಗಾಲ್‌ನಲ್ಲಿ ಒಳ್ಳೆಯ ಪಿಕ್ಚರ್ ತಯಾರು ಮಾಡುತ್ತಾರೆ. ಪಾಪ್ಯುಲರ್ ಪಿಕ್ಚರ್ ಆಗದೇ ಹೋದರೂ ಪರ್ವಾಗಿಲ್ಲ, ಒಳ್ಳೆಯ ಪಿಕ್ಚರ್ ಆದರೆ

ಸಾಕು. ನಮ್ಮಲ್ಲಿ ಫಣಿಯಮ್ಮ ಪಿಕ್ಚರ್ ಫೇಲಾಯಿತು ಒಪ್ಪಿಕೊಳ್ಳುತ್ತೇನೆ, ಆದರೆ ಅದರಲ್ಲಿ ಒಳ್ಳೆಯ ಮಾರಲ್ ಇದೆ, ಅಂತಹ ಪಿಕ್ಚರ್ಸ್‌ಗೆ ಜಾಸ್ತಿ ಸಬ್ಸಿಡಿ ಕೊಡಲಿ. ಯಾರೋ ನಮ್ಮ ಸ್ನೇಹಿತರು ಹೇಳುತ್ತಿದ್ದರು. ಇವರನ್ನು ಕರೆದುಕೊಂಡು ಹೋಗುವುದು, ಉದ್ಘಾಟನೆ ಮಾಡಿಸುವುದು ಒಂದು ಲಕ್ಷ ಹೊಡೆದುಕೊಂಡು ಹೋಗುವುದು ಇದ್ದೇ ಇದೆ ಇದನ್ನು ತಪ್ಪಿಸಬೇಕು. ಬೆಂಗಳೂರಿನಲ್ಲಿ ಪಿಕ್ಚರ್ ಹೌಸ್‌ನಲ್ಲಿ ೬ ರಿಂದ ೮ ರೂಪಾಯಿ ದರಗಳನ್ನು ಮಾಡಿದರು. ಮೊನ್ನೆ ಒಂದು ಸಾರಿ ಮಂತ್ರಿಗಳು ಕಂಟ್ರೋಲ್ ಮಾಡುತ್ತೇವೆ ಎಂದು ಹೇಳಿದರು. ಇವತ್ತಿನ ದಿವಸ ಸಿನಿಮಾದ್ದು ಎಷ್ಟು ಹುಚ್ಚು ಅಂದರೆ ಸಾಧಾರಣವಾಗಿ ದಿನಾ ಲಕ್ಷಾಂತರ ಜನ ನೋಡುತ್ತಾರೆ, ಒಬ್ಬಿಬ್ಬರು ನೋಡುವುದಿಲ್ಲ, ಇದು ಅಂತಹ ಮನರಂಜನೆ ಸಾಧನವಾಗಿದೆ. ಬ್ಲೂಫಿಲಂ ಜಾಸ್ತಿಯಾಗಿವೆ ಇದನ್ನು ಕಂಟ್ರೋಲ್ ಮಾಡಬೇಕು ಎಂದು ಕೇಳಿಕೊಂಡು, ಇಷ್ಟು ಮಾತನಾಡಲು ಅವಕಾಶಕೊಟ್ಟಿದ್ದಕ್ಕಾಗಿ ತಮಗೆ ಧನ್ಯವಾದ ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ.

† ಶ್ರೀ ಬಿ. ಆರ್. ನೀಲಕಂಠಪ್ಪ (ತರೀಕೆರೆ).—ಮಾನ್ಯ ಅಧ್ಯಕ್ಷರೆ, ನಾನು ಪ್ರಪ್ರಥಮವಾಗಿ ಪಶುಸಂಗೋಪನಾ, ಪಶುವೈದ್ಯ ಶಾಲೆ ಹಾಗೂ ಡೈರಿ ಬಗ್ಗೆ ಎರಡು ಮಾತುಗಳನ್ನು ಆಡಲಿಕ್ಕೆ ಇಚ್ಛೆ ಪಡುತ್ತೇನೆ. ಇವತ್ತಿನ ಬರಗಾಲ ಪರಿಸ್ಥಿತಿಯಲ್ಲಿ ಪಶುಗಳನ್ನು ಕಾಪಾಡುವುದರ ಬಗ್ಗೆ ಹೆಚ್ಚಿನ ಗಮನವನ್ನು ಕೊಡಬೇಕಾಗಿದೆ. ಅದೇ ರೀತಿ ಇಡೀ ರಾಷ್ಟ್ರದಲ್ಲಿ, ರಾಜ್ಯದಲ್ಲಿ ಅತ್ಯುತ್ತಮವಾದ ಅಮೃತ ಮಹಲ್ ಕಾವಲ್ ಇದೆ. ಅದರ ಬೆಳವಣಿಗೆ ಬಗ್ಗೆ ಹುಲ್ಲಿನ ಬೆಳವಣಿಗೆ ಬಗ್ಗೆ ನಮ್ಮ ತಾಲ್ಲೂಕಿನಲ್ಲಿ ಒಂದು ವರ್ಷ ಪರೀಕ್ಷೆಯನ್ನು ಮಾಡಿದೆವು. ಪ್ರತಿ ವರ್ಷ ೨ ಲಕ್ಷ, ೩ ಲಕ್ಷ ರೂಪಾಯಿ ಹಣವನ್ನು ವ್ಯಯಮಾಡಿ ಹುಲ್ಲನ್ನು ಕೊಂಡುಕೊಳ್ಳುತ್ತಿದ್ದೆವು. ಆದರೆ ಹೋದವರ್ಷ ೩ ಲಕ್ಷಕ್ಕೆ ಮಾರುವಷ್ಟು ಹುಲ್ಲನ್ನು ಬೆಳೆದಿದ್ದಾರೆ. ಆ ದೃಷ್ಟಿಯಿಂದ ಅಮೃತ್‌ಮಹಲ್ ಕಾವಲನ್ನು ಉಳಿಸಿಕೊಳ್ಳಲಿಕ್ಕೆ ಹುಲ್ಲನ್ನು ಬೆಳೆಸಲಿಕ್ಕೆ ಹೆಚ್ಚಿನ ಗಮನಕೊಡಬೇಕು. ಮನುಷ್ಯನಿಗೆ ಆಹಾರವನ್ನು ತರಬಹುದು, ಆದರೆ ದನಗಳಿಗೆ ಆಹಾರವನ್ನು ತರುವುದು ಕಷ್ಟ. ಆದುದರಿಂದ ಹುಲ್ಲು ಬೆಳವಣಿಗೆಗೆ ಹೆಚ್ಚು ಪ್ರೋತ್ಸಾಹ ಕೊಡಬೇಕು. ಡಾಕ್ಟರ್ ಕೃಷ್ಣಮೂರ್ತಿಯವರು ಒಂದು ಯೋಜನೆಯನ್ನು ಈ ಬಗ್ಗೆ ಮಾಡಿದ್ದಾರೆ. ಅದನ್ನು ತರಿಸಿಕೊಂಡು ಸರ್ಕಾರ ಹೆಚ್ಚಿಗೆ ಹಣವನ್ನು ಕೊಡಬೇಕು ಎಂದು ಹೇಳುತ್ತೇನೆ. ಆಮೇಲೆ ಪ್ರಾಣಿಸಾಕಾಣಿಕೆ ಮುಖ್ಯವಾದುದು. ಕೋಳಿ ಸಾಕಾಣಿಕೆಗಿಂತ ಅತ್ಯುತ್ತಮವಾದ ಸಾಕಾಣಿಕೆ ಮೊಲ. ಒಂದು ವರ್ಷದಲ್ಲಿ ಬೇಕಾದಷ್ಟು ಅಭಿವೃದ್ಧಿ ಮಾಡಬಹುದು. ನಿಜವಾಗಿ ಹೇಳಬೇಕಾದರೆ ಮನೆಯಲ್ಲಿ ಕೈಕಸುಬಾಗಿ ೧೦ ಮೊಲಗಳನ್ನು ಸಾಕುವಂಥ ಪ್ರವೃತ್ತಿ ಇದೆ. ಆದುದರಿಂದ ಸಬ್ಸಿಡಿ ದರದರಲ್ಲಿ ಕೊಡಬೇಕು ನಮ್ಮ ರಾಜ್ಯದಲ್ಲಿ ಇದು ಉತ್ತಮವಾದ ಸಾಕಾಣಿಕೆ. ಮತ್ತು ಚೊಕ್ಕಟವಾದ ಸಾಕಾಣಿಕೆ ಎಲ್ಲಾ ಪ್ರಾಣಿಗಳ ಸಾಕಾಣಿಕೆಗಿಂತ, ಕೋಳಿ ಹಂದಿಗಿಂತಮೊಲ ಸಾಕಾಣಿಕೆ ಉತ್ತಮವಾದದು ಮತ್ತು ಇತ್ಯಾದರಗಳಿಂದ ಸಾಕುವಂಥಾದ್ದು ಮೊಲ ಸಾಕಾಣಿಕೆ. ಈ ಮೊಲದ ಸಾಕಾಣಿಕೆ ನಮ್ಮ ತಾಲ್ಲೂಕಿನಲ್ಲಿ ಪ್ರಾಯೋಗಿಕವಾಗಿ ಆಗಿದೆ.

ಶ್ರೀ ಬಿ. ಲಕ್ಕಪ್ಪ.—ಅದರ ರುಚಿಯನ್ನು ಅನುಭವಿಸಿದ್ದೀರಾ ?

ಶ್ರೀ ಬಿ. ಆರ್. ನೀಲಕಂಠಪ್ಪ. ಅದರ ರುಚಿಯನ್ನು ಅನುಭವಿಸಿಲ್ಲ. ಇವತ್ತಿನದಿವಸ ರೈತರಿಗೆ ಮೊಲ ಸಾಕಾಣಿಕೆಗೆ ಸಬ್ಸಿಡಿ ರೂಪದಲ್ಲಿ ಹೆಚ್ಚಿಗೆ ಹಣವನ್ನು ಕೊಟ್ಟರೆ ಅನುಕೂಲವಾಗುತ್ತದೆ. ೧೦೦ ಮನೆ ಇದ್ದರೆ ಒಂದು ಮನೆಗೆ ೪ ರಂತೆ ಸಾಕಿದರೆ ೪೦೦ ಮೊಲ ಆಗುತ್ತದೆ. ಇದು ಉತ್ತಮವಾದ ಸಾಕಾಣಿಕೆ, ಅದಕ್ಕೋಸ್ಕರವಾಗಿ ಇದಕ್ಕೆ ರೈತರಿಗೆ ಸಬ್ಸಿಡಿ ಕೊಡಬೇಕು ಎಂದು ಹೇಳುತ್ತೇನೆ. ಇನ್ನು ಆರೋಗ್ಯದ ವಿಚಾರವಾಗಿ ಹೇಳುವುದಾದರೆ ಇವತ್ತಿನ ದಿವಸ ದನಗಳ ಆರೋಗ್ಯಕ್ಕೆ ಹೆಚ್ಚಿನ ಗಮನ ಕೊಡಬೇಕಾಗಿದೆ. ಈ ವರ್ಷದ ಆಯವ್ಯಯ ಪಟ್ಟಿಯನ್ನು ನೋಡಿದರೆ ಒಂದು ಆಸ್ಪತ್ರೆಯನ್ನೂ ಕೂಡ ಕೊಡುತ್ತಾರೋ ಇಲ್ಲವೋ ಎನ್ನುವ ಅನುಮಾನ ಇದೆ. ಜನಗಳ ಆರೋಗ್ಯದ ಕಡೆ ಗಮನಕೊಟ್ಟು ಎಷ್ಟು ಹಣವನ್ನು ಖರ್ಚುಮಾಡುತ್ತೇವೋ ಅದರ ಅರ್ಧ ಭಾಗ ಹಣವನ್ನು ಪಶುಪಾಲನೆಗೆ, ಪಶುವೈದ್ಯಕ್ಕೆ ಕೊಟ್ಟು ಪಶು ಆರೋಗ್ಯದ ದೃಷ್ಟಿಯಿಂದ ಆಸ್ಪತ್ರೆಗಳನ್ನು ಕೊಡಬೇಕು ಬಜೆಟ್‌ನಲ್ಲಿ ಇದಕ್ಕೆ ಹಣ ಕಡಿಮೆ ಇದೆ. ದಯವಿಟ್ಟು ಇದಕ್ಕೆ ಹೆಚ್ಚಿಗೆ ಹಣವನ್ನು ಕೊಡಬೇಕು ಪಶು ಬೆಳವಣಿಗೆ, ಹುಲ್ಲು ಬೆಳವಣಿಗೆ ಮತ್ತು ಮೊಲ ಸಾಕಾಣಿಕೆಗೆ ಅನುಕೂಲವನ್ನು ಮಾಡಿಕೊಡಬೇಕು ಎಂದು ಹೇಳುತ್ತೇನೆ

ಇನ್ನು ಮಾನ್ಯ ಜೀವರಾಜ ಆಳ್ವರವರ ಖಾತೆಗೆ ಹೋಗುತ್ತೇನೆ. ಯುವಜನ ಇಲಾಖೆ ಏನಾಗಿದೆಯೆಂದರೆ, ಸಾಮಾನ್ಯವಾಗಿ ನಗರದ ಇಲಾಖೆ, ಯುವಕರ ಇಲಾಖೆಯಾಗಿದೆ. ಇವತ್ತು ಸಣ್ಣ ಪತ್ರಿಕೆ

ಗಳು ಏನಾಗಿದೆಯೆಂದರೆ ಹೊಟ್ಟೆಪಾಡಿಗೆ ಅವರನ್ನು ಅವಲಂಬಿಸುವಂಥ ಪತ್ರಿಕೆಗಳು ಮಾತ್ರ ಆಗಿದೆ. ಇವು ಜಿಲ್ಲಾಮಟ್ಟಕ್ಕಾಗಲಿ, ತಾಲ್ಲೂಕು ಮಟ್ಟಕ್ಕಾಗಲಿ ಖಂಡಿತ ಹೋಗಿಲ್ಲ. ನಾನು ಇವರಿಗೆ ಒಂದು ಕಿವಿ ಮಾತನ್ನು ಹೇಳುತ್ತೇನೆ. ಇವತ್ತು ಜಿಲ್ಲಾ ಪತ್ರಿಕೆಗಳು ಸಾಯುತ್ತಿವೆ. ನಿಮ್ಮ ಸುತ್ತಮುತ್ತ ಜಯಕಾರ ಹೇಳುವಂಥವರಿಗೆ ಮಾತ್ರ ಕೊಡುತ್ತಿದ್ದೀರಿ. ಹಳ್ಳಿಯ ರೈತರ ಪ್ರತಿಬಿಂಬವನ್ನು ಕೊಡತಕ್ಕ ಸಣ್ಣ ಪತ್ರಿಕೆಗಳಿಗೆ ಜಿಲ್ಲಾ ಪತ್ರಿಕೆಗಳಿಗೆ ಹೆಚ್ಚಿನ ಗಮನಕೊಟ್ಟರೆ ನಮ್ಮ ಸರ್ಕಾರದ ಪ್ರಚಾರವಾಗುತ್ತದೆ. ನೀವು ಎಷ್ಟೆ ಅವಕಾಶ ಕೊಟ್ಟರೂ ನಮ್ಮ ಪ್ರಚಾರ ಸೊನ್ನೆಯಾಗಿದೆ. ಜನತಾ ಸರ್ಕಾರದ ಪ್ರಚಾರ ಸರಿಯಾಗಿ ಆಗುತ್ತಾ ಇಲ್ಲ. ನಾವು ಎಷ್ಟೇ ಕೆಲಸ ಮಾಡಿದರೂ ಸಾಕಷ್ಟು ಪ್ರಚಾರ ಆಗುತ್ತಾ ಇಲ್ಲ. ನಮ್ಮ ಪ್ರಚಾರ ಮಾಧ್ಯಮ ಬಹಳ ಕಡಿಮೆಯಿದೆ. ಆದುದರಿಂದ ಸಣ್ಣ ಪತ್ರಿಕೆಗಳಿಂದ ಜಿಲ್ಲಾಮಟ್ಟದಲ್ಲಿ ಪ್ರಚಾರವಾದರೆ, ತಾಲ್ಲೂಕು ಮಟ್ಟದಲ್ಲಿ ಪ್ರಚಾರವಾದರೆ ಸಾಧನೆಯಾಗುತ್ತದೆ. ಆದುದರಿಂದ ಜಿಲ್ಲಾ ಮಟ್ಟದ ಪತ್ರಿಕೆಗಳಿಗೆ ಮೊದಲು ಆದ್ಯತೆ ಕೊಡಿ. ಬೆಂಗಳೂರಿನಲ್ಲಿ ತಮ್ಮ ಸುತ್ತಮುತ್ತ ಇರುವ ಕೆಲವೇ ಪತ್ರಿಕೆಗಳು ಪ್ರಯೋಜನ ಪಡೆಯುತ್ತಿವೆ. ಬರೀ ಹೊಟ್ಟೆ ಪಾಡಿಗೆ ನಡೆಯುತಕ್ಕ ಪತ್ರಿಕೆಗಳನ್ನು ಖಂಡಿತ ನಿಲ್ಲಿಸಿ. ವರ್ಷಕ್ಕೊಂದು ಸಲ, ತಿಂಗಳಿಗೊಂದು ಸಲ ಫೋಟೋ ಹಾಕಿ ತಂದು ತೋರಿಸುತ್ತಾರೆ. ಅವುಗಳನ್ನು ಖಂಡಿತವಾಗಿ ನಿಲ್ಲಿಸಿ. ಹೊಟ್ಟೆಪಾಡಿಗಾಗಿ ನಡೆಯುತಕ್ಕ ಪತ್ರಿಕೆಗಳು ಎಲ್ಲಿಯವರೆಗೆ ನಿಲ್ಲುವುದಿಲ್ಲವೋ ಅಲ್ಲಿಯವರೆಗೆ ನಮ್ಮ ಸಾಧನೆಯಾಗುವುದಿಲ್ಲ ಎಂದು ಹೇಳುತ್ತೇನೆ.

ಇನ್ನು ಕಲೆ ಮತ್ತು ಸಂಸ್ಕೃತಿ ಬಗ್ಗೆ ಹೇಳುವುದಾದರೆ, ಕನ್ನಡ ಅಭಿಮಾನಿಗಳು, ಸಂಸ್ಕೃತಿ ಯುಳ್ಳವರು ಹಳ್ಳಿಯಲ್ಲಿದ್ದಾರೆಯೇ ಹೊರತು ದಿಲ್ಲಿಯಲ್ಲಿಲ್ಲ. ಕನ್ನಡ ಅಭಿಮಾನ ಇರುವುದು ಹಳ್ಳಿಯಲ್ಲಿ. ಇಲ್ಲಿ ಕೊಟ್ಟಿರುವುದನ್ನು ನೋಡಿದರೆ ಸಾಮಾನ್ಯ ಗ್ರಾಮಾಂತರ ಪ್ರದೇಶದ ಜನರಿಗೆ ಪ್ರೋತ್ಸಾಹ ಬಹಳ ಕಡಿಮೆಯಾಗಿದೆ. ಹಳ್ಳಿಯ ಧ್ವನಿಯನ್ನು ಕೇಳುವಂಥ ಪ್ರೋತ್ಸಾಹ ಕೊಡುವಂಥಾದ್ದು ಕಡಿಮೆಯಾಗಿದೆ ಹಳ್ಳಿಯವರಿಗೆ ನ್ಯಾಯ, ನೀತಿ, ಧರ್ಮ ಗೊತ್ತಿದೆ. ಇಲ್ಲಿನ ಜನರಿಗೆ ಹೇಗೆ ಹೊಗಳಬೇಕು ಎನ್ನುವ ಪ್ರವೃತ್ತಿ ಬಿಟ್ಟರೆ ಉದರ ಪೋಷಣೆ ಮಾಡುವಂಥ ಪ್ರವೃತ್ತಿ ಇದೆ. ಇವತ್ತು ಹಳ್ಳಿಯ ಸಂಸ್ಕೃತಿ ಗ್ರಾಮಾಂತರ ಪ್ರದೇಶದಲ್ಲಿದೆ. ಆದ್ದರಿಂದ ಹಳ್ಳಿಯ ಜನರಿಂದ ದಿಲ್ಲಿಯ ಜನರಿಗೆ ಬುದ್ಧಿ ಕಲಿಸಬೇಕಾಗಿದೆ.

ಇನ್ನು ಚಲನಚಿತ್ರಗಳ ಬಗ್ಗೆ ಹೇಳುವುದಾದರೆ, ಇವು ಖಂಡಿತವಾಗಿ ನಮ್ಮ ಕನ್ನಡ ನಾಡು, ನುಡಿಗೆ, ಕನ್ನಡದ ಬೆಳವಣಿಗೆಗೆ ಕಳಂಕತರತಕ್ಕ ಚಿತ್ರಗಳಾಗಿವೆ. ರಾಷ್ಟ್ರಕವಿ ಕುವೆಂಪುರವರ ಬಗ್ಗೆ ಅತ್ಯುತ್ತಮ ವಾದ ಚಿತ್ರವನ್ನು ಮಾಡಿದ್ದಾರೆ. ಅದು ನಿಜವಾಗಿ ಎಲ್ಲರೂ ನೋಡುವಂಥಾದ್ದು. ಅಂಥಾದ್ದನ್ನು ಮಾಡಿದ್ದಾರೆ. ಆದರೆ ಅದಕ್ಕೆ ಸಬ್ಸಿಡಿ ಸಿಕ್ಕದೆ ಬೀದಿ ಪಾಲಾಗಿದೆ. ವಿಶ್ವ ಕನ್ನಡ ಸಮ್ಮೇಳನಕ್ಕೆ ಕುವೆಂಪು ರವರ ಕಾಲಿಗೆ ಬಿದ್ದು ಅಧ್ಯಕ್ಷತೆ ವಹಿಸಿ, ಸಮ್ಮೇಳನ ನಡೆಸಿ ಎಂದು ಕೇಳಿಕೊಂಡರು. ಹಳೆಗನ್ನಡದ ಅವರ ಚಿತ್ರಕ್ಕೆ ಬೆಲೆ ಕೊಡದೇ ಹೋದರೆ ಕನ್ನಡ ಕವಿಗೆ, ಕನ್ನಡಕ್ಕೆ ಅಪಮಾನ ಮಾಡಿದಹಾಗೆ ಆಗುತ್ತದೆ ರಾಷ್ಟ್ರಕವಿ ಕುವೆಂಪುರವರು ಕೊನೆಗೆ ಒಂದು ಮಾತನ್ನು ಹೇಳಿದ್ದಾರೆ. ಇಂತಹ ಚಿತ್ರವನ್ನು ಪ್ರದರ್ಶನ ಮಾಡಿ, ರಾಷ್ಟ್ರಕವಿ ಪುರಸ್ಕಾರವನ್ನು ವಾಪಸ್ ಕೊಟ್ಟರೂ ಚಿಂತೆಯಿಲ್ಲ ಎಂದು ಹೇಳಿದರು. ಇದರಿಂದ ಅವರ ಮನಸ್ಸು ಎಷ್ಟು ನೊಂದಿದೆ ಎಂದು ಅರ್ಥವಾಗುತ್ತದೆ. ಆದ್ದರಿಂದ ನೀವು ಅವರ ಚಿತ್ರವನ್ನು ಪ್ರದರ್ಶನ ಮಾಡಿದರೆ ಕುವೆಂಪುರವರಿಗೆ ಗೌರವ ಕೊಟ್ಟಹಾಗೆ, ಹಳೆಗನ್ನಡಕ್ಕೆ ಗೌರವ ಕೊಟ್ಟಹಾಗೆ ಆಗುತ್ತದೆ ಎಂದು ಹೇಳುತ್ತೇನೆ.

ಇನ್ನು ತೋಟಗಾರಿಕೆ ಇಲಾಖೆ ಬಗ್ಗೆ ಒಂದೆರಡು ಮಾತುಗಳನ್ನು ಹೇಳುವುದಕ್ಕೆ ಇಷ್ಟಪಡುತ್ತೇನೆ. ನಮ್ಮಲ್ಲಿ ಸಹ್ಯಾದ್ರಿ ವಿಶ್ವವಿದ್ಯಾನಿಲಯವನ್ನು ತೆರೆದಿದ್ದೀರಿ. ಅದಕ್ಕಾಗಿ ನಾನು ಸರ್ಕಾರವನ್ನು ಅಭಿನಂದಿಸುತ್ತೇನೆ. ಸಹ್ಯಾದ್ರಿ ಯುನಿವರ್ಸಿಟಿಯ ಅಡಿಯಲ್ಲಿ ಭದ್ರಾ ಬಿ.ಆರ್. ಪ್ರಾಜೆಕ್ಟ್ ಇದೆ. ಅಲ್ಲಿ ಮೈಸೂರಿನಲ್ಲಿರುವ ಕೆ.ಆರ್.ಎಸ್. ಉದ್ಯಾನವನದ ತರಹ ಉದ್ಯಾನವನ್ನು ಮಾಡಲು ಪ್ಲಾನ್ ಎಸ್ಟಿಮೇಟ್ ತರಿಸುತ್ತೇವೆಂದು ನಮ್ಮ ಮಿತ್ರರಾದ ಶ್ರೀ ಸೋಮಶೇಖರ್‌ರವರು ಹೋದ ವರ್ಷ ಹೇಳಿದ್ದರು. ಇದರ ಬಗ್ಗೆ ಪ್ಲಾನ್ ಆಗಲೀ ಎಸ್ಟಿಮೇಟ್ ಆಗಲೀ ತರಿಸಿಲ್ಲ. ಬಿ.ಆರ್. ಪ್ರಾಜೆಕ್ಟ್‌ನಲ್ಲಿ ಕೆ.ಆರ್.ಎಸ್. ಸಾಗರದ ಉದ್ಯಾನವನಕ್ಕಿಂತ ಉತ್ತಮವಾದ ಉದ್ಯಾನವನ್ನು ನಿರ್ಮಿಸಬೇಕು. ನಾವು ಉದರ ಪೋಷಣೆ ಆಗುತ್ತದೆಂದು ಹಣ್ಣುಗಳನ್ನು ಹಾಗೂ ಗಿಡಗಳನ್ನು ಬೆಳೆಸುತ್ತೇವೆ. ಆದುದರಿಂದ ಸಬ್ಸಿಡಿ ದರದಲ್ಲಿ ಹಣ್ಣು ಬೀಜ, ಗೊಬ್ಬರ ಮುಂತಾದವನ್ನು ಕೊಡಬೇಕು. ಪುಕ್ಕಟೆ ಪಪ್ಪಾಯಿ ಹಣ್ಣಿನ ಗಿಡವನ್ನು, ಗಿಡಗಳನ್ನು ಕೊಟ್ಟರೆ ಅವರು ಹಣ್ಣನ್ನು ಬೆಳೆಸಿ ನಿಮಗೇ ಕೊಡುತ್ತಾರೆ. ಮಾನ್ಯ

ಮಂತ್ರಿಗಳು ಬಹಳ ಬುದ್ಧಿವಂತರು, ಬಹಳ ಚುರುಕಾಗಿ ಕೆಲಸ ಮಾಡುತ್ತಿದ್ದಾರೆ. ಈ ನಾಲ್ಕು ಇಲಾಖೆಗಳ ಮಂತ್ರಿಗಳೂ ಕೂಡ ಯುವಕರು, ಉತ್ಸಾಹ ಶಾಲಿಗಳು ಒಳ್ಳೆಯ ಚಾರಿತ್ರ್ಯದಲ್ಲಿ ಕೆಲಸ ಮಾಡುತ್ತಿದ್ದಾರೆ. ಎಲ್ಲಾ ಇಲಾಖೆಯವರೂ ಕೂಡ ಚೆನ್ನಾಗಿ ಕೆಲಸ ಮಾಡಿದ್ದಾರೆ. ನನಗೆ ಇಷ್ಟು ಮಾತನಾಡಲು ಅವಕಾಶ ಕೊಟ್ಟ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

† ಶ್ರೀ ಬಸವರಾಜ್ (ಬ್ರಹ್ಮಾವರ್).—ಮಾನ್ಯ ಅಧ್ಯಕ್ಷರೇ, ಮೀನುಗಾರರು ತಮ್ಮ ಸಮಸ್ಯೆಗಳನ್ನು ಹಲವಾರು ವರ್ಷಗಳಿಂದ ಸರ್ಕಾರದ ಗಮನಕ್ಕೆ ತಂದರೂ ಕೂಡ ಸಮಸ್ಯೆಗಳು ಪರಿಹಾರವಾಗದೆ, ಇದರ ಬಗ್ಗೆ ಸಾಕಷ್ಟು ಕ್ರಮವನ್ನು ಕೈಗೊಳ್ಳದೇ ಇರುವುದರಿಂದ ಈ ಇಲಾಖೆಯ ಮೇಲಿನ ಬೇಡಿಕೆಯನ್ನು ವಿರೋಧಿಸುತ್ತಾ ಕೆಲವು ಸಲಹೆಗಳನ್ನು ಕೊಡಲು ಬಯಸುತ್ತೇನೆ. ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ಮ್ಯಾನೇಜ್‌ಮೆಂಟಿನವರ ಪ್ರಕಾರ ಕರ್ನಾಟಕದ ಕರಾವಳಿಯಲ್ಲಿ ಆರು ಲಕ್ಷ ಟನ್‌ಗಿಂತಲೂ ಹೆಚ್ಚು ಮೀನನ್ನು ಉತ್ಪಾದನೆ ಮಾಡಬಹುದು. ಆದರೆ ನಮ್ಮ ಸಾಧನೆ ಇದುವರೆಗೂ ಆಗಿರುವುದು ಬಹಳ ಕಡಿಮೆಯಾಗಿದೆ. ಇದಕ್ಕೆ ಏನು ಕಾರಣವೋ ಗೊತ್ತಿಲ್ಲ. ಒಂದು ಲಕ್ಷ ೪೦ ಸಾವಿರ ೬೦ ಸಾವಿರದವರೆಗೆ ಉತ್ಪಾದನೆ ಮಾಡುತ್ತಾರೆ. ಅದಕ್ಕೆ ಹಲವಾರು ಕಾರಣಗಳು ಇರಬಹುದು ಈ ಕೆಳಗಿನ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಬೇಕೆಂದು ತಮ್ಮ ಮೂಲಕ ಸರ್ಕಾರಕ್ಕೆ ಸೂಚಿಸುವುದಕ್ಕೆ ಇಷ್ಟಪಡುತ್ತೇನೆ. ಮೊದಲನೆಯದಾಗಿ ನಮ್ಮ ಕರಾವಳಿಯ ಇಳಿದಾಣಗಳಲ್ಲಿ ಜೆಟ್ಟಿಗಳನ್ನು ಕಟ್ಟಿ ಮೀನು ಹಿಡಿಯುವ ದೋಣಿಗಳು ತಂಗಲು ವ್ಯವಸ್ಥೆ ರೂಪಿಸಬೇಕು. ಇದಕ್ಕೊಂದು ಮಾಸ್ಟರ್ ಪ್ಲಾನ್ ಮಾಡಿ ಕೇಂದ್ರ ಸರ್ಕಾರದ ನೆರವಿನಿಂದ ೭ನೇ ಪಂಚವಾರ್ಷಿಕ ಯೋಜನೆಯಲ್ಲಿ ಇದನ್ನು ಕಾರ್ಯರೂಪಕ್ಕೆ ತಂದರೆ ಇದರಿಂದ ಮೀನಿನ ಉತ್ಪಾದನೆಯನ್ನು ಹೆಚ್ಚಿಸುವುದರ ಜೊತೆಗೆ ಮೀನುಗಾರರ ಆರ್ಥಿಕ ಅಭಿವೃದ್ಧಿಯನ್ನು ಸಾಧಿಸಬಹುದು. ಹಂಗರಿ ಕಟ್ಟೆ, ಕೋಡಿ ಬಂಗಡಿಯಲ್ಲಿ ಜೆಟ್ಟಿ ಸ್ಥಾಪನೆಗೆ ಬೇಡಿಕೆ ಬಂದಿದ್ದು, ಸರ್ಕಾರ ಇದರ ಬಗ್ಗೆ ಗಮನ ಹರಿಸಿಲ್ಲ. ಇದರ ಬಗ್ಗೆ ಗಮನ ಹರಿಸಬೇಕೆಂದು ಒತ್ತಾಯ ಮಾಡುತ್ತಿದ್ದೇನೆ. ಹಂಗರಿ ಕಟ್ಟೆ ಬಂದರನ್ನು ಮಾನ್ಯ ಸಚಿವರು ನೋಡಿದ್ದಾರೆ. ಅಲ್ಲಿನ ತಾಂಡಾಗಳಿಗೆ ಇದುವರೆಗೂ ಮಣ್ಣು ತುಂಬಿಸಿಲ್ಲ. ಆ ಕೆಲಸವನ್ನು ಕೂಡಲೇ ಮಾಡಬೇಕೆಂದು ಒತ್ತಾಯ ಪಡಿಸುತ್ತೇನೆ. ನಮ್ಮ ಸರ್ಕಾರದವರು ಮಲ್ಪೆ, ಮಂಗಳೂರು, ಉತ್ತರ ಕನ್ನಡದ ಕಡೆಯಲ್ಲಿ ಮೀನುಗಾರಿಕಾ ಬಂದರುಗಳನ್ನು ಸ್ಥಾಪನೆ ಮಾಡಿದ್ದಾರೆ. ಅದೇ ರೀತಿಯಲ್ಲಿ ಇಲ್ಲೂ ಕೂಡ ಮೀನುಗಾರಿಕಾ ಬಂದರುಗಳನ್ನು ಸ್ಥಾಪನೆ ಮಾಡಬಹುದು. ಉದಾಹರಣೆಗೆ ಹೇಳುವುದಾದರೆ, ಕುಂದಾಪುರದ ಗಂಗೊಳ್ಳಿ, ಮಧೋಳಿ, ಮರೂರ್ಕಿ, ಹಂಗರ ಕಟ್ಟೆ, ಸೇಸ್ ಒಕ್ಕಲು ಹಾಗೂ ಕೊಡಿಗೆ ಹಳ್ಳಿಗಳಿಗೆ ಹಣವನ್ನು ಜಾಸ್ತಿ ಕೊಡಬೇಕು. ಕೇಂದ್ರ ಸರ್ಕಾರದ ಮುಖಾಂತರ ವಿಶ್ವಬ್ಯಾಂಕ್ ನೆರವಿನಿಂದ ಈ ಬಂದರುಗಳನ್ನು ಉತ್ತಮಗೊಳಿಸಬೇಕೆಂದು ತಮ್ಮ ಮೂಲಕ ಕೇಳಿಕೊಳ್ಳುತ್ತಿದ್ದೇನೆ. ಮಲ್ಪೆ, ಹೊನ್ನಾವರ ಬಂದರುಗಳಲ್ಲಿ ಸರ್ಕಾರ ವಿಧಿಸಿರುವ ಶುಲ್ಕಗಳ ಬಗ್ಗೆ ನಮ್ಮ ಮೀನುಗಾರರು ಮೊನ್ನೆ ಮಾನ್ಯ ಮಂತ್ರಿಗಳು ಅಲ್ಲಿಗೆ ಬಂದಾಗ ಈ ಶುಲ್ಕವನ್ನು ಪರಿಷ್ಕರಣ ಮಾಡಿ ಎಂದು ಕೇಳಿದ್ದಕ್ಕೆ, ಅವರು ಮಾಡುವುದಾಗಿ ಹೇಳಿದ್ದಾರೆ. ಅಲ್ಲದೆ ಅದನ್ನು ಪರಿಷ್ಕರಣ ಮಾಡುವವರೆಗೆ ಶುಲ್ಕಗಳನ್ನು ವಜಾ ಮಾಡಿದ್ದಾರೆ. ಅದಕ್ಕಾಗಿ ನಾನು ಅವರಿಗೆ ಅಭಿನಂದನೆಗಳನ್ನು ಸಲ್ಲಿಸುತ್ತೇನೆ. ಈ ಬಂದರಿನಲ್ಲಿ ಮಹಿಳಾ ಸಹಕಾರಿ ಸಂಘದ ಸದಸ್ಯರಿಗೆ ಸ್ಥಳವನ್ನು ನೀಡುವುದಾಗಿ ಆಶ್ವಾಸನೆಯನ್ನು ಕೊಟ್ಟಿದ್ದಿರಿ, ಅದು ಈಡೇರಿಲ್ಲ. ಅದನ್ನು ಈಡೇರಿಸಬೇಕೆಂದು ಈ ಮೂಲಕ ತಮ್ಮನ್ನು ಒತ್ತಾಯ ಪಡಿಸುತ್ತಿದ್ದೇನೆ. ಇಂಡೋ ಡ್ಯಾನಿಷ್ ಮೀನುಗಾರಿಕಾ ಯೋಜನೆ ಉತ್ತರ ಕರ್ನಾಟಕದಲ್ಲಿ ಕಾರ್ಯಗತವಾಗುತ್ತಿದೆ. ಆ ಯೋಜನೆಯನ್ನು ದಕ್ಷಿಣ ಕನ್ನಡ ಜಿಲ್ಲೆಗೆ ಅಳವಡಿಸಬೇಕೆಂದು ವಿನಂತಿ ಮಾಡಿಕೊಳ್ಳುತ್ತೇನೆ. ಇದರಿಂದಾಗಿ ದಕ್ಷಿಣ ಕನ್ನಡದ ಮೀನುಗಾರರಿಗೆ ಬಹಳಷ್ಟು ಉಪಯೋಗವಾಗುತ್ತದೆಂದು ಹೇಳುವುದಕ್ಕೆ ಇಷ್ಟಪಡುತ್ತೇನೆ. ಅದೇ ರೀತಿಯಲ್ಲಿ ರಾಷ್ಟ್ರೀಯ ಸಹಕಾರಿ ಅಭಿವೃದ್ಧಿ ನಿಗಮದ ಮುಖಾಂತರ ಬೇರೆ ರಾಜ್ಯದವರು ಬಹಳಷ್ಟು ಹಣವನ್ನು ಒದಗಿಸಿಕೊಟ್ಟಿದ್ದಾರೆ ನಮ್ಮ ಕರ್ನಾಟಕದವರೂ ಈ ನೆರವಿನಿಂದ ಹಣವನ್ನು ಪಡೆಯಲು ಬಹಳ ಹಿಂದೆ ಬಿದ್ದಿದ್ದಾರೆಂದು ಹೇಳುವುದಕ್ಕೆ ಇಷ್ಟಪಡುತ್ತೇನೆ. ಎನ್.ಸಿ.ಡಿ.ಸಿ. ಯವರಿಂದ ನಮ್ಮಲ್ಲಿರುವ ಮೀನುಗಾರರ ಸಹಕಾರಿ ಸಂಘಗಳಿಗೆ ಸಾಕಷ್ಟು ಸವಲತ್ತುಗಳನ್ನು ಕೊಡಿಸಲಿಕ್ಕೆ ಸಾಧ್ಯವಾಗುತ್ತದೆ. ಮತ್ತು ಇದರ ಪ್ರಯೋಜನವನ್ನು ಕರ್ನಾಟಕದವರು ಪಡೆಯಬೇಕೆಂದು ಮಾನ್ಯ ಸಚಿವರಲ್ಲಿ ತಮ್ಮ ಮೂಲಕ ವಿನಂತಿ ಮಾಡಿಕೊಳ್ಳುತ್ತೇನೆ ಮಾನ್ಯ ಸಚಿವರು ಕಳೆದ ಬಾರಿ ೧೯೮೫-೮೬ನೇ ಇಸವಿಯಲ್ಲಿ ಗಂಗೊಳ್ಳಿ, ಮೀನುಗಾರಿಕಾ ಸಹಕಾರಿ ಸಂಘದವರಿಗೆ ೫ ಲಕ್ಷ ರೂಪಾಯಿ ಕೊಟ್ಟಿದ್ದಾರೆ.

ಮಲ್ಪೆಯಲ್ಲಿರುವ ಸಹಕಾರಿ ಸಂಘದವರು ಬೇಡಿಕೆಯನ್ನು ಇಟ್ಟಿದ್ದಾರೆ. ಆದುದರಿಂದ ಅವರಿಗೂ ಕೂಡ ಈ ಸಾಲಿನಲ್ಲಿ ಹಣವನ್ನು ಕೊಡುವ ವ್ಯವಸ್ಥೆ ಮಾಡಬೇಕೆಂದು ವಿನಂತಿ ಮಾಡಿಕೊಳ್ಳುತ್ತೇನೆ. ಇನ್ನು ಬಹಳ ವರ್ಷಗಳಿಂದ ಆಳ ಸಮುದ್ರದ ಮೀನುಗಾರಿಕೆ ಬಗ್ಗೆ ಮಾತುಗಳು ಕೇಳಿ ಬರುತ್ತಿವೆ. ಅದು ಇದುವರೆಗೂ ಕಾರ್ಯಗತವಾಗಿಲ್ಲ. ಅದನ್ನು ಆದಷ್ಟು ಬೇಗನೆ ಮಾಡಬೇಕು. ಹೆಚ್ಚು ಹೆಚ್ಚು ಆದಾಯ ಗಳಿಸುವ ಪ್ರಯತ್ನವನ್ನು ಮಾಡಬೇಕೆಂದು ಹೇಳುತ್ತೇನೆ. ರಾಷ್ಟ್ರದ ಪೂರ್ವ ಕರಾವಳಿಯಲ್ಲಿ ಇದನ್ನು ಜಾರಿಗೆ ತಂದರೆ ಅನುಕೂಲವಾಗುತ್ತದೆ. ಬೇ ಆಫ್ ಬೆಂಗಾಲ್ ಪ್ರೋಗ್ರಾಮ್ ಯೋಜನೆಯಲ್ಲಿ ಸಮುದ್ರದ ಮೀನುಗಾರರು ಮೀನು ಹಿಡಿಯಲು ಹೊಸ ಹೊಸ ದೋಣಿಗಳನ್ನು, ವಿಧಾನಗಳನ್ನು ಅಳವಡಿಸಿ ಕ್ರಾಂತಿಯನ್ನು ಉಂಟು ಮಾಡಿದ್ದಾರೆ. ಅಂತಹ ಒಂದು ಯೋಜನೆಯನ್ನು ನಮ್ಮ ಕರಾವಳಿಯಲ್ಲೂ ಕೂಡ ಜಾರಿಗೆ ತರಬೇಕೆಂದು ಹೇಳುತ್ತೇನೆ. ಅದೇ ಮಾದರಿಯನ್ನು ಕರ್ನಾಟಕ ಕರಾವಳಿಯಲ್ಲಿ ತಂದರೆ ಹೆಚ್ಚಿನ ಪ್ರಯೋಜನವಾಗುತ್ತದೆಂಬ ಮಾತನ್ನು ಹೇಳುತ್ತೇನೆ. ನಮ್ಮ ಕರ್ನಾಟಕದಲ್ಲಿ ಸುಮಾರು ನಾಲ್ಕೂವರೆ ಲಕ್ಷ ಹೆಕ್ಟೇರ್‌ಗಳಿಗಿಂತಲೂ ಹೆಚ್ಚು ಜಲಸಂಪತ್ತು ಇದೆ. ಅದರ ಉಪಯೋಗ ಪೂರ್ಣವಾಗಿ ಆಗಿಲ್ಲವೆಂದು ಹೇಳುವುದಕ್ಕೆ ಇಷ್ಟಪಡುತ್ತೇನೆ. ಒಳನಾಡು ಮೀನುಗಾರರ ನಿಗಮವನ್ನು ಸರ್ಕಾರದವರು ಮಾಡಿದ್ದಾರೆ. ಈ ನಿಗಮದಿಂದ ಪ್ರಯೋಜನಕಾರಿ ಕೆಲಸಗಳು ಆಗುತ್ತಿಲ್ಲ. ಆ ದಿಕ್ಕಿನಲ್ಲಿ ಈ ಖಾಸಗೀ ವ್ಯಕ್ತಿಗಳಿಗೂ ಕೂಡ ಮೀನು ಮರಿಗಳನ್ನು ಉತ್ಪಾದನೆ ಮಾಡಲು ಸಹಾಯವನ್ನು ಮಾಡಬೇಕೆಂದು ವಿನಂತಿಸಿಕೊಳ್ಳುತ್ತೇನೆ. ಮೀನು ಮರಿಗಳನ್ನು ಸಾಕಲು ವೆಚ್ಚ ಬಹಳ ಜಾಸ್ತಿಯಾಗುತ್ತದೆ. ಅದಕ್ಕಾಗಿ ಬ್ಯಾಂಕುಗಳಿಂದ ಸಾಲವನ್ನು ನೀಡಬೇಕು. ಇದನ್ನು ಸಾಕುವುದಕ್ಕೆ ಅವರಿಗೆ ಹೆಚ್ಚಿನ ಹೊರೆಯಾಗುತ್ತದೆ. ಆದುದರಿಂದ ಸರ್ಕಾರದವರು ಅವರಿಗೆ ಹೆಚ್ಚಿನ ಸಹಾಯ ಧನವನ್ನು ಕೊಡಬೇಕು.

ಮೀನು ಮರಿ ಉತ್ಪಾದನೆ ಮಾಡತಕ್ಕ ಸಹಕಾರ ಸಂಘಗಳನ್ನು ಮಾಡಿ ನಿರುದ್ಯೋಗಿ ಪದವೀಧರರಿಗೆ ಎಲ್ಲ ರೀತಿಯ ಸಹಾಯಧನವನ್ನು ನೀಡುತ್ತೇವೆಂದು ಹೇಳಿದ್ದಾರೆ. ಜಾಗ್ರತೆಯಾಗಿ ಅವರಿಗೆ ಅವಕಾಶ ಮಾಡಿಕೊಡಬೇಕೆಂದು ಕೇಳಿಕೊಳ್ಳುತ್ತೇನೆ. ಇದನ್ನು ಸಣ್ಣ ಪ್ರಮಾಣದ ಕೈಗಾರಿಕೆ ಎಂದು ಘೋಷಿಸಿ ಆ ಡಿಪಾರ್ಟ್‌ಮೆಂಟ್ ಮುಖಾಂತರ ಸಣ್ಣ ಪ್ರಮಾಣದ ಕೈಗಾರಿಕೆಗೆ ಕೊಡುವ ಎಲ್ಲ ಸವಲತ್ತುಗಳನ್ನು ಅವರಿಗೆ ಕೊಡಿಸಬೇಕು. ಹಾಗೆ ಮಾಡಿದರೆ ಬಹಳಷ್ಟು ಜನ ಮೀನು ಮರಿ ಉತ್ಪಾದನೆ ಮಾಡಲಿಕ್ಕೆ ಮುಂದೆ ಬರುತಾರೆಂದು ಆಶಿಸುತ್ತೇನೆ. ಮೀನು ಕೃಷಿಕರ ಅಭಿವೃದ್ಧಿ ಏಜೆನ್ಸಿ ಎಂದು ಮಾಡಿಕೊಂಡು ಕೇಂದ್ರದ ನೆರವು ಪಡೆಯಲಿಕ್ಕೆ ಕರ್ನಾಟಕ ರಾಜ್ಯದಲ್ಲಿ ೯ ಸಂಸ್ಥೆಗಳಿವೆಯೆಂದು ತಿಳಿದು ಬಂದಿದೆ. ಅದರ ಪ್ರಯೋಜನ ನಮ್ಮ ರಾಜ್ಯದಲ್ಲಿ ಆಗದೇ ಅದನ್ನು ಮುಚ್ಚುವ ಸ್ಥಿತಿಗೆ ಬಂದಿದೆ ಎಂದು ಕೇಳಿ ಬರುತ್ತಿದೆ. ಬೇರೆ ರಾಜ್ಯಗಳವರು ಇದರಿಂದ ಪ್ರಯೋಜನ ಪಡೆಯುತ್ತಿದ್ದಾರೆ. ನಮ್ಮ ರಾಜ್ಯದಲ್ಲಿಯೂ ಅದರ ಪ್ರಯೋಜನ ಪಡೆಯುವಂತಹ ಕೆಲಸವನ್ನು ಮಾಡಬೇಕು. ಇನ್ನು ಮೀನು ಕೃಷಿಕರ ಅಭಿವೃದ್ಧಿ ಸಾಧನೆ ಮಾಡಲಿಕ್ಕೆ ಕರ್ನಾಟಕ ಒಳನಾಡು ಮೀನು ಅಭಿವೃದ್ಧಿ ನಿಗಮ ಸ್ಥಾಪಿಸಲ್ಪಟ್ಟಿವೆ. ಅದು ವಾಣಿಜ್ಯ ಮಾರ್ಗದಲ್ಲಿ ಒಳನಾಡು ಅಭಿವೃದ್ಧಿಯನ್ನು ಕೈಗೊಳ್ಳುವ ಮೂಲ ಉದ್ದೇಶವನ್ನು ಹೊಂದಿದೆ. ಈ ನಿಗಮಕ್ಕೆ ಒಳನಾಡು ಮೀನುಮರಿ ಉತ್ಪಾದನೆ ಮತ್ತು ಜಲಾಶಯ ಮೀನುಗಾರಿಕೆ ಅಭಿವೃದ್ಧಿಯನ್ನು ಕೈಗೊಳ್ಳಲು ೧೯೮೪-೮೫ ರಿಂದ ಅನ್ವಯವಾಗುವಂತೆ ೧೯ ಮೀನು ಮರಿ ಉತ್ಪಾದನಾ ಕೇಂದ್ರಗಳನ್ನು ಮತ್ತು ಈ ಫಾರಂಗಳ ಸಾಮೀಪ್ಯದಲ್ಲಿರುವ ೧೩ ಜಲಾಶಯಗಳಿಗೆ ಅಲ್ಲಿ ಇರುವ ಸಿಬ್ಬಂದಿಯೊಂದಿಗೆ ವರ್ಗಾಯಿಸಲಾಗಿದೆ. ೧೯೮೫-೮೬ರಲ್ಲಿ ೧೦ ಲಕ್ಷ ರೂಪಾಯಿ ಶೇರು ಬಂಡವಾಳವನ್ನು ಬಿಡುಗಡೆ ಮಾಡುವ ಪ್ರಸ್ತಾಪವು ಸರ್ಕಾರದ ತೀವ್ರ ಪರಿಶೀಲನೆಯಲ್ಲಿದೆ ಎಂದು ಹೇಳಿದ್ದಾರೆ. ಈಗ ಏನಾಗಿದೆ ಅಂದರೆ ಫಾರಂಗಳನ್ನು ಕೊಟ್ಟಮೇಲೆ ವಾರ್ಷಿಕ ದುರಸ್ತಿಯನ್ನು ನೋಡಿಕೊಳ್ಳಬೇಕಾಗುತ್ತದೆ. ಬಿಜಾಪುರ ಜಿಲ್ಲೆಯ ನಾರಾಯಣಪುರ ರಿವರ್ ಅಲ್ಲಿ ದುರಸ್ತಿಗಾಗಿ ೧ ಕೋಟಿ ರೂಪಾಯಿ ಬೇಕು. ನಿಗಮಗಳ ಫಾರಂಗಳಿಗೆ ವಾರ್ಷಿಕ ದುರಸ್ತಿಗಾಗಿಯೇ ಹೆಚ್ಚು ಹಣವನ್ನು ಖರ್ಚು ಮಾಡುವುದಾದರೆ ಅಲ್ಲಿ ಲಾಭ ಬರುವ ಸಂಭವ ಇರುವುದಿಲ್ಲ. ಸರ್ಕಾರದವರು ನಿಗಮವು ಕೇಳಿದ ಐದಾರು ಫಾರಂಗಳನ್ನು ನಾಲ್ಕೈದು ಜಲಾಶಯಗಳನ್ನು ನೀಡಿದರೆ ಲಾಭದಾಯಕವಾಗಿ ಮಾಡುವುದಕ್ಕೆ ಸಾಧ್ಯವಾಗುತ್ತದೆ. ಕಾವೇರಿ ನದಿಯಲ್ಲಿರುವ ಬೆಳ್ಳಿ ಮೀನು ಏನಿದೆ ಅದನ್ನು ಕ್ರೀಡೆ ಮೀನು ಎಂದು ಕರೆಯುತ್ತಾರೆ.

ಅಧ್ಯಕ್ಷರು :—ನಾನು ಗಂಟೆ ಹೊಡೆಯುತ್ತಿದ್ದೇನೆ. ನಿಮಗೆ ಕೇಳಿಸುವುದಿಲ್ಲವೆಂದು ಕಾಣುತ್ತದೆ ತಾವು ಬೇಗ ಮುಗಿಸಿ.

ಶ್ರೀ ಬಸವರಾಜು.—ನಾನು ಬೇರೆಯವರು ಹೇಳಿರುವ ವಿಚಾರವನ್ನು ಹೇಳುತ್ತಿಲ್ಲ. ನನಗೆ ಸ್ವಲ್ಪ ಸಮಯ ಕೊಡಿ. ಮಂಗಳೂರಿನಲ್ಲಿ ಮೀನುಗಾರಿಕೆ ಕಾಲೇಜು ಇದೆ. ಈ ಕಾಲೇಜಿಗೆ ವರ್ಷಕ್ಕೆ ಮೂರು ಲಕ್ಷ ರೂಪಾಯಿಗಳನ್ನು ಬಡ್ಜೆಟ್‌ನಲ್ಲಿ ಕೊಡುವ ಅವಕಾಶ ಮಾಡಿಕೊಡಬೇಕೆಂದು ಹೇಳುತ್ತೇನೆ. ಕೊಚ್ಚಿನ್ ಮತ್ತು ಮದ್ರಾಸ್‌ನಲ್ಲಿ ಡಿಪ್ಲೊಮೋ ಕೋರ್ಸ್ ತರಬೇತಿಯನ್ನು ನೀಡಲಾಗುತ್ತಿದೆ. ಬೇರೆ ರಾಜ್ಯಗಳವರು ಡಿಪ್ಲೊಮೋ ತರಬೇತಿ ಪಡೆದಂತಹವರು ನಮ್ಮಲ್ಲಿ ಕೆಲಸ ತೆಗೆದುಕೊಳ್ಳುತ್ತಿದ್ದಾರೆ. ನಮ್ಮಲ್ಲಿಯೂ ಸಹ ತರಬೇತಿಯನ್ನು ಕೊಡುವಂತಹ ಕೆಲಸವನ್ನು ಮಾಡಿದರೆ ನಮ್ಮವರಿಗೆ ಕೆಲಸವನ್ನು ಕೊಡುವಂತಹ ಅವಕಾಶವಾಗುತ್ತದೆ. ಮಾನ್ಯ ಮಂತ್ರಿಗಳು ಇದನ್ನು ಮಾಡಬೇಕೆಂದು ಕೇಳಿಕೊಳ್ಳುತ್ತೇನೆ. ಮೀನುಗಾರಿಕೆ ಕೊಂಡಿ ರಸ್ತೆಗಳು ಏನಿವೆ ಅವುಗಳ ದುರಸ್ತಿ ಕಾರ್ಯ ಆಗಬೇಕಾಗಿದೆ. ನನ್ನ ಕ್ಷೇತ್ರದಲ್ಲಿರುವ ಉಜಾರಬೆಟ್ಟು—ಕೋಡಿ ರಸ್ತೆ ಕೆಲಸ ೧ ಕಿಲೋಮೀಟರ್ ಬಾಕಿ ಇದೆ. ೭–೮ ಕಿಲೋಮೀಟರ್ ಕೆಲಸ ಆಗಿ ಕೇವಲ ೧ ಕಿಲೋಮೀಟರ್ ಮಾತ್ರ ಬಾಕಿ ಇದೆ. ಈ ವರ್ಷ ಆ ಕೆಲಸವನ್ನು ಮಾಡಿಕೊಡಬೇಕು. ಶಾಸ್ತ್ರಿ ಕೋಡಿ ರಸ್ತೆ ಒಂದೂವರೆ ಕಿಲೋಮೀಟರ್ ಬಾಕಿ ಇದೆ. ಆದನ್ನು ರಾಷ್ಟ್ರೀಯ ಹೆದ್ದಾರಿಗೆ ಕನೆಕ್ಷನ್ ಮಾಡಿ ಕೊಡಬೇಕು ಎಂದು ಹೇಳಿ ನನಗೆ ಇಷ್ಟು ಮಾತನಾಡಲು ಅವಕಾಶ ಕೊಟ್ಟ ತಮಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ

ಅಧ್ಯಕ್ಷರು.—ಮಾನ್ಯ ಸದಸ್ಯರಾದ ರೇವಣಸಿದ್ಧಯ್ಯರವರು, ಎಚ್. ಜಿ. ಚನ್ನಪ್ಪ, ಶಿವರಾಮರೆಡ್ಡಿ ಸದಸ್ಯರುಗಳು ಬಂದಿಲ್ಲ. ಮಾನ್ಯ ಸದಸ್ಯರಾದ ಎನ್. ಎಚ್. ಗೌಡರವರೇ ತಾವು ಮಾತನಾಡಿ.

† ಶ್ರೀ ಎನ್. ಎಚ್. ಗೌಡ (ಕುಮಟಾ).—ಮಾನ್ಯ ಅಧ್ಯಕ್ಷರೆ, ಈ ದೇಶದಲ್ಲಿ ಒಂದು ದೊಡ್ಡ ಅತ್ಯಂತ ಮಹತ್ವದ ಇಲಾಖೆ ಅಂದರೆ ಕೃಷಿ ಇಲಾಖೆ. ಕೃಷಿ ಇಲಾಖೆಯ ಬೇಡಿಕೆಯನ್ನು ಕುರಿತು ಒಂದೆರಡು ಮಾತುಗಳನ್ನು ಹೇಳುತ್ತೇನೆ. ಈ ದೇಶದ ರೈತರು ರೈತ ಕಾರ್ಮಿಕರು ಎಂದು ಹೇಳುವಾಗ ನಿಜವಾಗಿಯೂ ಬಹಳ ನೋವು ಆಗುತ್ತಾ ಉಂಟು. ಇಂದು ರೈತರ ಪರಿಸ್ಥಿತಿ ಏನಾಗಿದೆ ಎನ್ನುವುದನ್ನು ನನ್ನ ಮಾತಿನಲ್ಲಿ ಹೇಳುವುದಕ್ಕಿಂತಲೂ ಕನ್ನಡದ ಮಹಾಕವಿ ಕುವೆಂಪುರವರ ಧನ್ವಂತರಿ ಕತೆಯಲ್ಲಿ ಬರುವಂತಹ ಸನ್ನಿವೇಶವನ್ನು ಹೇಳಿದರೆ ಅತ್ಯುತ್ತಮವೆಂದು ಅನಿಸುತ್ತದೆ. ಧನ್ವಂತರಿ ಕತೆಯಲ್ಲಿ ಒಂದು ಪ್ರಸಂಗ ಬರುತ್ತದೆ. ದೇವಲೋಕದಿಂದ ನರಲೋಕಕ್ಕೆ ಸಂಚಾರ ಮಾಡಿಕೊಂಡು ದೇವತೆಗಳು ಬರುತ್ತಾರೆ. ನರಲೋಕದಲ್ಲಿ ನರಳುವಿಕೆ ಕೇಳಿ ಬರುತ್ತದೆ. ಎಲ್ಲಿ ನರಳುವಿಕೆ ಕೇಳಿ ಬರುತ್ತಿದೆಯೋ ಅಲ್ಲಿ ಉಪಚಾರ ಮಾಡೋಣವೆಂದು ಬರುತ್ತಾರೆ. ನರಳುವಿಕೆ ಇನ್ನಷ್ಟು ಕೇಳಿ ಬರುತ್ತದೆ. ಭೂಲೋಕದ ಎಲ್ಲಾ ದೇಶಗಳಲ್ಲಿಯೂ ತಿರುಗಾಡಿಕೊಂಡು ಕಡೆಗೆ ಭಾರತಕ್ಕೆ ಬರುತ್ತಾರೆ. ಅಲ್ಲಿ ಬಂದು ನೋಡುತ್ತಾರೆ ಅಲ್ಲಿ ಒಬ್ಬ ರೈತ ಅಂಗಾತ ಬಿದ್ದಿದ್ದಾನೆ. ಮುರುಕಲು ಗುಡಿಸಲು, ಹರಕಲು ಕಂಬಳಿ, ಹೊಟ್ಟೆ ಬೆನ್ನಿಗೆ ಹೋಗಿದೆ. ಇಂತಹ ಪ್ರಸಂಗದಲ್ಲಿ ರೈತ ಬಿದ್ದಿದ್ದಾನೆ. ಅಂತಹವನ ಮೇಲೆ ಯಾರ್ಯಾರು ನಿಂತಿದ್ದಾರೆಂದರೆ ಸಣ್ಣ ಅಧಿಕಾರಿಗಳಿಂದ ಹಿಡಿದು ದೊಡ್ಡ ಅಧಿಕಾರಿಗಳವರೆಗೆ ನಂತರ ಶಾಸಕರಿಂದ ಹಿಡಿದು ಮಂತ್ರಿಗಳವರೆಗೆ ಎಲ್ಲರೂ ಅವನ ಹೊಟ್ಟೆಯ ಮೇಲೆ ನಿಂತಿದ್ದಾರೆ. ಇವರೆಲ್ಲರ ಭಾರ ತಡೆಯಲಾರದೆ ರೈತ ಅಂಗಾತ ಬಿದ್ದಿರುವಂತಹ ಪರಿಸ್ಥಿತಿ ಇದು. ಇಂತಹ ಪರಿಸ್ಥಿತಿ ಏನಾದರೂ ದೂರವಾಗಿದೆಯೇ ? ಸ್ವಾತಂತ್ರ್ಯ ಬಂದು ಎಷ್ಟು ವರ್ಷಗಳಾಯಿತು ? ಯೋಜನೆಗಳು ಆಗಿವೆ, ಆರು ಪಂಚವಾರ್ಷಿಕ ಯೋಜನೆಗಳು ಮುಗಿದು ಹೋದರೂ ಕೂಡ ಈ ರೈತನ ನರಳುವಿಕೆ ಮಾತ್ರ ತಪ್ಪಲಿಲ್ಲ. ಇದು ಏಕೆ ಹೀಗಾಯಿತು ? ರೈತನ ಪರಿಸ್ಥಿತಿ ಹೀಗಾಗಿರುವುದಕ್ಕೆ ನನಗನ್ನಿಸುತ್ತದೆ, ಎಲ್ಲರೂ ಹೇಳಿದ ಹಾಗೆ ರೈತರು ಸಂಘಟನೆ ಆಗದೇ ಇರುವುದೇ ಕಾರಣವೆಂದು ನನಗನ್ನಿಸುತ್ತದೆ. ತಮ್ಮ ಬೇಡಿಕೆಗಳನ್ನು ಕುರಿತು ಆಗುಹೋಗುಗಳನ್ನು ಕುರಿತು ಒಂದು ಮಾತನ್ನು ಹೇಳಲಿಕ್ಕೆ ಆಗದ ಮುಗ್ಧ ಪರಿಸ್ಥಿತಿಯಲ್ಲಿ ರೈತನಿದ್ದಾನೆ. ರೈತರು ಸಂಘಟನೆ ಆಗಲಿಕ್ಕೆ ಹೋದಾಗ ಸಂಘಟನೆ ಆಗುವ ಹೊತ್ತಿ ಹರಿದು ಹಂಚಿ ಹೋಗುತ್ತಾರೆ. ಸ್ವಾತಂತ್ರ್ಯ ಪೂರ್ವದಲ್ಲಿಯೂ ರೈತರು ಒಡೆದು ಹೋದರು. ಸ್ವಾತಂತ್ರ್ಯ ಬಂದಾಗ ಕಾಂಗ್ರೆಸ್ ರೈತರಾದರು, ಆಮೇಲೆ ಸಮಾಜವಾದಿ ರೈತರಾದರು, ಆಮೇಲೆ ಕಮ್ಯುನಿಸ್ಟ್ ರೈತರಾದರು ಅದು ಒಡೆದು ಈಗ ಮತ್ತೆ ಜನತಾ ರೈತರಾಗಿದ್ದಾರೆ. ಒಂದು ವೇಳೆ ಇದೇ ಆಗಬಹುದೇನೋ ಎಂದು ಅನ್ನಿಸುತ್ತದೆ.

ಏಕೆಂದರೆ ಎಲ್ಲ ರೈತರೂ ಜನತಾ ರೈತರೆಂದು ಆಗಿಬಿಟ್ಟರೆ ಬಹುಶ: ಅವರಿಗೆ ಇಷ್ಟೊಂದು ಕಷ್ಟ ವಾಗುತ್ತಿರಲಿಲ್ಲವೇನೋ ಎಂದು ಅನ್ನಿಸುತ್ತದೆ. ನಿಜವಾಗಿ ಇವರಲ್ಲಿ ಒಂದು ಸಂಘಟನೆ ಎನ್ನುವುದು ಉಂಟಾಗುವುದಾದರೆ ರೈತರಬೇಡಿಕೆಗಳು ಈಡೇರುವುದು ಅಸಾಧ್ಯವೇನಲ್ಲ. ಎಷ್ಟು ಪಂಚವಾರ್ಷಿಕ ಯೋಜನೆಗಳಾದರೂ ಕೂಡ ರೈತರ ಕಡೆ ಅಷ್ಟು ಗಮನಹರಿಸಲು ಸಾಧ್ಯವಾಗಿಲ್ಲ. ವೈಜ್ಞಾನಿಕವಾಗಿ ಮುಂದುವರೆದ ಬೇರೆ ದೇಶಗಳಲ್ಲಿ ಕೇವಲ ಶೇಕಡ ೧೫ ರಷ್ಟು ಜನ ರೈತರು ದುಡಿದು ತಮ್ಮ ದೇಶದ ಜನತೆಗೆ ಬೇಕಾದ ಅನ್ನ ಉಣ್ಣಿಸುತ್ತಿರುವುದಲ್ಲದೆ ಬೇರೆ ದೇಶಗಳಿಗೆ ಆಹಾರಧಾನ್ಯಗಳನ್ನು ರಫ್ತು ಮಾಡುವಂಥಾ ಸಂದರ್ಭದಲ್ಲಿ ನಮ್ಮಲ್ಲಿ ಏನಾಗಿದೆ ಎಂದರೆ ಶೇಕಡ ೭೦-೭೫ ರಷ್ಟು ಜನ ದುಡಿದರೂ ಕೂಡ ಈ ದೇಶದ ಜನಕ್ಕೆ ಅನ್ನ ಇನ್ನೂ ಸಾಲುತ್ತಿಲ್ಲ. ಪರದೇಶದ ಕಡೆ ನಾವು ಮೊಗನೋಡಿ ನೋಡು ವಂಥಾ ಪರಿಸ್ಥಿತಿ ಬಂದಿದೆ, ನಿಜವಾಗಿಯೂ ದುರ್ದೈವದ ಸಂಗತಿ. ರೈತನ ಸ್ಥಿತಿ ಹೇಗಿದೆ ಎಂದರೆ ೧೯೭೧ರಲ್ಲಿ ಭಾರತದ ರಿಸರ್ವ್ ಬ್ಯಾಂಕ್ ನಡೆಸಿದ ಸಮೀಕ್ಷೆ ಪ್ರಕಾರ ನಮ್ಮ ದೇಶದ ಪ್ರತಿ ರೈತ ಕುಟುಂಬದ ಮೇಲೆ ೬೦೨ ರೂ. ಗಳಷ್ಟು ಸಾಲ ಇದೆ. ಆದರೆ ೧೯೮೬ರಲ್ಲಿ ಸಾಲದ ಹೊರೆ ಇನ್ನೂ ಹೆಚ್ಚಾಗಿರಲೇಬೇಕು. ಇವತ್ತು ಪ್ರತಿಯೊಂದು ರೈತ ಕುಟುಂಬವೂ ಸಾಲದ ಹೊರೆಯಲ್ಲಿ ಬಳಲುತ್ತಾವೆ. ಇದು ದುರ್ದೈವ. ಜ್ವಲಂತವಾದ ಸಮಸ್ಯೆ. ಇದರ ಕುರಿತು ನಿಜವಾಗಿಯೂ ಸನ್ಮಾನ್ಯ ಮುಖ್ಯ ಮಂತ್ರಿಗಳು ತುಂಬಾ ಲಕ್ಷ್ಯ ಇರಿಸಬೇಕು.

ನಿಜವಾಗಿಯೂ ಈ ಕೃಷಿ ಮತ್ತು ಸಹಕಾರ ಇಲಾಖೆಗಳ ಮಧ್ಯೆ ಅನ್ಯೋನ್ಯವಾದ ಸಂಬಂಧ ಇದೆ. ಇವುಗಳ ಜೊತೆಗೆ ಕಂದಾಯ ಇಲಾಖೆಯೂ ಕೂಡ ಒಳ್ಳೆಯ ಸಂಬಂಧ ಹೊಂದಿದಾಗ, ಚೆನ್ನಾಗಿ ಕೆಲಸ ಮಾಡಿದಾಗ ಮಾತ್ರ ನಮ್ಮ ರೈತರ ಸಮಸ್ಯೆ ಬಗೆಹರಿಯಲು ಸಾಧ್ಯ ಎನಿಸುತ್ತದೆ. ನಮ್ಮ ಕೃಷಿ ಇಲಾಖೆಯಿಂದ ಈಗ ರೈತರಿಗೆ ಬೇಕಾದಂಥ ಹಲವಾರು ಸೌಲಭ್ಯಗಳನ್ನು ಒದಗಿಸಿಕೊಡು ತ್ತಿದ್ದಾರೆ ಮತ್ತು ರೈತರ ಸಮಸ್ಯೆಗಳನ್ನು ಅಧ್ಯಯನ ಮಾಡಲು ನೆರವಾಗುವಂತೆ ಕೃಷಿ ಕಾಲೇಜು ಗಳನ್ನು ತೆರೆಯಲಾಗಿದೆ. ಆ ಮೂಲಕ ಸಂಶೋಧನೆ ನಡೆಸಿ ತಿಳಿವಳಿಕೆ ಕೊಡುವ ಪ್ರಯತ್ನ ಸಾಗಿದೆ. ಆದರೆ ಪರಿಸ್ಥಿತಿ ಏನಾಗಿದೆ ಎಂದರೆ ಇವತ್ತು ಈ ನಗರ ಪ್ರದೇಶಗಳ ವಿಶ್ವವಿದ್ಯಾನಿಲಯಗಳು, ಕಾಲೇಜು ಗಳಲ್ಲಿ ನಡೆಯುವ ಸಂಶೋಧನೆಗಳಾಗಲೀ, ಪರಿಷ್ಕೃತ ಜ್ಞಾನವಾಗಲೀ ದೂರದ ಹಳ್ಳಿಗಾಡುಗಳಲ್ಲಿರುವ ರೈತನ ಮನೆ ಬಾಗಿಲಿಗೆ ಮುಟ್ಟುತ್ತಿಲ್ಲ. ಹೀಗೆ ನಿಜವಾಗಿಯೂ ಆಗಬಾರದು. ನಮ್ಮ ಕೃಷಿ ಇಲಾಖೆ ವಾರಕ್ಕೊಮ್ಮೆ ಯಾದರೂ ಕೂಡ ಹಲವಾರು ಗ್ರಾಮಗಳ ಮಧ್ಯದ ಸ್ಥಳದಲ್ಲಿ ಈ ವಿಭಾಗದಲ್ಲಿ ನಡೆದಿರುವ ಹೊಸಹೊಸ ಸಂಶೋಧನೆಗಳನ್ನು ಪ್ರದರ್ಶಿಸಿ ಅರಿವು ತಂದುಕೊಡಲು ಏನಾದರೂ ಒಂದು ಯೋಜನೆ ಹಾಕಿಕೊಳ್ಳಬೇಕು. ಈ ದೇಶದಲ್ಲಿ ರೈತ ಅನಾಹುತಕ್ಕೆ ಬಿದ್ದಿದ್ದಾನೆ. ಅದು ಮೌಢ್ಯದ ಅನಾಹುತ ಇಂಥ ಪರಿಸ್ಥಿತಿಯ ರೈತನಿಗೆ ನಿಜವಾಗಿಯೂ ತಿಳುವಳಿಕೆ ಬರುವಂಥ ರೀತಿಯಲ್ಲಿ ಒಂದು ಕಾರ್ಯಕ್ರಮ ವನ್ನು ಹಾಕಿಕೊಳ್ಳಬೇಕು. ಇಲ್ಲದೇ ಇದ್ದರೆ ಕೃಷಿಕರನ್ನು ನಾವು ಎಚ್ಚರಿಸುವುದೇ ಸಾಧ್ಯವಿಲ್ಲ. ಅವರು ಸಂಪೂರ್ಣವಾಗಿ ನಿದ್ರೆ ಹೋಗಿದ್ದಾರೆ.

ಹಿಂದೆ ಒಬ್ಬ ಕವಿ ಹೇಳಿದ ಮಾತು ನೆನಪಿಗೆ ಬರುತದೆ. ಅವನ ಪ್ರಕಾರ ನಿಜವಾದ ಒಕ್ಕಲಿಗ ಯಾರು ಎಂದರೆ ಯಾವ ರೈತ ಈ ಧರೆಯ ಮಣ್ಣಿನ ಗುಣವನ್ನು ಚೆನ್ನಾಗಿ ಅರಿತುಕೊಂಡು ಒಳ್ಳೆಯ ಗೊಬ್ಬರವನ್ನು ಅದಕ್ಕೆ ಬೆರಸಿ ಸಕಾಲದಲ್ಲಿ ಬೀಜ ಬಿತ್ತುತ್ತಾನೋ ಅವನೇ ನಿಜವಾದ ರೈತ, ಆದರೆ ಇವತ್ತಿನ ಪರಿಸ್ಥಿತಿ ಎಂಥದು ? ಎಂಥ ಪರಿಸರದಲ್ಲಿ ಅವರು ಬದುಕುತ್ತಿದ್ದಾರೆ ?

ಮಾನ್ಯ ಅಧ್ಯಕ್ಷರೇ, ಎರಡನೆಯದಾಗಿ ನಮ್ಮ ರೈತನಿಗೆ ಕೃಷಿ ಇಲಾಖೆಯಿಂದಾಗಲೀ ಅಥವಾ ಬೇರೆ ಹೇಗೋ ಗೊಬ್ಬರ ಬೀಜ ಮತ್ತು ಇತರ ಉಪಕರಣಗಳು ಪುಕ್ಕಟೆಯಾಗಿ ದೊರಕಿಸಬೇಕು. ಯಾವ ಸಂದರ್ಭದಲ್ಲೂ ಮಾರಾಟವಾಗಬಾರದು. ಸಾಲ ಕೊಟ್ಟಿದ್ದರೂ ಇದನ್ನು ಇನ್ನೂ ಆಳವಾಗಿ ಆಲೋಚನೆ ಮಾಡಬೇಕು. ನಮ್ಮ ಸಹಕಾರ ಇಲಾಖೆ ಈಗಾಗಲೇ ೬ ಕೋಟಿ ರೂ. ಸಾಲ ಮನ್ನಾ ಮಾಡಿದೆ, ೪ ಕೋಟಿಯನ್ನು ಬಡ್ಡಿ ಮನ್ನಾ ಮಾಡಿದೆ ಅಥವಾ ಅಲ್ಪ ಕಾಲದ ಸಾಲವನ್ನು ಮಧ್ಯ ಮಾವಧಿ ಸಾಲವನ್ನಾಗಿ ಪರಿವರ್ತಿಸಿದೆ. ನಿಜವಾಗಿಯೂ ಇದು ಹೊಗಳುವಂಥ ಮಾತಾದರೂ ಕೂಡ ಸಹಕಾರ ಇಲಾಖೆಗೆ ಇನ್ನೊಂದು ಮಾತು ಹೇಳಬೇಕು. ರೈತನಿಗೆ ಕೊಟ್ಟ ಸಾಲವನ್ನೆಲ್ಲ ಮನ್ನಾ ಮಾಡಿ ಬಿಡಬೇಡಿ ಎಂದು. ಇವತ್ತಿನ ಪರಿಸ್ಥಿತಿಯಲ್ಲಿ ತನ್ನ ಸಾಲವನ್ನು ತಿರುಗಿ ಕೊಡುವಂಥ ಸ್ಥಿತಿಯಲ್ಲಿ ರೈತನಿ . ಆದರೆ ಕೆಲವು ರೈತರು ನಿಜವಾಗಿಯೂ ಸಾಲ ಹಿಂತಿರುಗಿಸುವಂಥ ಶಕ್ತಿ ಪಡೆದಿದ್ದಾರೆ. ಇ ವರ ಜೊತೆಗೆ ಕೂಲಿ ಕೃಷಿಕನನ್ನು ಅತ್ಯಂತ ಸಣ್ಣ ಹಿಡುವಳಿದಾರರನ್ನು ಸೇರಿಸಬಾರದು. ಇಂಥ

ವರನ್ನು ಗುರ್ತಿಸಿ ಅವರಿಗೆ ಅನುಕೂಲವಾಗುವ ಯೋಜನೆಗಳನ್ನು ನಮ್ಮ ವಾರ್ಷಿಕ ಯೋಜನೆಗಳಲ್ಲಿ ಸೇರಿಸಬೇಕು. ಭೂಸುಧಾರಣೆ ಕಾನೂನು ಬಿಗಿಗೊಳಿಸಬೇಕು. ಇನ್ನೂ ಕೂಡ ಈ ಭೂಸುಧಾರಣೆ ಕಾನೂನಿನಿಂದ ನಮ್ಮ ದೀನ ರೈತರು ಜಮೀನಿನ ಮಾಲೀಕರಾಗಿಲ್ಲ ಎಂಬುದನ್ನು ನೊಂದು ಹೇಳಬೇಕಾಗಿದೆ, ಯಾವುದೇ ಒಬ್ಬ ರೈತ ತನ್ನ ಜಮೀನಿನಲ್ಲಿ ದುಡಿಯುತ್ತಿಲ್ಲ ಎಂದರೆ ಅವನು ಜಾಸ್ತಿ ಜಮೀನು ಹೊಂದಿದ್ದಾನೆ ಎಂದು ಅರ್ಥ. ಆದ್ದರಿಂದ ಭೂಸುಧಾರಣೆ ಕಾನೂನನ್ನು ತೀವ್ರವಾಗಿ ಪರಿಣಾಮಕಾರಿಯಾಗಿ ಆದಷ್ಟು ಬೇಗನೆ ಜಾರಿಗೆ ಕೊಡಬೇಕು.

ಮಾನ್ಯ ಅಧ್ಯಕ್ಷರೇ, ಈ ಒಕ್ಕಲುತನದ ಬಗ್ಗೆ ಒಂದು ಮಾತು ಹೇಳುತ್ತೇನೆ, ಅದೂ ಬರಗಾಲದ ಸಂದರ್ಭದಲ್ಲಿ ಇದೊಂದು ಜೂಜಾಟ ಎಂದು. ಗೆಲ್ಲುವವನು ಗೆಲ್ಲುತ್ತಾನೆ. ಸೋಲುವವನು ಸೋಲುತ್ತಾನೆ. ಬಡ ಒಕ್ಕಲಿಗ ಮಾತ್ರ ಸಂಪೂರ್ಣ ಸೋಲುತ್ತಾನೆ. ಯಾವಾಗ ಬರಗಾಲ ಬರುತ್ತದೆ ಎಂದು ಹೇಳುವುದಕ್ಕಾಗುವುದಿಲ್ಲ. ಕಳೆದ ನಾಲ್ಕು ವರ್ಷಗಳಿಂದ ಸತತವಾಗಿ ಬರಗಾಲ ಬರುತ್ತಿರುವುದನ್ನು ಅದು ತನ್ನ ಭೀಕರವಾದ ಬಾಹುಗಳನ್ನು ಕರ್ನಾಟಕದಲ್ಲಿ ಚಾಚಿರುವುದನ್ನು. ಇಂಥ ಸ್ಥಿತಿ ಹೋಗಬೇಕಾದರೆ, ಒಕ್ಕಲ ತನದ ಇಲಾಖೆ, ನೀರಾವರಿ ಇಲಾಖೆಗಳು ಪರಿಣಾಮಕಾರಿಯಾಗಿ ಕೆಲಸ ಮಾಡಬೇಕು, ಇಲ್ಲದಿದ್ದರೆ ಕಷ್ಟವಾಗುತ್ತದೆ. ಈ ಒಕ್ಕಲುತನದ ಬಗ್ಗೆ ಬೇಕಾದಷ್ಟು ಹೇಳುವುದಿದೆ. ಆದರೆ ಅಧ್ಯಕ್ಷರವರು ಮಧ್ಯೆ ಮಧ್ಯೆ ಬೆಲ್ ಬಾರಿಸುತ್ತಿದ್ದಾರೆ. ಆದ್ದರಿಂದ ನಾನು ಅದನ್ನು ಇಲ್ಲಿಗೆ ನಿಲ್ಲಿಸಿ ವಾರ್ತಾ ಮತ್ತು ಸಂಸ್ಕೃತಿ ಇಲಾಖೆ ಬಗ್ಗೆ ಹೇಳುತ್ತೇನೆ.

ಈ ದೇಶ ನಿಜವಾಗಿಯೂ ಒಕ್ಕಲಿಗರ ದೇಶ ಹಳ್ಳಿಗಳ ದೇಶ, ಗ್ರಾಮೀಣ ಭಾರತ. ಇಂಥದ್ದರ ಬಗ್ಗೆ ನಮ್ಮ ವಾರ್ತಾ ಮಂತ್ರಿಗಳು ಹೆಚ್ಚಿನ ಗಮನಹರಿಸಬೇಕು. ಈ ಅಭಿಪ್ರಾಯದಲ್ಲಿ ಸಿನಿಮಾ ರಂಗ ನಾಟಕರಂಗ ಮುಂತಾದ ರಂಗಗಳಿಗಿಂತ ಹಳ್ಳಿಗಳಲ್ಲಿರುವ ಅರ್ಥವತ್ತಾದ ಜಾನಪದ ಸಾಹಿತ್ಯ ಪ್ರಕಟಣೆಗೆ ಹೆಚ್ಚಿನ ಹಣವನ್ನು ಪೂರೈಸಬೇಕಾಗುತ್ತದೆ. ನಿಜವಾಗಿಯೂ ಹಳ್ಳಿಯ ಜನ 'ಕುಳಿತೋದದೆಯೋ ಕಾವ್ಯಮಂ ರಚಿಪ ಪರಿಣತಮತಿಗಳ್' ಎಂದು ಒಬ್ಬ ಕವಿ ಹೇಳಿದ್ದಾನೆ. ನಮ್ಮ ಕನ್ನಡ ಸಂಸ್ಕೃತಿ ಬಗ್ಗೆ ಜನಪದ ಸಾಹಿತ್ಯದಲ್ಲಿ ಬೇಕಾದಷ್ಟು ಹೆಸರಾಂತ ಕವಿಗಳೂ ಅನಾಮಿಕರೂ ತಮ್ಮ ಅನುಭವವನ್ನು ಎರೆದು ನಾಡಿನ ಜಾನಪದ ಬದುಕನ್ನು ಶ್ರೀಮಂತ ಗೊಳಿಸಿದ್ದಾರೆ. ಇದರ ಬಗ್ಗೆ ಸಂಸ್ಕೃತಿ ಇಲಾಖೆ ಲಕ್ಷ್ಯ ವಹಿಸಬೇಕು ಇದನ್ನು ಬೆಳಕಿಗೆ ಬರುವಂತೆ ಮಾಡಬೇಕು. ಹೀಗೆ ಇದರ ಬಗ್ಗೆ ವಾರ್ತಾ ಮಂತ್ರಿಗಳು, ಮುಖ್ಯ ಮಂತ್ರಿಗಳೂ ಗಮನ ಹರಿಸಬೇಕು ಎಂದು ಸಲಹೆ ಕೊಟ್ಟು ಇಷ್ಟು ಹೊತ್ತು ಅವಕಾಶ ಕೊಟ್ಟಿದ್ದಕ್ಕಾಗಿ ವಂದನೆಗಳನ್ನು ಅರ್ಪಿಸಿ ನನ್ನ ಮಾತನ್ನು ಮುಗಿಸುತ್ತೇನೆ.

† ಶ್ರೀ ಬಿ. ಎಂ. ಇದಿನಬ್ಬ (ಉಳ್ಳಾಳ).—ಸನ್ಮಾನ್ಯ ಅಧ್ಯಕ್ಷರೆ, ಈ ದಿವಸ ಬಂದಿರತಕ್ಕ ಬೇಡಿಕೆಗಳಾದ ಕನ್ನಡ ಸಂಸ್ಕೃತಿ, ಕೃಷಿ, ತೋಟಗಾರಿಕೆ, ಪಶುಸಂಗೋಪನೆ ಈ ಎಲ್ಲಾ ಇಲಾಖೆಗಳ ಬೇಡಿಕೆಗಳನ್ನು ಅನೇಕ ಕಾರಣಗಳಿಗಾಗಿ ವಿರೋಧಿಸಿ ಕೆಲವೊಂದು ಮಾತುಗಳನ್ನು ಹೇಳುವುದಕ್ಕೆ ಇಚ್ಛೆ ಪಡುತ್ತೇನೆ. ನನಗೆ ಬಹಳ ಪ್ರಿಯವಾದಂತಹ ವಿಚಾರ ಕನ್ನಡ ಸಂಸ್ಕೃತಿ ಅದರ ಬಗ್ಗೆ ಒಂದೆರಡು ಮಾತುಗಳನ್ನು ಹೇಳುತ್ತೇನೆ. ಕನ್ನಡವು ದುಸ್ಥಿತಿಯಲ್ಲಿದೆ ಅದನ್ನು ಸುಸ್ಥಿತಿಗೆ ತರಬೇಕು ಆ ಕಾರ್ಯಕ್ಕೆ ಕನ್ನಡ ಸಂಸ್ಕೃತಿ ಇಲಾಖೆ ಇದೆ. ಹೀಗಿರುವಾಗ ಕನ್ನಡ ಸಂಸ್ಕೃತಿ ಇಲಾಖೆಗೆ ಇಟ್ಟಿರತಕ್ಕ ಹಣ ಬಹಳ ಕಡಿಮೆ ಇದೆ. ಭಾಷಾವಾರು ರಾಜ್ಯಗಳಾದ ಕೇರಳ, ತಮಿಳುನಾಡು, ಆಂಧ್ರ ಮತ್ತು ಗುಜರಾತ್ ರಾಜ್ಯಗಳ ಹಾಗೆ ನಮ್ಮದು ಕರ್ನಾಟಕ ರಾಜ್ಯವಾದರೆ ಆ ಉದ್ದೇಶದಿಂದ ಕನ್ನಡ ಮೇಲೆ ಬರಬೇಕು, ನಮ್ಮ ಸಾಹಿತ್ಯ ಮೇಲಕ್ಕೆ ಬರಬೇಕು, ಭಾಷೆ ಒಳ್ಳೆಯದಾಗಬೇಕು ಒಂದು ದೇಶದ ರಾಜ್ಯಭಾಷೆಯ ಶಕ್ತಿಯನ್ನು ತೋರಿಸತಕ್ಕ ವ್ಯವಸ್ಥೆಯಲ್ಲಿರತಕ್ಕ ಸಾಹಿತಿಗಳು ಕವಿಗಳು ಮೇಲೆ ಬರಬೇಕು ಕವಿಗಳು ಸಾಹಿತಿಗಳು ಬಹಳ ಕಷ್ಟದಲ್ಲಿದ್ದಾರೆ. ಅವರು ದುಸ್ಥಿತಿಯಲ್ಲಿದ್ದಾಗ ಅವರು ಸುಸ್ಥಿತಿಗೆ ಬರಬೇಕು. ಕನ್ನಡ ಸಂಸ್ಕೃತಿ ಇಲಾಖೆಗೆ ಇಟ್ಟಿರತಕ್ಕ ಹಣ ಏನೂ ಸಾಲದು. ಆದ್ದರಿಂದ ನಮ್ಮ ಮಾನ್ಯ ಮಂತ್ರಿಗಳು ಮಾನ್ಯ ಮುಖ್ಯ ಮಂತ್ರಿಗಳ ಹತ್ತಿರ ಮಾತನಾಡಿ ಒಂದು ಕೋಟಿ ರೂಪಾಯಿ ಹೆಚ್ಚಿಗೆ ತೆಗೆದುಕೊಂಡು ಕೆಲವು ಅಗತ್ಯವಾದ ಕಾರ್ಯಗಳನ್ನು ಪ್ರಾರಂಭ ಮಾಡಲಿಕ್ಕೆ ಪ್ರಯತ್ನ ಮಾಡಿದರೆ ನಿಜವಾಗಿಯೂ ಕನ್ನಡ ಮೇಲ್ಮಟ್ಟಕ್ಕೆ ಬರುತ್ತದೆ. ಕನ್ನಡ ರಾಜ್ಯದಲ್ಲಿ ಎಲ್ಲರೂ ಔದಾರ್ಯದಿಂದ ಇದ್ದಾರೆ ಆ ತರಹ ಬೇರೆಲ್ಲೂ ಇಲ್ಲ. ನಾನು ಕೇರಳ ನೋಡಿದ್ದೇನೆ, ಆಂಧ್ರ ಪ್ರದೇಶವನ್ನು ನೋಡಿದ್ದೇನೆ, ತಮಿಳುನಾಡು ನೋಡಿದ್ದೇನೆ ಅವರ ಭಾಷಾ ಪ್ರೇಮ, ಮಾತೃಭಾಷೆಯ ಪ್ರೇಮ ಯಾವ ರೀತಿ ಇದೆಯೆಂದರೆ ಪ್ರತಿಯೊಬ್ಬರೂ ಕೂಡ ಅವರವರ ಊರಿನ ಪತ್ರಿಕೆಯನ್ನಲ್ಲದೆ ಬೇರೆ ಪತ್ರಿಕೆಗಳನ್ನು ಓದುವುದಿಲ್ಲ. ನಮ್ಮಲ್ಲಿ

ಹಾಗೆ ಇಲ್ಲ. ಎಲ್ಲರೂ ಇಂಗ್ಲಿಷ್ ಪತ್ರಿಕೆ ಓದಬೇಕು. ಕನ್ನಡ ಪತ್ರಿಕೆಯನ್ನು ಒಬ್ಬೊಬ್ಬರು ಒಂದೊಂದು ಪುಟ ಓದುತ್ತಿರುತ್ತಾರೆ. ಅದೇರೀತಿ ಪುಸ್ತಕಗಳನ್ನು ಸಹ ಓದುತ್ತಾರೆ. ಇದು ತಪ್ಪಬೇಕಾದರೆ ಕನ್ನಡದ ಬಗ್ಗೆ ಹೆಚ್ಚಿನ ಕೆಲಸ ಕನ್ನಡ ಸಂಸ್ಕೃತಿ ಇಲಾಖೆಯಿಂದ ಆಗಬೇಕು. ನಮ್ಮಲ್ಲಿ ಕನ್ನಡಕ್ಕೆ ಅಗ್ರಮಾನ್ಯತೆ ಸಿಗಬೇಕು. ಊಟಮಾಡುವಾಗ ಅನ್ನಕ್ಕೆ ಯಾವರೀತಿ ಅಗ್ರಮಾನ್ಯವಿದೆಯೋ ಅದೇರೀತಿ ಕನ್ನಡಕ್ಕೆ ನಮ್ಮಲ್ಲಿ ಅಗ್ರಮಾನ್ಯ ದೊರೆಯಬೇಕು. ಊಟದಲ್ಲಿ ಭಕ್ಷ್ಯಭೋಜ್ಯಗಳಾದ ಹೋಳಿಗೆ, ಪಲ್ಯ, ಹುಗ್ಗಿ, ಹಪ್ಪಳ, ಉಪ್ಪಿನಕಾಯಿಗಳು ಇದ್ದರೂ ಅನ್ನ ಬೇಕೆ ಬೇಕು. ಅದೇರೀತಿ ಕನ್ನಡ ಕರ್ನಾಟಕ ರಾಜ್ಯದ ಸ್ವತ್ತು ಅದನ್ನು ಉಳಿಸತಕ್ಕ ಶಕ್ತಿ ನಮ್ಮಲ್ಲಿ ಬರಬೇಕು. ಇವತ್ತು ಬೆಂಗಳೂರು ನಗರದ ಯಾವುದೇ ಸರ್ಕಲ್‌ನಲ್ಲಿ ಹೋದರೂ ಅಲ್ಲಿ ತಮಿಳು, ತೆಲುಗು ಭಾಷೆಗಳನ್ನು ಕೇಳುತ್ತಿದ್ದೇವೆ. ದಕ್ಷಿಣ ಕನ್ನಡ ಜಿಲ್ಲೆಯ ಮಂಗಳೂರಿನಲ್ಲಿ ಯಾವ ಸರ್ಕಲ್‌ನಲ್ಲಿ ಸುತ್ತಾಡಿದರೂ ಶೇಕಡ ೭೫ ಭಾಗ ಮಲೆಯಾಳಂ ಶೇಕಡ ೨೫ ಭಾಗ ಕನ್ನಡ. ಈ ಮಾತು ಸುಳ್ಳು ಆಗಲಿಕ್ಕಿಲ್ಲವೆಂದು ನನ್ನ ಭಾವನೆ. ಇನ್ನು ೧೫ ವರ್ಷಗಳಲ್ಲಿ ನಮ್ಮ ಮಂಗಳೂರು ಮಲೆಯಾಳಿಮಯವಾಗುತ್ತದೆ. ಬೆಂಗಳೂರು ಏನಾಗುತ್ತದೋ ದೇವರಿಗೆ ಗೊತ್ತು? ಖಂಡಿತಾ ಇದರಲ್ಲಿ ಸಂಶಯ ಬೇಡ. ಔದಾರ್ಯ ಬೇಕು, ಬೇಕಾದ ಕಡೆ ಬೇಕು ಇಂತಹ ಮೂಲಭೂತವಾದ ವಿಚಾರಗಳ ಕಡೆಗೆ ಔದಾರ್ಯ ತೋರಿಸಬಾರದು ಕಟ್ಟುನಿಟ್ಟಾದ ವ್ಯವಸ್ಥೆಯಲ್ಲಿ ಕೆಲಸಮಾಡಬೇಕು. ಕನ್ನಡ ಕಾವಲು ಸಮಿತಿಎಂದು ಇಟ್ಟಿದ್ದೀರಿ. ಅದರ ಕೆಲಸ ಸಾಲದು. ಪಾಟೀಲ್ ಪುಟ್ಟಪ್ಪನವರು ರಾಜ್ಯದಲ್ಲೆಲ್ಲ ಸುತ್ತಾಡುತ್ತಿದ್ದಾರೆ. ಯಾವುದೇ ಸಂದರ್ಭದಲ್ಲೂ ಸಹ ಕಾಸರಗೋಡು ನಮ್ಮ ಪ್ರದೇಶ ಅದು ನಮ್ಮ ನಾಡೆಂದು ಅವರು ಬಹಳ ಬೇಜಾರಿನಿಂದ ಬಹಳ ದುಃಖದಿಂದ, ಅನೇಕ ಜಾತಾ ಬಂದು ಅನೇಕ ರೀತಿಯಲ್ಲಿ ಮೊರೆ ಇಟ್ಟಿದ್ದಾರೆ. ನಮ್ಮ ಕೃಷಿ ಮಂತ್ರಿಗಳಾದ ಪ್ರಕಾಶ್‌ರವರು ಕಾಸರಗೋಡಿಗೆ ಬಂದು ಒಂದು ಸಮ್ಮೇಳನದಲ್ಲಿ ಬಹಳ ಮಾತನಾಡಿದರು. ಕಾಸರಗೋಡಿನವರ ಬಗ್ಗೆ ನಮಗೆ ಅಭಿಮಾನವಿರಬೇಕು. ಅವರೂ ನಮ್ಮವರೇ ಎಂದು ಭಾವಿಸಿಕೊಳ್ಳಬೇಕು. ಮಹಾಜನ್ ವರದಿ ಇನ್ನೂ ತೀರ್ಮಾನವಾಗಲಿಲ್ಲ. ಅವರಿಗೆ ಯಾವುದೇ ಸಂದರ್ಭದಲ್ಲೂ ಹಣ ಸಹಾಯ ಮತ್ತು ಇನ್ನಿತರ ಸೌಲಭ್ಯಗಳನ್ನು ಕೊಡುವಂತಹ ವ್ಯವಸ್ಥೆಯನ್ನು ಮಾಡಬೇಕು. ಎಲ್ಲ ಸವಲತ್ತುಗಳನ್ನು ಸೌಲಭ್ಯಗಳನ್ನು ಕೊಡುವಂತಹ ಕೆಲಸ ಮಾಡಿ. ಕನ್ನಡ ಎಂದು ಹೇಳಿದರೆ......

ಹರಿಹರ ರಾಘವರಿಗೆ ಎರಗುವ ಮನ
ಹಾಳಾಗಿಹ ಹಂಪೆಗೆ ಕೊರಗುವ ಮನ
ಪಂಪಿನ ಬನವಾಸಿಗೆ ಮರಗುವ ಮನ
ಜೋಗದ ಜಲಪಾತಗೆ ಧುಮುಕುವ ಮನ

ಎಲ್ಲಿದ್ದರೇನು ಎಂತಿದ್ದರೇನು ಎಂದೆದು ತಾನು ಕನ್ನಡ ಸತ್ಯ, ಕನ್ನಡ ನಿತ್ಯ ಇದು ಕವಿ ಕುವೆಂಪುರವರ ವಾಣಿ. ಇದನ್ನು ಮರೆಯಲಿಕ್ಕೆ ಸಾಧ್ಯವಿಲ್ಲ. ಎಲ್ಲೇ ಇದ್ದರೂ ಯಾರೇ ಇದ್ದರೂ ಎಲ್ಲಿದ್ದರೂ ' ಕಾಚಣಕಗಿಳಿ ಕೋಗಿಲೆ, ಇಂಪಿಗೆ ಮಲ್ಲಿಗೆ ಸೊಂಪಿಗೆ ಕೇದಗೆ ಮಾವಿನ ಹೊಂಗೆಯ ತಳಿರಿನ ತಂಪಿಗೆ ರಸರೋಮಾಂಚನಗೊಳುವಾತನ ಮನ'' ಎಲ್ಲಿದ್ದರೆ ಏನ್ ಎಂತಿದ್ದರೆ ಏನ್ ಎಂದೆದು ತಾನು ಕನ್ನಡ ಸತ್ಯ ಕನ್ನಡ ನಿತ್ಯ ಎಂದು ಕವಿ ಕುವೆಂಪುರವರು ಹೇಳಿದ್ದಾರೆ. ಇದನ್ನು ಯಾರು ಮರೆಯಬಾರದು. ಇದು ಮೂಲಭೂತವಾದ ಪ್ರಶ್ನೆ ಆದ್ದರಿಂದ ಈ ಕಡೆಗೆ ಮಾನ್ಯ ಮಂತ್ರಿಗಳು ಹೆಚ್ಚು ಗಮನವನ್ನು ಕೊಡಬೇಕು. ಸರ್ವಶಕ್ತಿಯನ್ನು ಪಡೆಯುವ ಗುರಿಯನ್ನು ಪಡೆಯಬೇಕೆಂದು ತಮಗೆ ಹೇಳುತ್ತಿದ್ದೇನೆ.

ಇನ್ನು ಕನ್ನಡ ಸಾಹಿತ್ಯ ಪರಿಷತ್ತಿನ ಬಗ್ಗೆ ಹೇಳುವುದಾದರೆ, ದೊಡ್ಡ ಸಾಹಿತಿಗಳಾದ ಬಿ. ಎಂ. ಶ್ರೀಕಂಠಯ್ಯ, ವೆಂಕಣ್ಣಯ್ಯ, ಡಿ. ವಿ. ಗುಂಡಪ್ಪ ಇಂತಹವರೆಲ್ಲ ಕೂಡಿ ಬೆಳೆಸಿದಂತಹ ಸಂಸ್ಥೆ. ಕನ್ನಡ ಸಾಹಿತ್ಯ ಪರಿಷತ್‌ಗೆ ಜಿ ನಾರಾಯಣರವರು ಅಧ್ಯಕ್ಷರಾಗಿ ಬಂದಮೇಲೆ ಒಳ್ಳೆಯ ಕೆಲಸಗಳಾಯಿತು. ಈಗ ಅಲ್ಲಿ ನೋಡುವಾಗ ಅಲ್ಲಿ ಒಂದು ರೀತಿಯ ಗಬ್ಬು ನಾತ ಬರುತ್ತಿದೆ. ರಾಜಕೀಯ ಗಬ್ಬುನಾತ ಸಾಹಿತ್ಯಕ್ಕೆ ಬರಬಾರದು ಇವತ್ತು ನಡೆದಂತಹ ಚುನಾವಣೆಯನ್ನು ಕೇಳಿ ಬೇಸರವಾಗಿದೆ, ಆ ರೀತಿ ಆಗಬಾರದು. ಏನೇ ಆಗಲಿ ಚುನಾವಣೆ ಆಗಿದೆ. ಯಾರೋ ಒಬ್ಬರು ಅಧ್ಯಕ್ಷರು ಆಗಿದ್ದಾರೆ. ಏನೋ ಒಂದು ಗಲಾಟೆ ಮಾಡಿಕೊಂಡು ಚುನಾವಣೆ ಮಾಡುವುದು ಸರಿಯಲ್ಲ, ಚುನಾವಣೆ ಇಲ್ಲದಿದ್ದರೂ ಚಿಂತೆಯಿಲ್ಲ. ಹೆಚ್ಚು ಕಮ್ಮಿಯಾಯಿತು ಎನ್ನುವ ದೂರು ಉಂಟು. ಯಾವುದೇ ಗಲಾಟೆ ಸಾಹಿತ್ಯ ಪರಿಷತ್ತಿನಲ್ಲಿ ಬರಬಾರದು, ಕನ್ನಡ ಸಾಹಿತ್ಯ ಪರಿಷತ್ತು ಒಳ್ಳೆಯ ರೀತಿಯಲ್ಲಿ ಹೋಗಲಿಕ್ಕೆ ತಾವು

ಪ್ರಯತ್ನ ಮಾಡಬೇಕು. ತಾವು ಹಣ ಕೊಡುತ್ತಿದ್ದೀರಿ, ಬೇಕಾದಷ್ಟು ಕೊಡುತ್ತಿದ್ದೀರಿ. ಪುಸ್ತಕಗಳು ಪ್ರಿಂಟ್ ಆಗುತ್ತವೆ. ಸಾಹಿತ್ಯ ಪರಿಷತ್‌ನಲ್ಲಿ ಪುಸ್ತಕಗಳು ಪ್ರಿಂಟ್ ಆಗುತ್ತಿವೆ, ನಾನು ಹೇಳುವುದೇನೆಂದರೆ ಪ್ರಿಂಟ್ ಆಗತಕ್ಕ ಪುಸ್ತಕಗಳು ಆದಷ್ಟು ಅಗ್ಗದ ಬೆಲೆಯಲ್ಲಿ ಜನರಿಗೆ ಸಿಗುವಂತಾಗಬೇಕು. ಹಿಂದೆ ದಿವಂಗತ ಕೆಂಗಲ್ ಹನುಮಂತಯ್ಯನವರು ಮುಖ್ಯಮಂತ್ರಿಗಳಾಗಿದ್ದಾಗ ಕನ್ನಡ ಸಂಸ್ಕೃತಿ ಬಗ್ಗೆ ಕುಮಾರವ್ಯಾಸ ಎನ್ನುವ ಪುಸ್ತಕ ಎರಡು ರೂಪಾಯಿಗೆ ಇಷ್ಟು ದೊಡ್ಡ ಪುಸ್ತಕ ಸಿಗುತ್ತಿತ್ತು. ಆ ಪುಸ್ತಕಕ್ಕೆ ಎರಡು ರೂಪಾಯಿ ಕೊಡುವುದಕ್ಕೆ ಖುಷಿಯಾಗುತ್ತಿತ್ತು. ಅದೇರೀತಿ ಇವತ್ತು ಸಹ ಒಳ್ಳೊಳ್ಳೆಯ ಸಾಹಿತ್ಯವನ್ನು ಒಳ್ಳೊಳ್ಳೆಯ ಕವಿಗಳಿಂದ, ಸಾಹಿತಿಗಳಿಂದ ಬರೆಸಿ ಮೂರು ರೂಪಾಯಿ ನಾಲ್ಕು ರೂಪಾಯಿಗೆ ಕೊಡುವಂತೆ ಮಾಡಿ. ಏಕೆಂದರೆ ಕನ್ನಡ ಸಾಹಿತ್ಯವನ್ನು ಕರ್ನಾಟಕ ರಾಜ್ಯದಲ್ಲಿರತಕ್ಕ ನಾಲ್ಕು ಕೋಟಿ ಜನ ಕನ್ನಡಿಗರಾಗಿ ಬೆಳೆಯತಕ್ಕ ವ್ಯವಸ್ಥೆಗೆ ಖರ್ಚುಮಾಡತಕ್ಕಂಥಹ ಹಣ ಸದುಪಯೋಗವಾಗಬೇಕು. ಈ ರೀತಿ ಮಾಡಿದರೆ ಸರ್ಕಾರ ಕೊಡತಕ್ಕ ಹಣ ದುಂಡಾವರ್ತಿ ವೆಚ್ಚಕ್ಕೆ ಅದು ಹೋಗುವುದಿಲ್ಲ. ಈ ದೃಷ್ಟಿಯಲ್ಲಿ ತಾವು ಕೆಲಸ ಮಾಡುತ್ತೀರಿ, ಮಾಡಬೇಕು ಇನ್ನಾದರೂ ಆ ಬಗ್ಗೆ ಪ್ರಯತ್ನ ಮಾಡಿ ಬರುವ ಸಾರಿಯ ಬಡ್ಜೆಟ್‌ನಲ್ಲಿಟ್ಟು ಕೀರ್ತಿ ಭಾಜನರಾಗಬೇಕೆಂದು ಕೇಳಿಕೊಳ್ಳುತ್ತೇನೆ.

ಇನ್ನು ಅಕಾಡಮಿಗಳು ಸರಿಯಾಗಿ ಕೆಲಸ ಮಾಡುತ್ತಿಲ್ಲ, ಅಕಾಡಮಿಗಳಿಗೆ ಹಣ ಎಲ್ಲಿ ಉಂಟು? ಡಾ॥ ಚಂದ್ರಶೇಖರ ಕಂಬಾರರನ್ನು ಅಕಾಡಮಿಯ ಅಧ್ಯಕ್ಷರನ್ನಾಗಿ ಮಾಡಿದ್ದೀರಿ. ಸಾಹಿತ್ಯ ಅಕಾಡಮಿಗೆ ಹಣ ಸಾಲದು. ಏನೇನು ಕೆಲಸಮಾಡಬೇಕು ಆ ಬಗ್ಗೆ ವಿಚಾರ ಮಾಡಲಿಕ್ಕೆ ಅದು ಸಾಕಾಗುವುದಿಲ್ಲ. ಆ ಕಡೆ ಗಮನಕೊಟ್ಟು ಕೆಲಸಮಾಡಬೇಕು.

ಇನ್ನು ಮಲ್ಪೆಯನ್ನು ಪ್ರವಾಸಿ ಕೇಂದ್ರವನ್ನಾಗಿ ಮಾಡಬೇಕೆಂದು ೬೦ ಲಕ್ಷ ರೂಪಾಯಿ ಕೊಟ್ಟಂತಹ ವಿಚಾರ. ಅದನ್ನು ಸರ್ಕಾರದವರೇ ಮಾಡಬೇಕೆಂದು ಹೇಳುತ್ತೇನೆ. ಖಾಸಗಿ ಜನರಿಗೆ ಮಾರಾಟ ಮಾಡುವಂತಹ ವ್ಯವಸ್ಥೆಯನ್ನು ಕೇಳಿ ಬೇಸರವಾಗಿದೆ. ಮಲ್ಪೆಯಲ್ಲಿ ಸಿಕ್ಕಿರುವಂತಹ ಸ್ಥಳ, ಇಂತಹ ಸ್ಥಳ ಸಿಗುವುದು ಸಿಂಗಪೂರ್ ಮತ್ತು ರಂಗೂನ್‌ಗಳನ್ನು ಬಿಟ್ಟರೆ ಬೇರೆಲ್ಲೂ ಸಿಗುವುದಿಲ್ಲವೆಂದು ತಜ್ಞರು ಹೇಳಿದ್ದಾರೆ. ಅದನ್ನು ನಾವು ಪತ್ರಿಕೆಗಳಲ್ಲಿ ನೋಡುತ್ತಿದ್ದೇವೆ. ಆ ರೀತಿ ಸಿಕ್ಕಿರುವಂತಹ ಸ್ಥಳವನ್ನು, ಕೇಂದ್ರದಿಂದ ಸಿಗುವಂತಹ ಹಣ, ದಕ್ಷಿಣ ಕನ್ನಡ ಜಿಲ್ಲೆಗೆ ಸಿಗುವಂತಹ ವ್ಯವಸ್ಥೆ, ತಾವೂ ಕೂಡ ದಕ್ಷಿಣ ಕನ್ನಡ ಜಿಲ್ಲೆಯ ಮಂತ್ರಿಗಳಾಗಿದ್ದೀರಿ ಇದರ ಬಗ್ಗೆ ಹೆಚ್ಚಿನ ಗಮನ ಕೊಡಬೇಕು. ಮಲ್ಪೆಯಲ್ಲಿ ಪ್ರವಾಸಿ ಕೇಂದ್ರವನ್ನು ಮಾಡತಕ್ಕ ಕೆಲಸವನ್ನು ಸರ್ಕಾರದವರೇ ಮಾಡಿದರೆ ಅಲ್ಲಿ ಅನೇಕರಿಗೆ ಕೆಲಸ ಸಿಗುತ್ತದೆ, ಒಳ್ಳೆಯದಾಗುತ್ತದೆ. ಖಾಸಗಿ ಜನರಿಗೆ ಕೊಟ್ಟರೆ ಅದರಿಂದ ಒಳ್ಳೆಯ ವ್ಯವಸ್ಥೆಯಾಗುವುದಿಲ್ಲ ಇನ್ನು ಮುಂದೆ ಬರುವ ಬಡ್ಜೆಟ್‌ನಲ್ಲಿ ನೀವು ಇದನ್ನೆಲ್ಲ ಮನಸ್ಸಿನಲ್ಲಿಟ್ಟುಕೊಂಡು ಕನ್ನಡವನ್ನು ಬಾನೆತ್ತರಕ್ಕೆ ಏರಿಸುವ ಬುನಾದಿಯನ್ನು ಹಾಕಬೇಕು. ಇಡೀ ನಮ್ಮ ರಾಜ್ಯದಲ್ಲಿ ದೇಶದಲ್ಲಿ ಕನ್ನಡ ಅಂದರೆ ಕರ್ನಾಟಕ ರಾಜ್ಯ ಅಂದರೆ ಭಾಷೆ ಮತ್ತು ಸಾಹಿತ್ಯ ಒಳ್ಳೆಯ ಮಟ್ಟದಲ್ಲಿದೆ ಎಂದು ಹೇಳತಕ್ಕ ವ್ಯವಸ್ಥೆಗೆ ತಾವು ಮನಸ್ಸು ಮಾಡಬೇಕೆಂದು ಹೇಳುತ್ತಿದ್ದೇನೆ.

ಇನ್ನು ಜನಪದ ಎನ್ನುವ ಪತ್ರಿಕೆಯನ್ನು ತರುತ್ತಿದ್ದೀರಿ ಅದರಲ್ಲಿ ಏನುಂಟು? ಅದು ಒಳ್ಳೆಯ ರೀತಿಯಲ್ಲಿ ಬರುವಹಾಗೆ ಒಳ್ಳೊಳ್ಳೆಯ ಸಾಹಿತಿಗಳಿಂದ ಒಳ್ಳೊಳ್ಳೆಯ ಬರಹಗಾರರಿಂದ ಕರ್ನಾಟಕ ರಾಜ್ಯದ ಜನರಿಗೆ ಅದರಲ್ಲೂ ಬಡವರಿಗೆ ರೈತರಿಗೆ ಉಪಕಾರವಾಗುವಂತಹ ರೀತಿಯಲ್ಲಿಬರುವಂತೆ ಮಾಡಿ. ಅದರಲ್ಲಿ ಏನೂ ಇಲ್ಲ. ಬೇಕಾದಷ್ಟು ಹಣವನ್ನು ಖರ್ಚು ಮಾಡುತ್ತೀರಿ ಇದು ಹೇಗಿದೆ ಅಂದರೆ "ತೋಟ ಶೃಂಗಾರ ಒಳಗೆ ಗೋಣಿ ಸೊಪ್ಪು" ಇದನ್ನು ನಾನು ಟೀಕೆಯಾಗಿ ಮಾಡುತ್ತಿಲ್ಲ ತಾವು ಆ ರೀತಿ ಭಾವಿಸಬಾರದು. ತಾವು ಒಮ್ಮೆ ಅದನ್ನು ಬಿಡಿಸಿ ಓದಿ ನೋಡಿ ಅದರಲ್ಲಿ ಏನೂ ಇಲ್ಲ.

ಇನ್ನು ಮೀನುಗಾರಿಕೆ ಇಲಾಖೆಯ ಬಗ್ಗೆ ವಿಚಾರ ಮಾಡಿದರೆ, ನಾನು ಸಮುದ್ರ ತೀರದಿಂದ ಕರಾವಳಿ ಪ್ರದೇಶದಿಂದ ಬರತಕ್ಕವನು, ನಾನು ಮೀನು ತಿನ್ನತಕ್ಕವನು ಎಲ್ಲ ಮೀನುಗಳ ರುಚಿ ಗೊತ್ತಿರತಕ್ಕವ ಮೀನುಗಾರಿಕೆ ಬಗ್ಗೆ ಎರಡು ಮಾತುಗಳನ್ನು ಹೇಳುತ್ತೇನೆ. ಮೀನುಗಾರಿಕೆ ಮಂತ್ರಿಗಳು ಕಳೆದ ಜೂನ್ ತಿಂಗಳಿನಲ್ಲಿ ಮಂಗಳೂರಿನಲ್ಲಿ ಬೆಂಗರೆಗೆ ಬಂದಿದ್ದಾಗ ನಾವು ಅವರಿಗೆ ಹೇಳಿದ್ದೇವೆ. ಸಮುದ್ರದ ಕೊರತ ಮತ್ತು ಹೊಳೆತ್ತುವ ವಿಚಾರದಲ್ಲಿ ಒಂದು ವ್ಯವಸ್ಥೆ ಮಾಡಬೇಕೆಂದು ಹೇಳಿದ್ದೇವೆ. ನೇತ್ರಾವತಿ ನದಿಗೆ ಒಡ್ಡು ಹಾಕತಕ್ಕ ೨೧ ಲಕ್ಷ ರೂಪಾಯಿ ಕಾರ್ಯಕ್ರಮವನ್ನು ಮಾನ್ಯ ದೇವೇಗೌಡರು ಬಂದು ಮಾಡಿದ್ದಾರೆ

ಮಂತ್ರಿಗಳು ಏನೋ ಮಾಡಿದ್ದಾರೆ ಆದರೆ ಇನ್ನು ಕೆಲಸ ಮಾತ್ರ ಪ್ರಾರಂಭ ಆಗಲಿಲ್ಲ. ತಾವು ಬೆನ್ನು ಹಿಡಿದು ಕೆಲಸವನ್ನು ಮುಂದುವರಿಸಿಕೊಂಡು ಹೋಗಿ ಇಲ್ಲದಿದ್ದರೆ ಅದು ಬಿದ್ದು ಮುಚ್ಚಿಹೋಗುತ್ತದೆ, ಹೂಳು ತುಂಬಿಕೊಳ್ಳುತ್ತದೆ. ಕಳೆದ ಮೂರ್ನಾಲ್ಕು ವರ್ಷಗಳಲ್ಲಿ ಮಂಗಳೂರಿನ ಅನೇಕರು ಸತ್ತು ಹೋಗಿದ್ದಾರೆ.

ಈವರೆಗೆ ಮಾಡಿರತಕ್ಕಂತಹ ಕಾರ್ಯಕ್ರಮ ನೋಡಿದ್ದೇನೆ. ಯಾವುದೋ ಕಡೆಯಿಂದ ದೊಡ್ಡ ಯಂತ್ರವನ್ನು ತರಿಸುತ್ತೇವೆಂದು ಹೇಳಿದ್ದೀರಿ. ಆ ಯಂತ್ರದ ಮೂಲಕ ಹೂಳೆತ್ತುವ ಕೆಲಸವನ್ನು ಮಾಡಬೇಕು. ತಾವು ಕೋಲಾರದವರಾಗಿದ್ದರೂ ಕೂಡ ಮೀನಿನ ವಿಚಾರ ಗೊತ್ತಿಲ್ಲದಿದ್ದರೂ ಕೂಡ ಈಗ ಸ್ವಲ್ಪ ಸ್ವಲ್ಪ ಮನವರಿಕೆ ಮಾಡಿಕೊಳ್ಳುತ್ತಿದ್ದಾರೆ ಎಂದು ನನಗೆ ಅನ್ನಿಸಿದೆ. ಅವರು ಮಾಡುತ್ತಿರುವ ಕೆಲವು ಕೆಲಸಗಳಿಂದ ಅದು ನನಗೆ ಅರಿವಾಗಿದೆ. ಮೊನ್ನೆ ನೇತ್ರಾವತಿ ನದಿಯ ಕೆಲಸವೊಂದರಲ್ಲಿ ಶಂಕುಸ್ಥಾಪನೆ ಮಾಡಿದಂತಹ ಸಂದರ್ಭದಲ್ಲಿ ನೋಡಿದಾಗ ವಾಸನೆಯ ವಿಚಾರವನ್ನೂ ತಿಳಿದುಕೊಂಡಿದ್ದಾರೆ ಎಂದು ಹೇಳುವ ಭಾವನೆ ನನಗೆ ಉಂಟಾಗಿದೆ. ಸಮುದ್ರದ ಕೊರೆತದಿಂದ ಆಗತಕ್ಕ ಹಾನಿಯನ್ನು ತಪ್ಪಿಸಲಿಕ್ಕೆ ತಡೆಗೋಡೆಯನ್ನು ಹಾಕಬೇಕು. ಅದಕ್ಕಾಗಿ ಕೇಂದ್ರದಿಂದ ಹಣವನ್ನು ಕೊಡಬೇಕೆಂದು ತಾವು ಹೇಳಿದ್ದೀರಿ. ತಾವು ಮನಸ್ಸು ಮಾಡಿದರೆ ಒಡ್ಡು ಕಟ್ಟುವಷ್ಟು ಹಣವನ್ನು ಮಂತ್ರಿಗಳು ತರಬಹುದು. ತಾವು ಮನಸ್ಸು ಮಾಡಿದರೆ ಇಡೀ ೧೦೦ ಮೈಲಿ ಉದ್ದಕ್ಕೂ ಇರತಕ್ಕ ಮೀನುಗಾರರ, ಬಡವರ ರಕ್ಷಣೆಯನ್ನು ಮಾಡಬಹುದು. ೨೪ ಗಂಟೆಗಳ ಕಾಲವೂ ಸಮುದ್ರದಲ್ಲೇ ಓಲಾಡಿ, ತೇಲಾಡಿ ದುಡಿಯತಕ್ಕಂತಹ ಜನ. ಅವರಿಗೆ ಬೇರೆ ಏನೂ ಇಲ್ಲ, ಮೂರು ತಿಂಗಳು ಮಾತ್ರ ಮೀನು ಸಿಕ್ಕುವುದು. ಇನ್ನು ೯ ತಿಂಗಳು ಮೀನು ಸಿಕ್ಕುವುದಿಲ್ಲ. ಮೀನಿನ ಬರಗಾಲ ಬರುತ್ತದೆ. ಬಹಳ ಕಷ್ಟದಲ್ಲಿರುತ್ತಾರೆ ಅವರು ಆ ಸಮಯದಲ್ಲಿ ಇಂತಹ ಒಂದು ಸಮುದಾಯದ ಅಭಿವೃದ್ಧಿಗಾಗಿ ೧೦-೨೦ ಕೋಟಿ ರೂಪಾಯಿಗಳನ್ನು ಖರ್ಚು ಮಾಡುವುದರಲ್ಲಿ ಹಿಂದೆ ಮುಂದೆ ನೋಡಬಾರದು. ಕೇಂದ್ರ ಸರ್ಕಾರಕ್ಕಾಗಲಿ, ರಾಜ್ಯ ಸರ್ಕಾರಕ್ಕಾಗಲಿ, ಸಮುದ್ರದಿಂದ ಚಿನ್ನವನ್ನು ತಂದು ಕೊಡತಕ್ಕಂತಹ ಮೀನುಗಾರರ ರಕ್ಷಣೆಯನ್ನು ಸರ್ಕಾರ ಮಾಡಬೇಕು. ಬೆಂಗ್ರೆ ಹತ್ತಿರ ತಡೆಗೋಡೆ ಸ್ವಲ್ಪ ಆಗಿದೆ. ಮುಸ್ಲಿಂ ಕಾಲೋನಿ ಹತ್ತಿರ ಆಗಲಿಲ್ಲ. ಅದನ್ನೂ ಕೂಡ ಮಾಡುವುದಕ್ಕೆ ವ್ಯವಸ್ಥೆ ಮಾಡಬೇಕೆಂದು ಈ ಸಂದರ್ಭದಲ್ಲಿ ಆ ಒಂದು ವಿಚಾರವನ್ನು ಹೇಳುವುದಕ್ಕೆ ಇಷ್ಟಪಡುತ್ತೇನೆ. ಪರ್ಸಿಯನ್ ಬೋಟಿಗೆ ಮೊದಲು ಅನುಮತಿಯನ್ನು ಕೊಡುತ್ತಿದ್ದರು. ಈಗ ಅದನ್ನು ಬಂದ್ ಮಾಡಿದ್ದೀರಿ. ಇದು ಸರಿಯಲ್ಲ, ಏಕೆಂದರೆ ಇದರ ಬಗ್ಗೆ ಅನೇಕ ಕಾರಣಗಳನ್ನು ಹೇಳಬಹುದು ಮೀನುಗಾರರು ಅದರಲ್ಲಿ ಸಮುದ್ರಕ್ಕೆ ಹೋಗುವುದಕ್ಕೆ ಮನಸ್ಸು ಉಂಟು. ಆದರೆ ಪರ್ಸಿಯನ್ ಬೋಟನ್ನೇ ಬಿಡುವುದಿಲ್ಲವೆಂಬ ವ್ಯವಸ್ಥೆ ಮಾಡಿದ್ದೀರಿ. ಅದನ್ನು ಕೂಡಲೇ ಬದಲಾವಣೆ ಮಾಡಿ, ಅದರಲ್ಲಿ ಸಮುದ್ರಕ್ಕೆ ಹೋಗುವಂತಹ ವ್ಯವಸ್ಥೆಯಾಗಬೇಕು. ಒಳನಾಡಿನ ಮೀನುಗಾರರ ಅಭಿವೃದ್ಧಿ ನಿಗಮ ಇದೆ. ಅದರಿಂದ ಯಾವ ಪ್ರಯೋಜನವೂ ಇಲ್ಲ. ನೀರಿಲ್ಲ – ಟ್ಯಾಂಕ್ ಉಂಟು, ಟ್ಯಾಂಕ್ ಉಂಟು ನೀರಿಲ್ಲ. ನೀರು ಇಲ್ಲದೆ ಮೀನುಗಳು ಬದುಕುವುದಕ್ಕೆ ಸಾಧ್ಯವೇ ಇಲ್ಲ. ಹೀಗಿರುವುದರಿಂದ ಒಳನಾಡಿನ ಬಗ್ಗೆ ಹೆಚ್ಚು ಆಸಕ್ತಿ ವಹಿಸುವುದಕ್ಕಿಂತ ಹೆಚ್ಚು ಕರಾವಳಿಯ ಬಗ್ಗೆ ಹೆಚ್ಚು ಆಸಕ್ತಿಯನ್ನು ವಹಿಸಬೇಕು. ಕೊಡುವಂತಹ ಕಡೆ ಗಮನ ಕೊಡಿ. ಆದರೆ ಅದಕ್ಕಿಂತ ಹೆಚ್ಚು ೨೦೦ ಕಿಲೋಮೀಟರ್ ಉದ್ದವಿರುವ, ಕರಾವಳಿಯ ಬಗ್ಗೆ ತಾವು ಇನ್ನೂ ಹೆಚ್ಚು ಮನಸ್ಸು ಮಾಡಿ. ಮೀನುಗಾರರಿಗೆ ಉಪಕಾರ ಮಾಡಿ. ಅವರಿಗೆ ಕೊಡುವಂತಹ ಸಬ್ಸಿಡಿ ಉಂಟಲ್ಲ, ಅದನ್ನೂ ಕೂಡ ಅವರಿಗೆ ಕೊಡುವಂತಹ ಕಡೆ ತಾವು ಮನಸ್ಸು ಮಾಡಬೇಕು.

ಕೊನೆಗೆ ತೋಟಗಾರಿಕೆ ಇಲಾಖೆಯ ವಿಚಾರದಲ್ಲಿ ಹೇಳುವುದಾದರೆ, ನಮ್ಮ ಜಿಲ್ಲೆಯಲ್ಲಿ ತೆಂಗಿನ ಮರಗಳಿಗೆ ಕಪ್ಪು ಕಲೆ ಹುಳುವಿನ ರೋಗ ಬಂದಿದ್ದು ಅದನ್ನು ನಿವಾರಣೆ ಮಾಡುವ ಬಗ್ಗೆ ಸರ್ಕಾರ ಸ್ವಲ್ಪ ಸ್ವಲ್ಪ ವ್ಯವಸ್ಥೆ ಮಾಡಿದೆ. ಕೆಲವರಿಗೆ ಔಷಧಿಯನ್ನು ಕೊಟ್ಟಿದ್ದಾರೆ. ಇನ್ನೂ ಅನೇಕರಿಗೆ ಔಷಧಿಯನ್ನು ಕೊಡಬೇಕಾಗಿದೆ. ತೆಂಗಿನ ಮರಗಳು ಕಲ್ಪವೃಕ್ಷಗಳು. ನೂರಾರು ವರ್ಷಗಳವರೆಗೆ ಬಾಳುವಂತಹ ಮರಗಳು. ಇಂತಹ ವೃಕ್ಷಗಳಿಗೆ ಬಂದಿರುವ ರೋಗವನ್ನು ತಡೆಗಟ್ಟುವ ಸಲುವಾಗಿ ಬೇಕಾಗಿರತಕ್ಕ ಔಷಧಿ ಇಲ್ಲ, ಎಂದು ಕೆಲವರು ಕೇಳುತ್ತಿದ್ದಾರೆ. ತಾವು ಅದರ ಕಡೆ ಗಮನ ಕೊಡಬೇಕು. ಪ್ರತಿಯೊಬ್ಬ ರೈತರ ಮನೆಯ ಮುಂದೆ ೨-೩ ತೆಂಗಿನ ಮರಗಳನ್ನು ಬೆಳೆಸುವಂತಹ ಕಾರ್ಯಕ್ರಮ ಕಡ್ಡಾಯವಾಗಿ ಮಾಡಿ. ಇದರಿಂದ ಸರ್ಕಾರಕ್ಕೂ ಕೀರ್ತಿ ಬರುತ್ತದೆ. ಇದನ್ನು ಇಡಿಸಿದಂತಹ ಜನರಿಗೂ ಒಳ್ಳೆಯ ಕೀರ್ತಿ, ಒಳ್ಳೆಯ ಹೆಸರೂ ಕೂಡ ಬರುತ್ತದೆ.

ನಂತರ ಪಶುಸಂಗೋಪನಾ ಇಲಾಖೆಯ ವಿಚಾರದಲ್ಲಿ ಹೇಳುವುದಾದರೆ, ಕೊವಿಲ್‌ನಲ್ಲಿ ಜಾನುವಾರು ಕೇಂದ್ರ ಉಂಟು. ಹಿಂದೆ ಮದ್ರಾಸ್ ಸರ್ಕಾರದ ಅಧೀನದಲ್ಲಿದ್ದಂತಹ ಸಂದರ್ಭದಲ್ಲಿ ಶ್ರೀಮಾನ್ ಎ.ಬಿ. ಶೆಟ್ಟಿಯವರಂತಹ ಮಹಾನುಭಾವರು ಕೊವಿಲ್‌ನಲ್ಲಿ ಜಾನುವಾರು ಕೇಂದ್ರವನ್ನು ಮಾಡಿದರು. ಅದು ೩೦ ವರ್ಷಗಳನ್ನು ದಾಟಿದೆ. ಅದು ಇಂದಿನವರೆಗೂ ನಷ್ಟದಲ್ಲಿ ಉಂಟಲ್ಲದೆ ಲಾಭವನ್ನು ಗಳಿಸಲಿಕ್ಕಾಗಲೇ ಇಲ್ಲ. ಇದು ದಕ್ಷಿಣ ಕನ್ನಡ ಜಿಲ್ಲೆಯ ಜಾನುವಾರುಗಳಿಗೆ ಬೇಕಾದಂತಹ ಜಾನುವಾರು ಕೇಂದ್ರ ಆಗಬೇಕು. ಅಲ್ಲಿ ಬೆಳೆಸತಕ್ಕ ಗೋವಿನ ಕರುಗಳು ಹಾಗೂ ಹಂದಿ ಮರಿಗಳು ದಕ್ಷಿಣ ಕನ್ನಡ ಜಿಲ್ಲೆಯ ಜನರಿಗೆ ಸಿಕ್ಕಿ ಉಪಯೋಗವಾಗುವಂತಾಗಬೇಕು. ಇವತ್ತು ಎಷ್ಟು ಮೇವನ್ನು ಅಲ್ಲಿ ಸಂಗ್ರಹಿಸಿದ್ದಾರೆ ಬೇಕಾದಷ್ಟು ಜಾಗವನ್ನೇನೋ ತೆಗೆದುಕೊಂಡಿದ್ದಾರೆ. ಆದರೆ ಅದರಲ್ಲಿ ಮೇವನ್ನಾದರೂ ಬೆಳೆದು ಅದರಿಂದ ಇಡೀ ದಕ್ಷಿಣ ಕನ್ನಡ ಜಿಲ್ಲೆಯ ಜಾನುವಾರುಗಳಿಗೆ ಅನುಕೂಲವಾಗುವ ಹಾಗೆ ಮಾಡಬೇಕು. ಮೀನುಗಾರಿಕಾ ಮಂತ್ರಿಗಳು ಬೆಂಗ್ರೆ ಹಾಗೂ ಉಲ್ಲಾಳದಲ್ಲಿ ತಡೆಗೋಡೆಯನ್ನು ನಿರ್ಮಿಸತಕ್ಕಂತಹ ವಿಚಾರದಲ್ಲಿ ಖಂಡಿತವಾಗಿ ಮನಸ್ಸು ಮಾಡಬೇಕು. ಇಷ್ಟು ವಿಚಾರಗಳನ್ನು ಹೇಳುವುದಕ್ಕೆ ಅವಕಾಶ ಮಾಡಿಕೊಟ್ಟ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

† ಶ್ರೀ ಬಾಬುರೆಡ್ಡಿ ತುಂಗಳ್ (ಬೀಳಗಿ) —ಸನ್ಮಾನ್ಯ ಅಧ್ಯಕ್ಷರೆ, ವಾರ್ತಾ ಮತ್ತು ಪ್ರವಾಸೋದ್ಯಮ ಇಲಾಖೆಯ ಬಗ್ಗೆ ಕೆಲವು ವಿಚಾರಗಳನ್ನು ಮಾತ್ರ ಕೇವಲ ೭-೮ ನಿಮಿಷದಲ್ಲಿ ಹೇಳಿ ಮುಗಿಸುತ್ತೇನೆ. ನಾನೊಬ್ಬ ಸಣ್ಣ ಪತ್ರಿಕೆಯ ಸಂಪಾದಕನಾಗಿರುವುದರಿಂದ, ಬಾಕಿ ಸಣ್ಣ ಪತ್ರಿಕೆಗಳ ಹಿತರಕ್ಷಣೆ ಹಾಗೂ ಅವುಗಳ ಸುಧಾರಣೆಯ ಬಗ್ಗೆ ಚರ್ಚೆ ಮಾಡಬೇಕಾದುದು ನನ್ನ ಪರಮ ಕರ್ತವ್ಯವೆಂದು ತಿಳಿದು ಈ ವಿಷಯದ ಬಗ್ಗೆ ಸನ್ಮಾನ್ಯ ವಾರ್ತಾ ಮತ್ತು ಪ್ರಚಾರ ಖಾತೆಯ ಸಚಿವರ ಗಮನಕ್ಕೆ ಕೆಲವು ವಿಚಾರಗಳನ್ನು ತರಬಯಸುತ್ತೇನೆ. ಇವತ್ತು ವಾರ್ತಾ ಇಲಾಖೆ ಯಾವುದೋ ಇಲಾಖೆಯಾಗಿತ್ತು ಸುದೈವದಿಂದ ಶ್ರೀಮಾನ್ ಜೀವರಾಜ್ ಆಳ್ವರವರು ಬಂದ ಮೇಲೆ ನಮ್ಮ ಕರ್ನಾಟಕ ರಾಜ್ಯದಲ್ಲಿ ವಾರ್ತಾ ಇಲಾಖೆ ಸುಧಾರಣೆಯಾಗುತ್ತದೆಂಬ ನಂಬಿಕೆ ನನಗೆ ಇದೆ. ಈ ಒಂದು ಇಲಾಖೆ ಕೇವಲ ಇಡೀ ಸರ್ಕಾರದ ನೀತಿ ನಿರೂಪಣೆಗಳನ್ನು ಪ್ರಚಾರ ಮಾಡುವಂಥಾ ಒಂದೇ ಕೆಲಸವಾಗಿರದೆ, ಉತ್ತಮ ಮಾಧ್ಯಮವಾಗಿರಬೇಕು. ಆದ ಕಾರಣ ಈ ಇಲಾಖೆಯ ಕೆಲಸಕಾರ್ಯಗಳು ಆಗುತ್ತಿರುವ ರೀತಿ ನೀತಿಯನ್ನು ನೋಡಿದರೆ ಮನಸ್ಸಿಗೆ ಬಹಳ ಬೇಸರವಾಗುತ್ತದೆ. ಸಣ್ಣ ಪತ್ರಿಕೆಯ ಸಂಪಾದಕನಾಗಿ ಈ ಇಲಾಖೆಯ ಬಗ್ಗೆ ಒಂದು ಅಭಿಪ್ರಾಯ ಇದೆ. ಬಹಳ ಅಸಮಾಧಾನ ಇದೆ. ಅದು ಏನೆಂದರೆ, ಇವತ್ತು ಆ ಇಲಾಖೆಯ ಮಂತ್ರಿಗಳಾದ ಶ್ರೀಮಾನ್ ಜೀವರಾಜ್ ಆಳ್ವರವರನ್ನು ಕೇಳುವುದೇನೆಂದರೆ ವಾರ್ತಾ ಇಲಾಖೆಯ ನಿರ್ದೇಶಕರನ್ನಾಗಿ ಐ ಪಿ ಎಸ್ ಅಧಿಕಾರಿಗಳನ್ನು ಏಕೆ ತರುತ್ತೀರಿ ಎಂದು ಕೇಳುತ್ತೇನೆ. ವಾರ್ತಾ ಇಲಾಖೆಗೂ, ಐ ಪಿ ಎಸ್ ಅಧಿಕಾರಿಗಳಿಗೂ ಏನು ಸಂಬಂಧ ? ಇವರ ಸಂಬಂಧ ಹೇಗಿದೆ ಎಂದರೆ, ಇಮಾಂ ಸಾಬಿಗೂ ಗೋಕುಲಾಷ್ಟಮಿಗೂ ಯಾವ ರೀತಿಯ ಸಂಬಂಧ ಇದೆಯೋ ಅದೇ ರೀತಿಯ ಸಂಬಂಧ ಇದ್ದ ಹಾಗೆ. ವಾರ್ತಾ ಇಲಾಖೆಯಲ್ಲಿ ಹೊಸನೇ ಸೆಕ್ಷನ್ ಜಾರಿ ಮಾಡಬೇಕಾಗಿಲ್ಲ. ವಾರ್ತಾ ಇಲಾಖೆಗೆ ಸ್ಪಂದಿಸುವಂತಹ ಕನ್ನಡ ಸಂಸ್ಕೃತಿಯನ್ನು ತಿಳಿದಂತಹ ಮತ್ತು ಪತ್ರಿಕೆಗಳ ಕಷ್ಟ-ಸುಖಗಳನ್ನು, ನೋವು ನಲಿವುಗಳನ್ನು ಅರಿತಂತಹ ಒಬ್ಬ ಅಧಿಕಾರಿಯನ್ನು ವಾರ್ತಾ ಇಲಾಖೆಗೆ ನಿರ್ದೇಶಕರನ್ನಾಗಿ ನೇಮಿಸಬೇಕಾಗುತ್ತದೆ. ನಾನು ವಾರ್ತಾ ಇಲಾಖೆಯನಲ್ಲಿ ಹಾಲಿ ಇರುವಂತಹ ನಿರ್ದೇಶಕರ ಬಗ್ಗೆ ಯಾವುದೇ ವೈಯಕ್ತಿಕವಾದ ಆರೋಪ ಮಾಡುತ್ತಿಲ್ಲ. ಆದರೆ ಕನ್ನಡ ಸಂಸ್ಕೃತಿಗೆ ಹಾಗೂ ಪತ್ರಿಕೋದ್ಯಮಕ್ಕೆ ಬಹಳ ಸಮೀಪವಾದ ಅಧಿಕಾರಿ ಇರಬೇಕಾಗುತ್ತದೆ, ಆದಕಾರಣ ಅನೇಕ ವರ್ಷಗಳಿಂದ ವಾರ್ತಾ ಇಲಾಖೆಗೆ ಐ ಪಿ ಎಸ್ ಅಧಿಕಾರಿಗಳನ್ನು ತಂದು ತಲೆಯ ಮೇಲೆ ನೇಮಿಸುವಂತಹ ಕೆಟ್ಟ ಪದ್ಧತಿಯನ್ನು ತೆಗೆದುಹಾಕುವಂತಹ ಕೆಲಸವನ್ನು ತಮ್ಮ ಕಾಲದಲ್ಲಾದರೂ ಕೈಗೊಳ್ಳುತ್ತೀರೆಂದು ನಾನು ಭಾವಿಸುತ್ತೇನೆ, ಆ ಬಗ್ಗೆ ಇಲಾಖೆಯ ವರದಿಯಲ್ಲಿ ಪ್ರಸ್ತಾಪವೇ ಇಲ್ಲ ಒಂದು ಮಾತನ್ನು ಶ್ರೀಮಾನ್ ಜೀವರಾಜ್ ಆಳ್ವ ರವರಿಗೆ ನೇರವಾಗಿ ಕೇಳಬಯಸುತ್ತೇನೆ. ಸಣ್ಣ ಪತ್ರಿಗಳ ಬಗ್ಗೆ ವಾರ್ತಾ ಇಲಾಖೆಯ ನೀತಿ ನಿರೂಪಣೆಗಳೇನು ? ಇವತ್ತು ಸಣ್ಣ ಪತ್ರಿಕೆಗಳು ಏನಾಗಿದೆ ಎಂಬುದನ್ನು ತಾವು ತಿಳಿದುಕೊಂಡಿದ್ದೀರಾ ? ವಾರ್ತಾ ಇಲಾಖೆಯಲ್ಲಿ ಕೆಲವು ತಿಮಿಂಗಿಲಗಳು ಇವೆ. ಅಂತಹವರಿಂದ ವಾರ್ತಾ ಇಲಾಖೆಯ ಹಡಗು ಮುಳುಗುತ್ತಿದೆ. ಇದು ವ್ಯಯಕ್ತಿಕವಾಗಿ ಸಣ್ಣ ಪತ್ರಿಕೆಯ ಸಂಪಾದಕನಾಗಿ ನನಗೆ ಆಗಿರುವಂತಹ ಅನುಭವ. ಕಳೆದ ೨೦ ವರ್ಷಗಳಿಂದಲೂ ನಾನು ಇಡೀ ಉತ್ತರ ಕರ್ನಾಟಕ ಭಾಗದಲ್ಲಿ ತುಂಬಾ ಪ್ರಚಾರದಲ್ಲಿರುವಂತಹ ಒಂದು ಪತ್ರಿಕೆಯನ್ನು ನಡೆಸಿಕೊಂಡು ಬಂದಿದ್ದೇನೆ. ನಾನು

ಬಹಳ ದುಃಖದಿಂದ ಈ ಮಾತನ್ನು ಹೇಳುತ್ತಿದ್ದೇನೆ. ನಾನು ಇವತ್ತು ಶಾಸಕನಾಗಿರಬಹುದು, ಆ ಮಾತು ಬೇರೆ. ಕಳೆದ ೨೨ ವರ್ಷಗಳಲ್ಲಿ ನಾನು ನಡೆಸುತ್ತಿರುವ ಸಣ್ಣ ಪತ್ರಿಕೆಗಳ ವಾರ್ತಾ ಇಲಾಖೆಯವರು ಕೊಟ್ಟಿರುವಂತಹ ಜಾಹಿರಾತು ಎಷ್ಟು ಎಂಬುದನ್ನು ಲೆಕ್ಕಹಾಕುವುದಾದರೆ, ಸೊನ್ನೆ ಅಂತ ಹೇಳಬಹುದು. ನಮ್ಮ ವಾರ್ತಾ ಇಲಾಖೆಯಿಂದ ಜಾಹಿರಾತು ಬೇಕು ಅಂದರೆ ಒಂದು ಮಾಂಸದ ಊಟ, ಒಂದು ಕ್ವಾರ್ಟರ್ ಬ್ರಾಂದಿ ಯಾರುಕೊಡಿಸುತ್ತಾರೋ ಅಂಥವರ ಪತ್ರಿಕೆಗೆ ಒಂದು ಪುಟ ಜಾಹಿರಾತನ್ನು ಬಿಡುಗಡೆ ಮಾಡುತ್ತಾರೆ. ಇಂತಹ ತಿಮಿಂಗಿಲಗಳು ಸೇರಿಕೊಂಡು ಇವತ್ತು ವಾರ್ತಾ ಇಲಾಖೆಯನ್ನೇ ಕಬಳಿಸುತ್ತಿವೆ. ಯಾರು ವೈಯಕ್ತಿಕವಾಗಿ ನ್ಯಾಯಯುತವಾಗಿ ನಿರ್ಭೀತಿಯಿಂದ ಪತ್ರಿಕೋದ್ಯಮವನ್ನು ನಡೆಸಿಕೊಂಡು ಬಂದಿದ್ದಾರೋ, ಯಾರು ಸರ್ಕಾರದ ಸಾಧನೆಗಳನ್ನು ಬರೆಯಬೇಕೆಂದಿದ್ದಾರೋ. ಯಾರು ಸಾರ್ವಜನಿಕ ಜೀವನದ ಓರೆ ಕೋರೆಗಳನ್ನು ಬರೆಯಬೇಕೆಂದಿದ್ದಾರೋ ಅಂತಹವರಿಗೆ ನಿಮ್ಮ ವಾರ್ತಾ ಇಲಾಖೆಯಲ್ಲಿ ಯಾವುದೇ ರೀತಿಯಲ್ಲಿ ಅವಕಾಶ ಇಲ್ಲ. ತಾವು ಬಂದ ಮೇಲಾದರೂ ಇದು ಸುಧಾರಣೆಯಾಗುತ್ತದೆಂದು ನಾನು ಖಂಡಿತವಾಗಿ ನಂಬಿದ್ದೇನೆ. ವಾರ್ತಾ ಇಲಾಖೆಯಲ್ಲೂ ದಾಖಲೆಯನ್ನು ಸೃಷ್ಟಿ ಮಾಡುತ್ತೀರೆಂಬ ನಂಬಿಕೆಯನ್ನು ನಾನು ತಮ್ಮ ಮೇಲೆ ಇಟ್ಟುಕೊಂಡಿದ್ದೇನೆ. ಏಕೆಂದರೆ ಜಾಹಿರಾತನ್ನು ಕೊಡಬೇಕಾಗಿದೆ. ಅಂದರೆ ಎಲ್ಲ ಸಣ್ಣ ಪತ್ರಿಕೆಗಳಿಗೂ ಜಾಹಿರಾತನ್ನು ಕೊಡಬೇಕೆಂದು ನಾನು ಹೇಳುತ್ತಿಲ್ಲ. ಆದರೆ ಜಾಹಿರಾತನ್ನು ಕೊಡುವಾಗ ಕೆಲವೊಂದು ನೀತಿಯನ್ನು ಅನುಸರಿಸಬೇಕು. ಆ ನೀತಿ ಏನೆಂದರೆ, ಆ ಪತ್ರಿಕೆ ಕೇವಲ ಪತ್ರಿಕೆಯನ್ನು ನಡೆಸಬೇಕೆಂಬ ಉದ್ದೇಶ ಇದ್ದರೆ ಸಾಲದು. ಆ ಪತ್ರಿಕೆಯ ಗುಣ ಮಟ್ಟ, ಅದು ಬಳಸುವಂತಹ ಭಾಷೆ ಭಾಷೆಯ ಶೈಲಿ ಆ ಪತ್ರಿಕೆ ಎಷ್ಟು ಕಾಲದಿಂದ ನಡೆದುಕೊಂಡು ಬರುತ್ತಿದೆ. ಇದನ್ನು ನೋಡಿ ಜಾಹಿರಾತನ್ನು ಕೊಡಬೇಕು. ಆ ಬಗ್ಗೆ ಒಂದು ನೀತಿಯನ್ನು ಜಾರಿಗೆ ತರಬೇಕು. ನಾನು ಅಂತಹವರೊಬ್ಬರ ಹೆಸರನ್ನು ಹೇಳುವುದಕ್ಕೆ ಇಷ್ಟಪಡುವುದಿಲ್ಲ. ಬಿಜಾಪುರದಲ್ಲಿ ಒಂದು ಸಣ್ಣ ಪತ್ರಿಕೆಯ ಸಂಪಾದಕರು ಇದ್ದಾರೆ. ಅವರಿಗೆ ಕನ್ನಡವನ್ನು ಓದುವುದಕ್ಕೂ ಬರುವುದಿಲ್ಲ, ಕನ್ನಡ ಬರೆಯುವುದಕ್ಕೂ ಬರುವುದಿಲ್ಲ. ಕೇವಲ ಮೋಡಿಯಲ್ಲಿ ಸಹಿ ಮಾಡುತ್ತಾರೆ. ಅಂತಹವರಿಗೆಲ್ಲಾ ವಾರ್ತಾ ಇಲಾಖೆಯವರು ಲಕ್ಷಗಟ್ಟಲೆ ಜಾಹಿರಾತನ್ನು ಕೊಡುತ್ತಾರೆ. ಆದರೆ ನನ್ನಂತ ಪ್ರಾಮಾಣಿಕನಾದ ಸಣ್ಣ ಪತ್ರಿಕೆಯ ಸಂಪಾದಕನಿಗೆ ಕಳೆದ ೨೦ ವರ್ಷದಿಂದ ಒಂದು ಪೈಸೆಯಷ್ಟು ಜಾಹಿರಾತು ಸಿಕ್ಕುವುದಿಲ್ಲ. ಪತ್ರಿಕೆಗಳು ಹೇಗಿರುತ್ತವೆ ಎಂದರೆ, ನಿಮ್ಮ ಇಲಾಖೆಯ ಜಾಹಿರಾತು ಸಿಕ್ಕಿದಾಗ ಮಾತ್ರ ವೋಚರ್ ಕಾಪಿ ಅಂತ ೨೦ ಕಾಪಿಗಳನ್ನು ಪ್ರಿಂಟ್ ಮಾಡುತ್ತಾರೆ, ಅದು ಪ್ರಚಾರಕ್ಕೆ ಬಂದಿರುವುದೇ ಇಲ್ಲ. ಪತ್ರಿಕಾ ಗುಣ ಮಟ್ಟ ಏನೇನೂ ಇರುವುದಿಲ್ಲ. ನೇರವಾಗಿ ವಿಚಾರವನ್ನು ಹೇಳುವುದಾದರೆ, ಮಾನ್ಯ ಕೆ. ಎಚ್. ಶ್ರೀನಿವಾಸ್ ರವರು ಇಲ್ಲಿದ್ದಾರೆ. ಶ್ರೀಮಾನ್ ಜೆ. ಎಚ್. ಪಟೇಲ್‌ರವರು ಆಚೆ ಹೋದರು. ಮಾನ್ಯ ಶ್ರೀನಿವಾಸ್ ರವರು ವಾರ್ತಾ ಮಂತ್ರಿಯಾಗಿದ್ದಾಗ ಶ್ರೀಮಾನ್ ಪಟೇಲ್ ರವರು ನನ್ನ ಪರವಾಗಿ ಜಾಹಿರಾತು ಕೊಡಬೇಕೆಂದು ವಶೀಲಿ ಹಚ್ಚಬೇಕಾಯಿತು. ಶ್ರೀಮಾನ್ ಬಾಬು ರೆಡ್ಡಿ ನನ್ನ ಸ್ನೇಹಿತರು, ಅವರು ಕಳೆದ ೧೮ ವರ್ಷಗಳಿಂದಲೂ ಸಣ್ಣ ಪತ್ರಿಕೆಯನ್ನು ನಡೆಸಿಕೊಂಡು ಬರುತ್ತಿದ್ದಾರೆ. ಜಾಹಿರಾತುಕೊಡಿ ಎಂಬುದಾಗಿ ಶ್ರೀಮಾನ್ ಜೆ ಎಚ್. ಪಟೇಲ್ ರವರು ನನ್ನ ಪರವಾಗಿ ಅಂದು ವಾರ್ತಾ ಮಂತ್ರಿಯಾಗಿದ್ದ ಶ್ರೀಮಾನ್ ಕೆ ಎಚ್. ಶ್ರೀನಿವಾಸ್ ರವರ ಹತ್ತಿರ ವಶೀಲಿ ಹಚ್ಚಿದಾಗ ೧೮ ವರ್ಷಗಳ ನಂತರ ಆ ಒಂದೇ ವರ್ಷದಲ್ಲಿ ೩,೦೦೦ ರೂಪಾಯಿಗಳ ಜಾಹಿರಾತು ಬಂತು.

ವಾರ್ತಾ ಇಲಾಖೆಗೆ ನೇರವಾಗಿ ಹೋಗಿ ಯಾರು ಅಪ್ರೋಚ್ ಮಾಡುತ್ತಾರೋ ಅವರಿಗೆ ಲಕ್ಷಾಂತರ ರೂಪಾಯಿ ಜಾಹಿರಾತು ಕೊಡುವ ವ್ಯವಸ್ಥೆ ಇದೆ. ಹಿಂದೆ ಕೆಲವರು ಜಾಹಿರಾತಿಗಾಗಿ ಏಕಗಂಟಿನಲ್ಲಿ ೪೦-೫೦ ಸಾವಿರ ರೂಪಾಯಿಗಳನ್ನು ತೆಗೆದುಕೊಂಡವರು ಇದ್ದಾರೆ. ನಿಮ್ಮ ಜಾಹಿರಾತಿನ ಉದ್ದೇಶವೇನು? ಅದು ಎಂತಹ ಜಾಹಿರಾತಾಗಿತ್ತು ಎಂದರೆ ಅದರಲ್ಲಿ ತುರ್ತು ಪರಿಸ್ಥಿತಿಯ ಸಾಧನೆಗಳು ಇದ್ದವು. ತುರ್ತು ಪರಿಸ್ಥಿತಿಯಲ್ಲಿ ಸಾಧನೆ ಏನಿತ್ತು ? ತುರ್ತು ಪರಿಸ್ಥಿತಿಯ ಸಾಧನೆಗಳನ್ನು ಆ ಪತ್ರಿಕೆ ಪ್ರಕಟಿಸಿ ಲಕ್ಷಾಂತರ ರೂಪಾಯಿ ಹಣವನ್ನು ವಾರ್ತಾ ಇಲಾಖೆಯಿಂದ ಲೂಟಿ ಮಾಡಿದೆ. ವಾರ್ತಾ ಇಲಾಖೆಯಲ್ಲಿರತಕ್ಕ ಅಧಿಕಾರಿಗಳು ಸೊಸೆ, ಅಳಿಯನ ಹೆಸರಿನಲ್ಲಿ ಪತ್ರಿಕೆಗಳನ್ನು ನಡೆಸಿ ನಿಮ್ಮ ವಾರ್ತಾ ಇಲಾಖೆಯಲ್ಲಿ ಹಗಲು ದರೋಡೆ ಮಾಡುತ್ತಿದ್ದಾರೆ. ಸಣ್ಣ ಪತ್ರಿಕೆಯವರ ಪರವಾಗಿ ಹೇಳುವುದೇನೆಂದರೆ, ಇದರ ಮೇಲೆ ಅಂಕೆ ಹಾಕದಿದ್ದರೆ ಎಷ್ಟೇ ಲಕ್ಷ ಕೋಟಿ ಹಣ ಕೊಟ್ಟರೂ ನ್ಯಾಯಯುತವಾಗಿ ಹೋರಾಟ ಮಾಡುವವರಿಗೆ ಅದು ಮುಟ್ಟುವುದಿಲ್ಲ. ಯಾರು ಪತ್ರಿಕೆ ಮೂಲಕ ವ್ಯಭಿಚಾರ ನಡೆಸುತ್ತಾರೆ ಅವರಿಗೆ ಹೋಗುತ್ತದೆಂದು ಹೇಳಬೇಕಾಗುತ್ತದೆ. ಇತ್ತೀಚೆಗೆ ಒಂದೇ ಒಂದು ಬದಲಾವಣೆಯಾಗಿದೆ, ನಾನು ಪತ್ರಿಕೆ ವಿಚಾರ ಮಾತ್ರ

ಮಾತನಾಡುತ್ತೇನೆ, ಉಳಿದ ವಿಚಾರಗಳನ್ನು ಮಾತನಾಡುವುದಕ್ಕೆ ಹೋಗುವುದಿಲ್ಲ, ನಾನು ಸಣ್ಣ ಪತ್ರಿಕಾಕರ್ತ ಎಂದು ಸಮಯ ಕೊಟ್ಟಿದ್ದಾರೆ. ಲೋಕೋಪಯೋಗಿ ಇಲಾಖೆಯ ಕಾರ್ಯಕ್ರಮಗಳು ಸಣ್ಣ ಪತ್ರಿಕೆಗಳಲ್ಲಿ ಬರುವಾಗ ಅವುಗಳಿಗೆ ೫-೬ನೂರು ರೂಪಾಯಿ ಮುಟ್ಟುತ್ತಿತ್ತು. ಈಗ ಅದನ್ನು ಏನು ಮಾಡಿದ್ದಾರೆಂದರೆ ೨೫ ಸೆಂ.ಮೀ. ಇದ್ದುದನ್ನು ೩ ಸೆಂ.ಮೀ. ಮಾಡಿದ್ದಾರೆ, ಟೆಂಡರ್ ಹೆಸರು, ಅಂದಾಜು ಮುಂಗಡ ಠೇವಣಿ ಇಷ್ಟಕ್ಕೇ ಸಂಕ್ಷಿಪ್ತ ಮಾಡಿ ಉಳಿದ ವಿವರಗಳನ್ನು ಕೈಬಿಟ್ಟಿದ್ದಾರೆ. ಈ ರೀತಿ ಮಾಡಿ ವಾರ್ತಾ ಇಲಾಖೆಗೆ ಉಳಿತಾಯ ಮಾಡಿದ್ದಾರೆ. ಈ ಬಗ್ಗೆ ಲೋಕೋಪಯೋಗಿ ಇಲಾಖೆಯವರನ್ನು ಕೇಳಬೇಕೆಂದು ಹೇಳುತ್ತೇನೆ. ರಸ್ತೆ ಬಗ್ಗೆ, ಸೇತುವೆ ಬಗ್ಗೆ ಟೆಂಡರ್ ಕರೆಯುತ್ತಾರೆ, ಅದರಲ್ಲಿ ಲೋಕೋಪಯೋಗಿ ಇಲಾಖೆಯ ಅಧಿಕಾರಿಗಳು ಲಕ್ಷಾಂತರ ರೂಪಾಯಿಗಳನ್ನು ಲೂಟಿ ಮಾಡುತ್ತಾರೆ. ಜಾಹಿರಾತನ್ನು ಮೊಟಕುಗೊಳಿಸಿ ೫೦ ರೂಪಾಯಿ ಉಳಿಸಿದ್ದೇವೆ, ೫೦೦ ರೂಪಾಯಿ ಉಳಿಸಿದ್ದೇವೆಂದು ಅಧಿಕಾರಿಗಳು ಹೇಳುತ್ತಾರೆ. ಆದರೆ ಅದರಿಂದ ಸಣ್ಣ ಪತ್ರಿಕೆಗಳಿಗೆ ಪ್ರತಿ ತಿಂಗಳು ಅಥವಾ ೨-೩ ತಿಂಗಳಿಗಾದರೂ ೫-೬ ನೂರು ರೂಪಾಯಿ ಏನು ಬರುತ್ತಿತ್ತು, ಅದು ನಿಂತು ಹೋಗಿದೆ, ಒಬ್ಬರು ಪತ್ರಿಕಾ ಸಂಪಾದಕರು ಹೇಳಿದರು, ನಮಗೆ ಪ್ರತಿ ತಿಂಗಳು ೨-೩ ಸಾವಿರ ರೂಪಾಯಿಯಾದರೂ ಟೆಂಡರ್ ಬಾಬ್ತಿನಿಂದ ಬರುತ್ತಿತ್ತು, ಈಗ ಈ ರೀತಿ ಪರಿವರ್ತನೆ ಮಾಡಿರುವುದರಿಂದ ಈ ತಿಂಗಳು ೨೭೦ ರೂಪಾಯಿ ತೆಗೆದುಕೊಳ್ಳತಕ್ಕ ಪ್ರಸಂಗ ಬಂದಿದೆ ಎಂದರು. ಅಲ್ಲದೆ ನೀವು ಅಸೆಂಬ್ಲಿಯಲ್ಲಿ ಸಣ್ಣ ಪತ್ರಿಕೆಯ ಪರವಾಗಿ ಹೋರಾಟ ಮಾಡಿ ಎಂದು ಹೇಳಿದರು. ವಾರ್ತಾ ಇಲಾಖೆಯಲ್ಲಿ ಈ ತರಹ ವರ್ತನೆ ಏನಿದೆ ಇದು ಬದಲಾವಣೆಯಾಗಬೇಕು. ಈಗ ಯಾವ ಮಂತ್ರಿಗಳೂ ಮಾಡದ ರೀತಿಯಲ್ಲಿ ಚಿಂತನೆ ಮಾಡಿ ಸಣ್ಣ ಪತ್ರಿಕೆಗಳ ಉದ್ಧಾರಕ್ಕೋಸ್ಕರವಾಗಿ ಎಂ.ಪಿ. ಸಿಂಗ್ ಅವರ ನೇತೃತ್ವದಲ್ಲಿ ಸಲಹಾ ಸಮಿತಿಯನ್ನು ನೇಮಿಸಿದ್ದೀರಿ ಆ ಸಲಹಾ ಸಮಿತಿಯ ಸದಸ್ಯರಲ್ಲಿ ನಾನೂ ಒಬ್ಬ. ಇಡೀ ೧೯ ಜಿಲ್ಲೆಗಳಲ್ಲಿ ತಿರುಗಾಡಿ ಕೆಲವೇ ದಿನಗಳಲ್ಲಿ ವರದಿ ಕೊಡುತ್ತಿದ್ದೇವೆ. ಅದರ ಶಿಫಾರಸ್ಸಿನ ಮೇಲೆ ಸಣ್ಣ ಪತ್ರಿಕೆಗಳು ಬದುಕುವಂಥ ಕೆಲಸ ಮಾಡುತ್ತಿದ್ದೇವೆಂಬ ಸಂಪೂರ್ಣ ಭರವಸೆ ನನಗೆ ಇದೆ. ದೊಡ್ಡ ಪತ್ರಿಕೆಗಳ ವಿಚಾರವನ್ನು ಹೇಳುವುದಕ್ಕೆ ಹೋಗುವುದಿಲ್ಲ. ದೊಡ್ಡ ಪತ್ರಿಕೆಗಳಲ್ಲಿ ೧೨ ಪುಟದ ಪೈಕಿ ೬ ಪುಟ ಜಾಹಿರಾತೇ ಇರುತ್ತದೆ. ಕಳೆದ ವರ್ಷ ಉತ್ತರ ಕರ್ನಾಟಕದ ಒಂದು ಪತ್ರಿಕೆಗೆ ಒಂದೇ ವರ್ಷದಲ್ಲಿ ೬೦ ಲಕ್ಷ ರೂಪಾಯಿಗಳನ್ನು ಜಾಹಿರಾತು ಮೂಲಕ ಕೊಟ್ಟಿದ್ದೀರಿ. ಆ ಪತ್ರಿಕೆಯ ಹೆಸರನ್ನು ಹೇಳಬಯಸುವುದಿಲ್ಲ. ಇವತ್ತಿನವರೆಗೆ ಎಷ್ಟೋ ಸಣ್ಣ ಪತ್ರಿಕೆಗಳಿಗೆ ಪ್ರೋತ್ಸಾಹಧನ (ಜಾಹಿರಾತು ಧನ) ಮುಟ್ಟಿಯೇ ಇಲ್ಲ. ಹೀಗಾಗಿ ಎಷ್ಟೋ ಸಣ್ಣ ಪತ್ರಿಕೆಗಳು ಮುಚ್ಚಲ್ಪಟ್ಟಿವೆ. ಅದೇ ದೊಡ್ಡ ಪತ್ರಿಕೆಗಳಿಗಾದರೆ ಕೂಡಲೇ ಮುಟ್ಟಿಬಿಡುತ್ತದೆ, ಯಾವ ರೀತಿಯಾಗಿ ದೊಡ್ಡ ಪ್ರಮಾಣದಲ್ಲಿ ಗೋಲ್‌ಮಾಲ್ ಆಗುತ್ತಿದೆ ಎಂಬುದನ್ನು ಮಂತ್ರಿಗಳ ಗಮನಕ್ಕೆ ತರುತ್ತಾ ಇದರ ಬಗ್ಗೆ ವಿಚಾರಣೆ ಮಾಡಬೇಕೆಂದು ಹೇಳಬಯಸುತ್ತೇನೆ. ಪ್ರವಾಸೋದ್ಯಮದ ಚಟುವಟಿಕೆಗಳು ಒಂದೇ ಕಡೆ ಕೇಂದ್ರೀಕೃತವಾಗಬಾರದು, ಜಗದ್ವಿಖ್ಯಾತ ಗೋಳಗುಮ್ಮಟ ಇರುವುದು ನನ್ನ ಜಿಲ್ಲೆಯಲ್ಲಿ, ಬಾದಾಮಿ, ಪಟ್ಟದಕಲ್ಲು, ಐಹೊಳೆ, ಬಸವನ ಬಾಗೇವಾಡಿ, ಇವೆಲ್ಲ ಒಂದೇ ಬೆಲ್ಟ್‌ನಲ್ಲಿ ಇವೆ. ಪ್ರವಾಸೋದ್ಯಮ ಮಂತ್ರಿಗಳಾದ ತಾವು ಒಂದೇ ಒಂದು ಬೆಲ್ಟ್‌ನಲ್ಲಿರುವ ಈ ಸ್ಥಳಗಳನ್ನು ಮತ್ತಷ್ಟು ಅಭಿವೃದ್ಧಿಗೊಳಿಸಬೇಕೆಂದು ಹೇಳುತ್ತೇನೆ. ಬಾದಾಮಿಯಿಂದ ಹೊರಟು ಬಿಜಾಪುರಕ್ಕೆ ಹೋಗುವುದಕೆ ಒಂದೇ ತಾಸಿನಲ್ಲಿ ಹೋಗುವಂಥ ವ್ಯವಸ್ಥೆ ಮಾಡುವುದಕ್ಕೆ ಸಾಧ್ಯವಿದೆ. ಅದರ ಬಗ್ಗೆ ಏನೂ ಮಾಡಿಲ್ಲ. ಆ ಬಗ್ಗೆ ಮಾನ್ಯ ಸಚಿವರು ಭರವಸೆ ಕೊಡಬೇಕೆಂದು ಕೇಳಿಕೊಂಡು, ವಾರ್ತಾ ಇಲಾಖೆಯಲ್ಲಿ ಸಂಪೂರ್ಣವಾಗಿ ಕಾಯಕಲ್ಪ ಮಾಡುತ್ತೀರೆಂಬ ಭರವಸೆ ಹೊಂದಿ ಅಧ್ಯಕ್ಷರು ನನಗೆ ಮಾತನಾಡಲಿಕ್ಕೆ ಅವಕಾಶ ಕೊಟ್ಟಿದ್ದಕ್ಕಾಗಿ ಅವರಿಗೆ ವಂದಿಸಿ ನನ್ನ ನಾಲ್ಕು ಮಾತುಗಳನ್ನು ಮುಕ್ತಾಯ ಮಾಡುತ್ತೇನೆ.

† ಶ್ರೀ ಜಿ. ಎಸ್. ಶಿವನಂಜಪ್ಪ (ಗುಬ್ಬಿ).—ಮಾನ್ಯ ಅಧ್ಯಕ್ಷರೇ, ನಾನು ಎರಡು ಬೇಡಿಕೆಗಳ ಬಗ್ಗೆ ಮಾತ್ರ ಹೇಳಬಯಸುತ್ತೇನೆ. ಮಾನ್ಯ ಜೀವರಾಜ ಆಳ್ವರವರು ಗುಬ್ಬಿ ವೀರಣ್ಣನವರ ಶತಾಬ್ದಿಯನ್ನು ಆಚರಿಸುವವರಿದ್ದಾರೆ. ಅದನ್ನು ಬೆಂಗಳೂರಿನಲ್ಲಿ ಮಾಡಬೇಡಿ, ಗುಬ್ಬಿಯಲ್ಲಿ ಮಾಡಿ ಎಂದು ಹೇಳುತ್ತೇನೆ ಅವರ ಒಂದು ಸ್ಮಾರಕವನ್ನು ಗುಬ್ಬಿಯಲ್ಲಿ ಮಾಡಬೇಕೆಂದು ಕಳಕಳಿಯಿಂದ ಪ್ರಾರ್ಥಿಸಿಕೊಳ್ಳುತ್ತೇನೆ.

ಶ್ರೀ ಜಿ. ನಾರಾಯಣ ಕುಮಾರ್.—ದಯವಿಟ್ಟು ನಮ್ಮಲ್ಲಿರತಕ್ಕ ಉತ್ಸಾಹವನ್ನು ಕಡಿಮೆ ಮಾಡಬೇಡಿ. ನಾನು ಈಗ ಬೇರೊಂದು ಸಭೆಗೆ ಹೋಗಬೇಕಾಗಿದೆ. ಆದ್ದರಿಂದ ನನಗೆ ಮೊದಲು ಮಾತನಾಡು

ವುದಕ್ಕೆ ಅವಕಾಶ ಮಾಡಿಕೊಡಿ ಪಟ್ಟಿಯಲ್ಲಿ ಕೊನೆಯಲ್ಲಿದ್ದ ಉಮರಬ್ಬ ಅವರನ್ನು ಕರೆದು ಮಾತನಾಡಿಸಿದ್ದೀರಿ. ೬ನೇ ಸ್ಥಾನದಲ್ಲಿದ್ದವನನ್ನು ಅನವಶ್ಯಕವಾಗಿ ಕೆಳಗೆ ಹಾಕಿದ್ದೀರಿ. ನನಗೆ ಕನ್ನಡದ ಬಗ್ಗೆ ಕಳಕಳಿ ಇದೆ. ಅದನ್ನು ನಾನು ವ್ಯಕ್ತ ಮಾಡದಿದ್ದರೆ ತಪ್ಪಾಗುತ್ತದೆ. ನಾನು ಕನ್ನಡದ ಬಗ್ಗೆ ಹೋರಾಟ ಮಾಡತಕ್ಕ ವ್ಯಕ್ತಿ. ಸಭಾಧ್ಯಕ್ಷರು ಏತಕ್ಕೆ ತೊಂದರೆ ಕೊಡುತ್ತಿದ್ದಾರೆಂದು ಗೊತ್ತಿಲ್ಲ.

ಅಧ್ಯಕ್ಷರು.—ಕ್ಷಮಿಸಿಕೊಳ್ಳಿ. ಉಮರಬ್ಬ ಅವರ ಬದಲಿಗೆ ನಿಮ್ಮ ಬದಲಿಗೆ ಉಮರಬ್ಬನವರಿಗೆ ಕೊಡಿ ಎಂದು ನಿಮ್ಮ ವಿಪ್ ಅವರೇ ಬದಲಾವಣೆ ಮಾಡಿ ಕೊಟ್ಟಿದ್ದಾರೆ. ಆ ಕ್ರಮದಲ್ಲೇ ನಾನು ಕರೆಯುತ್ತಿದ್ದೇನೆ. ಬೇಕಾದರೆ ನಿಮ್ಮ ವಿಪ್ ಅವರನ್ನೇ ಕೇಳಿ.

ಶ್ರೀ ಜಿ. ಎಸ್. ಶಿವನಂಜಪ್ಪ.—ನಮ್ಮ ಕ್ಷೇತ್ರಕ್ಕೆ ಒಂದು ವೆಟರ್ನರಿ ಆಸ್ಪತ್ರೆಯನ್ನು ಮಂಜೂರ್ಮಾಡಿ ಕೊಡಿ ಎಂದು ಕೇಳಿದರೆ, ವೈದ್ಯರಿಲ್ಲದೆ ಆಸ್ಪತ್ರೆಯನ್ನು ಮಂಜೂರ್ಮಾಡಿ ಏನು ಪ್ರಯೋಜನವಾಗುತ್ತದೆಂದು ಕೇಳುತ್ತಾರೆ. ವೈದ್ಯರು ಏಕೆ ಇಲ್ಲವೆಂದು ಅರ್ಥವಾಗಲಿಲ್ಲ. ಪ್ರತಿ ವರ್ಷವೂ ನಮ್ಮ ರಾಜ್ಯದಲ್ಲಿ ಅನೇಕ ಮಂದಿ ವೈದ್ಯರು ತೇರ್ಗಡೆ ಆಗುತ್ತಿದ್ದಾರೆ. ಅವರು ಎಲ್ಲಿಗೆ ಹೋಗುತ್ತಾರೆ? ನಾವು ಹಣ ಕೊಟ್ಟು ಓದಿಸಿ ನಮ್ಮ ರಾಜ್ಯದ ಜನರನ್ನು ಪರೀಕ್ಷೆಯಲ್ಲಿ ಪಾಸ್ ಮಾಡುವಾಗ ಹಳ್ಳಿಯ ಜನರಿಗೆ ಏಕೆ ವೈದ್ಯರು ಸಿಕ್ಕುತ್ತಿಲ್ಲವೆಂಬ ಪ್ರಶ್ನೆಯನ್ನು ಇಡುತ್ತಾ ಡಾಕ್ಟರ್‌ಗಳಿಗೆ ಸಂಬಳದಲ್ಲಿ ಏರುಪೇರು ಇದೆ ಎಂದು ಭಾವಿಸಿದ್ದೇನೆ. ಆದಕಾರಣ ವೈದ್ಯರು ಹಳ್ಳಿಗೆ ಬರುತ್ತಿಲ್ಲವೆಂದು ಕಾಣುತ್ತದೆ. ಇದನ್ನು ಸರಿಪಡಿಸದಿದ್ದರೆ ಸಾವಿರಾರು ದನಗಳು ಸಾಯುತ್ತವೆ. ಬಹಳ ತೊಂದರೆಯಾಗುತ್ತದೆ. ಹಳ್ಳಿಗಾಡಿನ ಆಸ್ಪತ್ರೆಗಳ ಪರಿಸ್ಥಿತಿ ಯಾವ ರೀತಿ ಇದೆ ಎಂದರೆ ಬಿಲ್ಡಿಂಗ್ ಇದ್ದರೆ ವೈದ್ಯರು ಇರುವುದಿಲ್ಲ. ವೈದ್ಯರು ಇದ್ದರೆ ಕಾಂಪೌಂಡರ್ ಇರುವುದಿಲ್ಲ. ಇವರಿಬ್ಬರೂ ಇದ್ದರೆ ಔಷಧಿ ಇರುವುದಿಲ್ಲ. ಮನುಷ್ಯನಿಗೆ ಜ್ವರ ಬಂದರೆ ಹಳ್ಳಿಯಲ್ಲಿ ವೈದ್ಯರು ಸಿಗದಿದ್ದರೆ ತುಮಕೂರಿಗೆ, ಇಲ್ಲದಿದ್ದರೆ ಬೆಂಗಳೂರಿಗೆ ಬರುತ್ತಾನೆ. ಆದರೆ ದನಗಳಿಗೆ ಜ್ವರ ಬಂದರೆ ಅವುಗಳನ್ನು ಬೆಂಗಳೂರಿಗೆ ತೆಗೆದುಕೊಂಡು ಬರುವುದಕ್ಕಾಗುವುದಿಲ್ಲ. ಈ ಒಂದು ವ್ಯವಸ್ಥೆಯನ್ನು ಮಾಡುವವರೆಗೆ ಮೊಬೈಲ್ ಹಾಸ್ಪಿಟಲ್ ಬರುವಂತೆ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ.

ಕೆ. ಡಿ. ಡಿ. ಸಿ. ಯಲ್ಲಿ ಬಹಳ ಒಳ್ಳೆಯ ಕಾರ್ಯಕ್ರಮ. ರೈತರಿಗೆ ವಾರ ವಾರಕ್ಕೆ ಹಣವನ್ನು ಕೊಡತಕ್ಕಂತಹ ವ್ಯವಸ್ಥೆ ಈ ಯೋಜನೆಯಲ್ಲಿ ಇದೆ. ಇದನ್ನು ಸರಿಯಾದ ರೀತಿಯಲ್ಲಿ ನಡೆಸಬೇಕು. ಇದರ ಮೂಲಕ ಹೆಚ್ಚಿನ ಅವಕಾಶವನ್ನು ರೈತರಿಗೆ ಕೊಡಬೇಕಾಗಿದೆ, ಅದನ್ನು ಕೊಡುತ್ತೀರೆಂದು ನಾನು ಭಾವಿಸಿದ್ದೇನೆ. ಈ ಇಲಾಖೆ ಚೆನ್ನಾಗಿ ಕೆಲಸ ಮಾಡುತ್ತಿದೆ. ಹಾಲಿನ ದರವನ್ನು ೫೦ ಪೈಸೆ ಜಾಸ್ತಿ ಮಾಡಿದ್ದೀರಿ. ಹಾಲು ಉತ್ಪಾದಕರಿಗೆ ೧೭ ಪೈಸೆ ಕೊಡುತ್ತಿದ್ದೀರಿ.

ಶ್ರೀ ಆರ್. ಸಿದ್ದರಾಮಯ್ಯ.—೫೦ ಪೈಸೆ ಹಾಲಿನ ದರವನ್ನು ಜಾಸ್ತಿ ಮಾಡಿದ್ದೇವೆ. ಅದನ್ನು ಸಂಪೂರ್ಣವಾಗಿ ಉತ್ಪಾದಕರಿಗೆ, ಅಂದರೆ ರೈತರಿಗೆ ವರ್ಗಾಯಿಸಿದ್ದೇವೆ.

ಶ್ರೀ ಜಿ. ಎಸ್. ಶಿವನಂಜಪ್ಪ.—ಇದು ಸರಿಯಲ್ಲ. ನೀವು ಕೊಡತಕ್ಕಂಥಾದ್ದು ೧೭ ಪೈಸೆ ಇನ್ನು ಉಳಿದಿದ್ದನ್ನು ಯಾವ ಕಾರ್ಯಗಳಿಗೆ ಉಪಯೋಗಿಸುತ್ತಿದ್ದೀರೋ ಗೊತ್ತಿಲ್ಲ. ಮಿಲ್ಕ್‌ನವರಿಗೆ ತುಮಕೂರಿನಲ್ಲಿ ಒಂದು ಕಾನೂನು ಜಾರಿ ಮಾಡಿದ್ದೀರಿ, ಬೆಂಗಳೂರಿನಲ್ಲಿ ಒಂದು ಕಾನೂನು ಜಾರಿ ಮಾಡಿದ್ದೀರಿ, ಹಾಸನದಲ್ಲಿ ಒಂದು. ಶಿವಮೊಗ್ಗದಲ್ಲಿ ಒಂದು ಹೀಗೆ ಕಾನೂನು ಜಾರಿ ಮಾಡಿದ್ದೀರಿ. ಇದರಿಂದಾಗಿ ಬಹಳ ಅತೃಪ್ತಿ ಇದೆ. ಯಾವಾಗ ಬೇಕಾದರೆ ಆಗ ತೆಗೆಯುತ್ತೀರಿ ಆದುದರಿಂದ ಇದರ ಬಗ್ಗೆ ಕಾನೂನು ಬದ್ಧವಾಗಿ ಏನಾದರೂ ಮಾಡಿ ಏನಾದರೂ ರೂಲ್ಸ್ ಮಾಡಿ. ಇದನ್ನು ಒಂದು ಒಳ್ಳೆಯ ವ್ಯವಸ್ಥೆ ರೀತಿಯಲ್ಲಿ ನಡೆಸತಕ್ಕಂಥದ್ದರ ಬಗ್ಗೆ ಏರ್ಪಾಡು ಮಾಡಬೇಕು. ಮಾನ್ಯ ಪ್ರಕಾಶ್‌ರವರಿಗೆ ಹೆಚ್ಚಿನ ನೆರವು ಕೊಡಬೇಕಾಗಿತ್ತು. ಜಾನುವಾರುಗಳ ಸಂಖ್ಯೆ ಜಾಸ್ತಿ ಇಲ್ಲದೇ ಹೋದರೆ ಏನೂ ಮಾಡುವುದಕ್ಕೆ ಸಾಧ್ಯವೇ ಇಲ್ಲ. ಎಲ್ಲಾ ಕಡೆಗಳಲ್ಲಿ ಟ್ರ್ಯಾಕ್ಟರ್‌ನಿಂದ ಉಳುಮೆ ಮಾಡುವುದಕ್ಕೆ ಆಗುವುದಿಲ್ಲ. ಕೆಲವು ಕಡೆಗಳಲ್ಲಿ ನಮ್ಮ ಪ್ರಕೃತಿಯ ನಿಯಮದ ಪ್ರಕಾರ ಎತ್ತುಗಳೂ ಬೇಕಾಗುತ್ತವೆ. ಹೆಚ್ಚು ಹಾಲು ಕೊಡತಕ್ಕಂತಹ ತಳಿಗಳ ಕಡೆಗೂ ಹೆಚ್ಚಿನ ಗಮನ ಕೊಡಬೇಕು. ಸ್ಥಳೀಯ ತಳಿಗಳನ್ನು ಕಡೆಗಣಿಸತಕ್ಕಂಥಾದ್ದು ಒಳ್ಳೆಯದಲ್ಲ. ಅಮೃತಮಹಲ್, ಹಳ್ಳಿಕಾರ್, ಎತ್ತುಗಳು ೧೦,೦೦೦ ರೂಗಳ ಬೆಲೆ ಬಾಳುತ್ತವೆ. ಅಜ್ಜಂಪುರದ ಕುಣಿಗೆ ಹಳ್ಳಿ ಫಾರಂನಲ್ಲಿ ಒಂದು ಸಾವಿರ ಎಕರೆ ಜಮೀನು ಇದೆ. ಅಲ್ಲಿ ೪೯ ದನಗಳನ್ನು ಸಾಕಿದ್ದಾರೆ. ಸಾವಿರಾರು ಎಕರೆ ಜಮೀನಿದ್ದು ೪೯–೫೦–೧೫೦ ದನಗಳನ್ನು ಸಾಕಿ

ಯಾವ ರೀತಿ ಅಭಿವೃದ್ಧಿಯನ್ನು ಪಡಿಸುತ್ತೀರಿ ? ಯಾವ ಬಾಬಿನಲ್ಲೂ ಪೂರ ಖರ್ಚು ಮಾಡಿಲ್ಲ ಬರಗಾಲ ವೆಂದು ಹೇಳುತ್ತಿದ್ದೀರಿ. ಅಮೃತ ಮಹಲ್ ತಳಿಗಳಿಗೆ ೫೦ ಸಾವಿರ ಎಕರೆ ಇರಬೇಕು. ಕುಣಿಗೆಹಳ್ಳಿಯ ಕಾವಲು, ಅಜ್ಜಂಪುರದ ಕಾವಲಿನಲ್ಲಿ ಅಲ್ಲದೆ ಬೇರೆಕಡೆ ೫೦ ಸಾವಿರ ಎಕರೆ ಇರುವುದು ಇನ್ನೂ ಬೇರೆ ಕಡೆ ಗಳಲ್ಲೂ ಇದೆ. ಪ್ರತಿ ವರ್ಷದಲ್ಲೂ ಕೂಡ ಬರಗಾಲವನ್ನು ನೋಡುತ್ತಿದ್ದೇವೆ. ಸಾವಿರಾರು ಎಕರೆ ಇರುವಂತಹ ಕಡೆಗಳಲ್ಲಿ ಓಪನ್ ಬೋರ್‌ವೆಲ್ ಹಾಕಿ ಮೇವು ಬೆಳೆಯುತಕ್ಕಂತಹ ಪ್ರಯತ್ನವನ್ನು ಮಾಡ ಬೇಕು. ಮೇವಿನ ಸಂಗ್ರಹಣೆ ಮಾಡಬೇಕು. ಈಗ ಪ್ರತಿ ವರ್ಷ ದನಗಳ ಸಂಖ್ಯೆ ಕಡಿಮೆಯಾಗುತ್ತಿದೆ. ಕಟುಕರ ಹತ್ತಿರ ದನಗಳು ಹೋಗುತ್ತಿವೆ. ನಿಮ್ಮ ಇಲಾಖೆ ಮಲಗಿದೆಯೋ, ಸತ್ತಿದೆಯೋ ಗೊತ್ತಿಲ್ಲ. ಆರೋಗ್ಯವಾಗಿರತಕ್ಕಂತಹ ದನಗಳು, ಬೇಸಾಯಕ್ಕೆ ಬಳಸತಕ್ಕಂತಹ ದನಗಳು ಇಂದು ಕಸಾಯಿಖಾನೆಗೆ ಬರುತ್ತಿದೆ. ಆರೋಗ್ಯಕರವಾಗಿರತಕ್ಕಂಥ ಗೋವುಗಳನ್ನು ಕಸಾಯಿಖಾನೆಗೆ ಕಳಿಸತಕ್ಕಂಥದ್ದು ಅಪರಾಧ ವಾಗುತ್ತದೆ. ಈ ವಿಷಯದಲ್ಲಿ ಪೋಲೀಸ್ ಇಲಾಖೆ ನಿದ್ದೆ ಮಾಡುತ್ತಿದೆಯೋ ? ನಿಮ್ಮ ಇಲಾಖೆ ನಿದ್ದೆ ಮಾಡುತ್ತಿದೆಯೋ ? ಇದರಲ್ಲಿ ಎಷ್ಟು ಕೇಸುಗಳನ್ನು ಐಡೆಂಟಿಫೈ ಮಾಡಿದ್ದೀರಿ ? ಒಂದನ್ನೂ ನಿಮ್ಮ ಇಲಾಖೆಯವರು ಮಾಡಿಲ್ಲ. ಇದರ ಬಗ್ಗೆ ಹೆಚ್ಚಿನ ಗಮನ ಕೊಡಬೇಕು. ಇನ್ನು ಆಸ್ಪತ್ರೆಗಳ ಸಂಖ್ಯೆ ಜಾಸ್ತಿ ಮಾಡಿ, ಹೆಚ್ಚು ಡಾಕ್ಟರ್ಸ್‌ಗಳನ್ನು ಅಲ್ಲಿಗೆ ನೇಮಕ ಮಾಡಬೇಕು. ಮಾನ್ಯ ಮರಿಗೌಡರು ಇವತ್ತಿನ ದಿವಸ ಈ ಇಲಾಖೆಯನ್ನು ನೋಡಿದ್ದರೆ ಹೃದಯಾಘಾತವಾಗಿ ಸಾಯುತ್ತಿದ್ದರೆಂದು ಕಾಣು ತ್ತದೆ. ಅವರು ಬಹಳ ಒಳ್ಳೆಯ ಯೋಜನೆಯಿಂದ ರೈತರಿಗೆ ಅನುಕೂಲ ಮಾಡಿಕೊಡಬೇಕೆನ್ನುವ ಉದ್ದೇಶದಿಂದ ಈ ಇಲಾಖೆಯನ್ನು ಬೆಳೆಸಿ ನೋಡಿ ಆನಂದ ಪಟ್ಟಿದ್ದರು. ಆದರೆ ಇಂದು ಎಲ್ಲಾ ಕಡೆ ಯಲ್ಲೂ ಅವ್ಯವಸ್ಥೆ ಇದೆ ಈಗ ಅಲ್ಲಿನ ಡೈರೆಕ್ಟರ್ ಏನಿದ್ದಾರೆ, ಅವರು ಜೈಲಿನ ಇಲಾಖೆಯಿಂದ ಬಂದವರು. ಉದಾಹರಣೆಗೆ ಹೇಳಬೇಕಾದರೆ, ಚಿಕ್ಕನಾಯಕನಹಳ್ಳಿ ತಾಲ್ಲೂಕಿನ ಜೇಸಿಪುರದ ಫಾರಂ ನಲ್ಲಿ ೧೬,೦೦೦ ಮಾವಿನ ಹಣ್ಣನ್ನು ಕೀಳುವುದಕ್ಕೆ ಹರಾಜು ಮಾಡಿದ್ದರು ಇವರು ಬಂದ ತಕ್ಷಣ ಅನು ಮಾನ ಪಟ್ಟು ಈ ಹರಾಜನ್ನು ರದ್ದು ಮಾಡಿ, ಯಾರು ಸ್ವಲ್ಪ ದುಡ್ಡು ಕಟ್ಟಿದ್ದರು ಅದನ್ನು ಕ್ಯಾನ್ಸಲ್ ಮಾಡಿ ಇಲಾಖೆಯ ಮೂಲಕವೇ ಮಾವಿನ ಹಣ್ಣನ್ನು ಕೀಳಿಸಿದ್ದಾರೆ ಇದಕ್ಕೆ ಮರು ಟೆಂಡರ್ ಕರೆಯ ಲಿಲ್ಲ, ಯಾವುದೇ ರೀತಿಯ ಕಾನೂನು ಬದ್ಧವಾದ ನಿಯಮಗಳನ್ನು ಅನುಸರಿಸದೆ ಕೀಳಿಸಿದ್ದಾರೆ. ಅದರಲ್ಲಿ ೧೫, ೧೬ ಸಾವಿರ ದುಡ್ಡು ಬಂದಿದೆ, ಅದರಲ್ಲಿ ಲಾರಿ ಬಾಡಿಗೆಗೆ, ಕೂಲಿಗೆ ಮಾಡಿರತಕ್ಕಂತಹ ಖರ್ಚನ್ನು ಲೆಕ್ಕ ಹಾಕಿದರೆ ೫ ಸಾವಿರ ರೂಪಾಯಿ ಹೊರೆಬರುತ್ತದೆ. ಈ ತರಹದ ಕೆಲಸವನ್ನು ಏಕೆ ಮಾಡುತ್ತಿ ದ್ದೀರಿ. ಬಹುಶಃ ಅವರು ಜೈಲಿನಲ್ಲಿ ಇದ್ದವರು, ಅವರು ಯಾರನ್ನೂ ನಂಬುವುದಿಲ್ಲ, ಎಲ್ಲರನ್ನೂ ಖೈದಿಗಳನ್ನು ನೋಡುವ ರೀತಿಯಲ್ಲಿ ನೋಡಿದರೆ ಈ ಇಲಾಖೆ ಬೆಳೆಯುವುದಿಲ್ಲ. ಆ ಮನೋ ಭಾವ ಅವರಲ್ಲಿ ಬಂದಿದೆ. ಅದು ತಪ್ಪಬೇಕು. ಅವರನ್ನು ಪೋಲೀಸ್ ಇಲಾಖೆಗೆ ಹಾಕಿ ದರೆ ನಮ್ಮದೇನೂ ಅಭ್ಯಂತರವಿಲ್ಲ. ಹೆಜ್ಜೆಜ್ಜೆಗೂ ಅನುಮಾನ ಪಟ್ಟರೆ ನಿಮ್ಮ ಕಾರ್ಯಕ್ರಮಗಳು ಖಂಡಿತ ವಾಗಿ ಕುಂಠಿತವಾಗುತ್ತದೆ. ಸ್ಥಗಿತವಾಗುತ್ತದೆ. ಇನ್ನು ನೌಕರರನ್ನು ಕೇಳಿದರೆ, ಅವರು ಹೇಳುತ್ತಾರೆ, ನಮಗೆ ಯಾವಾಗ ನೋಟೀಸ್ ಕೊಡುತ್ತಾರೋ ಎಂದು ಈ ಮನೋಭಾವವನ್ನು ಬೆಳೆಸಿಕೊಂಡಿದ್ದಾರೆ. ಇದು ತಪ್ಪಬೇಕು. ಇದನ್ನು ಸರಿಪಡಿಸಬೇಕು. ಇನ್ನು ಚಿಕ್ಕನಾಯಕನ ಹಳ್ಳಿ, ಗುಬ್ಬಿ, ತಿಪಟೂರು, ತಾಲ್ಲೂಕುಗಳಲ್ಲಿ ತೆಂಗಿನ ಗಿಡಗಳಿಗೆ ಕರೀ ತಲೆ ಹುಳಗಳು ಬಿದ್ದು, ಅವೆಲ್ಲಾ ಹಾಳಾಗುವ ಪರಿಸ್ಥಿತಿ ಬಂದಿದೆ. ಹಾಗೂ ತೆಂಗಿನ ಸುಳಿ ಒಣಗತಕ್ಕಂತಹ ಪರಿಸ್ಥಿತಿ ಇದ್ದು, ಇದರಿಂದಾಗಿ ತೆಂಗಿನ ಗಿಡಗಳು ಸಾಯುತ್ತವೆ. ಈ ಬಗ್ಗೆ ಯಾವುದೇ ರೀತಿಯ ಕಾರ್ಯಕ್ರಮಗಳು ನಡೆದಿಲ್ಲ. ತೆಂಗಿನ ಧಾರಣೆ ಕಡಿಮೆಯಾಗಿದೆ. ಇದರಲ್ಲೇ ಜೀವನ ಮಾಡುತ್ತಿದ್ದಂತಹವರಿಗೆ ತೊಂದರೆಯಾಗಿದೆ. ಈ ಕೃಷಿ ಏರುಪೇರನ್ನು ಸರಿಪಡಿಸುತ್ತೀರಾ ಎಂದು ಮಾನ್ಯ ಮಂತ್ರಿಗಳಲ್ಲಿ ಕೇಳುತ್ತೇನೆ. ಇನ್ನು ನನ್ನ ಕ್ಷೇತ್ರದಲ್ಲಿ ಕೃಷಿ ಮಂತ್ರಿಗಳ ಇಲಾಖೆಯ ವತಿಯಿಂದ ಒಂದು ಪೈಸೆ ಕೆಲಸ ನಡೆಯುತ್ತಿಲ್ಲ. ಅದೇ ಪಕ್ಕದ ಕ್ಷೇತ್ರವಾದ ಬೆಳ್ಳಾವಿ, ಹಾಗಲವಾಡಿಯಲ್ಲಿ ಈ ಕೆಲಸ ನಡೆಯುತ್ತಿದೆ. ರೈತರಿಗೆ ಅನುಕೂಲವಾಗುವ ದೃಷ್ಟಿಯಿಂದ ಫಾರಂ ಫಂಡ್, ನಾಲಾ ಬಂಡಿಂಗ್ ಮುಂತಾದವನ್ನು ಮಾಡಿಕೊಡಬೇಕು. ನಿಮ್ಮ ಅಧಿಕಾರ ವ್ಯಾಪ್ತಿ ಬಹಳ ಕಡಿಮೆ. ನಮಗೆ ಗೊಬ್ಬರ ಕೊಡಿ, ಎಂದರೆ ಆಗ್ರೋ ಫರ್ಟಿಲೈಸರ್‌ಗೆ ಹೋಗಿ ಎಂದು ಹೇಳುತ್ತಾರೆ. ಸೀಡ್ಸ್ ಕೊಡಿ ಎಂದರೆ ಸೀಡ್ಸ್ ಕಾರ್ಪೋರೇಷನ್‌ಗೆ ಹೋಗಿ ಎಂದು ಹೇಳುತ್ತಾರೆ. ಬೀಜ ಕೊಡಿ ಎಂದರೆ ಇನ್ನೊಂದು ಕಡೆ ಹೋಗಿ ಎಂದು ಹೇಳುತ್ತಾರೆ. ಇವರಲ್ಲಿ ನಿಮಗೇನು ಅಧಿಕಾರವಿದೆ ೧೦೦ಕ್ಕೆ ೮೦ ರಷ್ಟು ಜನ ಈ ಇಲಾಖೆಯ ಅಡಿಯಲ್ಲಿ ಬರುತ್ತಾರೆ. ಅಂತಹ ಇಲಾಖೆಗೆ ಯಾವುದೇ ರೀತಿಯಾದ ಅಧಿಕಾರವಾಗಲೀ ಅಥವಾ ಅವರಿಗೆ ಬೇಕಾಗಿರತಕ್ಕಂತಹ ಹಣ ಪಡೆಯುತಕ್ಕಂತಹುದ ಬಗ್ಗೆ ಯೋಜನೆಯನ್ನು ಇಟ್ಟುಕೊಂಡಿಲ್ಲ. ಎಲ್ಲಾ

ಇಲಾಖೆಗಳೂ ಇವರಿಗೆ ಬರಬೇಕಿತ್ತು. ಇವರಿಂದ ಏನೂ ಕೆಲಸ ನಡೆಯುತ್ತಿಲ್ಲ. ಎಣ್ಣೆ ಕಾಳು ಬೀಜಗಳು ಜಾಸ್ತಿಯಾಗಬೇಕು. ಇದಕ್ಕೆ ಸರಿಯಾಗಿ ಬೀಜ ವಿತರಣೆಯಾಗುತ್ತಿಲ್ಲ. ಮಳೆ ಬಂದರೆ ನಿಮ್ಮ ಇಲಾಖೆಯಿಂದ ಬೀಜ, ಗೊಬ್ಬರ ಕೊಡತಕ್ಕಂತಹ ವ್ಯವಸ್ಥೆ ಇದೆ. ಮಳೆ ಬಿದ್ದ ಮೇಲೆ ಇದನ್ನು ಹುಡುಕುವ ಪ್ರಶ್ನೆಯೇ ಇಲ್ಲ. ಇದನ್ನು ಮೊದಲೇ ಸಂಗ್ರಹಿಸಿ ಇಟ್ಟುಕೊಳ್ಳಬೇಕು. ಈ ಎಲ್ಲಾ ನ್ಯೂನತೆಗಳನ್ನು ಸರಿಪಡಿಸುತ್ತೀರೆಂದು ನಾನು ಅಂದುಕೊಂಡಿದ್ದೇನೆ. ನನಗೆ ಇಷ್ಟು ಮಾತನಾಡಲು ಅವಕಾಶ ಕೊಟ್ಟ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

† ಶ್ರೀ ಡಿ. ಟಿ. ಜಯಕುಮಾರ್ (ನಂಜನಗೂಡು) —ಮಾನ್ಯ ಅಧ್ಯಕ್ಷರೇ, ಈ ದಿನ ಪ್ರವಾಸೋದ್ಯಮ, ವಾರ್ತಾ ಯುವ ಜನ ಸೇವೆಗಳು, ಪಶುಸಂಗೋಪನಾ ತೋಟಗಾರಿಕೆ, ಮೀನುಗಾರಿಕೆ ಮತ್ತು ಕೃಷಿ ಇಲಾಖೆಯ ಮೇಲಿನ ಬೇಡಿಕೆಗಳನ್ನು ಸ್ವಾಗತಿಸುತ್ತಾ ಒಂದೆರಡು ಮಾತುಗಳನ್ನು ಹೇಳುವುದಕ್ಕೆ ಇಷ್ಟಪಡುತ್ತೇನೆ. ಮೊಟ್ಟ ಮೊದಲನೆಯದಾಗಿ ಪ್ರವಾಸೋದ್ಯಮ ಮತ್ತು ಕಲೆ ಸಂಸ್ಕೃತಿ ಇಲಾಖೆಯ ಬಗ್ಗೆ ಮಾತನಾಡುವುದಕ್ಕೆ ಇಷ್ಟಪಡುತ್ತೇನೆ. ಈ ಇಲಾಖೆಯ ಬಗ್ಗೆ ವಿರೋಧ ಪಕ್ಷದ ವತಿಯಿಂದ ಹಾಗೂ ನಮ್ಮ ಕಡೆಯಿಂದ ಸಾಕಷ್ಟು ಚರ್ಚೆಯಾಗಿದೆ. ನಾನು ಕೆಲವು ವಿಚಾರಗಳನ್ನು ಮಾತ್ರ ಹೇಳುವುದಕ್ಕೆ ಇಷ್ಟಪಡುತ್ತೇನೆ.

ಇವತ್ತು ಈ ಇಲಾಖೆಯನ್ನು ಹೊಂದಿರತಕ್ಕ ಯುವಕರಾದ ಶ್ರೀ ಜೀವರಾಜ ಆಳ್ವರು ಬಹಳ ಉತ್ಸಾಹಿಗಳು ಅಷ್ಟೇ ಉತ್ಸಾಹಿಗಳಾಗಿ ಈ ಇಲಾಖೆಯಲ್ಲಿ ದಕ್ಷ ಆಡಳಿತಗಾರರಾಗಿರುವ ಶ್ರೀ ಚಿರಂಜೀವಿ ಸಿಂಗ್ ಮತ್ತು ಗುಪ್ತ ಅವರು. ಕೆ. ವಿ. ಶೆಟ್ಟಿಯವರೂ ಇದ್ದಾರೆ. ನಿಜವಾಗಿಯೂ ಕೂಡ ಹೊಸ ಚೈತನ್ಯವನ್ನು ಇವರೆಲ್ಲ ಇಲಾಖೆಗೆ ಕೊಟ್ಟಿದ್ದಾರೆ ಎಂದು ತಪ್ಪಾಗಲಾರದು. ಆದರೆ ದುರ್ದೈವದ ಸಂಗತಿ ನಮ್ಮ ವಿರೋಧ ಪಕ್ಷದ ಸದಸ್ಯರಾದ ಶ್ರೀ ಉಮರಬ್ಬ ಅವರು ಯಾವ ಒಂದು ನೂರು ಕೆಲಸಗಳ ಪೈಕಿ ೯೯ ಚೆನ್ನಾಗಿ ಆಗಿದ್ದರೂ ಚೆನ್ನಾಗಿ ಆಗಿರದ ಒಂದೇ ಒಂದು ಕೆಲಸವನ್ನು ದುರ್ಬೀನು ಹಾಕಿ ತೋರುತ್ತಿದ್ದಾರೆ. ಮೊಸರಿನಲ್ಲಿ ಇರುವ ಸಣ್ಣ ಹುಳುಗಳನ್ನು ನೋಡಿದರೆ ಅದನ್ನು ಕುಡಿಯುವುದಕ್ಕೆ ತಿನ್ನುವುದಕ್ಕೆ ಮನಸ್ಸು ಬರುವುದಿಲ್ಲ. ಉಬ್ಬಳಿಕೆ ಬರುತ್ತದೆ ಮೈಕ್ರೊ ಸ್ಕೋಪ್ ಹಾಕಿ ಯಾವುದೇ ಇಲಾಖೆ ಬಗ್ಗೆ ವಿರೋಧವನ್ನು ವ್ಯಕ್ತಪಡಿಸಿರುವುದು ನಿಜವಾಗಿಯೂ ದುರ್ದೈವದ ಸಂಗತಿ. ಮಾನ್ಯ ಜೀವರಾಜ ಆಳ್ವರು ಇಲಾಖೆಯನ್ನು ವಹಿಸಿಕೊಂಡ ಮೇಲೆ ಇನ್ನೂ ಉತ್ತಮವಾದ ಕೆಲಸಗಳನ್ನು ಮಾಡಿದ್ದಾರೆ.

ಮೊದಲನೆಯದಾಗಿ ಮಕ್ಕಳ ಮೇಳ ಮಾಡಿದರು. ಈ ಮೇಳಕ್ಕೆ ರಾಷ್ಟ್ರದ ಪ್ರಧಾನ ಮಂತ್ರಿಗಳಾದ ರಾಜೀವ್‌ಗಾಂಧಿಯವರೇ ಬಂದು ತಮ್ಮ ಮೆಚ್ಚುಗೆಯನ್ನು ವ್ಯಕ್ತಪಡಿಸಿ ಈ ರಾಜ್ಯದ ಪುಟಾಣಿ ಮಕ್ಕಳ ಮತ್ತು ಅವರ ಪೋಷಕರ ಮನಸ್ಸಿಗೆ ಆಹ್ಲಾದವನ್ನುಂಟು ಮಾಡಿದ್ದಾರೆ. ದೇಶದ ಲೆವೆಲ್‌ನಲ್ಲಿ ಈ ಥರದ ಕಾರ್ಯಕ್ರಮ ಮಾಡುವುದಕ್ಕೆ ಒಪ್ಪಿಕೊಂಡಿದ್ದಾರೆ.

ಇವರ ಜೊತೆಗೆ ವಿಶ್ವ ಕನ್ನಡ ಮೇಳ ಮಾಡಿ ಇಡೀ ವಿಶ್ವಕ್ಕೆ ಕನ್ನಡದ ಕಂಪನ್ನು ಬೀರಿದ್ದಾರೆ. ಇದರ ಬಗ್ಗೆ ವಿರೋಧ ಪಕ್ಷದವರು ೫,೬,೭ ಕೋಟಿ ಖರ್ಚಾಗಿರುವುದು ಎಂದು ಹೇಳುತ್ತಿದ್ದಾರೆ. ಆದರೆ ಕೇವಲ ೬೬ ಲಕ್ಷ ರೂ. ಮಾತ್ರ ಖರ್ಚು ಮಾಡಿ ಅತ್ಯಂತ ವಿಜೃಂಭಣೆಯಿಂದ ಕಣ್ಣಿನ ತಣಿಸುವಂತೆ ಮಾಡಿದ್ದಾರೆ. ಮೈಸೂರು ಜಿಲ್ಲೆಯವನೇ ಆದ ನನಗೆ ಗೊತ್ತು ಅಲ್ಲಿ ಎಷ್ಟೊಂದು ನೂಕುನುಗ್ಗಲಿತ್ತು, ಜನಗಳ ಉತ್ಸಾಹ ಎಂಥದಿತ್ತು ಎಂಬುದು ಯಾವ ಕಾಲದಲ್ಲೂ ನೋಡಲಿಲ್ಲ. ಇಷ್ಟೇ ಸಾಕು ಜೀವರಾಜ ಆಳ್ವರವರು ಎಷ್ಟು ಚೆನ್ನಾಗಿ ಕೆಲಸ ಮಾಡಿದ್ದಾರೆ ಎಂಬುದಕ್ಕೆ ಅದನ್ನು ರಾಜ್ಯದ ಜ್ಞಾನಪೀಠ ಪ್ರಶಸ್ತಿ ವಿಜೇತ ಶ್ರೀ ಶಿವರಾಮ ಕಾರಂತರೇ ಹೊಗಳಿದ್ದಾರೆ. ಇದನ್ನು ಮೆಚ್ಚುವುದನ್ನು ಬಿಟ್ಟು ಅಲ್ಲಿ ಎಡವಿದ್ದಾರೆ, ಇಲ್ಲಿ ಎಡವಿದ್ದಾರೆ ಎಂದು ಹೇಳುತ್ತಿದ್ದಾರೆ ಅಷ್ಟೇ. ನಡೆಯುವವನು ಎಡವದೆ, ಕುಳಿತಿರುವವರು ಎಡುವುತ್ತಾನೆಯೇ ಇದು ದುರ್ದೈವ ಇನ್ನು ಸ್ಕೌಟ್ಸ್ ಮತ್ತು ಗೈಡ್ಸ್‌ಗೆ ಸಂಬಂಧಿಸಿದಂತೆ ರಾಷ್ಟ್ರದ ಮೂಲೆ ಮೂಲೆಗಳಿಂದ ಬಂದಂಥ ಸುಮಾರು ೨೫ ಸಾವಿರ ಸ್ಕೌಟ್ಸ್ ಮತ್ತು ಗೈಡ್ಸ್‌ಗಳ ಜಾಂಬೂರಿಯನ್ನು ಬಹಳ ವಿಜೃಂಭಣೆಯಿಂದ ನಡೆಸಿದ್ದಾರೆ. ರಾಷ್ಟ್ರದ ಪ್ರಧಾನ ಮಂತ್ರಿಗಳೇ ಇದರಲ್ಲಿ ಭಾಗವಹಿಸಿದ್ದರು. ತಮ್ಮ ಮೆಚ್ಚುಗೆಯನ್ನು ವ್ಯಕ್ತಪಡಿಸಿದ್ದಾರೆ.

ಅದರ ಜೊತೆಗೆ ನಿಮಗೆ ಗೊತ್ತಿರಬಹುದು. ರಾಜಮಹಾರಾಜರು ಇದ್ದಾಗ ದಸರಾ ಹೇಗೆ ನಡೆಯುತ್ತಿತ್ತೋ ಅವರ ನಂತರ ಹಾಗೆ ನಡೆಯುತ್ತಿರಲಿಲ್ಲ. ಆದರೆ ನಮ್ಮ ಆಳ್ವರು ಏರ್ಪಡಿಸಿದಂತಹ

ದಸರಾವನ್ನು ಕಂಡು ಹಿರಿಯರು, ಮಕ್ಕಳು ಎಲ್ಲರೂ ಆಕರ್ಷಿತರಾಗಿದ್ದರು. ಎಲ್ಲರೂ ಬಹಳ ಅಚ್ಚು ಕಟ್ಟಾಗಿ ಮಾಡಿದರೆಂದು ಹೇಳಿದರೆ ಅದು ಅತಿಶಯೋಕ್ತಿ ಆಗಲಾರದು.

ಇದರ ಜೊತೆಗೆ ೭೭-೭೮ನೇ ಇಸವಿಯಿಂದ ರಾಜ್ಯದ ಚಲನಚಿತ್ರ ಪ್ರಶಸ್ತಿಗಳನ್ನು ಕೊಡದೆಯೇ ಬರಿ ಅನೌನ್ಸ್ ಮಾಡಿಕೊಂಡೇ ಬರಲಾಗಿತ್ತು. ಸುಮಾರು ೭ ವರ್ಷಗಳ ಒಟ್ಟು ಪ್ರಶಸ್ತಿ ಪ್ರಧಾನ ಸಮಾರಂಭವನ್ನು ಜೀವರಾಜ ಆಳ್ವರು ಒಂದೇ ವೇದಿಕೆಯಲ್ಲಿ ನಡೆಸಿದರು.

ಯವನಿಕಾ ಕೇಂದ್ರ ಕೂಡ ಅಚ್ಚುಕಟ್ಟಾದ ರಂಗ ಮಂದಿರ. ಇಂಥ ಅನೇಕ ಕೆಲಸಗಳನ್ನು ಮಾಡಿರುವುದು ನೋಡಿದರೆ ನಿಜವಾಗಿಯೂ ಹೊಗಳುವುದಕ್ಕೆಂದು ಹೇಳಂತ್ತಿಲ್ಲ, ಅವರ ದಕ್ಷತೆಯನ್ನು ನೋಡಿಯೇ ಮುಖ್ಯ ಮಂತ್ರಿಗಳು ಇಂಥ ಜವಾಬ್ದಾರ ಇಲಾಖೆಯನ್ನು ಕೊಟ್ಟರು ಅನಿಸುತ್ತಿದೆ. ಇವತ್ತೇ ಹಲವಾರು ಇಲಾಖೆಗಳ ಬಗ್ಗೆ ಬೇಡಿಕೆಗಳಿರುವುದರಿಂದ ಹೆಚ್ಚು ಮಾತನಾಡಲು ಅವಕಾಶ ಇಲ್ಲದೆ ಕೇವಲ ಎರಡು ಸಲಹೆ ಮಾತ್ರ ಕೊಡುತ್ತೇನೆ. ಒಂದೆಂದರೆ ಸರ್ಕಾರಿ ನೌಕರರಲ್ಲೂ ಕ್ರೀಡಾಪಟು ಗಳಿದ್ದಾರೆ. ಅವರಿಗೆ ಹಿಂದೆ ಹಣ ಸ್ಯಾಂಕ್ಷನ್ ಇತ್ತು, ಬಜೆಟ್‌ನಲ್ಲಿ ಸಾಕಷ್ಟು ಪ್ರೋತ್ಸಾಹ ಇತ್ತು. ಈಗ ಅದು ನಿಂತು ಹೋಗಿದೆ. ಅದನ್ನು ಪುನರಾರಂಭಿಸಲು ಬಜೆಟ್‌ನಲ್ಲಿ ಸಾಕಷ್ಟು ಹಣವನ್ನು ಇಡಬೇಕೆಂದು ಮನವಿ ಮಾಡಿಕೊಳ್ಳುತ್ತೇನೆ. ಜೊತೆಗೆ ಸಾಹಿತ್ಯ ಪ್ರಪಂಚದಲ್ಲಿ ಎಂ. ಎಸ್. ಕೃಷ್ಣ ಅವರು ಅನೇಕ ಗ್ರಂಥಗಳನ್ನು ಬಿಟ್ಟು ಹೋಗಿದ್ದಾರೆ. ಅವನ್ನು ಹೊರಗಡೆ ತಂದರೆ ಸಾಹಿತ್ಯ ಲೋಕಕ್ಕೆ ತುಂಬಾ ಉಪಕಾರವಾಗುತ್ತದೆ. ಅವರು ಹೊಯ್ಸಳ ಆರ್ಕಿಟೆಕ್ಚರ್ ಬಗ್ಗೆ ಬರೆದಿದ್ದಾರೆಂದು ಕೇಳಿದ್ದೇನೆ ಅದನ್ನು ಆರ್ಕಿಯಲಾಜಿಕಲ್ ಸರ್ವೆ ಆಫ್ ಇಂಡಿಯಾ ಆಫೀಸಿನಿಂದ ತೆಗೆಸಬೇಕು. ಹೀಗೆ ಮಾಡಲು ಮಾನ್ಯ ಮಂತ್ರಿಗಳನ್ನು ವಿನಂತಿ ಮಾಡಿಕೊಳ್ಳುತ್ತೇನೆ.

ಇಷ್ಟು ಸಲಹೆಗಳನ್ನು ಪಟ್ಟಿ ಮಾಡಿ ಇನ್ನು ವ್ಯವಸಾಯ ಇಲಾಖೆಗೆ ಬಂದರೆ ನಾನು ಏನು ಹೇಳುತ್ತೇನೆ ಎಂದರೆ ಈ ರಾಷ್ಟ್ರದ ಬೆನ್ನೆಲುಬು ರೈತಬಾಂಧವ ಎಂದು ಹೇಳುತ್ತೇನೆ. ಅವನ ಕಷ್ಟ ಶಾಸಕರಿಂದಾಗಲೀ, ಮಂತ್ರಿಗಳಿಂದಾಗಲೀ, ಅಧಿಕಾರಿಗಳಿಂದಾಗಲೀ ಕಡಿಮೆಯಾಗಿಲ್ಲ. ಆದರೂ ಇವರೆಲ್ಲ ರೈತರ ಮಕ್ಕಳೇ? ಏಕೆಂದರೆ ರೈತರ ಬಗ್ಗೆ ಮಾಡುವ ಚಿಂತನೆ ಕಡಿಮೆ ಎಂದರೆ ತಪ್ಪಾಗಲಾರದು. ಇವತ್ತು ಮಾನ್ಯ ಕೃಷಿ ಸಚಿವ ಪ್ರಕಾಶರು ಬಹಳ ದಕ್ಷತೆಯಿಂದ ನಿರ್ವಹಿಸಲು ಶ್ರಮ ಪಡುತ್ತಿದ್ದಾರೆ. ಆದರೂ ಪ್ರತಿಫಲ ಮಾತ್ರ ಕಡಿಮೆ. ಪುಟ ೭ ರಲ್ಲಿ ಚಿಕ್ಕ ನೋಟ್ ಕೊಟ್ಟಿರುವಂತೆ ೧೯೮೬–೮೭ರವರೆಗೆ ಎಷ್ಟು ಆಹಾರ ಧಾನ್ಯವನ್ನು ಉತ್ಪಾದನೆ ಮಾಡಬೇಕಾಗುತ್ತದೆ ಎಂಬ ಮಾಹಿತಿ ಕೊಟ್ಟಿದ್ದಾರೆ, ಬತ್ತವನ್ನು ೨೯.೦೮ ಲಕ್ಷ ಟನ್ ಮಾಡಬೇಕೆಂದು ಹಾಗೆಯೇ ಎಣ್ಣೆಕಾಳು, ದ್ವಿದಳ ಧಾನ್ಯಗಳ ಬಗ್ಗೆಯೂ ಹೆಚ್ಚು ಉತ್ಪಾದಿಸಬೇಕೆಂಬ ಕಾಳಜಿ ಇಟ್ಟು ಕೊಂಡಿದ್ದಾರೆ. ಆದರೆ ಈ ಉತ್ಪಾದನೆಯಾಗಬೇಕಾದರೆ ಮುಖ್ಯವಾಗಿ ಭೂಸಾರ ಸಂರಕ್ಷಣೆ ಜೊತೆಗೆ ರೈತರಿಗೆ ಅನುಕೂಲವಾಗತಕ್ಕ ಕ್ರಮಗಳು, ಮತ್ತು ರಾಜ್ಯ ಬೀಜ ನಿಗಮದ ಸುಲಭೀಕರಣ–ಇವೆಲ್ಲದರ ಸಮ್ಮಿಲನದಿಂದ ರೈತರ ಕಷ್ಟವನ್ನು ಹೋಗಲಾಡಿಸುವುದಕ್ಕೆ ಪ್ರಯತ್ನ ಮಾಡುತ್ತಿದ್ದಾರೆ ಈ ಬೀಜ ನಿಗಮದ ಮುಖ್ಯದಿಂದ ಹಿಡಿದು ಕನಿಷ್ಠನವರೆಗೆ ಎಲ್ಲರೂ ರೈತರ ಮಕ್ಕಳೇ ಆದರೂ ಇವರೇಕೆ ರೈತರ ಬಗ್ಗೆ ಮೃದುವಾಗಿಲ್ಲ ಎಂದು ಯೋಚಿಸಿದರೆ ವಿಷಾದವಾಗು ತ್ತದೆ. ಆದ್ದರಿಂದ ಸಚಿವ ಪ್ರಕಾಶರು ಇದರ ಬಗ್ಗೆ ಹೆಚ್ಚಿನ ಗಮನ ಕೊಡಬೇಕು. ಇವತ್ತಿನ ಸರ್ಕಾರದ ಜವಾನನ ಜೀವನ ಮಟ್ಟ ಏನಿದೆ ಅದಕ್ಕಿಂತ ಕಡಿಮೆ ಇದೆ ೧೦ ಎಕರೆ ಭೂಮಿ ಇಟ್ಟುಕೊಂಡಿರುವ ರೈತನದ್ದು. ಇಂಥ ಹೀನ ಸ್ಥಿತಿಗೆ ಮುಖ್ಯ ಕಾರಣ ರೈತರ ಬಗ್ಗೆ ಚಿಂತನೆಯ ಅಭಾವ ಎಂದು ನನ್ನ ಭಾವನೆ. ರೈತರು ಹಳೇ ಪದ್ಧತಿಯಲ್ಲೇ ಕೃಷಿ ಮಾಡಿ ಎಕರೆಯೊಂದರಲ್ಲಿ ೧೦ ಕ್ವಿಂಟಾಲ್ ಬೆಳೆಯುವ ಇಡಿ ೩ ಕ್ವಿಂಟಾಲ್ ಬೆಳೆಯುತ್ತಿದ್ದಾನೆ. ದ್ವಿದಳ ಧಾನ್ಯಗಳು, ಎಣ್ಣೆ ಕಾಳುಗಳು ಇವುಗಳ ಬಗ್ಗೆ ಕ್ರಾಂತಿ ಕಾರಕ ಚಟುವಟಿಕೆಗಳನ್ನು ತರಬಹುದು. ಆದಕ್ಕೂ ಶ್ರದ್ಧೆ ಆಸಕ್ತಿ ವಹಿಸಬೇಕೆಂದು ಅನ್ನಿಸುತ್ತಿದೆ.

ಖಿಂಷ್ಕಿ ಅಭಿವೃದ್ಧಿ ಮಂಡಲಿಗಳನ್ನು ಮಾಡಿದ್ದಾರೆ. ಒಳ್ಳೆಯದು ಇವುಗಳ ಮೂಲಕ ದ್ವಿದಳ ಧಾನ್ಯಗಳು, ಎಣ್ಣೆ ಕಾಳುಗಳು ಬೆಳೆಯುವುದಾದರೆ ಒಳ್ಳೆಯದೆಂದು ಹೇಳುತ್ತೇನೆ. ಮತ್ತು ರೈತ ಬಾಂಧವರೂ ಕೂಡ ಸಂಘಟಿತರಾಗಬೇಕಾಗಿದೆ. ಅವರಿಗೆ ಭದ್ರತೆ ಇಲ್ಲವಾಗಿದೆ. ರೈತರ ಸಂಘಗಳು ಹುಟ್ಟಿಕೊಂಡು ರಾಜಕೀಯ ಗುಂಪುಗಳಾದುವು. ಅಸಂಘಟಿತ ರೈತರು ಸಂಘಟಿತರಾದಾಗ ಸರ್ಕಾರ ಗಮನಹರಿಸಬಹುದು.

ಇನ್ನು ಪಶುಸಂಗೋಪನೆ ವಿಷಯದಲ್ಲಿ ನಮ್ಮ ಜಿಲ್ಲೆಯಿಂದ ಬಂದಿರುವ ಸಿದ್ಧರಾಮಯ್ಯನವರು ದಕ್ಷತೆಯಿಂದ ಕೆಲಸ ಮಾಡುತ್ತಿದ್ದಾರೆ. ಸಮಾಜವಾದದಲ್ಲಿ ನಂಬಿಕೆ ಇರುವವರು ಗುಜರಾತ್ ರಾಜ್ಯದಲ್ಲಿ ಆನಂದ ಎಂಬ ದೊಡ್ಡ ಸಂಸ್ಥೆ ಕ್ಷೀರಕ್ರಾಂತಿಯನ್ನು ನಡೆಸಿ ಪ್ರತಿ ಹಳ್ಳಿಯ ರೈತರ ಆರ್ಥಿಕ ಪರಿಸ್ಥಿತಿಯನ್ನು ಸುಧಾರಿಸಿದೆ. ಇದಕ್ಕೆ ಯಾವ ರಾಜಕಾರಣಿಗಳ ಬೆಂಬಲವೂ ಇಲ್ಲ. ಇದರಿಂದ ಹಳ್ಳಿಗಳಲ್ಲಿ ಶಾಲೆ ಕಟ್ಟುವುದಕ್ಕೆ, ಭವನ ಕಟ್ಟುವುದಕ್ಕೆ ಎಲ್ಲವನ್ನೂ ಹಳ್ಳಿಗಳ ಯುವಕರೇ ಸ್ವತಃ ವಹಿಸಿಕೊಳ್ಳುತ್ತಿದ್ದಾರೆ ಎಂಬುದು ನಿಜಕ್ಕೂ ಮೆಚ್ಚುವ ವಿಚಾರ.

ಆನಂದ್ ಕ್ಷೇತ್ರಕ್ಕೆ ನಾನು ಭೇಟಿ ಕೊಟ್ಟಿದ್ದಾಗ ಅಲ್ಲಿ ಬಹಳ ಹೇಳುತ್ತಿದ್ದರು. ಇಡೀ ಭಾರತದಲ್ಲಿ ಗುಜರಾತಿನ "ಆನಂದ್" ಬಿಟ್ಟರೆ ಕರ್ನಾಟಕದ "ಕೆ.ಎಂ. ಎಫ್" ಬಹಳ ಉತ್ತಮ ಕೆಲಸ ಮಾಡುತ್ತಿದೆ ಎಂಬ ಮೆಚ್ಚುಗೆಯನ್ನು ವ್ಯಕ್ತಪಡಿಸುತ್ತಿದ್ದರು. ಆದುದರಿಂದ ಈ ಸಂಸ್ಥೆಯನ್ನು ಇನ್ನೂ ಉತ್ತಮವಾಗಿ ಬೆಳೆಸಬೇಕೆಂದು ನಾನು ಹೇಳುತ್ತೇನೆ. ಜೊತೆಗೆ ನಮ್ಮಲ್ಲಿ ಪಶು ವೈದ್ಯ ಶಾಲೆಗಳು ಬಹಳ ಕಡಿಮೆ ಇವೆ. ಮೂಕಪ್ರಾಣಿಗಳಾದ ಜಾನುವಾರುಗಳು ಇವತ್ತು ಜಾಸ್ತಿಯಾಗುತ್ತಿದ್ದು ಇವತ್ತು ಅವುಗಳ ಕಷ್ಟವನ್ನು ಹೇಳುವುದಕ್ಕೆ ಸಾಧ್ಯವಿಲ್ಲ. ಇವತ್ತು ತಾಲ್ಲೂಕು ಮಟ್ಟದಲ್ಲಿ ಹಾಗೂ ಹೋಬಳಿ ಸೆಂಟರ್‌ಗಳಲ್ಲಿ ಪಶು ವೈದ್ಯ ಶಾಲೆಗಳನ್ನು ತೆರೆಯಬೇಕೆಂದು ಮಾನ್ಯ ಸಚಿವರಲ್ಲಿ ಪ್ರಾರ್ಥಿಸಿಕೊಳ್ಳುತ್ತೇನೆ. ನಾನು ಕಳೆದ ಸಾರಿ ಎಗ್ ಬೋರ್ಡ್ ಬಗ್ಗೆ ಮಾತನಾಡಿದ್ದೆ. ಇವತ್ತಿನದಿವಸ ಕಡಿಮೆ ದರದಲ್ಲಿ ಕಲಬೆರಕೆ ಇಲ್ಲದೆ ದೊರೆಯುವ ವಸ್ತುಗಳೆಂದರೆ, ಬಾಳೇಹಣ್ಣು, ಎಳನೀರು ಹಾಗೂ ಕೋಳಿಮೊಟ್ಟೆ. ಇವತ್ತು ಪ್ರತಿಯೊಬ್ಬ ವ್ಯಕ್ತಿಗೆ ಅವುಗಳು ತಲುಪುತಕ್ಕ ರೀತಿಯಲ್ಲಿ ಉತ್ಪಾದನೆಯಾಗಬೇಕಾಗಿದೆ. ಎಗ್ ಬೋರ್ಡ್‌ನ್ನು ತೆರೆಯುವ ಬಗ್ಗೆ ಮಾನ್ಯ ಮಂತ್ರಿಯವರು ಹೆಚ್ಚಿನ ಗಮನಹರಿಸಬೇಕೆಂದು ಹೇಳುತ್ತೇನೆ. ಇವತ್ತಿನವರೆವಿಗೂ ಈ ಒಂದು ವಿಷಯ ಕಾರ್ಯರೂಪಕ್ಕೆ ಬಂದಿಲ್ಲ. ಈ ಬಗ್ಗೆ ಹೆಚ್ಚು ಆಸಕ್ತಿ ವಹಿಸಬೇಕೆಂದು ಹೇಳಿ ತೋಟಗಾರಿಕೆ ಬಗ್ಗೆ ಎರಡು ಮಾತುಗಳನ್ನು ಹೇಳಿ ನನ್ನ ಮಾತುಗಳನ್ನು ಮುಗಿಸುತ್ತೇನೆ. ಇವತ್ತು ತೋಟಗಾರಿಕೆ ವಿಷಯ ಬಂದಾಗ ಎಂ. ಹೆಚ್. ಮರೀಗೌಡರನ್ನು ನಾವು ನೆನೆಸಿಕೊಳ್ಳಬೇಕು. ಒಂದು ಸಪೋಟ ಹಣ್ಣನ್ನು ತಿನ್ನುವುದು ಒಂದೇ ಹಾಗೂ ಒಂದು ರಾಗಿ ಮುದ್ದೆಯನ್ನು ತಿನ್ನುವುದು ಒಂದೇ ಎಂದು ಅವರು ಹೇಳುತ್ತಿದ್ದರು. ಶಕ್ತಿಯನ್ನು ಬೆಳೆಸತಕ್ಕ ಉತ್ಕೃಷ್ಟ ಆಹಾರ ಆ ಹಣ್ಣಿನಲ್ಲಿ ಇದೆ. ಅದನ್ನು ಬೆಳೆಯಬೇಕಾದರೆ ಸಾಕಷ್ಟು ಹೆಚ್ಚು ನೀರು ಬೇಕಾಗಿಲ್ಲ. ಇವತ್ತು ಮನೆಯ ಬಚ್ಚಲು ನೀರು ಹೋಗತಕ್ಕ ಜಾಗದಲ್ಲಿ ಇದನ್ನು ಬೆಳೆಯಬಹುದು. ಇವತ್ತು ಬಾಳೆಗಿಡ, ತೆಂಗಿನಮರ, ಸಪೋಟಾ ಹಾಗೂ ಪಪ್ಪಾಯಿ ಗಿಡಗಳನ್ನು ಸಣ್ಣ ಪ್ರಮಾಣದಲ್ಲಿ ಪ್ರತಿಯೊಂದು ಮನೆಯ ಸುತ್ತ ಇರುವ ಜಾಗದಲ್ಲಿ ಬೆಳೆಯಬಹುದು. ಇದರಿಂದ ತೋಟಗಾರಿಕೆ ಅಭಿವೃದ್ಧಿಯಾಗಿ ತನ್ಮೂಲಕ ಆ ಜನರ ಆರ್ಥಿಕ ಪರಿಸ್ಥಿತಿಯೂ ಸುಧಾರಣೆಯಾಗುತ್ತದೆ. ಇವತ್ತು ಹೆಚ್ಚು ಆಹಾರವನ್ನು ಪಡೆಯತಕ್ಕದ್ದರ ಬಗ್ಗೆ ತರುಣ ಮಂತ್ರಿಗಳಾದ ಸೋಮಶೇಖರ್ ಅವರು ಏನು ಕ್ರಾಂತಿಕಾರಿ ಬದಲಾವಣೆ ಬಗ್ಗೆ ತಮ್ಮ ನಂಬಿಕೆಯನ್ನು ಇಟ್ಟಿದ್ದಾರೆ ಆದರಲ್ಲಿ ಇವರು ಸಫಲರಾಗುತ್ತಾರೆಂದು ನಾನು ಹೇಳುತ್ತೇನೆ. ಆದ್ದರಿಂದ ಪ್ರತಿಯೊಂದು ಹಳ್ಳಿಯಲ್ಲಿ, ಪ್ರತಿಯೊಂದು ಮನೆಯಲ್ಲಿ ಸಣ್ಣ ಸಣ್ಣ ತೋಟಗಾರಿಕೆ ಮಾಡುವ ವ್ಯವಸ್ಥೆ ಮಾಡಬೇಕೆಂದು ಮನವಿ ಮಾಡಿಕೊಳ್ಳುತ್ತೇನೆ. ಕೊನೆಯದಾಗಿ ಮಾನ್ಯ ಭೈರೇಗೌಡರು ಮೀನುಗಾರಿಕೆ ಇಲಾಖೆಯನ್ನು ವಹಿಸಿಕೊಂಡ ಮೇಲೆ ಬಹಳ ಆಸಕ್ತಿಯಿಂದ ಕೆಲಸ ಮಾಡುತ್ತಿದ್ದಾರೆ. ದಕ್ಷಿಣ ಕನ್ನಡ ಜಿಲ್ಲೆಯಿಂದ ಬಂದಿರತಕ್ಕ ಸದಸ್ಯರು ಮಾತನಾಡಿದಹಾಗೆ ಈ ಒಂದು ಮೀನುಗಾರಿಕೆ ಬಗ್ಗೆ ಹೆಚ್ಚಿನ ವಿಚಾರ ಇವರಿಗೆ ಗೊತ್ತಿಲ್ಲದೇ ಇರಬಹುದು. ಆದರೆ ಆ ಬಗ್ಗೆ ಕೆಲಸ ಮಾಡತಕ್ಕ ಬಗ್ಗೆ ಹೆಚ್ಚಿನ ಆಸಕ್ತಿಯನ್ನು ಇಟ್ಟುಕೊಂಡಿದ್ದಾರೆ. ಇವತ್ತು ಒಳನಾಡು ಮೀನುಗಾರಿಕೆ ಬಗ್ಗೆ ಏನು ನಿಗಮ ತಂದಿದ್ದಾರೆ ಅದರಿಂದ ಹೆಚ್ಚು ಪ್ರಯೋಜನ ಆಗುವುದಕ್ಕೆ ಸಾಧ್ಯವಿಲ್ಲ. ಇವತ್ತು ಸಮುದ್ರದಿಂದ ಉತ್ಪಾದನೆ ಆಗತಕ್ಕ ಮೀನೂ ಒಂದೇ, ಚಿನ್ನವೂ ಒಂದೇ ಎಂದು ಹೇಳಿದರೆ ತಪ್ಪಾಗಲಾರದು. ಇವತ್ತು ಹೆಚ್ಚು ವಿದೇಶೀ ವಿನಿಮಯ ಗಳಿಸಿಕೊಡುತ್ತಿರತಕ್ಕ ಮೀನುಗಾರಿಕೆ ಇಲಾಖೆಯಲ್ಲಿ ಇನ್ನೂ ಹೆಚ್ಚು ಉತ್ಪಾದನೆ ಮಾಡತಕ್ಕ ಸಾಮರ್ಥ್ಯ ಇರುವುದರಿಂದ ಈ ಬಗ್ಗೆ ಹೆಚ್ಚು ದಕ್ಷತೆಯಿಂದ ಕೆಲಸ ಮಾಡಿ ಹೆಚ್ಚು ಉತ್ಪಾದನೆ ತರಬೇಕೆಂದು ಮೀನುಗಾರಿಕಾ ಸಚಿವರಲ್ಲಿ ಪ್ರಾರ್ಥಿಸಿಕೊಳ್ಳುತ್ತೇನೆ. ಹಾಗೂ ಇಷ್ಟು ಹೊತ್ತು ಮಾತನಾಡಲು ಅವಕಾಶ ಕೊಟ್ಟ ಮಾನ್ಯ ಅಧ್ಯಕ್ಷರಿಗೆ ವಂದಿಸಿ ನನ್ನ ನಾಲ್ಕು ಮಾತುಗಳನ್ನು ಮುಗಿಸುತ್ತೇನೆ.

† ಶ್ರೀ ಕೆ. ಎಚ್. ಪಾಟೀಲ್ (ಗದಗ್).—ಮಾನ್ಯ ಅಧ್ಯಕ್ಷರೇ, ತಾವು ಅನೇಕ ಜನರಿಗೆ ಹಾಕಿರುವ ನಿಬಂಧನೆಗಳಿಗೆ ಒಳಪಟ್ಟು ಸಾಧ್ಯವಾದಷ್ಟು ಸಂಕ್ಷಿಪ್ತದಲ್ಲಿ ನನ್ನ ಭಾಷಣವನ್ನು ಮುಗಿಸುವುದಕ್ಕೆ ಪ್ರಯತ್ನಪಡುತ್ತೇನೆ. ಇವತ್ತು ಇಲ್ಲಿ ಕೃಷಿ ತೋಟಗಾರಿಕೆ ಮತ್ತು ಪಶುಸಂಗೋಪನೆ ಬಗ್ಗೆ ಮಾತನಾಡುವಾಗ ಇಲ್ಲಿನ ಒಂದು ಕಾಲಾವಕಾಶವನ್ನು ನೋಡಿದರೆ ನಾನೇನು ಮಾತನಾಡಬೇಕು, ಮಾತನಾಡದೇ ಇರುವುದು ಉತ್ತಮವೆಂದು ನನಗನ್ನಿಸುತ್ತದೆ. ಒಬ್ಬ ಸನ್ಯಾಸಿ ಒಬ್ಬ ಹೆಣ್ಣುಮಗಳ ಹತ್ತಿರ ಮಜ್ಜಿಗೆ ಕೇಳಿದ. ಆಕೆ ಒಂದು ಗ್ಲಾಸ್ ಮಜ್ಜಿಗೆ ಕೊಡುವ ಸಂದರ್ಭದಲ್ಲಿ ನೀವು ನನಗೆ ರಾಮಾಯಣ ಹೇಳಿದರೆ ಮಜ್ಜಿಗೆ ಕೊಡುತ್ತೇನೆ ಎಂದು ಆಕೆ ಹೇಳಿದಳು. ರಾಮಾಯಣ, ಮಹಾಭಾರತದಂತಹ ದೊಡ್ಡ ಗ್ರಂಥಗಳನ್ನು ಒಂದು ಲೋಟ ಮಜ್ಜಿಗೆಗಾಗಿ ಹೇಳುತ್ತಾ ಕೂತರೆ ಎಷ್ಟು ದಿವಸ ಹಿಡಿಯುತ್ತದೆ? ಆದರೂ ಆತ ಈ ರೀತಿ ಹೇಳಿದ್ದ.

‘‘ಅದೌಪತೋವನವಾದಿ ನಾರಿ ಗಮನಂ, ಗತಾಮಂ ಗಾನ್ ಕಾಂಚನಂ,

ವೈದೇಹೀ ಹರಣಂ, ಜಟಾಯು ಮರಣಂ, ಸುಗ್ರೀವ ಸಂಭಾಷಣಂ, ವಾಲಿರ್ದಹನಮುಂ’’

ಎಂದು ಹೇಳಿದ. ಹಾಗಿ ನಾವು ಈಗ ತೋಟಗಾರಿಕೆ ಮತ್ತು ಪಶು ಸಂಗೋಪನೆ ಬಗ್ಗೆ...

ಶ್ರೀ ಎ. ಲಕ್ಷ್ಮೀಸಾಗರ್.—ಒಬ್ಬ ಸನ್ಯಾಸಿ ಮೂರು ಮಾತಿನಲ್ಲಿಯೇ ಹೇಳುತ್ತಾನೆ. ಅದು ಏನೆಂದರೆ ‘‘ಹೋದ—ಹೊಡೆದ—ತಂದ’’ ಎಂದು.

ಶ್ರೀ ಕೆ. ಎಚ್. ಪಾಟೀಲ್.—ಇವತ್ತು ತೋಟಗಾರಿಕೆ ಇಲಾಖೆಯಲ್ಲಿ ಬಹಳ ಡೆವಲೆಪ್‌ಮೆಂಟ್ಸ್ ಆಗಿದೆ. ಅನೇಕ ಉತ್ತಮ ಸಸಿಗಳನ್ನು ಬೆಳೆಸಿದಂಥದ್ದು ಈ ಡಿಪಾರ್ಟ್‌ಮೆಂಟು. ಮಾನ್ಯ ಮರೀಗೌಡರಂತಹ ತ್ಯಾಗಿಗಳಿಂದ, ತಪಸ್ವಿಗಳಿಂದ ಉತ್ತಮ ಸಸಿಗಳನ್ನು ಬೆಳೆಸಿದಂಥ ಇಲಾಖೆ ಇದು ಎಂದು ಹೇಳಿದರೆ ಅಡ್ಡಿಯಿಲ್ಲ. ಇವತ್ತು ಜೈಲಿನಲ್ಲಿ ಇದಂತಹ ಮಲ್ಲಯ್ಯನವರನ್ನು ತರಿಸಿಕೊಂಡು ದ್ರಾಕ್ಷಿ ತೋಟವನ್ನು ಬೆಳೆಯಿರಿ ಎಂದರೆ ಅವರು ಹೇಗೆ ಬೆಳೆಯುತ್ತಾರೆ? ಅವರಲ್ಲಿ ಇರುವ ಬುದ್ಧಿವಂತಿಕೆಯನ್ನು ಉಪಯೋಗ ಮಾಡುವುದಕ್ಕೆ ಅವರಿಗೆ ಪೋಲೀಸ್ ಇಲಾಖೆಯಲ್ಲಿಯೇ ಅವಕಾಶ ಕೊಡಿ. ಈ ದೃಷ್ಟಿಯಿಂದ ಹಾರ್ಟಿಕಲ್ಚರ್ ಡಿಪಾರ್ಟ್‌ಮೆಂಟ್ ಬಗ್ಗೆ ಮಾತನಾಡುವುದಕ್ಕಿಂತಲೂ ಮಾತನಾಡದೇ ಇರುವುದೇ ಒಳ್ಳೆಯದು. ಏಕೆಂದರೆ, ಮಲ್ಲಯ್ಯನವರಿಗೆ ಹಾರ್ಟಿಕಲ್ಚರ್ ಬಗ್ಗೆ ಎಲ್ಲವ್ವ ಮಲ್ಲವ್ವನಿಗೆ ಸಂಬಂಧ ಇದ್ದ ಹಾಗೆ. ಇವರು ಅನೇಕ ನೌಕರರೊಂದಿಗೆ ಒರಟು ಒರಟಾಗಿ ಮಾತನಾಡುತ್ತಾರೆ. ಇದು ನಿಜವಿದೆ. ಇದು ಅವರಿಗೆ ರೂಢಿಯಾಗಿದೆ. ಜೈಲಿನಲ್ಲಿ ಇದ್ದ ಖೈದಿಗಳನ್ನು ಬದಲಾವಣೆ ಮಾಡಿದ ಇವರು ತೋಟಗಾರಿಕೆ ಇಲಾಖೆಗೆ ಹೇಗೆ ಸರಿಹೋಗುತ್ತಾರೆ? ಇವತ್ತು ಪೋಲೀಸ್ ಅಧಿಕಾರಿಗಳನ್ನು ಪ್ರಾಥಮಿಕ ಶಿಕ್ಷಕರನ್ನಾಗಿ ಮಾಡಿದರೆ ಹೇಗೆ ನಡೆಯುತ್ತದೆ? ಇವರು ಜೈಲಿನಲ್ಲಿ ಉತ್ತಮ ಕೆಲಸಗಳನ್ನು ಮಾಡಿದ್ದಾರೆ. ಇವತ್ತು ನಿಮ್ಮಲ್ಲಿ ಎಷ್ಟೋ ಜನ ಐ.ಜಿ.ಪಿ.ಗಳು ಇದ್ದಾರೆ. ಇವರನ್ನೂ ಕೂಡ ಒಬ್ಬ ಐ.ಜಿ.ಪಿ. ಮಾಡಿ, ಹೇಗೋ ನಡೆದುಕೊಂಡು ಹೋಗುತ್ತದೆ. ಆದರೆ ತೋಟಗಾರಿಕೆಯಲ್ಲಿ ಯಾವ ಮನುಷ್ಯ ತಜ್ಞನಿರುತ್ತಾನೋ, ಯಾವ ಮನುಷ್ಯ ಬೆಳೆಯುವ ಉತ್ಪತ್ತಿ ಮಾಡುವ ಸಾಮರ್ಥ್ಯವನ್ನು ಪಡೆದುಕೊಂಡಿರುತ್ತಾನೋ ಅಂತಹವನನ್ನು ನೇಮಿಸಬೇಕು. ಒಮ್ಮೊಮ್ಮೆ ಐ.ಎ.ಎಸ್. ಅಧಿಕಾರಿಗಳನ್ನು ಹಾಕುತ್ತಾರೆ. ಇದರಿಂದ ಏನೂ ಪ್ರಯೋಜನವಾಗುವುದಿಲ್ಲ. ನಾನು ಮಂತ್ರಿಯಾಗಿದ್ದಾಗ ಹಾರ್ಟಿಕಲ್ಚರ್ ಡಿಪಾರ್ಟ್‌ಮೆಂಟಿನಲ್ಲಿ ಮರಿಗೌಡರ ಮೇಲೆ ಖಟ್ಲೆ ಹಾಕಬೇಕೆಂದು ಅನೇಕ ಪ್ರಕರಣಗಳನ್ನು ಕಳುಹಿಸಿದರು. ಆಗ ನಾನು ಬರೆದೆ ‘‘Marigowda does not know the language other than the language of trees and animals.’’ ಅದರ ಸಲುವಾಗಿ ಹಾಕಬಾರದೆಂದು ‘‘He is exonerated’’ ಎಂದು ನಾನು ಬರೆದೆ. ಆ ದೃಷ್ಟಿಯಿಂದ ಇವತ್ತು ವನ್ಯ ಮೃಗಗಳನ್ನು ಮಾತನಾಡಿಸತಕ್ಕ, ಸಸ್ಯಗಳೊಡನೆ ಮಾತನಾಡತಕ್ಕ ಮನುಷ್ಯ ಅಲ್ಲಿ ಬೇಕಾಗಿದೆ. ಇಲ್ಲದಿದ್ದರೆ ತೋಟಗಾರಿಕೆ ಸಮರ್ಪಕವಾಗಿ ನಡೆಯುವುದಿಲ್ಲವೆಂದು ಹೇಳಿ ಆ ಬಗ್ಗೆ ಹೆಚ್ಚು ಹೇಳುವುದಕ್ಕೆ ಹೋಗುವುದಿಲ್ಲ. ಇನ್ನು ಅಲ್ಲಿ ಇರತಕ್ಕವರಿಗೆ ಇನ್ನೂ ಪ್ರಮೋಷನ್ ಆಗಿಲ್ಲ. ಅವರಿಗೆ ಪ್ರಮೋಷನ್ ಮಾಡಬೇಕಾದರೆ ಇನ್ನೂ ಅಡಚಣೆಗಳನ್ನು ಮಾಡುತ್ತಿದ್ದಾರೆ. ಇವತ್ತು ಇಲಾಖೆಯಲ್ಲಿ ಯಾರು ಯಾರಿಗೆ ಪ್ರಮೋಷನ್ ಆಗಿಲ್ಲ ಆ ಬಗ್ಗೆ ತೋಟಗಾರಿಕೆ ಇಲಾಖೆಯ ತರುಣ ಮಂತ್ರಿಗಳು ನೋಡಿ ಕೆಲಸ ಮಾಡಬೇಕು. ಹಾಗೆ ಮಾಡಿದರೆ ತಾವು ಮಾಡತಕ್ಕಂತಹ ಕೆಲಸ ಬಹಳ ದಿವಸ ಉಳಿಯುತ್ತದೆ. ಮಂತ್ರಿ ಪದವಿ ಹೆಚ್ಚು ದಿವಸ ಉಳಿಯುವುದಿಲ್ಲ. ಆದ್ದರಿಂದ ಈ ಬಗ್ಗೆ ಒಳ್ಳೆಯ ಕೆಲಸ ಮಾಡುವ

ಬಗ್ಗೆ ದೇವರು ಅವರಿಗೆ ಶಕ್ತಿ ಕೊಡಲಿ ಎಂದು ಹೇಳಿ ಈ ಸಮಸ್ಯೆಯನ್ನು ಇಲ್ಲಿಗೇ ಬಿಡುತ್ತೇನೆ. ಇನ್ನು ಸಿದ್ಧರಾಮಯ್ಯನವರ ಪಶುಸಂಗೋಪನೆ ಇಲಾಖೆಯ ಬಗ್ಗೆ, ಅದರಲ್ಲೂ ವಿಶೇಷವಾಗಿ ಡೈರಿ ಬಗ್ಗೆ ಹೆಚ್ಚು ಹೇಳುವುದಕ್ಕೆ ಹೋಗುವುದಿಲ್ಲ. ಆದರೆ ಒಂದು ವಿಷಯ ಮಾತ್ರ ಹೇಳುತ್ತೇನೆ. ಅವರು ಬಂದಿರುವುದು ಕುರುಬರ ಸಮಾಜದಿಂದ. ಕುರುಬರ ಜೀವನ ಕುರಿಗಳಿಂದ. ಇವತ್ತಿನದಿವಸ ಇವುಗಳ ಬಗ್ಗೆ ಇಲಾಖೆ ಮಾಡಿದ್ದೀರಿ. ಆದರೆ ಇವತ್ತು ಕುರಿಗಳನ್ನು ಯಾರು ರಕ್ಷಣೆ ಮಾಡಬೇಕೆಂಬುದೇ ಸಮಸ್ಯೆಯಾಗಿದೆ. ಹಿಂದೆ ವ್ಯವಸಾಯಗಾರರು, ದೊಡ್ಡ ದೊಡ್ಡ ರೈತರು ಕುರಿಗಳಿಗಾಗಿ ಭೂಮಿಯನ್ನು ಬಿಡುತ್ತಿದ್ದರು. ಇವತ್ತು ದೊಡ್ಡ ರೈತರು ಯಾರೂ ಇಲ್ಲ. ಇವತ್ತು ಎಲ್ಲ ರೈತರನ್ನು ಸಣ್ಣ ರೈತರನ್ನಾಗಿ ಮಾಡಿ ಬಿಟ್ಟಿದ್ದೇವೆ. ಇಂತಹ ಸಮಯದಲ್ಲಿ ಕುರಿಗಳು ಎಲ್ಲಿ ಮೇಯಬೇಕು ? ಇವತ್ತು ಅವುಗಳು ಮೇಯುವುದಕ್ಕೆ ಬೇಕಾಗತಕ್ಕ ಯಾವುದೇ ಅರಣ್ಯವಾಗಲೀ ಭೂಮಿಯನ್ನಾಗಲೀ ಕಾದಿರಿಸಿಲ್ಲ. ಇದಕ್ಕಾಗಿ ಇವತ್ತು ಪ್ರಯತ್ನ ಮಾಡಿ. ಕುರಿಕಾರರು ಎಲ್ಲಿದ್ದಾರೋ ಅವರಿಗೆ ಬೇಕಾಗತಕ್ಕ ಒಂದು ಜಮೀನನ್ನು ಕಾಯ್ದಿರಿಸುವಬಗ್ಗೆ ಪ್ರಯತ್ನ ಮಾಡಿ. ಮತ್ತು ಅಜ್ಜೀ ಕಾಲದಿಂದ ಬಂದಂತಹ ಬನ್ನೂರು ಕುರಿಗಳೇ ಚಲೋ ಎಂದು ಹೇಳುವುದಕ್ಕಾಗುವುದಿಲ್ಲ. ಇವತ್ತು ನಾವು ಒಳ್ಳೆಯ ಉಣ್ಣೆಯನ್ನು ತಯಾರು ಮಾಡಬೇಕಾಗಿದೆ. ಇವತ್ತು ನಾವು ಏನು ಪರರಾಷ್ಟ್ರಗಳಿಂದ ಉಣ್ಣೆಯನ್ನು ಆಮದು ಮಾಡುತ್ತಿದ್ದೇವೆ ಅದು ನಾಚಿಕೆಗೇಡಿನ ವಿಷಯ. ಇಷ್ಟೆಲ್ಲಾ ಇದ್ದುಕೊಂಡು ನಾವು ಉತ್ತಮ ದರ್ಜೆಯ ಉಣ್ಣೆಯನ್ನು ಮಾಡಿಲ್ಲ ಎಂದರೆ ಸಮಂಜಸವಾಗುವುದಿಲ್ಲ. ತಾವು ಈ ಬಗ್ಗೆ ಪ್ರಯತ್ನ ಮಾಡಿ ಆಸ್ಟ್ರೇಲಿಯಾದಿಂದ ಕುರಿಗಳನ್ನು ತರಿಸಿ ಹಾಗೂ ಇತರ ದೇಶಗಳಿಂದ ಕುರಿಗಳನ್ನು ತರಿಸಿ ಒಳ್ಳೆಯ ಉಣ್ಣೆಯನ್ನು ಉತ್ಪಾದಿಸುವ ಕಾರ್ಯವನ್ನು ಮಾಡಿ. ವ್ಯವಸಾಯಗಾರರ ಖಾತೆ ಹೊತ್ತಿರತಕ್ಕ ಮಂತ್ರಿಗಳು ಪ್ರಯತ್ನ ಮಾಡಿ ಒಳ್ಳೆ ಟೆಕ್ಸ್‌ಟೈಲ್ ಮಿಲ್ಸ್ ಪಡೆಯುತ್ತಿದ್ದಾರೆ. ಆದರೆ ನಿಮಗೆ ಏನಾಗಿದೆ ಉಣ್ಣೆ ಮಿಲ್ ಪಡೆಯುವುದಕ್ಕೆ ? ಇವತ್ತು ೧೨-೧೫ ವರ್ಷಗಳ ಹಿಂದೆ ಒಂದು ಮಿಲ್ ರಾಣೆಬೆನ್ನೂರಿಗೆ ಸ್ಯಾಂಕ್ಷನ್ ಆಗಿ ಎನ್.ಸಿ.ಡಿ.ಸಿ. ಯಿಂದ ಹಣ ಬಂದಿದ್ದರೂ ಕೂಡಾ ಇದುವರೆವಿಗೂ ಆ ಮಿಲ್ ಪ್ರಾರಂಭ ಆಗಿಲ್ಲ. ಇದರಲ್ಲಿ ಯಾರದು ತಪ್ಪು ಎಂದು ಹೇಳುವುದಕ್ಕಾಗುವುದಿಲ್ಲ. ತಾವು ಈ ಖಾತೆಯನ್ನು ಪ್ರತಿನಿಧಿಸತಕ್ಕ ಮಂತ್ರಿಯಾಗಿರುವುದರಿಂದ ನಿಮ್ಮ ಮೇಲೆ ಹೊಣೆಯನ್ನು ಹೊರಿಸಬೇಕಾಗಿದೆ. ಇವತ್ತು ತಮ್ಮ ಡೈರಿ ಬಗ್ಗೆ ಹೇಳಬೇಕೆಂದರೆ ಅಲ್ಲಿ ಉತ್ತಮವಾದಂತಹ ಅಧಿಕಾರಿಗಳು ಇದ್ದಾರೆ. ಅಲ್ಲಿ ಸಮರ್ಪಕ ಕೆಲಸ ಆಗುತ್ತಿದ್ದರೂ ಒಮ್ಮೊಮ್ಮೆ ಡೈರಿಯಿಂದ ಬರುವ ಬೆಣ್ಣೆಯಲ್ಲಿ ಬಹಳ ಹೊಲಸು ವಾಸನೆ ಬರುತ್ತದೆ. ಅದರಲ್ಲಿ ಏನಾದರೂ ಸ್ವಲ್ಪ ಮಿಕ್ಸ್ ಮಾಡುತ್ತಾರೇನೋ ಎಂದೆನಿಸುತ್ತದೆ. ಬೇರೆ ಬೆಣ್ಣೆ ಕಾಸಿದರೆ ಏನಾಗುವುದಿಲ್ಲ. ಆದರೆ ಇದನ್ನು ಕಾಸಿದರೆ ಕೊನೆಯಲ್ಲಿ ಹಿಟ್ಟಿನ ಅಂಶ ಉಳಿಯುತ್ತದೆ. ಇದನ್ನೆಲ್ಲಾ ಸ್ವಲ್ಪ ಪರೀಕ್ಷೆ ಮಾಡಿ. ಇವತ್ತು ಅಲ್ಲಿ ಒಬ್ಬ ಸಣ್ಣ ನೌಕರ ತಪ್ಪು ಮಾಡಿದರೂ ಹೊಲಸು ಎಲ್ಲಾ ಕಡೆ ನಾರುತ್ತದೆ. ಅದು ನಾರದಹಾಗೆ ವ್ಯವಸ್ಥೆ ಮಾಡಬೇಕೆಂದು ನಾನು ನಿಮಗೆ ಕೇಳಿ ಈ ಡಿಪಾರ್ಟ್‌ಮೆಂಟನ್ನು ಇಷ್ಟಕ್ಕೇ ಬಿಡುತ್ತೇನೆ.

ಇನ್ನು ಮೀನುಗಾರಿಕೆ ಇಲಾಖೆ ಬಗ್ಗೆ ನಾನು ಮಾತನಾಡುವುದಕ್ಕೆ ಹೋಗುವುದಿಲ್ಲ. ಏಕೆಂದರೆ ಮೀನಿನ ಬಗ್ಗೆ ನನಗೇನೂ ಗೊತ್ತಿಲ್ಲ. ಅದರ ರುಚಿಯೂ ಗೊತ್ತಿಲ್ಲ.

ನಂತರ ಶ್ರೀಮಾನ್ ಜೀವರಾಜ್ ಆಳ್ವರವರ ಇಲಾಖೆಯ ಬಗ್ಗೆ ಒಂದು ಮಾತನ್ನು ಹೇಳುತ್ತೇನೆ. ಅದು ಏನೆಂದರೆ, ಯಾವುದೇ ಕೆಲಸ ಮಾಡಬೇಕಾಗಿದ್ದರೆ ಕೇವಲ ಪ್ರಚಾರಕ್ಕಾಗಿ ಯಾವುದೇ ಕೆಲಸವನ್ನು ಮಾಡಬೇಡಿ. ಅದು ಎಂದೂ ಉಳಿಯುವುದಿಲ್ಲ. ನೀವು ಮಾಡುವಂತಹ ಕೆಲಸ ಚಿರಸ್ಥಾಯಿಯಾಗಿ ಉಳಿಯುವಂತಹ ಕೆಲಸವನ್ನು ಮಾಡಿ. ಕನ್ನಡದ ಬಗ್ಗೆಯಾಗಲಿ, ದೇಶದ ಬಗ್ಗೆ ಅಭಿರುಚಿಯ ಬಗ್ಗೆಯಾಗಲಿ ಯುವಕರನ್ನು ಮುಂದೆ ತರುವುದಾಗಲಿ, ಇನ್ನಿತರೇ ಯಾವುದೇ ಕಾರ್ಯ ಕ್ರಮಗಳ ಬಗ್ಗೆಯಾಗಲೀ ಒಳ್ಳೆಯ ಕೆಲಸಗಳನ್ನು ಮಾಡಿ. ನಿಮ್ಮಲ್ಲಿರತಕ್ಕ ಅಭಿರುಚಿಗೆ ನನ್ನ ಮೆಚ್ಚುಗೆಯನ್ನು ವ್ಯಕ್ತಪಡಿಸುತ್ತೇನೆ. ಆದರೆ ಅದರ ಜೊತೆಗೆ ನಿಮ್ಮ ಕಾರ್ಯಕ್ರಮ ಹೇಗಿರಬೇಕು ಎಂದರೆ, ಇವತ್ತು ನೀವು ಮಂತ್ರಿಯಾಗಿರಬಹುದು ನಾಳೆ ಮಂತ್ರಿಯಾಗಿಲ್ಲದ ಸಮಯದಲ್ಲಿ ರಸ್ತೆಯಲ್ಲಿ ಹೋಗುವಾಗ ನೋಡಿದವರು, ಪುಣ್ಯಾತ್ಮ ಇಂತಹ ಕೆಲಸವನ್ನು ಮಾಡಿದರಪ್ಪ ಎಂದು ನಾಲ್ಕು ಜನ ಮೆಚ್ಚುವ ಕೆಲಸವನ್ನು ಮಾಡಿ ಎಂದು ಹೇಳುತ್ತೇನೆ ಶ್ರೀಮಾನ್ ಬಾಬು ರೆಡ್ಡಿಯವರು ಸಣ್ಣ ಪತ್ರಿಕೆಯ ಬಗ್ಗೆ ಬಹಳವಾಗಿ ಹೇಳಿದ್ದಾರೆ. ಅದು ಸಣ್ಣ ಪತ್ರಿಕೆಗಳಿಗಷ್ಟೇ ಅಲ್ಲ. ಕೆಲವು ದೊಡ್ಡ ದೊಡ್ಡ ಪತ್ರಿಕೆಗಳಿಗೂ ಅದೇ ಪರಿಸ್ಥಿತಿ ಇದೆ. ಅದಕ್ಕಾಗಿ ಕಾವಲು ಸಮಿತಿಯೊಂದನ್ನು ಬೇರೆ ಮಾಡಿದ್ದೀರಿ. ಅವರು

ನಿಮ್ಮನ್ನು ಅಡ್ಡದಾರಿಗೆ ಹಿಡಿಸಿದ್ದಾರೆ. ನಿಮ್ಮ ಮಂತ್ರಿ ಪದವಿ ಉಳಿಯಬೇಕಾದರೂ ಅವರು ಹೇಳಿದ ಕೆಲಸವನ್ನೂ ಮಾಡಬೇಕಾಗುತ್ತದೆ. ಮೊನ್ನೆ ದಿವಸ ರೆಟ್ರಾಸ್ಪೆಕ್ಟಿವ್ ಎಫೆಕ್ಟ್‌ನಿಂದ ೭-೮ ಲಕ್ಷ ರೂಪಾಯಿಗಳ ಜಾಹಿರಾತನ್ನು ಕೊಟ್ಟಿದ್ದಾರೆ ಅಷ್ಟೊಂದು ದುಬಾರಿಯ ಜಾಹಿರಾತನ್ನು ಕೊಟ್ಟಿದ್ದಾರೆ. ಅದು ನಿಮಗೆ ಗೊತ್ತಿಲ್ಲದೆ ಮಾಡಿದ್ದಾರೋ, ಗೊತ್ತಿದ್ದು ಮಾಡಿದ್ದಾರೋ ನನಗೇ ಗೊತ್ತಿಲ್ಲ. ಅಂತಹ ಕೆಲಸವನ್ನು ಇನ್ನು ಮುಂದಾದರೂ ಮಾಡುವುದಕ್ಕೆ ಹೋಗಬೇಡಿ. ಶ್ರೀಮಾನ್‌ಬಾಬು ರೆಡ್ಡಿಯವರು ಮಾತನಾಡುವಾಗ ಬಾಟ್ಲಿ ಕೊಟ್ಟರೆ, ಅದು ಕೊಟ್ಟರೆ, ಇದು ಕೊಟ್ಟರೆ ಎಂಬುದಾಗಿ ಮಾತನಾಡಿದರು. ಅದೆಲ್ಲಾ ನನಗೆ ಗೊತ್ತಿಲ್ಲ. ಇದನ್ನು ಸರಿಪಡಿಸಿ ಎಂದು ಇಷ್ಟು ಮಾತ್ರ ಹೇಳಿ ನಿಮ್ಮ ಇಲಾಖೆಯನ್ನು ಅಷ್ಟಕ್ಕೇ ನಾನು ಕೈಬಿಟ್ಟುಬಿಡುತ್ತೇನೆ.

ಇನ್ನು ಪ್ರಾಮುಖ್ಯವಾದುದು ವ್ಯವಸಾಯ ಇಲಾಖೆ. ವ್ಯವಸಾಯ ಇಲಾಖೆಯ ಬಗ್ಗೆ ನಾನು ಮಾತನಾಡಬೇಕಾಗಿದೆ. ವ್ಯವಸಾಯ ಇಲಾಖೆ ಮನುಷ್ಯನ ಜೀವನಕ್ಕೆ ಒಂದು ಉತ್ತಮವಾದ ಅಡಿಗಲ್ಲು. ಮಹಾತ್ಮಾ ಗಾಂಧೀಜಿಯವರ ಮಾತಿನಲ್ಲಿ ಹೇಳುವುದಾದರೆ, ಇಡೀ ಹಿಂದೂಸ್ಥಾನದಲ್ಲಿ ೭ ಲಕ್ಷ ಹಳ್ಳಿಗಳಲ್ಲಿ ಅರ್ಧ ಹೊಟ್ಟೆ ಉಂಡು, ಅರ್ಧ ಅರಿವೆಗಳನ್ನು ತೊಟ್ಟಿರುವಂತಹ ಜನ ಅರ್ಧದಷ್ಟು ಇದ್ದಾರೆ. ಅವರ ಉದ್ಧಾರವಾಗದೇ ಭಾರತ ಉದ್ಧಾರವಾಗುವುದಿಲ್ಲವೆಂದು ಹೇಳಿದ್ದಾರೆ. ಆದ್ದರಿಂದ ವ್ಯವಸಾಯ ಇಲಾಖೆಯ ಪ್ರಾಧಾನ್ಯತೆಯನ್ನು ಕೊಡಬೇಕೆಂದು ಎಲ್ಲರೂ ಹೇಳುತ್ತಲೇ ಬಂದಿದ್ದೇವೆ. ಆದರೆ ಅದರಂತೆ ಕಾರ್ಯಾಚರಣೆಗೆ ತರಲಿಲ್ಲ. ಮೂಲಭೂತವಾಗಿ ಸಂಶೋಧನೆಯಾಗಬೇಕು. ಮೊದಲನೆಯದಾಗಿ ವ್ಯವಸಾಯ ಇಲಾಖೆಗೆ ಬಹಳಷ್ಟು ಮಹತ್ವವನ್ನು ಕೊಟ್ಟಿಲ್ಲ. ಈ ಸದನದಲ್ಲೂ ಕೊಟ್ಟಿಲ್ಲ. ಸರ್ಕಾರದವರು ಕೊಟ್ಟಿಲ್ಲ. ಮಾನ್ಯ ರಾಮಕೃಷ್ಣ ಹೆಗಡೆಯವರು ಬಹಳ ಬುದ್ಧಿವಂತರು. ವ್ಯವಸಾಯ ಇಲಾಖೆಯೊಳಗೆ ಪಶುಸಂಗೋಪನಾ ಇಲಾಖೆ ಬರುತ್ತದೆ, ತೋಟಗಾರಿಕಾ ಇಲಾಖೆಯೂ ಬರುತ್ತದೆ. ಅರಣ್ಯ ಇಲಾಖೆಯೂ ಬರುತ್ತದೆ. ಮೀನುಗಾರಿಕೆ ಇಲಾಖೆಯನ್ನೂ ಸಹ ಕೂಡಿಸಬಹುದು. ಆಹಾರ ಇಲಾಖೆ ಕೂಡ ಇದರಲ್ಲೇ ಬರುತ್ತದೆ. ಆದಕ್ಕೆಲ್ಲಾ ವ್ಯವಸಾಯ ಇಲಾಖೆ ಪ್ರಾಧಾನ್ಯವಾಗಿರಬೇಕು. ಆದರೆ ದುರ್ದೈವದಿಂದ ವ್ಯವಸಾಯ ಇಲಾಖಾ ಸಚಿವರನ್ನೂ ಸಹಿತ ಸಚಿವ ಸಂಪುಟದ ಸಚಿವರನ್ನಾಗಿ ಮಾಡಿಲ್ಲ ಈ ಸರ್ಕಾರದಲ್ಲಿ. ಹೀಗಿರುವುದರಿಂದ ಜನರಿಗೆ ಏನು ಅನ್ನಿಸಿದೆ ಎಂದರೆ, ಈ ಸರ್ಕಾರದವರಿಗೆ ವ್ಯವಸಾಯ ಇಲಾಖೆಯ ಬಗ್ಗೆ ಜಿಗುಪ್ಸೆಯನ್ನು ತಾಳಿದ್ದಾರೋ ಹೇಗೋ? ವ್ಯವಸಾಯ ಇಲಾಖೆಯ ಬಗ್ಗೆ ಇವರಿಗೆ ಮನಸ್ಸು ಇದೆಯೋ ಇಲ್ಲಯೋ ಎನ್ನುವ ಮಾತು ಬರುತ್ತಿದೆ. ವ್ಯವಸಾಯ ಖಾತೆಯ ಸಚಿವರು ಯಾರೇ ಇರಲಿ, ವ್ಯವಸಾಯ ಖಾತೆಯ ಸಚಿವರು ಸಚಿವ ಸಂಪುಟದ ಸಚಿವರಾಗಿರಬೇಕು, ಶ್ರೀಮಾನ್ ಪ್ರಕಾಶ್‌ರವರಿಗೆ ಅರ್ಹತೆ ಇಲ್ಲದಿದ್ದರೆ ಮತ್ತೊಬ್ಬರನ್ನು ಮಾಡಿ. ಸಚಿವ ಸಂಪುಟದ ಸಚಿವರೊಬ್ಬರಿಗೆ ವ್ಯವಸಾಯ ಇಲಾಖೆಯನ್ನು ಕೊಡಬೇಕು. ವ್ಯವಸಾಯ ಖಾತೆಯ ಸಚಿವರನ್ನು ಸಚಿವ ಸಂಪುಟದ ಸಚಿವರನ್ನಾಗಿ ಮಾಡಲೇಬೇಕು. ಇದು ಕಡ್ಡಾಯವಾದ ನಿಯಮ ಕೂಡ ಹೌದು. ಯಾವುದೇ ಸರ್ಕಾರ ಬಂದರೂ ಅದನ್ನು ಅನುಸರಿಸಬೇಕು. ಕೇಂದ್ರ ಸರ್ಕಾರವಾಗಲೀ ಅಥವಾ ರಾಜ್ಯ ಸರ್ಕಾರವಾಗಲೀ ಅದನ್ನು ಅನುಸರಿಸದಿದ್ದರೆ ನಿಜವಾಗಿಯೂ ರೈತಾಪಿ ಜನಾಂಗಕ್ಕೆ ಕಲ್ಯಾಣವಾಗುವುದಿಲ್ಲ. ಅವರು ಇಲ್ಲದಿದ್ದರೆ ರೈತರ ಕಲ್ಯಾಣವಾಗುವುದಿಲ್ಲವೇ ಎಂದು ಅವರು ನನ್ನನ್ನು ಕೇಳಬಹುದು. ಹೇಗೆ ಕಲ್ಯಾಣವಾಗುವುದಿಲ್ಲವೆಂಬುದನ್ನು ನಾನು ನಂತರ ಹೇಳುತ್ತೇನೆ. ಆದರೆ ಪ್ರಮುಖವಾಗಿ ನಮ್ಮ ವ್ಯವಸಾಯ ಇಲಾಖೆಯಲ್ಲಿ ೪ ವಿಭಾಗಗಳನ್ನಾಗಿ ಮಾಡಬಹುದು. (೧) ಸಂಶೋಧನಾ ವಿಭಾಗ, (೨) ಶಿಕ್ಷಣ ವಿಭಾಗ (೩) ವಿಕಾಸ ಯೋಜನೆ ವಿಭಾಗ. ಮತ್ತು (೪) ಆಡಳಿತ ವಿಭಾಗ. ಈ ನಾಲ್ಕರಲ್ಲಿ ಯಾವುದರಲ್ಲಿ ಪ್ರಾಬಲ್ಯತೆಯನ್ನು ಪಡೆದಿದ್ದೇವೆ ? ಇವತ್ತು ಜನತಾ ಪಕ್ಷ ಅಲ್ಲಿ ಕುಳಿತಿರುವುದರಿಂದ ಅವರನ್ನು ಟೀಕೆ ಮಾಡಬೇಕೆಂಬ ಉದ್ದೇಶದಿಂದ ನಾನು ಹೇಳುತ್ತಿಲ್ಲ. ಅಥವಾ ನಾನು ಇದ್ದಾಗ ಮಹಾ ಸಾಧನೆಯನ್ನು ಸಾಧಿಸಿಬಿಟ್ಟಿದ್ದೇನೆಂದು ಹೇಳುವುದಕ್ಕೂ ಆಸೆ ಪಡುವುದಿಲ್ಲ. ನಿಜವಾಗಿಯೂ ಇದರಲ್ಲಿ ಎಷ್ಟೇ ಪ್ರಯತ್ನ ಮಾಡಿದರೂ ಸಹ ಮುಗಿಯಲಾರದ ಕಾರ್ಯಕ್ರಮ ಇದು. ಇವತ್ತು ರೈತರ ಸಮಸ್ಯೆಗಳು ಬೃಹದಾಕಾರವಾಗಿ ಬೆಳೆಯುತ್ತಾ ಇವೆ. ಇವತ್ತು ಯಾರಾದರೂ ರೈತರ ಸಮಸ್ಯೆಗಳನ್ನು ಬಗೆ ಹರಿಸಿಬಿಡುತ್ತೇವೆಂದು ಹೇಳಿದರೆ ಅದು ಮೂರ್ಖತನದ ಮಾತಾದೀತು. ಸಾಲವನ್ನು ಸೂಟಿ ಬಿಟ್ಟರೆ ರೈತರ ಸಮಸ್ಯೆ ಬಗೆಹರಿಯುತ್ತದೆಂದು ಕೆಲವರು ಹೇಳಿದರು. ರೈತರ ಸಾಲವನ್ನು ಸೂಟಿ ಬಿಟ್ಟರೆ ರೈತರ ಸಮಸ್ಯೆ ಬಗ್ಗೆ ಹರಿಯುವುದಿಲ್ಲ. ರೈತರ ಸಾಲವನ್ನು ಸೂಟಿ

ಬಿಟ್ಟಿದ್ದಾಯಿತು. ಆದರೆ ಮುಂದೆ ಕೊಡುವುದು? ನಾಳೆ ಮುಂಜಾನೆ ಪುನಃ ಬೇಕಲ್ಲ, ಅವರಿಗೆ. ಅದಕ್ಕೇನು ಮಾಡುತ್ತೀರಿ? ನಾಳೆ ಅವರಿಗೆ ಸಾಲವನ್ನು ಕೊಡುವುದಿಲ್ಲವೆಂದರೆ ಅವರ ಜೀವನಕ್ಕೇ ಕಷ್ಟವಾಗುತ್ತದೆ. ರೈತರ ಸಮಸ್ಯೆ ಅಷ್ಟೊಂದು ಬೃಹದಾಕಾರವಾಗಿದೆ ಅದನ್ನು ಸಾಧ್ಯವಾದ ಮಟ್ಟಿಗೂ ಪ್ರಾಮಾಣಿಕ ರೀತಿಯಲ್ಲಿ ಬಗೆಹರಿಸುವುದು ನಮ್ಮ ನಿಮ್ಮ ಎಲ್ಲರ ಕರ್ತವ್ಯವಾಗಿದೆ. ಸಂಶೋಧನೆಯ ಬಗ್ಗೆ ನಮ್ಮ ರಾಜ್ಯ ಸರ್ಕಾರ ಏನು ಮಾಡಿದೆ ಎಂಬುದನ್ನು ನೋಡುವುದಾದರೆ, ನಿಜವಾಗಿಯೂ ತಲೆ ತಗ್ಗಿಸಬೇಕಾಗಿದೆ. ಇದಕ್ಕೆ ಶ್ರೀಮಾನ್ ಪ್ರಕಾಶ್‌ರವರು ಮತ್ತು ಶ್ರೀಮಾನ್ ರಾಮಕೃಷ್ಣ ಹೆಗಡೆಯವರ ಮಂತ್ರಿ ಮಂಡಲವೇ ಸಂಪೂರ್ಣವಾದ ಹೊಣೆಗಾರರಲ್ಲ. ಆದರೆ ಅವರೂ ಇದ್ದಾರೆ. ಆದರೆ ಸಂಪೂರ್ಣವಾಗಿ ಅವರನ್ನೇ ಹೊಣೆಗಾರರನ್ನಾಗಿ ಮಾಡುವುದಿಲ್ಲ ನಡೆದು ಬಂದ ದಾರಿ, ಹೋಗುವ ಮಾರ್ಗ ನೋಡುವುದಾದರೆ, ಸಂಶೋಧನಾ ವಿಚಾರದಲ್ಲಿ ಬಹಳ ಕಡಿಮೆ ಪ್ರಮಾಣದಲ್ಲಿ ಹಣವನ್ನು ಖರ್ಚು ಮಾಡುತ್ತಿದ್ದೇವೆ. ಕಡಿಮೆ ಕ್ಷೇತ್ರದಲ್ಲಿ ಕೆಲಸ ಮಾಡಿದ್ದಾರೆ. ಐ.ಸಿ.ಆರ್. ಅಂತಹ ಅನೇಕ ವಿಭಾಗಗಳು ಬಂದಿವೆ. ಹೆಸರಘಟ್ಟದಲ್ಲಿ ಚೈನಿ ಫಾರಂ ಅಂತ ಒಂದು ಇದೆ. ಡೈರಿ ಬಗ್ಗೆ ಸಾಕಷ್ಟು ಕೆಲಸವನ್ನು ಮಾಡಿದ್ದಾರೆ. ಇಷ್ಟೆಲ್ಲಾ ಮಾಡಿದ ಮೇಲೆ ನಮ್ಮ ಕೆಲಸ ಮುಗಿಯಿತು ಎಂದು ಅರ್ಥವಲ್ಲ. ಪ್ರತಿಯೊಂದು ಮಾರ್ಗದಲ್ಲೂ ರೈತನಿಗೆ ಮಾರ್ಗದರ್ಶನವನ್ನು ನೀಡಬೇಕಾಗಿದೆ. ಕಛೇರಿಯಲ್ಲಿ ಕುಳಿತು ಸುತ್ತೋಲೆಯನ್ನು ಹೊರಡಿಸುವುದರಿಂದ, ಅಥವಾ ಬುಲೆಟಿನ್ ಹೊರಡಿಸುವುದರಿಂದ ರೈತರ ಸಮಸ್ಯೆ ಬಗೆಹರಿಯುವುದಿಲ್ಲ. ರೈತರ ಸಮಸ್ಯೆ ಬಗೆಹರಿಯಬೇಕಾದರೆ ಮೊಟ್ಟಮೊದಲ ಬಾರಿಗೆ ಮಾಡಬೇಕಾದುದು ಭೂಮಿಯ ಪರೀಕ್ಷೆ. ಭೂಮಿಯಲ್ಲಿರತಕ್ಕ ಗುಣಗಳೇನು ? ಯಾವ ಭೂಮಿಯಲ್ಲಿ ಯಾವುದನ್ನು ಬೆಳೆಯಬೇಕು ? ಯಾವ ಭೂಮಿಯಲ್ಲಿ ಯಾವುದನ್ನು ಬೆಳೆಯಬಾರದು ಎಷ್ಟರಮಟ್ಟಿಗೆ ಬೆಳೆಯಬೇಕು? ಯಾವ ಸಮಯದಲ್ಲಿ ಬೆಳೆಯಬೇಕು? ಎಂಬ ವಿಜ್ಞಾನವನ್ನು ಅವರಿಗೆ ಕೊಡಬೇಕು. ಅದಕ್ಕನುಸಾರವಾಗಿ ಪ್ರತಿಯೊಂದು ಎಕರೆಯ ಮಣ್ಣನ್ನೂ ಸಹ ನಾವು ಸಾಯಿಲ್ ಟೆಸ್ಟಿಗೆ ಒಳಪಡಿಸಬೇಕು. ನಾನು ಇದ್ದಾಗ ಆ ಬಗ್ಗೆ ಪ್ರಯತ್ನ ಮಾಡಿದ್ದ. ಇದಕ್ಕಾಗಿ ಮೂವಿಂಗ್ ವ್ಯಾನ್ ಅನ್ನು ಮಾಡಿ, ಅದರಲ್ಲಿ ಪ್ರತಿಯೊಂದು ಎಕರೆ ಭೂಮಿಯ ಸಾಯಿಲ್ ಟೆಸ್ಟ್ ಆಗಬೇಕೆಂದು ಮಾಡಿದ್ದೆ. ಅದು ಹೆಸರಿಗೆ ಮಾತ್ರ ಇದೆ. ಮೂವಿಂಗ್ ವ್ಯಾನ್ ಉಂಟು. ಆದರೆ ನಿಜವಾಗಿಯೂ ಕೆಲಸ ಏನು ಆಗಿದೆ ಎಷ್ಟು ಜನರು ಇದನ್ನು ಉಪಯೋಗ ಮಾಡಿಕೊಂಡು ಸಾಯಿಲ್‌ನ್ನು ಟೆಸ್ಟ್ ಮಾಡಿಸಿದ್ದಾರೆ? ಎಷ್ಟು ಜನ ನೀವು ಕೊಟ್ಟಂತಹ ಸಾಯಿಲ್ ಟೆಸ್ಟ್‌ನ ವರದಿಯನ್ನು ಅನುಸರಿಸಿ ರಾಸಾಯನಿಕ ಗೊಬ್ಬರವನ್ನು ಉಪಯೋಗಿಸಿದ್ದಾರೆ? ಪೆಸ್ಟಿಸೈಡ್ಸ್‌ನ್ನು ಉಪಯೋಗ ಮಾಡಿದ್ದಾರೆ ಅದರಿಂದ ಏನು ಪರಿಣಾಮವಾಗಿದೆ ಎಂಬುದನ್ನು ನೋಡಿದರೆ ಬಹಳ ದುಃಖವಾಗುತ್ತದೆ. ಇನ್ನು ನಮ್ಮ ಕರ್ನಾಟಕದಲ್ಲಿ ಸರಿಯಾದ ಮಳೆ ಮಾಪನ ಯಂತ್ರ ಇಲ್ಲ. ಇರುವುದರಲ್ಲಿಯೇ ಅಲ್ಲೊಂದು ಇಲ್ಲೊಂದು ಮಾಹಿತಿಯನ್ನು ಕಲೆಕ್ಟ್ ಮಾಡುತ್ತಿದ್ದೇವೆ. ಒಂದು ಕಡೆ ಒಂದು ರೀತಿಯ ಮಾಹಿತಿ ಬಂದರೆ, ಇನ್ನೊಂದು ಕಡೆಯಿಂದ ಮತ್ತೊಂದು ರೀತಿಯ ಮಾಹಿತಿ ಬರುತ್ತದೆ. ಕಂದಾಯ ಇಲಾಖೆಯ ವಶದಲ್ಲಿರತಕ್ಕ ಈ ಮಳೆ ಮಾಪನ ಯಂತ್ರವನ್ನು ಕಸಿದು ವ್ಯವಸಾಯ ಮಂತ್ರಿಗಳ ಕೈಕೆಳಗೆ ಅದನ್ನು ಕೊಡಬೇಕೆಂದು ನಾನು ಇವತ್ತಿನ ದಿವಸ ಒತ್ತಾಯ ಮಾಡುವುದಕ್ಕೆ ಇಷ್ಟಪಡುತ್ತೇನೆ. ನನ್ನ ಸಲಹೆ ಏನೆಂದರೆ, ವ್ಯವಸಾಯ ಇಲಾಖೆಯಲ್ಲಿ ಎಷ್ಟು ಅಧಿಕಾರಿಗಳು ಇದ್ದಾರೋ ಅವರೆಲ್ಲರ ಸಭೆಯನ್ನು ಶ್ರೀಮಾನ್ ಪ್ರಕಾಶ್‌ರವರು ಕರೆಯಬೇಕು. ಅಗ್ರಿಕಲ್ಚರಲ್ ಕಮೀಷನ್‌ರವರು ಒಂದು ವರದಿಯನ್ನು ಕೊಟ್ಟಿದ್ದಾರೆ. ಅದು ೧೫ ವಾಲ್ಯೂಂಗಳನ್ನು ಒಳಗೊಂಡಿದೆ. ಆ ಒಂದು ವರದಿಯನ್ನು ನಮ್ಮ ರಾಜ್ಯದ ಹಿರಿಯರು ವ್ಯವಸಾಯ ತಜ್ಞರೂ ಇಡೀ ಜಗತ್ತಿಗೇ ಪ್ರಸಿದ್ಧರೂ ಆದ ಡಾ॥ಅರಕೇರಿಯವರು ಅದರ ಸದಸ್ಯರಾಗಿದ್ದರು. ಅವರ ಒಂದು ವರದಿ ವ್ಯವಸಾಯ ಇಲಾಖೆಗೆ, ವ್ಯವಸಾಯಗಾರರಿಗೆ ಹಾಗೂ ಮಂತ್ರಿಗಳಿಗೆ ಒಂದು ಭಗವದ್ಗೀತೆ ಇದ್ದ ಹಾಗೆ ಅಂತ ಹೇಳಿದರೆ ಅಡ್ಡಿಯಿಲ್ಲ, ಎನ್ನುವ ಮಾತನ್ನು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಷ್ಟಪಡುತ್ತೇನೆ ೧೨-೨-೧೯೭೬ರಲ್ಲಿ ಲೋಕಸಭೆಗೆ ಆ ಒಂದು ವರದಿಯನ್ನು ಸಲ್ಲಿಸಿದರು. ಆದಾದ ನಂತರ ಒಂದೊಂದೇ ಜಾರಿಗೆ ಬರುತ್ತಾ ಇವೆ. ಯಾವುದೇ ತೆಗೆದುಕೊಳ್ಳಿ. ಆರ್.ಎಲ್.ಇ.ಜಿ.ಪಿ. ಡಿ.ಪಿ.ಎ.ಪಿ. ಇನ್ನಿತರೆ ಕಾರ್ಯಕ್ರಮಗಳೆಲ್ಲಾ ಜಾರಿಗೆ ಬಂದುದ್ದು ಆ ಒಂದು ವರದಿಯ ಆಧಾರದ ಮೇಲೆ. ಆ ಒಂದು ವರದಿಯನ್ನು ನಾನು ಅಭ್ಯಾಸ ಮಾಡಿದ್ದೇನೆ. ಅದರಲ್ಲಿ ಪ್ರಾರಂಭದಿಂದ ಕೊನೆಯವರೆಗೂ ಕೃಷಿಕರ ಅಭಿವೃದ್ಧಿಯ ಬಗ್ಗೆ ಉಲ್ಲೇಖ ಇದೆ. ಇದರ ಪ್ರತಿಯೊಂದು ವಾಲ್ಯೂಂ ಅನ್ನು ಪ್ರತಿಯೊಬ್ಬ ಅಧಿಕಾರಿಗಳಿಗೂ ಹಂಚಬೇಕು.

ಅಷ್ಟು ಕಾಪಿಗಳು ಇಲ್ಲದಿದ್ದರೆ ಮತ್ತೊಮ್ಮೆ ಅದನ್ನು ಪ್ರಿಂಟ್ ಮಾಡಿಸಿ ಹಂಚಿ. ಮಂತ್ರಿಗಳೂ ಕೂಡ ಹೆಚ್ಚು ಭಾಷಣ ಮಾಡುವುದಕ್ಕಿಂತ ಅದನ್ನು ಚೆನ್ನಾಗಿ ಅಭ್ಯಾಸ ಮಾಡುವುದು ಲೇಸು. ಅದರಲ್ಲಿ ವ್ಯವಸಾಯ ಬಗ್ಗೆ ಯಾವ ರೀತಿಯ ತಾಂತ್ರಿಕತೆಯನ್ನು ಉಪಯೋಗ ಮಾಡಬೇಕೆಂಬುದರ ಬಗ್ಗೆ ವ್ಯಾಖ್ಯಾನ ಮಾಡಿದ್ದಾರೆ. ಶ್ರೀಮಾನ್ ಜೀವರಾಜ ಆಳ್ವರವರು ಕಾಣೆಯವರಿಗೆಲ್ಲ ಇನಾಮು ಕೊಡುತ್ತಿದ್ದಾರೆ. ಆದರೆ ವ್ಯವಸಾಯ ಇಲಾಖೆಯಲ್ಲಿ ಏನು ಮಾಡಿದ್ದೀರಿ? ಯಾರು ಈ ದೇಶದ ಬೆನ್ನೆಲುಬು ಎಂದು ಹೇಳುತ್ತೇವೆಯೋ ಅಂತಹವರನ್ನು ಗುರುತಿಸಿ ಅವರಿಗೆ ಯಾವುದೇ ರೀತಿಯ ಬಹುಮಾನವನ್ನು ಕೊಡುವಂತಹ ಕೆಲಸವನ್ನಾದರೂ ಮಾಡಲಿಲ್ಲ. ಅಂತಹವರಿಗೆ ಸರ್ಕಾರದಲ್ಲಿ ಮನ್ನಣೆಯನ್ನೂ ಸಹ ಕೊಟ್ಟಿಲ್ಲ. ಕೃಷಿಯ ಬಗ್ಗೆ ಪ್ರಾವೀಣ್ಯತೆಯನ್ನು ಪಡೆದು ತಜ್ಞರೆನಿಸಿಕೊಂಡಂತಹ ಡಾ॥ ಅರಕೇರಿಯಂತಹವರನ್ನು ಗುರುತಿಸುವ ಕೆಲಸವನ್ನಾದರೂ ಮಾಡಲಿಲ್ಲ. ಅದೇ ಹಿಂದೆ ನಾವು ಅಧಿಕಾರದಲ್ಲಿದ್ದಾಗ ಅವರನ್ನು ಗುರುತಿಸಿ ಕೃಷಿ ವಿಶ್ವ ವಿದ್ಯಾಲಯದ ಉಪಕುಲಪತಿಗಳನ್ನಾಗಿ ಮಾಡಿದ್ದೆವು.

ನಿಮ್ಮ ಸರ್ಕಾರ ಇದ್ದಾಗ ಏತಕ್ಕೆ ಕೊಡಬಾರದಾಗಿತ್ತು ಎಂದು ನೀವು ಕೇಳಬಹುದು. ನಮ್ಮ ಸರ್ಕಾರ ಇದ್ದಾಗ ಇಂತಿಷ್ಟು ಕೊಡಬೇಕೆಂದು ಇತ್ತು. ನಮ್ಮ ಸರ್ಕಾರವಿರಲಿ, ನಿಮ್ಮ ಸರ್ಕಾರವಿರಲಿ ಅಗ್ರಿಕಲ್ಚರ್ ಯೂನಿವರ್ಸಿಟಿ ರೆಕ್‌ಮೆಂಡೇಷನ್ ಮಾಡುವಷ್ಟು ಸೌಜನ್ಯ ಇರಲಿಲ್ಲವೆಂದರೆ ಅದು ನಮ್ಮ ಕರ್ನಾಟಕದ ದುರ್ದೈವ. ಈ ದೃಷ್ಟಿಯಿಂದ ಶ್ರೀಮಾನ್ ಆಳ್ವರವರು ಈಗಲೂ ಸಹ ಯೋಚನೆ ಮಾಡಬೇಕು ೧೫ ಮಂದಿ ಕಾಣೆಯವರಿಗೆ ಕೊಟ್ಟರೆ ಇವರಲ್ಲಿ ಒಬ್ಬರಿಗಾದರೂ ಅವಾರ್ಡ್ ಕೊಡುವಂಥ ಒಂದು ಸರಿಯಾದ ವ್ಯವಸ್ಥೆಯನ್ನು ಮಾಡಿದರೆ ಒಳ್ಳೆಯದೆಂದು ಹೇಳಲಿಕ್ಕೆ ಇಚ್ಛೆ ಪಡುತ್ತೇನೆ. ಅನೇಕ ಕಡೆ ಸುಧಾರಿತ ಯೋಜನೆಗಳು ಬಂದಿರುತ್ತವೆ. ಟ್ರಾಕ್ಟರುಗಳು, ಬುಲ್ಡೋಜರುಗಳು ಬಂದಿರುತ್ತದೆ. ಈ ಟ್ರಾಕ್ಟರುಗಳು ಎಲ್ಲ ಹಳ್ಳಿಗಳಲ್ಲಿಯೂ ಇದೆಯೋ ಎಂದು ಸೂಕ್ಷ್ಮವಾಗಿ ಪರಿಶೀಲನೆ ಮಾಡಬೇಕು. ಏತಕ್ಕೆಂದರೆ ಇವುಗಳನ್ನು ಪಿ. ಡಬ್ಲ್ಯು. ಡಿ. ಕಂಟ್ರಾಕ್ಟರ್‌ಗಳಿಗೆ ಮಾತ್ರ ಕೊಡಲಿಕ್ಕೆ ಉಪಯೋಗ ಮಾಡುತ್ತಿದ್ದಾರೆ. ನೀವು ಇಷ್ಟೊಂದು ಹಣವನ್ನು ಕೊಟ್ಟರೂ ಸಹಿತ ಏತಕ್ಕೆ ಉಪಯೋಗವಾಗುತ್ತಿಲ್ಲವೆಂದರೆ ಯಾವುದಕ್ಕೆ ಕೊಟ್ಟರೆ ಉಪಯೋಗವಾಗುತ್ತದೆ ಎಂದು ತಿಳಿದುಕೊಳ್ಳುವ ಸೌಜನ್ಯವಿಲ್ಲ, ಹಾಗೂ ವಿಚಾರ ಮಾಡತಕ್ಕಂಥ ಶಕ್ತಿಯೂ ಇಲ್ಲ. ಯಾವುದು ಅವಶ್ಯಕತೆ ಇದೆ ಅದಕ್ಕೆ ಕೊಡುವುದಿಲ್ಲ, ಅವಶ್ಯಕತೆ ಇಲ್ಲದುದಕ್ಕೆ ಕೊಡುತ್ತಿರುತ್ತೀರಿ. ಈರೀತಿ ದುರುಪಯೋಗವಾಗುತ್ತಿದೆ. ಎಲ್ಲಿ ಕೂಲಿಕಾರರ ಅಭಾವ ಇರುವುದಿಲ್ಲ ಅಲ್ಲಿಗೆ ಟ್ರಾಕ್ಟರ್‌ಗಳನ್ನು ಕೊಡುವುದರಿಂದ ಯಾವ ಪ್ರಯೋಜನವಿಲ್ಲ. ಎಲ್ಲಿ ಕೂಲಿಕಾರರ ಅಬಾವವಿರುತ್ತದೆ ಅಲ್ಲಿ ಟ್ರಾಕ್ಟರು, ಬುಲ್ಡೋಜರು ಇವುಗಳನ್ನು ಕೊಟ್ಟು ಪುರಸ್ಕಾರಕೊಡಬೇಕು. ಮಾನ್ಯ ಪ್ರಕಾಶ್‌ರವರು ಬೇಕಾದರೆ ವರದಿಯನ್ನು ತರಿಸಿ ನೋಡಲಿ. ಅವರಿಗೆ ನಾನು ಹಿಂದೆ ಸಲಹೆ ಮಾಡಿದ್ದೆ. ಮಲಪ್ರಭಾ ಆಗಲಿ, ಘಟಪ್ರಭಾ ಆಗಲಿ, ಕೃಷ್ಣಾ ಮೇಲ್ದಂಡೆಗಾಗಲಿ, ಅಲ್ಲಿ ತಾವು ಕಾಡ ಅಂತ ಮಾಡಿದ್ದೀರಿ ಈ ಕಾಡ ಮುಖಾಂತರವಾಗಿ ಜಮೀನುಗಳನ್ನು ಸುಧಾರಣೆ ಮಾಡುವಂಥ ಯೋಜನೆ ಇದೆ ಈ ಜಮೀನುಗಳನ್ನು ಸಮಗ್ರವಾಗಿ ಬದಲಾವಣೆ ಮಾಡುವಂಥ ರೀತಿಯಲ್ಲಿ ಜಾರಿಗೆ ತರಲಿಕ್ಕೆ ತಮಗೆ ಅವಕಾಶವಿದೆ. ಆದರ ಈವತ್ತಿನ ದಿವಸ ಏನು ಮಾಡಿದ್ದೀರಿ? ಒಂದು ಕಮಿಟಿ ಮಾಡಿದ್ದೀರಿ. ಅಷ್ಟೆ ಆ ಕಮಿಟಿ ಇದುವರೆಗೆ ಏನೂ ಕಾರ್ಯಕ್ರಮವನ್ನು ತೆಗೆದುಕೊಂಡಿಲ್ಲ. ಈವತ್ತು ನಾನು ಹೇಳುತ್ತಿದ್ದೇನೆ, ತಾವು ಯಾವುದೇ ಕಾರ್ಯಕ್ರಮ ತೆಗೆದುಕೊಂಡಿಲ್ಲ. ಹೋದ ಸಲವು ಕೂಡ ಹೇಳಿದಂಥ ಮಾತುಗಳಲ್ಲಿ ತಾವು ನಿಜವಾಗಿಯೂ ಬಹಳ ಚುರುಕಿನಿಂದ ಕೆಲಸ ಮಾಡಬೇಕಿತ್ತು, ನೀವು ಈಗ ಎಷ್ಟು ಕೀರ್ತಿವಂತರಿರುತ್ತೀರೋ ಅದಕ್ಕಿಂತ ಹೆಚ್ಚು ಕೀರ್ತಿವಂತರಾಗುತ್ತೀರಿ ಎನ್ನು ನಮ ಅಭಿಲಾಶೆ ನಗಿತ್ತು. ಅದು ಆಗಬೇಕಾದರೆ ಸುಮ್ಮನೆ ಕುಳಿತರೆ ಆಗುವುದಿಲ್ಲ. ನೀವು ಮಂತ್ರಿಗಳಾಗಿದ್ದೀರಿ ಎಂದು ಹೇಳಬಹುದು ನಾನು ಮಂತ್ರಿಯಾಗಿದ್ದಾಗ ಏನು ಮಾಡುತ್ತಿದ್ದೆ ಎನ್ನುವುದನ್ನು ಹೇಳಿಬಿಡುತ್ತೇನೆ. ನಾವು ಭಾಷಣವನ್ನು ಮಾಡುವುದು ಮುಖ್ಯವಲ್ಲ. ಅಧಿಕಾರಿಗಳು ಬರುವಂಥವರು ಅದನ್ನು ಕಲಿತು ಬರೆದುಕೊಳ್ಳಬೇಕು. ಇಂತಿಂಥ ವರದಿ ಮಾಡಿದ್ದೀರಿ ಎಂದು ಹೇಳಬೇಕು. ಅವರು ಹೇಳದಿದ್ದರೆ ಅಧಿಕಾರಸ್ಥರು ಪೇಚಿಗೆ ಸಿಕ್ಕಿಕೊಳ್ಳಬೇಕೇ ಹೊರತು ನಾವು ಪೇಚಿಗೆ ಬೀಳಬಾರದು, ಈ ಮನೋಭಾವ ಬೆಳೆಯಬೇಕು. ಯಾವುದು ತಪ್ಪು ಯಾವುದು ಸರಿ ಅದನ್ನು ಅವರು ಹೇಳಬೇಕು. ಮಂತ್ರಿಗಳದೇ ತಪ್ಪಾಗಿದ್ದರೆ ಇದು ಅಡ್ಮಿನಿಸ್ಟ್ರೇಷನ್ ಲೆವೆಲ್‌ನಲ್ಲಿ ಇದನ್ನು ಮಾಡಲಿಕ್ಕೆ ಬರುವುದಿಲ್ಲವೆಂದು ಹೇಳಬೇಕು

ಗ್ರಿಪ್ ನಮ್ಮಲ್ಲಿ ಇಲ್ಲದೆಹೋದರೆ ನಿಜವಾಗಿಯೂ ಅಗ್ರಿಕಲ್ಚರ್ ಡಿಪಾರ್ಟ್‌ಮೆಂಟ್ ಸರಿಯಾಗಿ ಆಗುವುದಿಲ್ಲ. ಅಗ್ರಿಕಲ್ಚರ್ ಅಡ್ಮಿನಿಸ್ಟ್ರೇಷನ್ ಗ್ರಿಪ್‌ನ್ನು ನಿಮ್ಮಲ್ಲಿ ಸರಿಯಾದ ರೀತಿಯಲ್ಲಿ ಇಟ್ಟು ಕೊಳ್ಳಬೇಕೆಂಬ ದೃಷ್ಟಿಯಿಂದ ನಾನು ಸಲಹೆ ಮಾಡುತ್ತಿದ್ದೇನೆ. ನಿಜವಾಗಿಯೂ ನೀವು ಉತ್ತಮ ಆಡಳಿತಗಾರರಾಗಬೇಕಾಗಿದ್ದರೆ ಸರಿಯಾದ ರೀತಿಯಲ್ಲಿ ವ್ಯವಸಾಯ ಅಭಿವೃದ್ಧಿಯಾಗಬೇಕು ನೀವು ಭೂಮಿ ಹಿಡುವಳಿಯ ಬಗ್ಗೆ ಹೇಳಿದಿರಿ. ಅದನ್ನು ನೋಡಿದರೆ ನಾಚಿಕೆಯಾಗುತ್ತದೆ. ಒಂದಾನೊಂದು ಕಾಲಕ್ಕೆ ನಮ್ಮ ಕರ್ನಾಟಕದಲ್ಲಿ ಒಂದು ಭಾಗವಾದಂಥ ಗದಗ, ಧಾರವಾಡ ಜಿಲ್ಲೆ, ಉತ್ತರ ಕರ್ನಾಟಕ ಇಡೀ ಇಂಡಿಯಾ ದೇಶಕ್ಕೆ ಅತ್ಯಂತ ಉತ್ತಮವಾದ ಹತ್ತಿಯನ್ನು ಬೆಳೆಯತಕ್ಕಂಥ ಪ್ರದೇಶಗಳಾಗಿತ್ತು. ಮ್ಯಾಂಚೆಸ್ಟರ್‌ಗೆ ಕಾಟನ್ ರಫ್ತು ಮಾಡುತ್ತಿದ್ದೆವು. ಈವತ್ತು ಯಾವ ಸ್ಥಿತಿಗೆ ಬಂದಿದ್ದೇವೆ? ಈವತ್ತು ನಾವು ಯಾವ ಉತ್ತಮವಾದ ಕಾಟನ್ ಬೆಳೆದಿದ್ದೇವೆ. ಗುಜರಾತಿನಲ್ಲಿ ಎಷ್ಟು ವೆರೈಟಿಗಳಿವೆ? ನಾವು ತಿರುಗುಮುರಗು ಲಕ್ಷ್ಮೀ, ವರಲಕ್ಷ್ಮಿ, ಮಾತ್ರ, ಜಯ ಇದಿಷ್ಟು ಬಿಟ್ಟರೆ ಬೇರೆ ಯಾವ ಹೊಸ ಹೊಸ ತಳಿಗಳನ್ನು ಬೆಳೆದಿದ್ದೇವೆ? ಹೊಸ ಹೊಸ ತಳಿಗಳನ್ನು ಸುಧಾರಣೆ ಮಾಡುವಂಥ ಶಕ್ತಿ ಯಾರಿಗೆ ಇದೆಯೋ ಅವರನ್ನೇ ಈವತ್ತಿನ ದಿವಸ ಮನೆಗೆ ಕಳುಹಿಸಿಬಿಟ್ಟಿರಿ. ಇದರಿಂದ ಏನು ಉಪಯೋಗವಾದಂತಾಯಿತು? ಒಬ್ಬ ಪೋಲೀಸ್ ಅಧಿಕಾರಿ ರಿಟೈರ್ಡ್ ಆದರೆ ಮತ್ತೆ ಅವನನ್ನು ಹೋಮ್‌ಗಾರ್ಡ್ಸ್ ಎಂದು ತೆಗೆದುಕೊಳ್ಳುತ್ತೀರಿ. ಆದರೆ ಒಬ್ಬ ಅಗ್ರಿಕಲ್ಚರ್ ಸೈಂಟಿಸ್ಟ್ ರಿಟೈರ್ಡ್ ಆದರೆ ಅವರನ್ನು ಸದುಪಯೋಗ ಮಾಡಿಕೊಳ್ಳುವಂಥ ಶಕ್ತಿ ಇಲ್ಲದಿದ್ದರೆ ಏನು ಹೇಳಬೇಕು. ಈ ದೃಷ್ಟಿಯಿಂದ ಸರ್ಕಾರ ವಿಚಾರ ಮಾಡಬೇಕು. ಈವತ್ತಿನದಿವಸ ಹೇಳಬೇಕಾದರೆ ನಾವು ಅಗ್ರಿಕಲ್ಚರ್ ಯೂನಿವರ್ಸಿಟಿಗೆ ಹೆಚ್ಚಿನ ಪ್ರಾಧಾನ್ಯತೆಯನ್ನು ಕೊಡಬೇಕು. ಅಗ್ರಿಕಲ್ಚರ್ ಯೂನಿವರ್ಸಿಟಿಗಳು ಎಂದರೆ ಅದು ಒಂದು ದೇವಾಲಯವಿದ್ದಂತೆ. ಅಗ್ರಿಕಲ್ಚರ್ ಯೂನಿವರ್ಸಿಟಿಗಳನ್ನು ಸರಿಯಿಲ್ಲವೆಂದು ಹೇಳಿ ಅವುಗಳನ್ನು ನಿಕೃಷ್ಟರೀತಿಯಲ್ಲಿ ಇಟ್ಟಲ್ಲಿ ಉತ್ತಮವಾಗಿ ಕೆಲಸ ಮಾಡುವುದಕ್ಕೆ ಸಾಧ್ಯವಿಲ್ಲ. ಎಸ್. ವಿ. ಪಾಟೀಲ್ ಎಂದು ಒಳ್ಳೆಯ ಸೈಂಟಿಸ್ಟ್ ಇದ್ದರೆ ಅವರಿಗೆ ಹಣ ಕೊಡದಿದ್ದರೆ ನಾನು ಏನುಮಾಡಲಿಕ್ಕೆ ಆಗುತ್ತದೆ. ಅವರಿಗೆ ಅವಶ್ಯಕತೆ ಇರುವಷ್ಟು ಹಣವನ್ನು ಕೊಡಬೇಕು. ಎಷ್ಟು ಹಣವನ್ನು ಕೊಡುತ್ತೇವೆಯೋ ಅಷ್ಟು ಅಗ್ರಿಕಲ್ಚರ್ ಸೈನ್ಸ್ ಡೆವಲಪ್‌ಮೆಂಟ್ ಆಗುತ್ತದೆ. ಎಲ್ಲೋ ಒಬ್ಬರಿಬ್ಬರು ಖದೀಮರು ಇರುತ್ತಾರೆ ಅವರನ್ನು ಬಿಟ್ಟರೆ ದುಡ್ಡನ್ನು ಪೂರ್ತಿ ಉಪಯೋಗ ಮಾಡಿ ಕೊಳ್ಳುವವರು ಇದ್ದಾರೆ. ಅವರು ಸ್ವತಂತ್ರರಾಗಬೇಕು. ಸೈನ್ಸ್ ಡೆವಲಪ್‌ಮಾಡುವಸಲುವಾಗಿ ಲಕ್ಷ ರೂಪಾಯಿಗಳನ್ನು ಖರ್ಚುಮಾಡಿದರೆ ಬೆಳೆದೃಷ್ಟಿಯಿಂದ ನಾಳೆ ಅದರಿಂದ ಕೋಟ್ಯಾಂತರ ರೂಪಾಯಿಗಳ ಲಾಭ ಬರುತ್ತದೆ. ಆ ದೃಷ್ಟಿಯಿಂದ ತಾವು ಈವತ್ತಿನದಿವಸ ಆಲೋಚನೆ ಮಾಡಿ. ಅಗ್ರಿಕಲ್ಚರ್ ಯೂನಿವರ್ಸಿಟಿಯನ್ನು ಯಾವ ಯಾವ ಭಾಗಕ್ಕೆ ಕೊಟ್ಟರೆ ಉಪಯೋಗವಾಗುತ್ತದೆ ಎನ್ನುವುದನ್ನು ಗುರುತಿಸಿ ಆಭಾಗಕ್ಕೇ ಕೊಡುವ ಬಗ್ಗೆ ಆಲೋಚನೆ ಮಾಡಿ ಎಂದು ಹೇಳುವುದಕ್ಕೆ ಇಷ್ಟಪಡುತ್ತೇನೆ. ಎಲ್ಲಿಗೆ ಅವಶ್ಯಕವಾಗಿ ಕೊಡಬೇಕೋ ಅಲ್ಲಿ ಕೊಡುವುದನ್ನು ಬಿಟ್ಟು ನಮ್ಮ ಸ್ನೇಹಿತರು ಹೇಳಿದಂತೆ ಕೋಲಾರಕ್ಕೆ ಕೊಟ್ಟರೆ ಆಗತಕ್ಕಂಥ ಪ್ರಯೋಜನವೇನು? ಹಾಸನದಲ್ಲಿ ಬೆಳೆಯುತಕ್ಕಂಥದ್ದು ವಿಶೇಷವಾಗಿ ಪೊಟೆಟೋ ಅಲ್ಲಿ ಪೊಟೆಟೊ ಸಂಸ್ಕರಣ ಕೇಂದ್ರವನ್ನು ಮಾಡಿ, ಮತ್ತಿತರ ಪ್ರದೇಶಗಳು ಅಂದರೆ ಚಿತ್ರದುರ್ಗ, ಧಾರವಾಡದಲ್ಲಿ ವಿಶೇಷವಾಗಿ ಬೆಳೆಯಾಗತಕ್ಕಂಥದ್ದು ಹತ್ತಿ. ಅದಕ್ಕೆ ಅಲ್ಲಿಗೆ ಹೆಚ್ಚಿನ ಪ್ರೋತ್ಸಾಹವನ್ನು ಕೊಡಿ. ಎಲ್ಲೆಲ್ಲಿ ಏನೇನು ಬೆಳೆಯುತ್ತಾರೋ ಅದಕ್ಕೆ ಹೆಚ್ಚಿನ ಪ್ರೋತ್ಸಾಹವನ್ನು ಕೊಡುವುದನ್ನು ಬಿಟ್ಟು ಮಂಡ್ಯದಲ್ಲಿ ಹತ್ತಿಯನ್ನು ಬೆಳೆಸುತ್ತೇವೆಂದು ಹೇಳಿದರೆ ಅದರಿಂದ ಏನು ಉಪಯೋಗವಾಗುತ್ತದೆ? ಅರಸೀಕೆರೆಯಲ್ಲಿ ಒಂದು ಜಿನ್ನಿಂಗ್ ಅಂಡ್ ಪ್ರೆಸ್ಸಿಂಗ್ ಫ್ಯಾಕ್ಟರಿಯನ್ನು ತೆಗೆಯಬೇಕೆಂದು ಅಗ್ರಿಕಲ್ಚರ್ ಡೈರೆಕ್ಟರವರ ತೀರ್ಮಾನವಾಗಿತ್ತು. ಅವರು ಈವತ್ತಿನದಿವಸ ಡೆಪ್ಯುಟಿ ಆಗಿದ್ದರೆ. ಕಮಿಷನರ್ ೨೫ ವರ್ಷಗಳಾದರೂ ಒಂದು ಜಿನ್ನಿಂಗ್ ಅಂಡ್ ಪ್ರೆಸ್ಸಿಂಗ್ ಫ್ಯಾಕ್ಟರಿಯನ್ನು ತೆಗೆಯಲು ಅಸಮರ್ಥರಾಗಿದ್ದಾರೆಂದು ಹೇಳಿದರೆ ಅಂಥ ಐ. ಎ. ಎಸ್. ಅಧಿಕಾರಿಗಳನ್ನು ಇಟ್ಟು ಕೊಂಡು ಏನು ಉಪಯೋಗ ಪಡೆಯುತ್ತಿದ್ದೀರಿ. ಅಂಥವರನ್ನು ಸಸ್‌ಪೆಂಡ್ ಮಾಡಿ ಎಂದರೆ ಮಾಡುವುದಿಲ್ಲ. ಮಾನ್ಯ ಚಾಲಪ್ಪನವರಿಗೆ ಹೇಳುತ್ತೇನೆ ಈವತ್ತು ಅವರ ಡಿಪಾರ್ಟ್‌ಮೆಂಟ್ ಏನಾಗಿದೆ? ಉಳಿದವರಿಗೂ ಸಹಿತ ಹೇಳುತ್ತೇನೆ. ಹತ್ತಿ ಕಾಳು ತರುವ ಸಲುವಾಗಿ ನಿಮಗೆ ಕ್ಷಮೆ ಹೋಗಬೇಕು ನಾವು ಹತ್ತು ಜಿಲ್ಲೆಯವರು ಬಳ್ಳಾರಿಯಿಂದ ಗದಗ್‌ಗೆ ತರಬೇಕಾದರೆ ಲೈಸೆನ್ಸ್‌ಗಾಗಿ ಡೈರೆಕ್ಟರ್ ಆಫೀಸಿಗೆ ಬರಬೇಕು ಡೈರೆಕ್ಟರ್ ಏನಾದರೂ ಟೂರ್ ಹೋಗಿಬಿಟ್ಟಿದ್ದರೆ ಅದಕ್ಕಾಗಿ ನಿಲ್ಲಬೇಕು, ಅವರು ಸಿಕ್ಕಿದಮೇಲೆ ತೆಗೆದುಕೊಂಡು ಹೋಗಬೇಕು. ಹೀಗೆ ಏತಕ್ಕೆ ಮಾಡಿರುತ್ತಾರೋ ಗೊತ್ತಿಲ್ಲ. ಓಬಿರಾಯನಕಾಲದಲ್ಲಿ

ಮಾಡಿದಂಥ ನಿಯಮಗಳು ಇವೆ. ಈ ನಿಯಮಗಳನ್ನು ಬದಲಾವಣೆ ಮಾಡಲಿಕ್ಕೆ ಶಕ್ತಿ ನಿಮಗಿಲ್ಲವೇ? ನೀವು ಏತಕ್ಕೆ ಮಾಡುತ್ತಿಲ್ಲವೆಂದು ಕೇಳಿದರೆ, ಒಂದೇ ತರಗತಿಯ ಬೀಜ ಇರುವುದಿಲ್ಲ, ಬೇರೆ ಬೇರೆ ಭಾಗಗಳಿಂದ ಬರುತ್ತಿದೆ. ಅದನ್ನು ಮಿಕ್ಸ್ ಮಾಡಬಾರದು ಎನ್ನುವ ನಿಯಮ ನಮ್ಮ ಕಾಲದಲ್ಲಿ ಇತ್ತು. ಕರ್ನಾಟಕದಲ್ಲಿ ಉತ್ತಮವಾದ ಬೆಳೆಯನ್ನು ಬೆಳೆಸಲಿಕ್ಕೆ ಬರುತ್ತಿದ್ದರೆ ರೈತರು ಬೆಳೆದಂಥ ಬೆಳೆ ರೈತರಿಗೆ ಹೋಗುತ್ತಿತ್ತು. ಈ ದೃಷ್ಟಿಯಿಂದಲಾದರೂ ನಿಯಮಗಳನ್ನು ಬದಲಾವಣೆ ಮಾಡಲು ಪ್ರಯತ್ನ ಮಾಡಿ ಎಂದು ಹೇಳುವುದಕ್ಕೆ ಇಚ್ಛೆಪಡುತ್ತೇನೆ.

ಈವತ್ತಿನದಿವಸ ವಿಕಾಸ ಯೋಜನೆ ಎಂದು ಹೇಳಿ ಫಾರಮ್ಸ್ ಬೆಳೆಸಲು ಆರಂಭಮಾಡಿರುತ್ತೀರಿ. ಇದನ್ನು ನೋಡಿದರೆ ಇದು ಹಿಂದೆ ಇದ್ದುದೇ ಹೊರತು ಹೊಸದಾಗಿ ಏನೂ ಮಾಡಿಲ್ಲ. ಸರ್ಕಾರದವರು ನಡೆಸುವಂಥ ಸಂಸ್ಥೆಗಳಿಗೆ ಕೊಡಿ, ಇಲ್ಲವಾದರೆ ನೇರವಾಗಿ ಸರ್ಕಾರದವರೇ ತೆಗೆದುಕೊಂಡು ಫಾರಮ್ಸ್ ಬೆಳೆಸಲಿ. ಸಾವಿರಾರು ಎಕರೆ ಜಮೀನು ಇದೆ ಆನುದರಿಂದ ಅಂಥ ಸಂಸ್ಥೆಗಳಿಗೆ ಸಹಾಯ ಮಾಡಿದರೆ ಅದರಿಂದ ಅವರು ಚೆನ್ನಾಗಿ ಬೆಳೆಸಲು ಅನುಕೂಲವಾಗುತ್ತದೆ. ಈವತ್ತು ಕೇಂದ್ರ ಸರಕಾರ ದವರು ಸಾವಿರ ಗಟ್ಟಲೆ ಫಾರಮ್ಸ್ ಬೆಳೆದಿದ್ದಾರೆ. ಕೇಂದ್ರ ಸರ್ಕಾರದವರು ದೊಡ್ಡ ದೊಡ್ಡ ಫಾರಮ್ ಗಳನ್ನು ಬೆಳೆದು ತಮ್ಮ ವಶದಲ್ಲಿ ಇಟ್ಟುಕೊಳ್ಳತಕ್ಕಂಥದ್ದು ಸರಿಯಾದುದಲ್ಲ. ಅದನ್ನು ರಾಜ್ಯಗಳಿಗೆ ಕೊಡಬೇಕೆಂದು ಹಿಂದೆ ಹೇಳಿದ್ದೆ. ಅವರೂ ಕೂಡ ಒಪ್ಪಿಕೊಂಡಿದ್ದರು. ಅವರಿಂದ ತಾವು ತೆಗೆದುಕೊಳ್ಳು ವುದಕ್ಕೆ ಪ್ರಯತ್ನ ಮಾಡಿ ಹಿಂದೆಧಾರವಾಡ ಅಗ್ರಿಕಲ್ಚರ್ ಯೂನಿವರ್ಸಿಟಿ ಬಗ್ಗೆ ಹೇಳಿದ್ದೆ. ನಮಗೆ ಏನಾಗಿದೆ ಎಂದರೆ ಹುಲಿಯೂರು ಪೇಟೆಯವರು ಒಂದು ಮಾತನ್ನು ಹೇಳುತ್ತಾರೆ, ಅದು ನೆನಪಿಗೆ ಬರುತ್ತಿದೆ, ಅದು ಏನೆಂದರೆ ಯಪ್ಪ ನೀವು ಹೋಗಿ ಎಂದರೂ ಹೋಗುವವನೆ, ನೀವು ಬೇಡ ಎಂದರೂ ಹೋಗು ವವನೆ, ನೀವು ಬೇಡ ಎಂದರೂ ಹೋಗುವವನೆ, ಹೋಗೆಲೋ ಬೇಡವೋ ಎನ್ನುವ ಹಾಗೆ ಇವರು ನಾವು ಹೇಳಿದರೂ ಮಾಡುವವರೇ, ನಾವು ಹೇಳದೆ ಇದ್ದರೂ ಮಾಡುವವರೇ. ಇದನ್ನು ನೋಡಿದರೆ ಅಗ್ರಿಕಲ್ಚರ್ ಯೂನಿವರ್ಸಿಟಿಯನ್ನು ಕೊಡುತ್ತೀರೋ ಇಲ್ಲವೋ ಎನ್ನುವ ಭಯ ಬರುತ್ತಿದೆ, ಮಾನ್ಯ ಪ್ರಕಾಶ್‌ರವರು ಪ್ರಾಮಾಣಿಕವಾಗಿ ಕೆಲಸ ಮಾಡಲಿಕ್ಕೆ ಹತ್ತಿದ್ದಾರೆ. ಈಗಾಗಲೇ ಕ್ಯಾಬಿನೆಟ್ ನಿರ್ಣಯವಾಗಿದೆ.

ಶ್ರೀ ಎ. ಲಕ್ಷ್ಮೀಸಾಗರ್.—ಇದರ ಬಗ್ಗೆ ಪತ್ರವ್ಯವಹಾರ ಎಲ್ಲ ಆಗಿರುತ್ತದೆ

ಶ್ರೀ ಕೆ. ಎಚ್. ಪಾಟೀಲ್.—ಅಗ್ರಿಕಲ್ಚರ್ ಸೈನ್ಸ್ ಕಾಲೇಜನ್ನು ಕಾಗದದಲ್ಲಿ ಮಾತ್ರ ಕೊಟ್ಟಿರು ತ್ತಾರೆ. ಮಾನ್ಯ ಮುಖ್ಯಮಂತ್ರಿಗಳಲ್ಲಿ ನಾನು ಕಳಕಳಿಯಿಂದ ಪ್ರಾರ್ಥನೆ ಮಾಡಿಕೊಳ್ಳುತ್ತೇನೆ, ಈ ವಿಷಯದಲ್ಲಿ ಬರೆದಿದ್ದಾರೆ, ಅದಕ್ಕೆ ಅವರಿಗೆ ಅಭಿನಂದನೆಯನ್ನು ಸಲ್ಲಿಸುವುದು ಪ್ರಥಮ ಕರ್ತವ್ಯವಾಗಿದೆ.

ಆದರೆ ಶ್ರೀಮಾನ್ ಹೆಗಡೆಯವರು ಸ್ವಲ್ಪ ಜೋರು ಮಾಡಿದರೆ ಅವರು ಇನ್ನೂ ವೇಗವಾಗಿ ಮಾಡಲಿಕ್ಕೆ ಸಾಧ್ಯವಾಗಬಹುದು. ಮಾನ್ಯ ಅಧ್ಯಕ್ಷರೇ, ಈ ಕೃಷಿ ವಿಶ್ವವಿದ್ಯಾನಿಲಯ ಸೆಪ್ಟೆಂಬರ್ ಅಕ್ಟೋಬರ್ ನಲ್ಲಿ ಆದರೆ ಆಗುವುದಿಲ್ಲ. ಏಪ್ರಿಲ್ ಮೇ ಒಳಗೇ ಆಗಬೇಕು. ಆದಕ್ಕಾಗಿ ಇನ್ನೂ ಸಾಕಷ್ಟು ಸಮಾಧಾನಕರ ವಾದ ಕೆಲಸ ನಡೆಯಬೇಕು. ಕೆಲವರು ಅಲ್ಲಿ ಇಲ್ಲಿ ಅಪಸ್ವರದ ಮಾತನ್ನು ಹೇಳಿದ್ದಾರೆ. ಅದು ಸರಿಯಲ್ಲ. ಕೃಷಿ ಬೆಳವಣಿಗೆಗಾಗಿ ಕೃಷಿ ವಿಶ್ವವಿದ್ಯಾಲಯ ಇರಬೇಕೇ ಹೊರತು, ವಿಶ್ವವಿದ್ಯಾನಿಲಯಕ್ಕಾಗಿ ವಿಶ್ವವಿದ್ಯಾನಿಲಯ ಅಲ್ಲ. ಈ ಯೂನಿವರ್ಸಿಟಿ ಒಳಗೆ ಕುರ್ಚಿ ಮೋಜುಗಳನ್ನು ಬದಲಾವಣೆ ಮಾಡುವು ದಕ್ಕೆ ಹೊರಟಿದ್ದಾರೆ. ಅತ್ಲಾಗರ್ಧ, ಇತ್ಲಾಗರ್ಧ ಅಂತ, ಈ ರೀತಿಯಾಗಿ ಬದಲಾವಣೆ ಮಾಡುವುದು ಬೇಡ. ಅಲ್ಲಿ ಬೇಕಾದರೆ ಮತ್ತೊಂದು ಯೂನಿವರ್ಸಿಟಿಯನ್ನು ಮಾಡಲಿ. ಇವತ್ತು ಯೂನಿವರ್ಸಿಟಿ ಗ್ರಾಂಟ್ ಕಮೀಶನ್ ಜತೆ ನಾನು ಹೋಗಿ ಮಾತನಾಡಿದ್ದೇನೆ. ಶ್ರೀ ಪ್ರಕಾಶ್ ಅವರೂ ಕೂಡ ಹೋಗಿ ಹೇಳಿದ್ದಾರೆ. ಶ್ರೀಮಾನ್ ಹೆಗಡೆಯವರೂ ಕೂಡ ಬಹಳ ಮುತುವರ್ಜಿ ವಹಿಸಿದ್ದಾರೆ ಎಂದು ನಾನು ಸಂತೋಷದಿಂದಲೇ ಹೇಳುತ್ತಿದ್ದೇನೆ. ಆದಷ್ಟು ಶೀಘ್ರವಾಗಿ ಈ ಕೃಷಿ ವಿಶ್ವವಿದ್ಯಾಲಯ ಆದರೆ ಸಮಸ್ತ ಜನರಿಗೆ ಕಲ್ಯಾಣವಾಗುತ್ತದೆ. ಎಂಟು ಒಂಭತ್ತು ಜಿಲ್ಲೆಗಳ ಜನರಿಗೆ ನಿಜವಾಗಿಯೂ ಉಪಕಾರವಾಗುತ್ತದೆ. ಅವರ ಸ್ಪರ್ಧೆನೆ ಕೂಡ ಆಗುತ್ತದೆ. ಈ ವಿಶ್ವವಿದ್ಯಾಲಯ ಆದರೆ ಹೆಚ್ಚು ಬೆಳೆ ಬೆಳೆಯುತ್ತಾರೆ ಮತ್ತು ನಿಮಗೆ ಅನಾಯಾಸವಾಗಿ ಹೆಚ್ಚಿನ ವ್ಯವಸಾಯ ಉತ್ಪಾದನೆ ಆಗುತ್ತದೆ. ಮತ್ತು ಸರ್ಕಾರದ ಬೊಕ್ಕಸ ಕೂಡ ತುಂಬುತ್ತದೆ. ಈ ದೃಷ್ಟಿಯಿಂದ ಮಾಡಬೇಕು.

ವ್ಯವಸಾಯದ ಬೇರೆ ಬೇರೆ ಪ್ರದೇಶಗಳಲ್ಲಿ ಬೇರೆಬೇರೆಯಾದ ಬೆಳೆಗಳನ್ನು ಬೆಳೆಯುವಂಥ ಯೋಜನೆ ಪೂರ್ತಿಯಾಗಿ ಆಗಿಲ್ಲ. ಇವತ್ತು ನಮಗೆ ಆಯಿಲ್ ಸೀಡ್ ಡೆವಲಪ್‌ಮೆಂಟ್‌ಗೆ ಪಂತ್ರೊಂದಕ್ಕೆ ಕೇಂದ್ರ ಸರ್ಕಾರದವರು ಸಾಕಷ್ಟು ಹಣ ಕೊಡುತ್ತಾರೆ. ಆದರೆ ಮಾನ್ಯ ಅಧ್ಯಕ್ಷರೇ, ಅವರೇ ಕೊಟ್ಟಿರುವಂಥ ವರದಿಯಲ್ಲಿ ೨೨ನೇ ಪುಟದಲ್ಲಿ ಕೊಟ್ಟಿರುವ ಸ್ಟೇಟ್‌ಮೆಂಟ್‌ನ್ನು ನೋಡಿದರೆ ಒಂದರಲ್ಲೂ ಕೂಡ ಕೊಟ್ಟಂಥ ಹಣ ಖರ್ಚು ಮಾಡಿಲ್ಲ. ಆಗ್ರಿಕಲ್ಚರಲ್ ಡಿಪಾರ್ಟ್‌ಮೆಂಟ್‌ನಲ್ಲೇ ಹೀಗಾದರೆ ಹೇಗೆ ? ಇನ್ನುಮೇಲೆ ಏನು ಮಾಡುತ್ತೀರಿ ? ಸೀಡ್ಸ್ ಸಬ್ಸಿಡಿಗೆ ಮಾರ್ಚ್‌ನೊಳಗೆ ಏನು ಕೊಡುವವರಿದ್ದೀರಿ ? ನಾನು ಒಬ್ಬ ವ್ಯವಸಾಯಗಾರ ಉಳಿದವರಿಗೆ ಹೇಳಿದರೆ ಅಡ್ಡಿಯಿಲ್ಲ. ನಾನು ಯಾವುದೇ ದೃಷ್ಟಿಯಿಂದ ಟೀಕೆ ಮಾಡುವ ಸಲುವಾಗಿ ಹೇಳುವುದಿಲ್ಲ. ಆದರೆ ವ್ಯವಸಾಯಕ್ಕಾಗಿ ಉಳಿದ ಖಾತೆಗಳಂತೆ ನೋಡಬಾರದು. ವ್ಯವಸಾಯ ಖಾತೆಯಲ್ಲಿ ನಿಜವಾಗಿಯೂ ಒಂದು ರಚನಾತ್ಮಕ ಯೋಜನೆಯನ್ನು ಹಾಕಿಕೊಂಡು ಇದರ ಬಗ್ಗೆ ಹೆಚ್ಚಿನ ಲಕ್ಷ್ಯವನ್ನು ಕೊಡಬೇಕೆಂದು ಹೇಳುತ್ತೇನೆ. ನಿಮ್ಮ ಆಗ್ರೋ ಇಂಡಸ್ಟ್ರೀಸ್ ಕಾರ್ಪೊರೇಷನ್ ಬಗ್ಗೆ ಹೇಳಿದ್ದಾರೆ. ನಾನು ಒಂದು ಮಾತನ್ನು ಹೇಳಬಲ್ಲೆ. ಆಗ್ರೋ ಇಂಡಸ್ಟ್ರೀಸ್ ಕಾರ್ಪೊರೇಷನ್ ಇದು ಯಾರಿಗಾದರೂ ತಲೆಬೇನೆಯೋ, ಮೊದಲು ಕೂಡ ಏನು ಆಗಿಬಿಟ್ಟಿದೆ. ಎಂದರೆ ಸಿಕ್ಕಿದವರಿಗೆ ಸಿಕ್ಕಹಾಗೆ ರೊಕ್ಕವನ್ನು ಕೊಟ್ಟುಬಿಟ್ಟಿದ್ದಾರೆ. ಬೇಕಾದಹಾಗೆ ವ್ಯಕ್ತಿಗಳಿಗೆ ಸಾಲ ಕೊಟ್ಟಿದ್ದಾರೆ. ಬೇನಾಮಿ ಹೆಸರಿನಲ್ಲಿ ಸಾಲ ಕೊಟ್ಟಿದ್ದಾರೆ. ಕೊಟ್ಟ ಹಣ ವಾಪಾಸ್ಸು ಬರದಹಾಗೆ ಮಾಡಿಬಿಟ್ಟಿದ್ದಾರೆ. ಇಂತಹವರು ಯಾರ್‍ಯಾರು ಖದೀಮರು ಇದ್ದಾರೆ, ತಮ್ಮ ಹಕ್ಕನ್ನು ಚಲಾಯಿಸಿ, ಅವರನ್ನು ಮಟ್ಟಹಾಕಿ ಹಣ ವಸೂಲು ಮಾಡುವ ಕೆಲಸವನ್ನು ಶ್ರೀ ಪ್ರಕಾಶ್‌ರವರು ಮಾಡಬೇಕು. ಇದನ್ನು ಅವರು ಮಾಡುತ್ತಾರೆ ಎಂದು ನಾನು ಆಸೆ ಮಾಡುತ್ತೇನೆ. ಇದರಲ್ಲಿ ತಪ್ಪು ಯಾರದ್ದೇ ಇರಲಿ ಯಾರದ್ದೇ ತಪ್ಪು ಇದ್ದರೆ ತಪ್ಪು ತಪ್ಪೇ. ನಮ್ಮದೇ ಇರಲಿ, ನಿಮ್ಮದೇ ಇರಲಿ, ತಪ್ಪಿತಸ್ಥರು ತಪ್ಪಿತಸ್ಥರೆ ಎನ್ನುವ ಭಾವನೆ ಬರಬೇಕಾಗಿದೆ.

ಅಧ್ಯಕ್ಷರು.—ಪಾಟೀಲರೇ, ಅರ್ಧ ತಾಸು ಆಯಿತು. ನಿಮಗೆ ಬಹಳ ಹೆಚ್ಚಿನ ವೇಳೆಯನ್ನು ಕೊಟ್ಟಿದ್ದೇನೆ. ಶ್ರೀ ಶ್ರೀನಿವಾಸ್ ಅವರು ತಮ್ಮ ವೇಳೆಯನ್ನು ನಿಮಗೇ ಕೊಡಲಿಕ್ಕೆ ಹೇಳಿದ್ದರು.

ಶ್ರೀ ಕೆ.ಎಚ್. ಪಾಟೀಲ್.—ಆಯಿತು ಅಧ್ಯಕ್ಷರೇ, ನೀವು ನಿಲ್ಲಿಸಿ ಎಂದರೆ ಈಗಲೇ ನಿಲ್ಲಿಸಿಬಿಡುತ್ತೇನೆ.

ಅಧ್ಯಕ್ಷರು.—ಬೇಗ ಮುಗಿಸಿ.

ಶ್ರೀ ಕೆ.ಎಚ್. ಪಾಟೀಲ್.—ಬೀಜ ಉತ್ಪಾದನೆ ವಿಷಯದಲ್ಲಿ ಮಾನ್ಯ ವ್ಯವಸಾಯ ಸಚಿವರು ಗಮನ ಕೊಡಬೇಕು, ಇಲ್ಲದಿದ್ದರೆ ಮುಂದಿನ ಯೋಜನೆಗಳೆಲ್ಲಾ ಕುಂಠಿತವಾಗುತ್ತವೆ. ಇವತ್ತು ನಮಗೆ ಬೇಕಾದಂಥ ಬೀಜಗಳ ಉತ್ಪಾದನೆ ಆಗಿಲ್ಲ. ಹಂಚಿಕೆ ಸರಿಯಿಲ್ಲ ಮತ್ತು ಸರಿಯಾದ ಪ್ಲಾನ್ ಇಲ್ಲ. ಹೋದವರ್ಷ ಹೆಚ್ಚಿಗೆ ಕಾಟನ್ ಸೀಡ್ಸ್ ತೆಗೆದುಕೊಂಡಿರಿ. ಈ ದಿವಸ ಅವು ಕೊಳೆಯಲಿಕ್ಕೆ ಹತ್ತಿವೆ. ಅವನ್ನು ಮುಂದಿನ ವರ್ಷಬೇಕಾದರೆ ಹಂಚಿಬಿಡುತ್ತಾರೆ. ನಾನು ಹೋದಸಲ ಕೂಡ ಹೇಳಿದ್ದೇನೆ. ಅಧಿಕಾರಸ್ಥರು ಯಾವರೀತಿ ಹಣದ ದುರುಪಯೋಗ ಮಾಡಿದ್ದಾರೆ ಎಂದು. ಇದರ ಬಗ್ಗೆ ನಾನು ಹೆಚ್ಚಿಗೆ ಹೇಳುವುದಕ್ಕೆ ಹೋಗುವುದಿಲ್ಲ. ಇನ್ನೂ ವಿಚಾರಣೆ ಆಗಿಲ್ಲ. ತಾವು ಈಗಲಾದರೂ ವಿಚಾರಣೆ ಮಾಡಬೇಕು. ತಪ್ಪಿತಸ್ಥರಿಗೆ ಶಿಕ್ಷೆಯಾಗಬೇಕು. ಅವರು ಯಾವುದೇ ಕಡೆಗಿರಲಿ, ಇದರೊಳಗೆ ದುಡ್ಡು ತಿನ್ನುವವರದ್ದು ಒಂದು ಜಾತಿ ಮತ್ತು ದುಡ್ಡು ತಿನ್ನದೇ ಇರುವವರದ್ದು ಇನ್ನೊಂದು ಜಾತಿ. ಈ ಮಾತನ್ನು ತಾವು ಗಮನದಲ್ಲಿಟ್ಟುಕೊಳ್ಳಬೇಕೆಂದು ಹೇಳಿ, ನಾನು ಆ ವಿಷಯದಲ್ಲಿ ಹೆಚ್ಚು ಹೇಳುವುದಕ್ಕೆ ಇಚ್ಛೆಪಡುವುದಿಲ್ಲ.

ಇನ್ನು ಭೂಗತ ನೀರಿನ ಬಗ್ಗೆ ಒಂದೆರಡು ಮಾತುಗಳನ್ನು ಹೇಳಬೇಕಾಗಿದೆ ಇವತ್ತು ಬೋರಿಂಗ್ ಮೆಶಿನ್ ಒಂದು ಕಡೆ ಇದ್ದರೆ, ವ್ಯವಸಾಯ ಸಚಿವರು ಇನ್ನೊಂದು ಕಡೆಗೆ ಇದ್ದಾರೆ. ಕುಡಿಯುವ ನೀರಿನ ಬಗ್ಗೆ ಶ್ರೀಮಾನ್ ನಜೀರ್‌ಸಾಬ್ ಅವರ ಇಲಾಖೆ ಇದೆ. ಅದರ ಕಡೆಗೆ ನಾನು ಲಕ್ಷ್ಯ ಕೊಡುವುದಿಲ್ಲ. ವ್ಯವಸಾಯಗಾರರಿಗೆ ಬೇಕಾದಂಥ ಬೋರಿಂಗ್ ಮೆಶಿನ್‌ಗಳನ್ನು ಆಗ್ರೋ ಇಂಡಸ್ಟ್ರೀಸ್ ಕಾರ್ಪೊರೇಷನ್‌ನಲ್ಲಿ ಇಟ್ಟಿದ್ದರು. ಆದರೆ ಈ ಬೋರಿಂಗ್ ಮೆಶಿನ್‌ಗಳಿಗೆ ಜಂಗು ಹಿಡಿಯಲಿಕ್ಕೆ ಹತ್ತಿದೆ...

ಶ್ರೀ ಎಂ.ಪಿ. ಪ್ರಕಾಶ್.—ಇದರಿಂದ ಲಾಭ ಆಗಿದೆ.

ಶ್ರೀ ಕೆ.ಎಚ್. ಪಾಟೀಲ್.—ಆಗ್ರೋ ಇಂಡಸ್ಟ್ರೀಸ್ ಕಾರ್ಪೋರೇಷನ್ ಲಾಭಕ್ಕೋಸ್ಕರ ಅಲ್ಲ. ಇದು ಇರುವುದು ರೈತರ ಕಲ್ಯಾಣ ಸಲುವಾಗಿ. ಎಷ್ಟು ಜನರಿಗೆ ಕೊಟ್ಟಿದ್ದೀರಿ ಎನ್ನುವುದರ ಬಗ್ಗೆ ಮೊದಲು ಲೆಕ್ಕಹಾಕಬೇಕೇ ಹೊರತು. ಲಾಭಕ್ಕೋಸ್ಕರ. ಅಲ್ಲ,

ಶ್ರೀ ಎಂ.ಪಿ. ಪ್ರಕಾಶ್.—ಈ ರಿಗ್ ಬೋರ್ ಬಹಳ ದೊಡ್ಡ ಪ್ರಮಾಣದಲ್ಲಿ ಲಾಭ ಮಾಡಿದೆ.

ಶ್ರೀ ಕೆ.ಎಚ್. ಪಾಟೀಲ್.—ಇದನ್ನು ಸರ್ವಿಸ್ ಮಾಡಿದ್ದರೆ ಸಂತೋಷ. ಆದರೆ ನಿಮ್ಮಲ್ಲಿ ರಿಗ್‌ಗಳು ಎಷ್ಟು ಇವೆ ? ಎರಡು ರಿಗ್‌ಗಳು ಇದ್ದರೆ, ಅದರಿಂದ ಲಾಭ ಮಾಡುತ್ತೇವೆ ಎಂದರೆ ಅದು ಸರಿಯಲ್ಲ. ಇರಿಗೇಶನ್ ಸಲುವಾಗಿ ಇರಿಗೇಶನ್ ಡಿಪಾರ್ಟ್‌ಮೆಂಟ್ ಮತ್ತು ಅಗ್ರಿಕಲ್ಚರಲ್ ಡಿಪಾರ್ಟ್‌ಮೆಂಟ್ ಒಟ್ಟಿಗೆ ಕೊಡಬೇಕು. ಈ ಕೂಡುವಿಕೆ ಆಗದಿದ್ದರೆ, ಮೈನರ್ ಇರಿಗೇಶನ್‌ನಲ್ಲಾದರೂ ಅವರು ಕೂಡಬೇಕು. ಎಲ್ಲಿ ತಪ್ಪು ಆಗುತ್ತದೆ ಎಂದು ತಿಳಿಯುವುದಕ್ಕೆ ಶ್ರೀ ರಾಮಕೃಷ್ಣ ಹೆಗಡೆಯವರಿಗೆ ವೇಳೆ ಸಿಗುವುದಿಲ್ಲ. ಇದಕ್ಕೆ ಮೈನರ್ ಇರಿಗೇಶನ್‌ನಲ್ಲಿ ವ್ಯವಸಾಯಗಾರರಿಗೆ ಉಪಯುಕ್ತವಾದಂಥ ಇರಿಗೇಶನ್‌ಗಳನ್ನು ಅಗ್ರಿಕಲ್ಚರಲ್ ಡಿಪಾರ್ಟ್‌ಮೆಂಟ್‌ನೊಳಗೆ ಕೂಡಿಸುವುದು ಯೋಗ್ಯವೆಂದು ಹೇಳುತ್ತೇನೆ. ಇವತ್ತು ಮಿಶ್ರಬೆಳೆಗಾಗಿ ಒಳ್ಳೆಯ ಯೋಜನೆಯನ್ನು ಅಳವಡಿಸಲಿಕ್ಕೆ ಆಗಲಿಲ್ಲ. ಇದರಿಂದ ಸೆಂಟ್ರಲ್ ಗವರ್ನಮೆಂಟಿನ ಗ್ರಾಂಟ್‌ನ್ನು ಕ್ಲೈಮ್ ಮಾಡುವುದಕ್ಕೆ ಸಹಿತ ಆಗಲಿಲ್ಲ. ಇನ್ನಾದರೂ ಪ್ರಯತ್ನ ಮಾಡಿ ಪೂರ್ತಿ ದೊರಕುವಂತೆ ಮಾಡಬೇಕೆಂದು ಹೇಳುತ್ತೇನೆ. ಇನ್ನು ಕ್ರಿಮಿನಾಶಕ ಔಷಧಿಗಳ ಬಗ್ಗೆ ಹೋದಸಲ ಹೇಳಿದ್ದೆ. ಈಗ ಪುನರಪಿ ಹೇಳುತ್ತಿದ್ದೇನೆ. ಸಾಯಿಲ್ ಟೆಸ್ಟಿಂಗ್ ಲ್ಯಾಬರೇಟರಿಯವರು ಮೊದಲು ರಿಪೋರ್ಟನ್ನು ಕೊಡಬೇಕು. ಅದಕ್ಕೆ ಅನುಗುಣವಾಗಿ ಕ್ರಿಮಿನಾಶಕಗಳನ್ನು ಜನರಿಗೆ ಕೊಡಬೇಕು. ಇಂತಹ ಯೋಜನೆ ಆಗಬೇಕಾಗಿದೆ. ಇದು ಇನ್ನೂ ತೀವ್ರವಾಗಿ ಆಗಲೆಂದು ಹಾರೈಸುತ್ತೇನೆ.

ಇನ್ನು ಸ್ಟೇಟ್ ಮತ್ತು ಸೆಂಟ್ರಲ್ ಫಾರ್ಮ್‌ಗಳ ಬಗ್ಗೆ ಹೇಳಿದ್ದಾರೆ. ಇದು ಎಷ್ಟು ಸಮರ್ಪಕವಾಗಿ ನಡೆಯಬೇಕಿತ್ತೋ, ಅಷ್ಟು ಸಮರ್ಪಕವಾಗಿ ನಡೆದಿಲ್ಲ. ಇದು ನಡೆಯುವುದಕ್ಕೆ ಪ್ರಯತ್ನ ಮಾಡಬೇಕು. ನಾನು ಕೂಡ ಹಿಂದೆ ಎಷ್ಟೋ ಪ್ರಾಮಾಣಿಕ ಪ್ರಯತ್ನ ಮಾಡಿದರೂ ಕೈಮೀರಿ ಅನೇಕ ಕಾರ್ಯಗಳು ಹಾಗೆಯೇ ಉಳಿದಿವೆ. ಇದನ್ನು ಪೂರ್ತಿಯಾಗಿ ತಿದ್ದಿಕೊಳ್ಳತಕ್ಕಂಥ ಭಾರ ನಮ್ಮ ಕೃಷಿ ಮಂತ್ರಿಗಳ ಮೇಲೆ ಇದೆಯೆಂದು ಹೇಳುತ್ತೇನೆ. ಇನ್ನು ಒಂದೇ ಒಂದು ಮಾತನ್ನು ಹೇಳುತ್ತೇನೆ. ೧೯೮೫ನೇ ಇಸವಿಯಲ್ಲಿ ೫೫೮೨ ಗ್ರಾಮ ಮತ್ತು ೧೭೨ ಪಟ್ಟಣಗಳು ಒಟ್ಟು ಇರತಕ್ಕಂಥ ವ್ಯವಸ್ಥೆ ಇದೆ. ಇದರಲ್ಲಿ ಎರಡು ಸಾವಿರ ವರ್ಷಕ್ಕೆ ಹೋದರೆ ಗ್ರಾಮಮಟ್ಟದಲ್ಲಿ ಅಗ್ರಿಕಲ್ಚರಲ್ ಡೆವಲಪ್‌ಮೆಂಟ್ ಅಂದಾಜು ಮಾಡಿದರೆ, ೬೬೭೨ ಗ್ರಾಮಗಳದ್ದು ಮತ್ತು ೨೭೫ ಶಹರಗಳು—ಒಟ್ಟು ೯೫೫ ಆಗುತ್ತದೆ. ಎಕ್ಸ್‌ಪೋರ್ಟ್ ಪಾಲಿಸಿ ಬಗ್ಗೆ ಸಹಿತ ಹೇಳಿದ್ದೆ. ಲ್ಯಾಂಡ್ ಡೆವಲಪ್‌ಮೆಂಟ್ ಕಾರ್ಪೋರೇಷನ್, ಕಮರ್ಷಿಯಲ್ ಬ್ಯಾಂಕ್ ಎಂದು ಅನೇಕ ಯೋಜನೆಗಳನ್ನು ಮಾಡಬೇಕಾಗಿದೆ. ಮಾನ್ಯ ಅಧ್ಯಕ್ಷರೇ, ತಾವು ಸಾಕಷ್ಟು ಸಮಯವನ್ನು ಕೊಟ್ಟಿದ್ದೀರಿ ಆದರೆ ಈಗ ಶ್ರೀಮಾನ್ ಹೆಗಡೆಯವರು ಬಂದಿರುವುದರಿಂದ, ಒಂದು ಮಾತನ್ನು ಹೇಳುವುದಕ್ಕೆ ಇಚ್ಛೆಪಡುತ್ತೇನೆ. ಈ ಮಳೆಯ ಸಲುವಾಗಿ ಶೆಲ್ಟರ್ ಫಾರ್ ವಾಟರ್ ರಿಸೋರ್ಸಸ್ ಅಂತ ಶ್ರೀಮಾನ್ ಕಾಜಲಗಿಯವರು ನನ್ನ ಹತ್ತಿರ ಒಬ್ಬರನ್ನು ಕರೆದುಕೊಂಡು ಬಂದಿದ್ದರು, ಅದರ ಫಲವಾಗಿ ನಾವು ಸಾಕಷ್ಟು ಹಣವನ್ನು ಖರ್ಚು ಮಾಡಿದ್ದೇವೆ. ಒಂದು ಸೈಂಟಿಫಿಕ್ ರಿಪೋರ್ಟ್ ತಯಾರು ಮಾಡಿದ್ದಾರೆ. ಅದರಲ್ಲಿ ಅವರು ಬೆಳಗಾಂ ಜಿಲ್ಲೆಯಲ್ಲಿ ಇರತಕ್ಕಂಥ ಗುಡ್ಡಗಳಿಗೆ ತಡೆಯನ್ನು ಉಂಟುಮಾಡಿ ಮಳೆ ತರಲಿಕ್ಕೆ ಸಾಧ್ಯವೆಂದು ರಿಪೋರ್ಟ್ ಮಾಡಿದ್ದರು. ಇದನ್ನು ಶ್ರೀಮಾನ್ ಹೆಗಡೆಯವರಿಗೆ ಕಳಿಸಿಕೊಡಲಾಗಿತ್ತು. ಅವರು ಅದನ್ನು ಯಾರಿಗೋ ಕಳಿಸಿದರು. ಆಮೇಲೆ ಈ ರಿಪೋರ್ಟ್ ಸರಿಯಲ್ಲವೆಂದು ಹಲವರು ವಿರೋಧ ಮಾಡಿದರು. ಆದರೆ ಮದರಾಸಿನವರು ಇದು ಉತ್ತಮವಾಗಿದೆಯೆಂದು ವರದಿಯನ್ನು ಕೊಟ್ಟಿದ್ದಾರೆ. ನಾನು ಇದನ್ನು ಶ್ರೀ ರಾಮಕೃಷ್ಣ ಹೆಗಡೆಯವರಿಗೆ ಕಳಿಸಿಕೊಡುತ್ತೇನೆ. ಆದರೆ ನಿಜವಾಗಿಯೂ ನನಗೆ ಇದು ಅರ್ಥವಾಗುವುದಿಲ್ಲ. ಈ ಬಗ್ಗೆ ವಿಜ್ಞಾನಿಗಳು ಹೇಳಿರುವುದು ನಿಜವೇ ಆಗಿದ್ದರೆ ಈಡ ಮಳೆ ಅಭಾವ ಇರುವ ಬೆಳಗಾಂ ಜಿಲ್ಲೆಯಲ್ಲಿ, ಅದು ತಪ್ಪಿಹೋಗುತ್ತದೆ. ಆದ್ದರಿಂದ ಈ ವರದಿಯನ್ನು ಸರ್ಕಾರದವರು ಪರಿಶೀಲನೆ ಮಾಡಿ ನೋಡಬೇಕು. ಇದನ್ನು ನಾನು ಮುಖ್ಯಮಂತ್ರಿಗಳ ಕಡೆಗೆ ಕಳುಹಿಸಿಕೊಡುತ್ತೇನೆ.

ಇನ್ನು ವ್ಯವಸಾಯ ಇಲಾಖೆಯಲ್ಲಿ ಕೆಲಸ ಮಾಡುತ್ತಿರುವ ಅನೇಕ ಜನರಿಗೆ ಪ್ರಮೋಷನ್ ವಿಚಾರದಲ್ಲಿ ಅನ್ಯಾಯವಾಗಿದೆ ಎಂದು ನಾನು ಇಲ್ಲಿ ಅನೇಕ ಸಂದರ್ಭಗಳಲ್ಲಿ ಹೇಳಿದ್ದೇನೆ. ಇಲ್ಲಿ

ಚೆನ್ನಾಗಿ ಕೆಲಸ ಮಾಡುತ್ತಿರುವವರಿಗೆ ಪ್ರೋತ್ಸಾಹ ಸಿಗುತ್ತಿಲ್ಲ. ಕೋರ್ಟಿನ ಮೂಲಕ ಪ್ರಮೋಷನ್ ಕೊಡಬೇಕೆಂದು ತೀರ್ಮಾನವಾಗಿದ್ದರೂ ಸಹ ಪ್ರಮೋಷನ್ ಕೊಟ್ಟಿಲ್ಲ. ಕೆಲವರಿಗೆ ಸೀನಿಯಾರಿಟಿ ಇದ್ದರೂ ಸಹ, ಅವರ ಸೀನಿಯಾರಿಟಿಯನ್ನು ಇನ್ನೂ ನಿಗದಿ ಮಾಡಿಲ್ಲ. ನಾನು ಯಾರಿಗೆ ಅನ್ಯಾಯ ವಾಗಿದೆ ಎಂದು ಅವರ ಹೆಸರು ಹೇಳುವುದಿಲ್ಲ. ಈಗ ಮಾನ್ಯ ಪ್ರಕಾಶ್ ಅವರು ಶ್ರೀ ರಾಮಕೃಷ್ಣ ಹೆಗಡೆಯವರ ಕಡೆಯಿಂದ ಪ್ರಮೋಷನ್ ಪಡೆಯುವ ಹಂತದಲ್ಲಿದ್ದಾರೆ. ಈ ಇಲಾಖೆಯಲ್ಲಿ ಯಾರಿಗಾದರೂ ಅನ್ಯಾಯವಾಗಿದ್ದರೆ, ಅಂತಹವರಿಗೆ ತಮ್ಮ ಒಂದು ದರ್ಬಾರ್‌ನಲ್ಲಿ ನ್ಯಾಯ ದೊರಕಿಸಿ ಕೊಡಬೇಕು. ಈ ಬಗ್ಗೆ ನಿಯಮಗಳೇನಾದರೂ ಅಡ್ಡಿಯಾಗಿದ್ದರೆ, ಅದನ್ನು ತಿದ್ದುಪಡಿ ಮಾಡಬೇಕು. ಶ್ರೀ ಅಣ್ಣೀಗೇರಿ ಎಂಬುವರು ವ್ಯವಸಾಯ ಇಲಾಖೆಯಲ್ಲಿ ಬಹಳ ವರ್ಷಗಳಿಂದ ಸೇವೆ ಸಲ್ಲಿಸುತ್ತಾ ಬಂದಿದ್ದಾರೆ. ಆದ್ದರಿಂದ ಅವರಿಗೆ ನಿಜವಾಗಿಯೂ ಸಿಗಬೇಕಾದ ಪ್ರಮೋಷನ್ ಸಿಗದಿದ್ದರೆ ಹೇಗೆ ? ನಾನು ಕಳೆದ ಸಲವೂ ಅನೇಕ ವಿಚಾರಗಳನ್ನು ಪ್ರಸ್ತಾಪ ಮಾಡಿದ್ದೆ. ಆದರೆ ಅವು ಯಾವುವೂ ಸಹ ಕಾರ್ಯಗತ ಆಗಿಲ್ಲ. ಕೆಲವು ಅಧಿಕಾರಿಗಳು ಸರ್ಕಾರದಿಂದ ಹಣ ಪಡೆದಿದ್ದಾರೆ. ಆದರೆ ಆ ಹಣವನ್ನು ಇನ್ನೂ ಸರ್ಕಾರಕ್ಕೆ ಪಾವತಿ ಮಾಡಿಲ್ಲ. ಇದನ್ನು ತಮ್ಮ ಗಮನಕ್ಕೆ ತಂದರೂ ಸಹ ತಾವು ಯಾವ ಕ್ರಮವನ್ನೂ ತೆಗೆದುಕೊಂಡಿಲ್ಲ. ಒಬ್ಬರು ಈ ರೀತಿ ಮಾಡಿದರೂ ಸಹ ಅದರಿಂದ ಇಡೀ ಇಲಾಖೆಗೇ ಕಳಂಕ ಬರುತ್ತದೆ. ಈ ಇಲಾಖೆಯಲ್ಲಿ ಒಳ್ಳೆಯವರೂ ಸಹ ಇದ್ದಾರೆ. ಆದರೆ ನೀವು ಕೆಟ್ಟವರ ಬಗ್ಗೆ ಗಮನಹರಿಸಬೇಕಾಗುತ್ತದೆ. ಈ ಇಲಾಖೆಯ ಬಗ್ಗೆ ಇನ್ನೂ ಅನೇಕ ವಿಚಾರಗಳನ್ನು ಹೇಳುವುದಿತ್ತು. ಆದರೆ ಸಮಯ ಸಾಕಷ್ಟು ಇಲ್ಲ. Agriculture is the best culture in the world. It is the backbone of the farmers and farmers are the back-bone of the country. ಈ ಅಂಶವನ್ನು ನೀವು ಗಮನದಲ್ಲಿಟ್ಟುಕೊಂಡು ವ್ಯವಸಾಯ ಗಾರರಿಗೆ ಹೆಚ್ಚು ಲಾಭ ತರುವಂತಹ ಯೋಜನೆಗಳನ್ನು ಕೈಗೊಳ್ಳಬೇಕೆಂದು ಸಲಹೆ ಮಾಡುತ್ತೇವೆ. ಅದೇ ರೀತಿ ಆಗ್ರೋ ಇಂಡಸ್ಟ್ರೀಸ್ ಕಾರ್ಪೊರೇಷನ್ ಮೂಲಕ ಸಹ ವ್ಯವಸಾಯಗಾರರಿಗೆ ಉಪಯುಕ್ತ ವಾಗುವಂತಹ ಯೋಜನೆಗಳನ್ನೇ ಜಾರಿಗೆ ತರಬೇಕೆಂದು ಹೇಳಿ ನನಗೆ ಇಷ್ಟು ಸಮಯ ಕೊಟ್ಟಿದ್ದಕ್ಕೆ ತಮಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

† ಶ್ರೀ ಬಿ. ಚಿಕ್ಕಪ್ಪ (ಚಿಕ್ಕನಾಯಕನಹಳ್ಳಿ).—ಮಾನ್ಯ ಅಧ್ಯಕ್ಷರೇ, ವ್ಯವಸಾಯ ಎಷ್ಟು ಪುರಾತನ ವಾದುದೋ ಅಷ್ಟೇ ಪುರಾತನವಾದುದು, ಈ ಪಶುಸಂಗೋಪನೆ ಮತ್ತು ಕುರಿ ಸಾಕಾಣಿಕೆ. ಇದು ಬಹಳ ಹಿಂದಿನಿಂದಲೂ ನಡೆದುಕೊಂಡು ಬಂದಿರುವ ಒಂದು ವೃತ್ತಿಯಾಗಿದೆ. ಇದನ್ನು ಎಲ್ಲ ಜನಾಂಗದವರೂ ಸಹ ಮಾಡುವುದಿಲ್ಲ. ಹಿಂದುಳಿದ ವರ್ಗಕ್ಕೆ ಸೇರಿದ ಕುರುಬರು, ಗೊಲ್ಲರು, ನಾಯಕರು ಹಾಗೂ ಅಲ್ಪಸಂಖ್ಯಾತರು ಮೊದಲಿನಿಂದಲೂ ಈ ಕಸಬನ್ನು ಮಾಡಿಕೊಂಡು ಬಂದಿದ್ದಾರೆ. ಇವರು ಕುರಿಸಾಕಾಣಿಕೆ ಜೊತೆಗೆ ಕುರಿಯಿಂದ ಬರುವ ಉಣ್ಣೆಯನ್ನು ಉತ್ಪಾದನೆ ಮಾಡಿಕೊಂಡು ಬಂದಿದ್ದಾರೆ. ಆದ್ದರಿಂದ ಬಡವರು, ಅಲ್ಪಸಂಖ್ಯಾತರು ಮತ್ತು ಹಿಂದುಳಿದ ವರ್ಗದವರು ಅವಲಂಭಿಸಿರತಕ್ಕಂಥ ಈ ಕಸಬನ್ನು ಸರ್ಕಾರದವರು ಅಭಿವೃದ್ಧಿಪಡಿಸುವುದು ಬಹಳ ಅಗತ್ಯವಾಗಿದೆ. ಈ ಕುರಿಗಳಿಂದ ನಮಗೆ ಕೇವಲ ಉಣ್ಣೆ ಮಾತ್ರ ಸಿಗುವುದಿಲ್ಲ. ಉಣ್ಣೆಯ ಜೊತೆಗೆ ಒಳ್ಳೆಯ ಮಾಂಸ ಮತ್ತು ವ್ಯವಸಾಯಕ್ಕೆ ಅಗತ್ಯವಾದ ಗೊಬ್ಬರ ಸಹ ಸಿಗುತ್ತದೆ. ಹೀಗೆ ಕುರಿಗಳನ್ನು ಸಾಕುವುದರಿಂದ ನಮಗೆ ಮೂರು ಅನುಕೂಲಗಳು ಸಿಗುತ್ತವೆ. ನಮ್ಮ ರಾಜ್ಯದಲ್ಲಿ ಈಗ ೪೭ ಲಕ್ಷಕ್ಕೂ ಹೆಚ್ಚು ಕುರಿಗಳು ಇವೆ. ಆದ್ದರಿಂದ ನಮ್ಮ ರಾಜ್ಯದಲ್ಲಿ ಲಕ್ಷಾಂತರ ಜನರು ಉಣ್ಣೆ ಕೈಗಾರಿಕೆಯನ್ನು ಅವಲಂಬಿಸಿದ್ದಾರೆ. ಈ ಕುರಿ ಉಣ್ಣೆಯಿಂದ ಕಂಬಳಿಗಳನ್ನು ಮತ್ತು ಬ್ಲ್ಯಾಂಕೆಟ್ಸನ್ನು ತಯಾರು ಮಾಡಲಾಗುತ್ತದೆ. ಈ ಕಚ್ಚಾ ಮಾಲಿನಿಂದಲೇ ಇವೊತ್ತು ಲಕ್ಷಾಂತರ ಜನರ ಜೀವನ ನಡೆಯಬೇಕಾಗಿದೆ. ಇದರ ಜೊತೆಗೆ ನಮ್ಮಲ್ಲಿ ಈಗ ಉತ್ತಮ ವಾದಂಥ ಕುರಿ ಮಾಂಸಕ್ಕೆ ಹೆಚ್ಚಿನ ಬೇಡಿಕೆ ಇದೆ. ಕುರಿಗಳನ್ನು ಸಾಕುವುದರಿಂದ ಉತ್ಕೃಷ್ಟವಾದಂಥ ಗೊಬ್ಬರವನ್ನು ನಾವು ಪಡೆಯಬಹುದಾಗಿದೆ. ಈ ಕೆಲವು ಕಾರಣಗಳಿಂದ ನಮ್ಮ ರಾಜ್ಯದಲ್ಲಿ ಕುರಿಗಳನ್ನು ಅಭಿವೃದ್ಧಿಪಡಿಸಬೇಕೆಂದು ೧೯೭೫ರಲ್ಲಿ ಕುರಿ ಮತ್ತು ಕುರಿ ಉತ್ಪನ್ನಗಳ ಅಭಿವೃದ್ಧಿ ಮಂಡಳಿ ರಚನೆ ಆಯಿತು. ಈ ರೀತಿ ಬೋರ್ಡ್ ರಚನೆಯಾದ ಮೇಲೆ ಎಷ್ಟು ಜನ ಕುರಿ ಸಾಕುವವರಿಗೆ ಸಹಾಯ ಸಿಕ್ಕಿದೆ ಎಷ್ಟು ಜನ ಉಣ್ಣೆ ಕೈಗಾರಿಕೆಗಳವರಿಗೆ ಆರ್ಥಿಕ ನೆರವು ಸಿಕ್ಕಿದೆ ಯಾವ ಪ್ರಮಾಣದಲ್ಲಿ ಸಿಕ್ಕಿದೆ ಎಂದು ನಾನು ಮಾನ್ಯ ಸಚಿವರನ್ನು ಕೇಳುವುದಕ್ಕೆ ಇಷ್ಟಪಡುತ್ತೇನೆ. ಈ ಒಂದು ಬೋರ್ಡಿಗೆ ಕಳೆದ ಹತ್ತು ವರ್ಷಗಳಿಂದ ಸರ್ಕಾರ ಸಾಕಷ್ಟು ಹಣವನ್ನು ಒದಗಿಸಿಲ್ಲ. ೧೯೭೫–೭೬ರಲ್ಲಿ ೬ ಲಕ್ಷ ರೂಪಾಯಿಗಳನ್ನು ಕೊಟ್ಟಿದ್ದಾರೆ. ೧೯೭೬–೭೭ರಲ್ಲಿ ೨೫ ಲಕ್ಷ ರೂಪಾಯಿಗಳನ್ನು ಕೊಟ್ಟಿದ್ದಾರೆ.

೧೯೭೭-೭೮ರಲ್ಲಿ ಈ ಬೋರ್ಡಿನವರು ಒಂದು ಕೋಟಿ ೨೧ ಲಕ್ಷದ ೬೭ ಸಾವಿರ ರೂಪಾಯಿಗಳ ನೆರವನ್ನು ಕೇಳಿದ್ದರು. ಆದರೆ ಸರ್ಕಾರ ಅದನ್ನು ಒದಗಿಸಲಿಲ್ಲ. ಮತ್ತೆ ೧೯೭೮-೭೯ರಲ್ಲಿ ಸಹ ಹಣ ಒದಗಿಸಿಲ್ಲ. ೧೯೭೯-೮೦ರಲ್ಲಿ ಸಹ ಹಣ ಒದಗಿಸಿಲ್ಲ. ಮತ್ತೆ ೧೯೮೦-೮೧ರಲ್ಲಿ ಅವರು ೩ ಕೋಟಿ ೬೮ ಲಕ್ಷ ರೂಪಾಯಿಗಳ ನೆರವನ್ನು ಕೇಳಿದ್ದರೆ, ಸರ್ಕಾರದವರು ಕೊಟ್ಟಿದ್ದು ಒಂದು ಲಕ್ಷ ರೂಪಾಯಿಗಳನ್ನು ಮಾತ್ರ. ೧೯೮೧-೮೨ರಲ್ಲಿ ೧೫ ಲಕ್ಷದ ೫೭ ಸಾವಿರ ರೂಪಾಯಿಗಳನ್ನು ಕೊಟ್ಟಿದ್ದಾರೆ. ೧೯೮೨-೮೩ರಲ್ಲಿ ಸಹ ಕೇವಲ ೧೫ ಲಕ್ಷ ರೂಪಾಯಿಗಳನ್ನು ಕೊಟ್ಟಿದ್ದಾರೆ. ೧೯೮೩-೮೪ರಲ್ಲಿ ೨೦ ಲಕ್ಷ ರೂಪಾಯಿಗಳನ್ನು ಕೊಟ್ಟಿದ್ದೇವೆಂದು ಇಲ್ಲಿ ಹೇಳಿದ್ದಾರೆ. ಮತ್ತೆ ೪೦ ಲಕ್ಷ ರೂಪಾಯಿಗಳನ್ನು ಕುರಿಗಳ ಅಭಿವೃದ್ಧಿಗೆಂದು ತೆಗೆದಿಡಲಾಗಿದೆ ಎಂದು ಮಾನ್ಯ ಮಂತ್ರಿಗಳು ಹೇಳಿದ್ದಾರೆ. ಆದರೆ ಇಷ್ಟು ಹಣದಿಂದ ಕುರಿಗಳ ಅಭಿವೃದ್ಧಿ ಆಗುತ್ತದೆಯೇ ? ಕಳೆದ ಹತ್ತು ವರ್ಷಗಳಿಂದ ಇವರು ಇದಕ್ಕೆ ಒದಗಿಸಿರುವ ಹಣವನ್ನು ನೋಡಿದರೆ, ಈ ಹಣ ಅಲ್ಲಿ ಕೆಲಸ ಮಾಡುವ ಅಧಿಕಾರಿಗಳಿಗೆ ಸಂಬಳ ಕೊಡಲು ಮಾತ್ರ ಸಾಕಾಗುತ್ತದೆ. ನೀವು ಕೇವಲ ೧೫ ಲಕ್ಷ ರೂಪಾಯಿಗಳನ್ನು ಕೊಟ್ಟಿದ್ದರಿಂದ ಈ ರಾಜ್ಯದಲ್ಲಿ ಕುರಿಗಳನ್ನು ಸಾಕುವವರಿಗೆ ಎಷ್ಟು ಸಹಾಯ ಮಾಡಬೇಕಾಗಿತ್ತೋ ಅಷ್ಟು ಮಾಡಲು ಸಾಧ್ಯವಾಗಲಿಲ್ಲ, ಈ ರಾಜ್ಯದಲ್ಲಿ ಜಿಲ್ಲೆ ಮತ್ತು ತಾಲ್ಲೂಕ್ ಮಟ್ಟದಲ್ಲಿ ಸುಮಾರು ೮೦ ಸಹಕಾರ ಸಂಘಗಳನ್ನು ತೆರೆದು, ಅವುಗಳ ಮೂಲಕ ಕುರಿ ಸಾಕುವವರಿಗೆ ಮತ್ತು ಕುರಿ ಉತ್ಪನ್ನಗಳನ್ನು ಬಳಸಿ ಕೈಗಾರಿಕೆಗಳನ್ನು ನಡೆಸುವವರಿಗೆ ಆರ್ಥಿಕ ನೆರವನ್ನು ನೀಡಲು ತಮಗೆ ಹೆಚ್ಚಿನ ಆರ್ಥಿಕ ನೆರವನ್ನು ನೀಡಬೇಕೆಂದು ಇದೇ ಮಂಡಳಿಯವರು ಸರ್ಕಾರಕ್ಕೆ ೧೯೮೪ರಲ್ಲಿ ಒಂದು ಶಿಫಾರಸನ್ನು ಕಳುಹಿಸಿ ಕೊಟ್ಟಿದ್ದರು, ಆದರೆ ಅದಕ್ಕೆ ಇನ್ನೂ ಸರ್ಕಾರದವರ ಅನುಮತಿ ಸಿಕ್ಕಿಲ್ಲ. ಆದರೆ ಮತ್ತೊಂದು ಕಡೆಯಲ್ಲಿ ವಿಶ್ವಬ್ಯಾಂಕ್‌ನಿಂದ ಸಹಾಯ ಪಡೆದು ಸುಮಾರು ೩೧ ಕೋಟಿ ರೂಪಾಯಿಗಳ ವೆಚ್ಚದಲ್ಲಿ ಈ ನಿಗಮವನ್ನು ಅಭಿವೃದ್ಧಿಪಡಿಸುವುದಾಗಿ ಮಾನ್ಯ ಪಶುಸಂಗೋಪನಾ ಸಚಿವರು ಹೇಳಿದ್ದಾರೆ. ಇನ್ನೊಂದು ಕಡೆ ಕುರಿಗಳ ಅಭಿವೃದ್ಧಿಗಾಗಿ ಸುಮಾರು ೫೫ ಕೋಟಿ ರೂಪಾಯಿಗಳ ಯೋಜನೆಯನ್ನು ತಯಾರಿಸಲಾಗಿದೆ ಎಂದು ಮಾನ್ಯ ಮಂತ್ರಿಗಳಾದ ಶ್ರೀ ದೇವೇಗೌಡರು ಹೇಳಿದ್ದಾರೆ. ಇವರ ಬಾಯಿ ಮಾತುಗಳಿಂದಲೇ ಕುರಿ ಸಾಕುವವರು ಮತ್ತು ಕುರಿ ಉತ್ಪನ್ನಗಳ ಆಧಾರದ ಮೇಲೆ ಕೈಗಾರಿಕೆಗಳನ್ನು ನಡೆಸುವವರು ತೃಪ್ತಿ ಪಡೆಯಬೇಕಾಗಿದೆ. ಹಿಂದುಳಿದ ವರ್ಗದವರ ಬಗ್ಗೆ ಅಲ್ಪಸಂಖ್ಯಾತರ ಬಗ್ಗೆ ಇವರಿಗೆ ಎಷ್ಟು ಕಳಕಳಿ ಇದೆ ಎಂಬುದು ಇದರಿಂದಲೇ ತಿಳಿಯುತ್ತದೆ. ಶ್ರೀ ರಾಮಕೃಷ್ಣ ಹೆಗಡೆಯವರು ಈ ಜನರ ಬಗ್ಗೆ ತಮ್ಮ ಕಳಕಳಿಯನ್ನು ಬಾಯಿ ಮಾತಿನಲ್ಲಿ ವ್ಯಕ್ತಪಡಿಸುತ್ತಾರೆಯೇ ಹೊರತು, ಅದನ್ನು ಕೃತಿಯಲ್ಲಿ ಮಾಡಿ ತೋರಿಸುವುದಿಲ್ಲ. ಯಾರಿಗೋ ಒಬ್ಬರಿಗೆ ಅಧ್ಯಕ್ಷಗಿರಿ ಕೊಟ್ಟು, ಅವರಿಗೆ ಕಾರು ಮನೆ ಮುಂತಾದುವನ್ನು ಒದಗಿಸುವುದರ ಮೂಲಕ ಅವರನ್ನು ತೃಪ್ತಿಪಡಿಸುವ ಸಲುವಾಗಿ ಈ ಬೋರ್ಡನ್ನು ಇಟ್ಟುಕೊಳ್ಳುವುದಕ್ಕೆ ಬದಲು, ಇದನ್ನು ತೆಗೆಯುವುದೇ ಒಳ್ಳೆಯದು. ಈಗಲಾದರೂ ಲಕ್ಷಾಂತರ ಬಡ ಜನರಿಗೆ ಸಹಾಯವಾಗುವಂತಹ ಯೋಜನೆಗಳ ಕಡೆಗೆ ಹೆಚ್ಚಿನ ಆಸಕ್ತಿ ವಹಿಸಬೇಕು. ಕುರಿಗಳ ಅಭಿವೃದ್ಧಿಗೆ ಹೆಚ್ಚಿನ ಹಣವನ್ನು ಕೊಡಬೇಕು.

ಬೆಂಗಳೂರಿನಲ್ಲಿ ಒಂದು ಅನಿಮಲ್ ಅಂಡ್ ಅನಿಮಲ್ ಫುಡ್ ಕಾರ್ಪೊರೇಶನ್‌ನ್ನು ತೆರೆದಿದ್ದಾರೆ, ಈ ಕಾರ್ಪೊರೇಷನ್‌ಗೆ ಒಬ್ಬ ಛೇರ್ಮನ್, ಅವನಿಗೆ ಕಾರು, ಫೋನು ಸಂಬಳ, ಆ ಆಫೀಸಿಗೆ ಬೇಕಾದ ಸಿಬ್ಬಂದಿ ವರ್ಗದವರು ಎಲ್ಲಾ ಕೊಟ್ಟಿದ್ದಾರೆ. ಇದರಿಂದ ಲಕ್ಷಾಂತರ ರೂಪಾಯಿಗಳು ಸುಮ್ಮನೆ ಖರ್ಚಾಗುತ್ತಿದೆಯೇ ವಿನಃ ಯಾವುದೇ ರೀತಿಯ ಲಾಭವಾಗುತ್ತಿಲ್ಲ. ಕರ್ನಾಟಕ ರಾಜ್ಯದಲ್ಲಿ ಕುರಿ ಅಭಿವೃದ್ಧಿಗೆ ಸರ್ಕಾರದವರು ಯಾವ ಒಂದು ಒಳ್ಳೆಯ ಕೆಲಸವನ್ನೂ ಮಾಡಿಲ್ಲ. ಇವರು ಮಂಡಳಿಗಳನ್ನು ಮಾಡುವುದು ಅದಕ್ಕೆ ಒಬ್ಬ ಛೇರ್ಮನ್‌ನ್ನು ಮಾಡುವುದು ಅವನಿಗೆ ಬೇಕಾದ ಸವಲತ್ತುಗಳನ್ನು ಕೊಡುವುದು ಇವಿಷ್ಟೇ ಇವರು ಮಾಡುವುದು. ನಮ್ಮ ಬೆಂಗಳೂರಿನಲ್ಲಿ ಹಾಲು ಉತ್ಪಾದನಾ ಮಂಡಳಿ ಹೇಗೆ ಇದೆಯೋ ಅದೇ ರೀತಿ ಒಂದು ಕುರಿ ತಳಿಗಳ ಉತ್ಪನ್ನ ಮಂಡಳಿಯನ್ನು ಮಾಡಬೇಕು. ಈ ಮಂಡಳಿ ಸ್ವತಂತ್ರವಾಗಿ ಮತ್ತು ಜವಾಬ್ದಾರಿಯುತವಾಗಿ ಕೆಲಸವನ್ನು ಮಾಡುವಂಥ ರೀತಿಯಲ್ಲಿ ಮಾಡಬೇಕು. ಈ ಮಂಡಳಿಗೆ ಹೆಚ್ಚು ಬಂಡವಾಳವನ್ನು ಕೊಟ್ಟು ಕುರಿ ಉತ್ಪನ್ನವನ್ನು ಹೆಚ್ಚಿಗೆ ಮಾಡಬೇಕು. ಇವತ್ತಿನ ದಿವಸ ಕುರಿ ಸಾಕಣೆ ಮಾಡುವವರಿಗೆ ಯಾವುದೇ ರೀತಿಯ ಉತ್ತೇಜನ ಇಲ್ಲವಾಗಿದೆ. ಉದಾಹರಣೆಗೆ ಹೇಳುವುದಾದರೆ ನಮ್ಮ ಊರಿನಲ್ಲಿ ೩೦ ಮನೆಗಳು ಇವೆ. ಮೊದಲು ೨೮ ಮನೆಗಳಲ್ಲಿ ಒಬ್ಬೊಬ್ಬರೂ

ಸುಮಾರು ೫೦ರಿಂದ ೧೦೦ ಕುರಿಗಳವರೆಗೆ ಸಾಕುತ್ತಿದ್ದರು. ಇವತ್ತು ಪರಿಸ್ಥಿತಿ ಏನಾಗಿದೆ ಎಂದರೆ, ನಮ್ಮ ಊರಿನಲ್ಲಿ ಕೇವಲ ಇಬ್ಬರು ಅಥವಾ ಮೂರು ಜನರು ಮಾತ್ರ ಅದೂ ಕಡಿಮೆ ಕುರಿಗಳನ್ನು ಸಾಕುತ್ತಿದ್ದಾರೆ. ಏಕೆಂದರೆ ಕುರಿಗಳು ಮೇಯುವುದಕ್ಕೆ ಅಗತ್ಯವಾಗಿ ಬೇಕಾಗಿರತಕ್ಕಂತಹ ಹುಲ್ಲುಗಾವಲು ಇಲ್ಲ. ಮೊದಲು ಎಲ್ಲಾ ಹಳ್ಳಿಗಳ ಸುತ್ತಮುತ್ತಲೂ ಅನೇಕ ಸಾವಿರ ಎಕರೆಗಳಷ್ಟು ಗೋಮಾಳ ಭೂಮಿ ಇತ್ತು. ಇವತ್ತಿನ ದಿವಸ ಆ ಗೋಮಾಳ ಭೂಮಿಯನ್ನೆಲ್ಲಾ ವ್ಯವಸಾಯಕ್ಕೆ ಕೊಟ್ಟು ದನಗಳು ಮತ್ತು ಕುರಿಗಳು ಮೇಯುವುದಕ್ಕೆ ಜಾಗ ಇಲ್ಲದಂತಾಗಿದೆ. ಒಂದು ಕಡೆ ಪಶುಪಾಲನೆಯನ್ನು ಅಭಿವೃದ್ಧಿಪಡಿಸಬೇಕೆಂದು ಹೇಳುತ್ತಾರೆ. ಒಂದು ಕಡೆ ಪಶುಗಳು ಮೇಯುವುದಕ್ಕೆ ಇರುವ ಜಾಗವನ್ನು ಜನಗಳಿಗೆ ವಿತರಣೆ ಮಾಡುತ್ತಾರೆ. ಹೀಗಾಗಿ ಇವತ್ತಿನ ದಿವಸ ನಮ್ಮ ಪಶು ಸಂಪತ್ತು ನಾಶವಾಗಿ ಹೋಗಿದೆ. ಇನ್ನು ಮುಂದೆಯಾದರೂ, ಸರ್ಕಾರದವರು ಇಂತಹ ಗೋಮಾಳ ಭೂಮಿಯನ್ನು ವ್ಯವಸಾಯಕ್ಕೆ ಕೊಡದೆ ಕುರಿ ಮತ್ತು ದನಗಳು ಮೇಯುವುದಕ್ಕೆ ಹಾಗೇ ಇಡಬೇಕು. ಇಲ್ಲದಿದ್ದರೆ ಇನ್ನು ಮುಂದೆ ಕುರಿ ಮತ್ತು ದನಗಳ ಸಂಪತ್ತು ಕಡಿಮೆಯಾಗಿ ಹೋಗುತ್ತದೆ. ಮಾನ್ಯ ಸಚಿವರು ಕುರಿಗಳಿಗೆ ಮೇಯುವ ಜಾಗವನ್ನು ಇಡುವುದಲ್ಲದೇ ಕುರಿ ಸಂಪತ್ತನ್ನು ಅಭಿವೃದ್ಧಿ ಮಾಡುವುದಕ್ಕೆ ಒಂದು ಬೋರ್ಡನ್ನು ಮಾಡಬೇಕೆಂದು ಕೇಳಿಕೊಂಡು ನನಗೆ ಬಹಳ ಹೊತ್ತು ಕಾಯಿಸಿ ಅಂದರೆ ಸುಮಾರು ೬ ಗಂಟೆಗಳವರೆಗೆ ಕಾಯಿಸಿ ಮಾತನಾಡುವುದಕ್ಕೆ ಅವಕಾಶ ಕೊಟ್ಟ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

† ಶ್ರೀ ಪ್ರಭಾಕರ ಎಸ್. ರಾಣೆ (ಕಾರವಾರ).— ಮಾನ್ಯ ಅಧ್ಯಕ್ಷರೇ, ಮೀನುಗಾರಿಕೆ, ಬಂದರು ಇಲಾಖೆ ಮತ್ತು ಇನ್ನಿತರ ಇಲಾಖೆಗಳ ಮೇಲೆ ಮಂಡಿಸಿರುವಂತಹ ಬೇಡಿಕೆಗಳನ್ನು ನಾನು ವಿರೋಧಿಸುತ್ತಾ ಎರಡು ಮಾತುಗಳನ್ನು ಹೇಳಬಯಸುತ್ತೇನೆ. ಕರ್ನಾಟಕದಲ್ಲಿ ಸುಮಾರು ೨೮೦ ಕಿಲೋಮೀಟರ್‌ನಷ್ಟು ಉದ್ದದ ಕರಾವಳಿ ಪ್ರದೇಶ ಹಬ್ಬಿಕೊಂಡಿದೆ. ನಮ್ಮ ರಾಜ್ಯದಲ್ಲಿ ಮೀನುಗಾರಿಕೆಯು ಒಂದು ಮಹತ್ವದ ಪಾತ್ರವನ್ನು ವಹಿಸುತ್ತದೆ. ಮೀನುಗಾರಿಕೆಯ ಮಂತ್ರಿಗಳಾದ ಮಾನ್ಯ ಬೈರೇಗೌಡರು ಮತ್ತು ಅವರಿಗಿಂತ ಹಿಂದೆ ಮೀನುಗಾರಿಕೆ ಸಚಿವರಾಗಿದ್ದ ಶ್ರೀಮಾನ್ ರಾಜವರ್ಧನ್‌ರವರು ಮೀನುಗಾರಿಕೆಗೆ ನಾವು ದೊಡ್ಡ ಸಾಧನೆಯನ್ನು ಮಾಡುತ್ತೇವೆಂದು ಹೇಳಿದ್ದರು. ಆದರೆ ಏನು ಸಾಧನೆಯನ್ನು ಇವರು ಮಾಡಲಿಲ್ಲ. ಮೀನುಗಳನ್ನು ಹಿಡಿಯುವುದಕ್ಕೆ ಉಪಯೋಗಿಸುವ ಯಾಂತ್ರಿಕೃತ ದೋಣಿಗಳಿಗೆ ಮಾರಾಟ ತೆರಿಗೆಯಿಂದ ವಿನಾಯಿತಿ ನೀಡಿ ಸಬ್‌ಸೀಡಿ ರೇಟ್‌ನಲ್ಲಿ ಈ ಯಂತ್ರಗಳು ಮೀನುಗಾರರಿಗೆ ಸಿಗುವಂತಹ ಏರ್ಪಾಡನ್ನು ಮಾಡುತ್ತೇವೆಂದು ಘೋಷಣೆ ಮಾಡಿದ್ದರು ಆದರೆ ಅದರ ಬಗ್ಗೆ ಅವರು ಏನೂ ಕ್ರಮವನ್ನು ತೆಗೆದುಕೊಂಡಿರಲಿಲ್ಲ. ಹೋದ ಅಧಿವೇಶನದಲ್ಲಿ ನಾನು ಇದರ ಬಗ್ಗೆ ಪ್ರಶ್ನೆಯನ್ನು ಕೇಳಿದ ಮೇಲೆ ಸರ್ಕಾರದವರು ಯಾಂತ್ರೀಕೃತ ದೋಣಿಗಳನ್ನು ಖರೀದಿ ಮಾಡಿದವರಿಗೆ ಸಬ್‌ಸೀಡಿಯನ್ನು ಕೊಡುತ್ತೇವೆಂದು ದಿನಾಂಕ ೮-೮-೮೫ರಂದು ಒಂದು ಆಜ್ಞೆಯನ್ನು ಹೊರಡಿಸಿದರು. ಇವರು ಆಜ್ಞೆಯನ್ನು ಹೊರಡಿಸಿದರೇ ವಿನಃ ಈ ಆಜ್ಞೆಯಂತೆ ಇವರು ಕೆಲಸವನ್ನು ಮಾಡಲಿಲ್ಲ ಅಧಿಕಾರಿಗಳಂತೂ ಇಲ್ಲಸಲ್ಲದ ಶರತ್ತುಗಳನ್ನು ಹಾಕಿಯಾರಿಗೂ ಸಬ್‌ಸಿಡಿ ಸಿಗದ ರೀತಿಯಲ್ಲಿ ವ್ಯವಸ್ಥೆ ಮಾಡುತ್ತಾರೆ. ಇದುವರೆಗೆ ಯಾರಿಗೂ ಸಹ ಸಬ್‌ಸಿಡಿ ಸಿಕ್ಕಿಲ್ಲ. ಆಮೇಲೆ ಮೀನುಗಾರರಿಗೆ ಎಲ್ಲಾ ರೀತಿಯ ಸವಲತ್ತುಗಳನ್ನು ಕೊಡುತ್ತೇವೆಂದು ಮಾನ್ಯ ಮೀನುಗಾರಿಕೆ ಸಚಿವರು ಹೇಳಿದ್ದರು. ಈ ವರ್ಷದ ಆರ್ಥಿಕ ವರ್ಷ ಮುಗಿದು ಮುಂದಿನ ವರ್ಷ ಆರ್ಥಿಕ ವರ್ಷ ಬರುತ್ತಿದ್ದರೂ ಸಹ ಯಾವುದೇ ರೀತಿಯಲ್ಲಿ ಮೀನುಗಾರರಿಗೆ ಸೌಕರ್ಯವನ್ನು ಒದಗಿಸುವುದಕ್ಕೆ ಗಮನ ಇಟ್ಟಿಲ್ಲ. ಆದಷ್ಟು ಬೇಗ ಇದರ ಕಡೆ ಗಮನ ಹರಿಸಿ ಮೀನುಗಾರರ ಸೌಲಭ್ಯಕ್ಕಾಗಿ ವಿಶೇಷವಾಗಿ ಸರ್ಕಾರದಲ್ಲಿ ಹಣವನ್ನು ಬಿಡುಗಡೆ ಮಾಡಬೇಕು. ಈಗಾಗಲೇ ಉತ್ತರ ಕನ್ನಡ ಜಿಲ್ಲೆಯ ಮೀನುಗಾರರು ಸರ್ಕಾರಕ್ಕೆ ತಮ್ಮ ಕುಂದು ಕೊರತೆಗಳ ಬಗ್ಗೆ ಮನವಿಯನ್ನು ಮಾಡಿಕೊಂಡಿದ್ದಾರೆ. ತಾವು ಏನಾದರೂ ಇವರ ಬಗ್ಗೆ ಕ್ರಮ ತೆಗೆದುಕೊಳ್ಳದಿದ್ದರೆ, ಮೀನುಗಾರರು ಉಗ್ರವಾದ ಚಳುವಳಿಯನ್ನು ಮಾಡಬೇಕಾಗುತ್ತದೆ. ಈ ಚಳುವಳಿಗೆ ತಾವು ಆಸ್ಪದ ಕೊಡಬಾರದೆಂದು ಹಾಗು ಮೀನುಗಾರರ ಹಿತವನ್ನು ರಕ್ಷಿಸಬೇಕೆಂದು ಮಾನ್ಯ ಸಚಿವರಲ್ಲಿ ಕೇಳಿಕೊಳ್ಳುತ್ತೇನೆ. ಮೀನುಗಾರರು ಎಲ್ಲಾ ರೀತಿಯ ಸೌಕರ್ಯಗಳಿಂದಲೂ ವಂಚಿತರಾಗಿದ್ದಾರೆ ಅವರುಗಳಿಗೆ ಶಿಕ್ಷಣ, ಕುಡಿಯುವ ನೀರು, ವಸತಿ, ಆರೋಗ್ಯ ರಕ್ಷಣೆ ಮುಂತಾದ ಎಲ್ಲಾ ಪ್ರಾಥಮಿಕ ಸೌಕರ್ಯಗಳನ್ನು ಸರ್ಕಾರದವರು ಕೂಡಲೇ ಕೊಡುವುದಕ್ಕೆ ವ್ಯವಸ್ಥೆ ಮಾಡಬೇಕು, ಕರಾವಳಿಯ ಸಮುದ್ರಗಳಲ್ಲಿ ಮೀನುಗಾರರು ಅನೇಕ ಕಷ್ಟನಷ್ಟಗಳನ್ನು ವಹಿಸಿ ತಮ್ಮ ಜೀವನ

ವನ್ನು ಮಾಡುತ್ತಿದ್ದಾರೆ, ಅವರುಗಳಿಗೆ ಪ್ರಾಥಮಿಕ ಸೌಲಭ್ಯಗಳೂ ಸಿಗಲಿಲ್ಲ ಎಂದರೆ ಅವರು ಬದುಕುವುದು ಬಹಳ ಕಷ್ಟವಾಗುತ್ತದೆ. ಈ ದಿಸೆಯಲ್ಲಿ ಕಾರ್ಯತತ್ಪರರಾಗಬೇಕು. ಈಗಾಗಲೇ ಮಲ್ಪೆ ಮತ್ತು ಹೊನ್ನಾವರಗಳಲ್ಲಿ ಬಂದರುಗಳು ನಿರ್ಮಾಣವಾಗಿವೆ ಅಲ್ಲಿರುವ ಮೀನುಗಾರರಿಗೂ ಸೌಲಭ್ಯಗಳನ್ನು ಸರ್ಕಾರದವರು ಕಲ್ಪಿಸಿಕೊಡಬೇಕು. ಮೀನುಗಾರರಿಗೆ ಯಾಂತ್ರಿಕೃತ ದೋಣಿಗಳನ್ನು ಕೊಡುವುದಕ್ಕೆ ಹೆಚ್ಚಿನ ಪ್ರಾಶಸ್ತ್ಯವನ್ನು ಕೊಡಬೇಕು. ರಾಜ್ಯ ಸರ್ಕಾರದಲ್ಲಿ ಹಣ ಇಲ್ಲದಿದ್ದರೆ ಕೇಂದ್ರ ಸರ್ಕಾರದವರಿಂದ ಸಹಾಯವನ್ನು ಈ ದಿಸೆಯಲ್ಲಿ ಪಡೆಯಬೇಕೆಂದು ಹೇಳುತ್ತೇನೆ. ಇನ್ನು ಸಮುದ್ರ ಕೊರೆತ ಪ್ರತಿ ವರ್ಷವೂ ಹೆಚ್ಚುತ್ತಲೇ ಇದೆ. ಈ ಸಮುದ್ರ ಕೊರೆತವನ್ನು ನಿಲ್ಲಿಸಲು ತಡೆ ಗೋಡೆಗಳನ್ನು ನಿರ್ಮಿಸುವ ವಿಷಯದಲ್ಲಿ ಸರ್ಕಾರದ ಸಾಧನೆ ಅಷ್ಟೊಂದು ಸಮಾಧಾನಕರವಾಗಿಲ್ಲವೆಂದು ಹೇಳುತ್ತೇನೆ, ಈ ದಿಸೆಯಲ್ಲಿ ಕೇರಳಾ ರಾಜ್ಯದವರು ಮತ್ತು ಆಂಧ್ರ ರಾಜ್ಯದವರು ಕೇಂದ್ರ ಸರ್ಕಾರದ ನೆರವನ್ನು ತೆಗೆದುಕೊಂಡು ಸಮುದ್ರದ ಕೊರೆತವನ್ನು ತಪ್ಪಿಸುವುದಕ್ಕೆ ತಡೆಗೋಡೆ ನಿರ್ಮಿಸುತ್ತಿದ್ದಾರೆ. ಮಾನ್ಯ ಸಚಿವರಾದ ಬೈರೇಗೌಡರು ಈ ದಿಸೆಯಲ್ಲಿ ಹೆಚ್ಚಿನ ಪ್ರಯತ್ನವನ್ನು ಮಾಡಿ ಕೇಂದ್ರ ಸರ್ಕಾರದ ಸಹಾಯವನ್ನು ಪಡೆದುಕೊಂಡು ಸಮುದ್ರ ಕೊರೆತವನ್ನು ತಡೆಗಟ್ಟಲು ತಡೆಗೋಡೆಗಳನ್ನು ಕಟ್ಟುವಂತಹ ಕೆಲಸವನ್ನು ಮಾಡಬೇಕೆಂದು ಕೇಳಿಕೊಳ್ಳುತ್ತೇನೆ. ಇನ್ನು ಮತ್ಸ್ಯ ಸಂವರ್ಧನೆ ಹಾಗೂ ಸೀಗಡಿ ಸಂವರ್ಧನೆಯನ್ನು ಹೆಚ್ಚು ಮಾಡಬೇಕು. ಸೀಗಡಿ ಮತ್ತು ಮತ್ಸ್ಯ ಸಂವರ್ಧನೆಗೆ ಸರ್ಕಾರದವರು ಹೆಚ್ಚಿನ ಗಮನವನ್ನು ಕೊಡಬೇಕು. ಏಕೆಂದರೆ ಇಪತ್ತಿನ ದಿವಸಗಳಲ್ಲಿ ಮೀನುಗಾರರಿಗೆ ಸಮುದ್ರದಲ್ಲಿ ನಿರೀಕ್ಷಿತ ಮಟ್ಟದಲ್ಲಿ ಮೀನುಗಳು ಸಿಕ್ಕುತ್ತಿಲ್ಲ. ಆದ್ದರಿಂದ ಸೀಗಡಿಗಳನ್ನು ಉಪ್ಪು ನೀರಿನ ಬಾವಿಗಳಲ್ಲಿ ಬೆಳೆಸುವುದಕ್ಕೆ ಗಮನ ಕೊಡಬೇಕು. ಈ ಯೋಜನೆಗೆ ಬೇಕಾಗುವ ಹಣವನ್ನು ಕೇಂದ್ರ ಸರ್ಕಾರದವರು ಕೊಡುತ್ತಾರೆಂದು ನಾನು ತಿಳಿದುಕೊಂಡಿದ್ದೇನೆ.

ಈ ಒಂದು ಸೀಗಡಿ ಮೀನು ಕೃಷಿಯನ್ನು ನಾವು ಹೆಚ್ಚು ಪ್ರಮಾಣದಲ್ಲಿ ಅಭಿವೃದ್ಧಿಗೊಳಿಸಬೇಕಾದರೆ ಈಗಾಗಲೇ ಪಿ. ಡಬ್ಲ್ಯು. ಡಿ ಇಲಾಖೆಯ ಒಂದು ಬೇಡಿಕೆಯ ಮೇಲೆ ಮಾತನಾಡುತ್ತಾ ಹಿಂದೆ ಖಾರ್‌ಲೆಂಡ್ ಬೋರ್ಡನ್ನು ಮಾಡಬೇಕೆಂಬ ಒಂದು ನಿರ್ಣಯವನ್ನು ಸರಕಾರ ತೆಗೆದುಕೊಂಡಿತ್ತು. ಆದರೆ ಅದರ ಬಗ್ಗೆ ವಿಶೇಷ ಗಮನವನ್ನು ಹೊರೈಸಿಲ್ಲ ಈ ದಿಶೆಯಲ್ಲಿ ಮಹಾರಾಷ್ಟ್ರದವರು ನಿಜವಾಗಿಯೂ ಈ ಖಾರ್‌ಲ್ಯಾಂಡ್ ಬೋರ್ಡ್‌ನ್ನು ಮಾಡಿ ಏನು ಈ ಫಜನಿ ಭೂಮಿ ಇದೆ ಆ ಭೂಮಿಯಲ್ಲಿ ಕೃಷಿ ಮತ್ತ ಮೀನಿನ ಬೆಳೆಯ ಕೃಷಿ ಮಾಡುವ ಯೋಜನೆಯನ್ನು ಅವರು ಮಾಡಿಕೊಂಡಿದ್ದಾರೆ ಆದುದರಿಂದ ಉತ್ತರ ಕನ್ನಡ ಜಿಲ್ಲೆಯಲ್ಲಿ ಫಜನಿ ಭೂಮಿಯ ಒಂದು ಬೆಳವಣಿಗೆಯನ್ನು ಮಾಡಲಿಕ್ಕೆ ಆದರಲ್ಲಿಯೂ ಈ ಸಿಗಡಿ ಮೀನಿನ ಕೃಷಿಯನ್ನು ಯೋಗ್ಯ ರೀತಿಯಲ್ಲಿ ಮಾಡಿ ಮೀನುಗಾರರಿಗೆ ಮತ್ತು ಕೃಷಿಗಾರರಿಗೆ ಸಹಾಯ ಆಗುವಂತಹ ಆ ಯೋಜನೆಯನ್ನು ಆದಷ್ಟು ಬೇಗ ಕಾರ್ಯರೂಪಕ್ಕೆ ತರುವಂತೆ ಖಾರ್ ಲೆಂಡ್ ಬೋರ್ಡನ್ನು ಮಾಡುವಂತೆ ಮಾನ್ಯ ಲೋಕೋಪಯೋಗಿ ಮಂತ್ರಿಗಳವರಲ್ಲಿಯೂ ತಮ್ಮ ಪ್ರಭಾವ ಬೀರುತ್ತಾರೆಂದು ಮಾನ್ಯ ಮೀನುಗಾರಿಕೆ ಸಚಿವರ ಕೇಳಿಕೊಳ್ಳುತ್ತೇನೆ.

ಇನ್ನು ಒಳನಾಡು ಜಲಸಾರಿಗೆ ವಿಚಾರದ ಬಗ್ಗೆ ಹೇಳುವುದಾದರೆ ನಮ್ಮ ಕಾರವಾರ, ಕೋಡಿಬಾಗ್ ಸದಾಶಿವಗಡ, ಇಲ್ಲಿಯ ಜಲಸಾರಿಗೆಯ ಬಗ್ಗೆ ಈ ಹಿಂದೆ ಎಲ್‌ಸಿಟಿ ಯ ಒಂದು ಸಾರಿಗೆ ವಾಹನ ಏನಿತ್ತು ಅದು ಈಗ ನಿರುಪಯುಕ್ತವಾಗಿ ಬಿದ್ದಿದೆ. ಅಲ್ಲ ಈಗ ಒಂದು ಸೇತುವೆ ಮಾಡುವ ಅವಶ್ಯಕತೆಯೂ ಇಲ್ಲ ಕಳೆದ ಸಲ ಅಂದರೆ ಗೌರಿಶಿರ ವಿಧಾನ ಸಭೆ ಇತ್ತು, ಆವಾಗ ನಾನು ಮತ್ತು ಅಂಕೋಲೆಯ ಶಾಸಕರು ಗಂಗಾವಳಿಯ ಹತ್ತಿರ ಈ ಒಂದು ಗಂಗಾವಳಿಯ ಅಡ್ಡವಾಗಿ ಅಂಕೋಲದಿಂದ ಗೋಕರ್ಣಕ್ಕೆ ಹೋಗುವ ಮಾರ್ಗದಲ್ಲಿ ಎಲ್‌ಸಿಟಿಯ ವಾಹನ ಸೌಕರ್ಯವನ್ನು ಮಾಡಿಕೊಡಬೇಕೆಂದು ಕೇಳಿ ಕೊಂಡಿದ್ದೆವು. ಆಗ ಲೋಕೋಪಯೋಗಿ ಸಚಿವರಾದ ಮಾನ್ಯ ದೇವೇಗೌಡರು ಸಹ ಅದಕ್ಕೆ ತಮ್ಮ ಒಪ್ಪಿಗೆಯನ್ನು ಕೊಟ್ಟಿದ್ದರು ಆದರೆ ಅದು ಇನ್ನೂ ಕಾರ್ಯಗತವಾಗಿಲ್ಲ ಆದಷ್ಟು ಜಾಗ್ರತೆ ಈ ವಾಹನ ಸೌಕರ್ಯವನ್ನು ಮಾಡಿಕೊಡಬೇಕೆಂದು ತಮ್ಮಲ್ಲಿ ಕೇಳಿಕೊಳ್ಳುತ್ತೇನೆ.

ಇನ್ನು ನದಿ ಮೀನುಗಾರಿಕೆ ವಿಷಯದಲ್ಲಿ ತಮ್ಮ ವರದಿಯಲ್ಲಿ ಧಾರವಾಡ ಮತ್ತು ಇನ್ನುಳಿದ ಜಿಲ್ಲೆಗಳ ಬಗ್ಗೆ ಮಾತ್ರ ಉಲ್ಲೇಖಿಸಿದ್ದೀರಿ. ಆದರೆ ನಾನು ಹೇಳುವುದೇನೆಂದರೆ ಕಾರವಾರದ ಕಾಳಿ ನದಿ ಗುಂಟ, ಅಗನಾಶಿನ ನದಿ ಗುಂಟ, ಶರಾವತಿ ನದೀ ಗುಂಟ, ಗಂಗಾವಳಿ ನದೀ ಗುಂಟ ಈ ಮೀನುಗಾರಿಕೆ ಮಾಡುವಂಥದ್ದು ವಿಫುಲವಾಗಿದೆ ಅಂತಹ ಅವಕಾಶವೂ ಅಲ್ಲಿ ಬಹಳಷ್ಟು ಇದೆ. ಈಗ ತಾವು ಸಮುದ್ರ ಮೀನುಗಾರಿಕೆ ವಿಚಾರದಲ್ಲಿ ಈಗ ಬೇರೆಬೇರೆ ಯೋಜನೆಗಳನ್ನು ತಂದಾಗ ಆ ಒಂದು ಯೋಜನೆಗಳ ಲಾಭ

ನದಿ ಮೀನುಗಾರರಿಗೆ, ಮೀನುಗಾರಿಕೆ ಕೃಷಿ ಮಾಡುವಂತಹವರಿಗೆ ಅದರಿಂದ ಸಹಾಯವಾಗುವುದಿಲ್ಲ. ಈ ಜನರಿಗೆ ಬೇಕಾಗುವಂತಹ ಸಹಾಯ ಸಮುದ್ರ ಮೀನುಗಾರರಿಗೆ ಬೇಕಾಗುವಷ್ಟು ಬೇಕಾಗುವುದಿಲ್ಲ. ಸ್ವಲ್ಪ ಪ್ರಮಾಣದಲ್ಲಿ ಅವರಿಗೆ ಸಹಾಯವನ್ನು ಒದಗಿಸಿದರೆ ಸಾಕು ಅವರಿಗೆ ನಿಜವಾಗಿಯೂ ಬಹಳಷ್ಟು ಉಪಕಾರ ಮಾಡಿದಂತಾಗುತ್ತದೆ. ಕಾಳಿ ನದಿ, ಗಂಗಾವಳಿ ನದಿ, ಶರಾವತಿ ನದಿಯಲ್ಲಿ ವಿಪುಲವಾಗಿ ಮೀನುಗಾರಿಕೆ ಅಭಿವೃದ್ಧಿ ಮಾಡುವಂತಹ ಮೀನುಗಾರರು ಇದ್ದಾರೆ, ಅವರಿಗೆ ಸಹಾಯವಾಗುವಂತಹ ಯೋಜನೆಯನ್ನು ಜಾರಿಗೆ ತಂದು, ಅವರಿಗೆ ಬೇಕಾಗುವಂತಹ ದೋಣಿಗಳು ಯಂತ್ರದೋಣಿಗಳು, ಅದಕ್ಕೆ ಬೇಕಾಗುವಂತಹ ಬಲೆಗಳು, ಮತ್ತಿತರ ಉಪಕರಣಗಳನ್ನು ಮುಂತಾದವುಗಳನ್ನು ಒದಗಿಸಿ, ಇವರಿಗೆ ಉಪಕೃತರಾಗಬೇಕೆಂದು ತಮ್ಮಲ್ಲಿ ಕೇಳಿಕೊಳ್ಳುತ್ತೇನೆ.

ಇನ್ನು ಮೀನುಗಾರಿಕೆ ರಸ್ತೆಗಳ ಬಗ್ಗೆ ಹೇಳುವುದಾದರೆ, ಬಹಳಷ್ಟು ದುರ್ದೈವದಿಂದ ಈ ಮಾತುಗಳನ್ನು ಹೇಳ ಬೇಕಾಗುತ್ತದೆ ಮೀನುಗಾರಿಕೆ ರಸ್ತೆಗಳು ಅನಾಥ ರಸ್ತೆಗಳು ಆಗಿವೆ. ನಮ್ಮ ಕಾರವಾರ ತಾಲ್ಲೂಕಾಗಲಿ, ಅಥವಾ ಇನ್ನುಳಿದ ಕರಾವಳಿ ಪ್ರದೇಶವೇ ಆಗಲಿ, ಈ ಮೀನುಗಾರಿಕೆ ರಸ್ತೆಗಳ ಬಗ್ಗೆ ಪ್ರಸ್ತಾಪ ಮಾಡಲಿಕ್ಕೆ ಹೋದಾಗ ಮೀನುಗಾರಿಕೆಯ ಇಲಾಖಾ ನಿರ್ದೇಶಕರು ಏನು ಹೇಳುತ್ತಾರೆ ಅಂದರೆ, ಅವುಗಳನ್ನು ಪಿ ಡಬ್ಲ್ಯುಡಿ ಇಲಾಖೆಗೆ ಹಸ್ತಾಂತರಿಸಿದ್ದೇವೆ ಎಂದು ಹೇಳುತ್ತಾರೆ. ಅವರನ್ನು ನಾವು ಕೇಳಿದರೆ ಮೀನುಗಾರಿಕೆ ಇಲಾಖೆಯವರಿಂದ ನಮಗೆ ಯಾವುದೇ ಫಂಡ್ ಬಂದಿಲ್ಲ ಎಂದು ಹೇಳುತ್ತಾರೆ. ಒಟ್ಟಿನಲ್ಲಿ ಹೀಗೆ ಆದರೂ ಕೂಡಾ ಈ ಮೀನುಗಾರಿಕೆ ರಸ್ತೆಯನ್ನು ಸುಧಾರಣೆ ಮಾಡಿಕೊಡಬೇಕೆಂದು ತಮ್ಮಲ್ಲಿ ಕೇಳಿಕೊಳ್ಳುತ್ತೇನೆ ನಿಜವಾಗಿಯೂ ಈ ಮೀನುಗಾರರ ಶ್ರಮದಿಂದಾಗಿ ಸರಕಾರದ ಬೊಕ್ಕಸಕ್ಕೆ, ಬಹಳಷ್ಟು ಹಣ ಸಂದಾಯವಾಗುತ್ತದೆ. ಅದರೆ ಅವರಿಗೆ ರಸ್ತೆ ನಿರ್ಮಾಣದಂತಹ ಪ್ರಾಥಮಿಕ ಸವಲತ್ತುಗಳನ್ನು ಕೂಡ ಮಾಡಿ ಕೊಡದಿದ್ದರೆ ಹೇಗೆ ? ಆ ಮೀನುಗಳನ್ನು ಹೊತ್ತು ಹತ್ತಾರು ಮೈಲುಗಳ ಉದ್ದನೆಯ ಹಾಳು ರಸ್ತೆಯಲ್ಲಿ ಆ ಜನರು ಬರುವುದನ್ನು ನೋಡಿದರೆ ನಮಗೆ ತುಂಬಾ ಬೇಸರ ಆಗುತ್ತದೆ, ಆದುದರಿಂದ ಅವರಿಗೆ ವಾಹನ ಸೌಲಭ್ಯವನ್ನು ಒದಗಿಸಲು ಅಲ್ಲಿಯ ರಸ್ತೆಗಳನ್ನು ಸುಧಾರಿಸಬೇಕಾಗಿ ತಮ್ಮಲ್ಲಿ ಕೇಳಿಕೊಳ್ಳುತ್ತೇನೆ. ತಾವು ಹೇಳಿದಂತೆ ಮೀನುಗಾರರ ರಾಷ್ಟ್ರೀಯ ಅಭಿವೃದ್ಧಿ ನಿಧಿಯಿಂದಲಾದರು ಸ್ವಲ್ಪ ಹಣವನ್ನು ತೆಗೆದುಕೊಂಡು ಈ ರಸ್ತೆಗಳನ್ನು ಸುಧಾರಣೆ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ.

ನನ್ನ ತಾಲ್ಲೂಕಿನ ಬಗ್ಗೆ ಹೇಳುವುದಾದರೆ, ಮಾದಾಳಿಯಲ್ಲಿನ ದೇವಬಾಗ್, ಸಂಕ್ರೂಬಾಗ್, ಹೀಗೆ ಅನೇಕ ಮೀನುಗಾರಿಕೆ ರಸ್ತೆಗಳು ಸರಿಯಾಗಿ ಇಲ್ಲದೆ ಜನರು ಕಷ್ಟಪಡುತ್ತಿದ್ದಾರೆ. ಆದುದರಿಂದ ದಯಮಾಡಿ ಈ ರಸ್ತೆಗಳನ್ನು ತ್ವರಿತವಾಗಿ ದುರಸ್ತಿ ಮಾಡಿಕೊಡಬೇಕಾಗಿ ಕೇಳಿಕೊಳ್ಳುತ್ತೇನೆ. ಇನ್ನು ಒಳನಾಡು ಜಲಸಾರಿಗೆ ಬಗ್ಗೆ ನಮ್ಮ ಕಾಳಿನದಿ ಗುಂಟ ಅನೇಕ ಕಡೆ ಕಾಳಿನದಿ ಎರಡು ಭಾಗದಲ್ಲಿ ಜನ ಒಂದು ಕಡೆಯಿಂದ ಇನ್ನೊಂದು ಕಡೆಗೆ ಹೋಗುವಂತಹ ಅನೇಕ ಸಂದರ್ಭಗಳು ಇವೆ. ಅಲ್ಲಿ ಜನ ಸಣ್ಣ ಸಣ್ಣ ದೋಣಿಗಳ ಮೂಲಕ ಜಲ ಸಾರಿಗೆ ಮಾಡಲು ಪರವಾನಿಗೆಯನ್ನು ಕೊಡುವ ಸಂದರ್ಭ ಇದೆ. ತಾವು ಒಳನಾಡು ಜಲ ಸಾರಿಗೆಯಲ್ಲಿ ಲಾಭ ಬರುವಂತಹವನ್ನು ಮಾಡುತ್ತೀರಿ. ಆದರೆ ಜನರಿಗೆ ಅಗತ್ಯವಾದ ಸೇವೆಯನ್ನು ಮಾಡುವುದಿಲ್ಲ ಲಾಭ ಬರುವ ಯೋಜನೆಗಳ ಜೊತೆಗೆ ಇವುಗಳನ್ನು ಕೂಡಾ ಮಾಡಿ ಕೊಟ್ಟು ಜನರಿಗೆ ಅನುಕೂಲ ಮಾಡಿಕೊಡಬೇಕು, ಕಾಳಿನದಿಯ ಕೊಡಿಬಾಗದಿಂದ ಮಲ್ಲಾಪುರದವರೆಗೆ, ಅಂದರೆ ಕೈಗಾ ಅಣುಸ್ಥಾವರವನ್ನು ಸ್ಥಾಪಿಸುವ ಸ್ಥಳ ಇದೆ, ಅಲ್ಲಿಯ ವರೆಗೆ ೩೦ ಕಿ. ಮೀ. ವರೆಗೆ ಜನರು ಒಂದು ಕಡೆಯಿಂದ ಮತ್ತೊಂದು ಕಡೆಗೆ ಹೋಗುವ ಸಂದರ್ಭ ಇದೆ ವ್ಯವಹಾರಕ್ಕೆ, ಶಾಲೆಗಳಿಗೆ, ಆಸ್ಪತ್ರೆಗೆ, ಹೀಗೆ ಹಲವಾರು ಕೆಲಸಕ್ಕಾಗಿ ಹೋಗುವುದು ಅನಿವಾರ್ಯವಾಗುತ್ತಿದೆ. ಕಾರವಾರ ತಾಲ್ಲೂಕು ಬೋರ್ಡನವರು ಜಲಸಾರಿಗೆ ವಿಭಾಗವನ್ನು ಮಾಡಿದ್ದಾರೆ. ಆದನ್ನು ಒಳನಾಡು ಜಲಸಾರಿಗೆ ವಿಭಾಗಕ್ಕೆ ವಹಿಸಿಕೊಟ್ಟು, ಯಂತ್ರ ಚಾಲಿತ ದೋಣಿಗಳನ್ನು ಕೊಟ್ಟರೆ ಜನರಿಗೆ ತುಂಬಾ ಸೌಕರ್ಯ ಮಾಡಿಕೊಟ್ಟಂತಾಗುತ್ತದೆ. ಇದನ್ನು ಮಾಡಬೇಕು.

ಇನ್ನು ಕೊನೆಯದಾಗಿ ಯುವಜನ ಇಲಾಖೆಯ ಬಗ್ಗೆ ಮಾತನಾಡುವುದಾದರೆ, ಪ್ರತಿಯೊಂದು ಜಿಲ್ಲೆಯಲ್ಲಿಯೂ ಯುವಜನ ಸೇವಾ ಮಂಡಳಿಯನ್ನು ರಚಿಸಿದೆ ಆದರೆ ಯುವಜನ ಸೇವೆಯಲ್ಲಿಯ ಒಂದು ಅವಸ್ಥೆಯನ್ನು ನೋಡಿದರೆ ಚಿಂತಾಜನಕವಾಗಿದೆ ಅನೇಕ ವರ್ಷದವರೆಗೆ ಸಹ ಯಾವ ಒಂದು ಸಭೆಯನ್ನು ಕರೆದಿಲ್ಲ. ಡಿಸ್ಟ್ರಿಕ್ಟ್ ಯೂತ್ ಬೋರ್ಡ್ ಕಾರ್ಯ ನಿರ್ವಹಿಸುತ್ತಾ ಇರುತ್ತದೆ. ನಾನು ಕಳೆದ ಸಲ ಮಾನ್ಯ ಜೀವರಾಜ ಆಳ್ವರಿಗೆ ಒಂದು ಸೂಚನೆಯನ್ನು ಕೊಟ್ಟಿದ್ದೆ ಅದು ಏನೆಂದರೆ ಇದಕ್ಕೆ ಅಧ್ಯಕ್ಷರ

ನ್ನಾಗಿ ಡಿ.ಸಿ. ಯವರನ್ನು ಮಾಡಬಾರದು, ಏಕೆಂದರೆ ಅವರಿಗೆ ಬಹಳಷ್ಟು ಕಾರ್ಯ ಬಾಹುಳ್ಯ ಇರುತ್ತದೆ ಇದರ ಕಡೆಗೆ ಅವರಿಗೆ ಲಕ್ಷ್ಯ ಕೊಡುವುದಕ್ಕೆ ಆಗುವುದಿಲ್ಲ ಆದುದರಿಂದ ಬೇರೆ ಯಾರಾದರೂ ಕ್ಲಾಸ್ ಒನ್ ಅಧಿಕಾರಿಗಳನ್ನು ನೇಮಕ ಮಾಡಿ ಎಂದು ಸಲಹೆಯನ್ನು ಕೊಟ್ಟಿದ್ದೆ, ಅದು ಯೋಗ್ಯವಾದ ಸಲಹೆ ವಿಚಾರ ಮಾಡುತ್ತೇನೆ ಎಂದು ಅವರು ಹೇಳಿದ್ದರು ಆದರೆ ಇದುವರೆಗೆ ವಿಚಾರ ಮಾಡಲಿಲ್ಲ ಈಗ ತಾವು ಹೊಸದಾಗಿ ಯೂತ್ ಸರ್ವಿಸ್ ಬೋರ್ಡ್‌ನ್ನು ಪುನರ್‌ರಚಿಸಿದ್ದೀರಿ ಆದರೆ ಅವು ಕಾರ್ಯ ಮಾಡುವಂತಹ ವಿಧಾನ ತಮ್ಮ ವರದಿಯಲ್ಲಿ ನೋಡಿದಾಗ ಯೂತ್ ಬೋರ್ಡ್‌ನ ನಾನ್ ಅಫೀಶಿಯಲ್ ಮೆಂಬರ್ಸ್ ಏನಿದ್ದಾರೆ ಅವರಿಗೆ ಟಿ. ಎ. ಡಿ. ಎ. ಕೊಡಲಿಕ್ಕೆ ೨೦ ಸಾವಿರ ರೂ.ಗಳನ್ನು ಕಾಣಿಸಿದ್ದೀರಿ. ಅಂದರೆ ಈ ಬೋರ್ಡಿಗೆ ಬೇರೆ ಯಾವ ಫಂಡ್ಸ್ ಮಾಡುವಂತಹ ಅವಕಾಶ ಇರುವುದಿಲ್ಲ. ನಿಜವಾಗಿಯೂ ಯೂತ್ ಬೋರ್ಡ್ ಅಂದರೆ ಇಲ್ಲಿ ಇಡೀ ಯುವಜನ ಸೇವೆ ಇಲಾಖೆ ಇದೆ ಅದಕ್ಕೆ ಇದು ಒಂದು ಕೇಂದ್ರ ಬಿಂದು ಆಗುವಂತಹ ವ್ಯವಸ್ಥೆ ಆಗಬೇಕು. ಯಾವದೇ ಒಂದು ತಾಲ್ಲೂಕಿನಲ್ಲಿ ಯುವಜನ ಮಂಡಳಿ ಯಾವುದೇ ಒಂದು ಶಿಕ್ಷಣ ಸಂಸ್ಥೆಗೆ ಸಹಾಯಧನ ಪಡೆಯ ಬೇಕಾದರೆ ಬೆಂಗಳೂರಿನಲ್ಲಿಯ ಡೈರೆಕ್ಟರ್‌ರವರಿಗೆ ಅರ್ಜಿ ಕಳುಹಿಸಿ ಕೊಡುವ ಪ್ರಸಂಗ ಇದೆ. ಆದುದರಿಂದ ಎಲ್ಲಾ ಅಧಿಕಾರವನ್ನು ಬೆಂಗಳೂರಿನಲ್ಲಿಯ ಕೇಂದ್ರ ಕಚೇರಿಗೆ ಕೊಡುವುದಕ್ಕಿಂತಲೂ ಪ್ರತಿಯೊಂದು ಜಿಲ್ಲೆಗಳಿಗೂ ತಾವು ಅಧಿಕಾರವನ್ನು ವಿಕೇಂದ್ರೀಕರಣ ಮಾಡಿದರೆ ಅವರಿಂದ ಹೆಚ್ಚಿನ ಪ್ರಯೋಜನ ಆಗುತ್ತದೆ, ೫-೧೦ ಸಾವಿರ ರೂ ಗಳನ್ನು ಕೊಡುವ ಅನೇಕ ಯೋಜನೆಗಳು ತಮ್ಮಲ್ಲಿ ಇವೆ. ಆದರೆ ಇಲ್ಲಿ ಈ ಕೇಂದ್ರಕ್ಕೆ ಬಂದು ಅದರಿಂದ ಹೆಚ್ಚಿನ ಸಹಾಯವನ್ನು ಪಡೆದುಕೊಳ್ಳಲಿಕ್ಕೆ ಸ್ಥಳೀಯರಿಗೆ ಆಗುವುದಿಲ್ಲ ಆದಕ್ಕೋಸ್ಕರವಾಗಿ ಈ ದಿಶೆಯಲ್ಲಿ ತಾವುಗಳು ವಿಚಾರ ಮಾಡಬೇಕು.

ಇನ್ನು ಗ್ರಾಮಾಂತರ ವ್ಯಾಯಾಮ ಶಾಲೆಗಳಿಗೆ ತಾವು ಸುಮಾರು ೫ ಸಾವಿರ ರೂಪಾಯಿಗಳನ್ನು ಕೊಡುತ್ತಿದ್ದೀರಿ. ಈಗಿನ ಪರಿಸ್ಥಿತಿಯಲ್ಲಿ ಗ್ರಾಮಾಂತರ ವ್ಯಾಯಾಮ ಶಾಲೆಗಳಿಗೆ ಈ ಹಣ ಸಾಕಾಗುತ್ತಿಲ್ಲ. ಆದ್ದರಿಂದ ನಿಮ್ಮ ಹಣಕಾಸಿನ ಪರಿಸ್ಥಿತಿಯನ್ನು ಸುಧಾರಿಸಿಕೊಂಡು ಈ ಗ್ರಾಮಾಂತರ ವ್ಯಾಯಾಮ ಶಾಲೆಗಳಿಗೆ ಸುಮಾರು ೩೦-೪೦ ಸಾವಿರ ರೂಪಾಯಿಗಳನ್ನಾದರೂ ಒದಗಿಸಿಕೊಡಬೇಕು. ಮತ್ತು ಸಧ್ಯದಲ್ಲಿ ಈಗ ಒಂದು ಅರ್ಧ ಭಾಗದ ಹಣವನ್ನು ಕೊಡಬೇಕೆಂದು ನಾನು ಕೇಳಿಕೊಳ್ಳುತ್ತೇನೆ. ಇನ್ನು ಕೊನೆಯದಾಗಿ ನಾನು ಒಂದೇ ಒಂದು ಮಾತನ್ನು ಹೇಳುವುದೇನೆಂದರೆ ಗೋವಿಂದ ಪೈರವರ ನೇತೃತ್ವದಲ್ಲಿ ತುಳು ಭಾಷಾ ಅಭಿವೃದ್ಧಿಯ ಬಗ್ಗೆ ಒಂದು ಸಮಿತಿಯನ್ನು ನೇಮಕ ಮಾಡಿರುತ್ತೀರಿ, ಆದರೆ ಅದೇ ರೀತಿಯಲ್ಲಿ ಕರ್ನಾಟಕ ರಾಜ್ಯದಲ್ಲಿ ಕೊಂಕಣಿ ಮಾತನಾಡುವವರ ಸಂಖ್ಯೆ ಕೂಡ ಜಾಸ್ತಿ ಇದೆ, ಇವರ ಅಭಿವೃದ್ಧಿ ಸಲುವಾಗಿ ಇವರ ನೇತೃತ್ವದಲ್ಲಿ ಆಗಲೀ ಅಥವಾ ಬೇರೆ ಯಾರಾದರೊಬ್ಬರ ನೇತೃತ್ವದಲ್ಲಿ ಆಗಲೀ ಒಂದು ಸ್ಮಾರಕ ಸಮಿತಿಯನ್ನು ನೇಮಕ ಮಾಡಬೇಕೆಂದು ನಾನು ಕೇಳಿಕೊಳ್ಳುತ್ತೇನೆ. ಇನ್ನು ಪಶು ಸಂಗೋಪನಾ ಇಲಾಖೆಯ ಬಗ್ಗೆ ಒಂದೆರಡು ಮಾತುಗಳನ್ನು ಹೇಳಬೇಕಾಗಿದೆ. ಇನ್ನು ಹೆಚ್ಚು ಮಾತನಾಡುವುದಕ್ಕೆ ಹೋಗುವುದಿಲ್ಲ. ನಮ್ಮ ಉತ್ತರ ಕನ್ನಡ ಜಿಲ್ಲೆಯ ಸೂಪಾ ತಾಲ್ಲೂಕಿನಲ್ಲಿ ರತಕ್ಕಂಥ ಪಶುವೈದ್ಯ ಶಾಲಾ ಆಸ್ಪತ್ರೆಗಳಲ್ಲಿ ಒಬ್ಬ ಡಾಕ್ಟರ್ ಸಹ ಇಲ್ಲ. ಅಲ್ಲಿ ತಾಲ್ಲೂಕಾ ಕಛೇರಿ ಆದರೂ ಸಹ ಅಲ್ಲಿ ಸರಿಯಾದಂಥ ಕಟ್ಟಡವಿಲ್ಲ ಈಗ ತಮಗೆ ಹಣಕಾಸಿನ ಕಾಠಿಣ್ಯವಿರುವುದರಿಂದ ಅಲ್ಲಿಗೆ ಒಂದು ಮೊಬೈಲ್ ವ್ಯಾನ್ ಕೊಡತಕ್ಕಂಥ ವ್ಯವಸ್ಥೆಯನ್ನಾದರೂ ಮಾಡಬೇಕೆಂದು ನಾನು ಈ ಸಂದರ್ಭದಲ್ಲಿ ಮಾನ್ಯ ಮಂತ್ರಿಗಳನ್ನು ಕೇಳಿಕೊಳ್ಳುತ್ತೇನೆ. ಮತ್ತು ಇದುವರೆವಿಗೂ ನನಗೆ ಮಾತನಾಡಲು ಅವಕಾಶವನ್ನು ಕಲ್ಪಿಸಿಕೊಟ್ಟಂತಹ ಮಾನ್ಯ ಅಧ್ಯಕ್ಷರಿಗೆ ವಂದಿಸಿ ನಾನು ನನ್ನ ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಸಿ. ಭೈರೇಗೌಡ (ಮಾನ್ಯ ವಿಮಾನುಗಾರಿಕೆ ಮತ್ತು ಬಂದರು ಮಂತ್ರಿ)—ಮಾನ್ಯ ಅಧ್ಯಕ್ಷರೇ...

ಶ್ರೀ ಎಂ. ರಾಮಪ್ಪ— ಮಾನ್ಯ ಅಧ್ಯಕ್ಷರೇ ಈಗಾಗಲೇ ಸುಮಾರು ೯ ಗಂಟೆಯಾಗುತ್ತಾ ಬಂತು. ನಮ್ಮ ಊಟದ ಕತೆ ಏನು ?

ಅಧ್ಯಕ್ಷರು— ಊಟದ ವ್ಯವಸ್ಥೆ ಮಾಡಿಸೋಣ ತಾವು ಸ್ವಲ್ಪ ದಯವಿಟ್ಟು ಸಹಕಾರ ನೀಡಿ.

ಶ್ರೀ ಬಿ. ಸ್ವಾಮಿರಾವ್— ಮಾನ್ಯ ಅಧ್ಯಕ್ಷರೇ, ಶಾಸಕರ ಭವನದಲ್ಲಿ ಬಾಗಿಲು ಹಾಕುತ್ತಾರೆ.

ಅಧ್ಯಕ್ಷರು— ಅದನ್ನು ನೋಡೋಣ ತಾವು ದಯಮಾಡಿ ಈಗ ಸಹಕರಿಸಿ ಬೇಗ ಮುಗಿಸಿ ಬಿಡೋಣ.

ಶ್ರೀ ಸಿ. ಬೈರೇಗೌಡ— ಮಾನ್ಯ ಅಧ್ಯಕ್ಷರೇ, ಇವತ್ತಿನ ದಿವಸ ನನ್ನ ಇಲಾಖೆಯ ಬೇಡಿಕೆಗಳ ಮೇಲೆ ಚರ್ಚೆ ನಡೆಯುವಂತಹ ಕಾಲದಲ್ಲಿ ನಾನು ಬಹಳ ಕುತೂಹಲದಿಂದ ಚರ್ಚೆಯನ್ನು ಕೇಳುತ್ತಿದ್ದೆ. ಕೆಲವು ಜನ ಮಾನ್ಯ ಸದಸ್ಯರು ಮಾತನಾಡಿದ ರೀತಿ ನೋಡಿದರೆ ಈ ಮೀನುಗಾರಿಕೆಯ ಇಲಾಖೆಯ ಬಗ್ಗೆ ಹಾಗೂ ಬಂದರುಗಳ ಬಗ್ಗೆ ನನಗೇನು ಗೊತ್ತಿಲ್ಲ, ಮತ್ತು ನೀರು ಇಲ್ಲದೆ ಇರುವಂತಹ ಕಡೆಯಿಂದ ಬಂದಿರತಕ್ಕಂಥ ವ್ಯಕ್ತಿಗೆ ತಾವು ಈ ಮೀನುಗಾರಿಕೆ ಇಲಾಖೆಯ ಮಂತ್ರಿಗಳನ್ನಾಗಿ ಮಾಡಿದ್ದೀರಿ ಎಂದು ಹೇಳಿದಾಗ ನನಗೆ ಇನ್ನು ಕುತೂಹಲ ಜಾಸ್ತಿಯಾಯಿತು. ಇನ್ನು ಹೆಚ್ಚಿನ ಕುತೂಹಲದಿಂದ ಚರ್ಚೆಯನ್ನು ಕೇಳಬೇಕೆಂದು ಅನಿಸಿತು. ಮಾನ್ಯ ಸದಸ್ಯರು ಹೇಳಿದಂಥ ವಿಷಯಗಳನ್ನು ಕೇಳಿದಾಗ ಅವರು ಹೇಳಿದ ಹಾಗೆ ನಾನು ಕೋಲಾರ ಜಿಲ್ಲೆಯಿಂದ ಬಂದವನು ಅಲ್ಲಿ ಮೀನುಗಾರಿಕೆ ಅಥವಾ ಯಾವುದೇ ಬಂದರುಗಳು ಇಲ್ಲದಿದ್ದರೂ ಸಹ ಮಾನ್ಯ ಸದಸ್ಯರು ಮಾಡಿದಂಥ ಚರ್ಚೆಯನ್ನು ಕೇಳಿದಾಗ ನನಗೆ ಬಹಳ ನಿರಾಸೆಯಾಯಿತು. ಆದರೂ ಸಹ ಕೆಲವು ಜನ ಮಾನ್ಯ ಸದಸ್ಯರು ಮಾತನಾಡುವಾಗ ನನಗೆ ಉಪಯುಕ್ತವಾದ ಸಲಹೆಗಳನ್ನು ಕೊಡುತ್ತಾರೆ, ಆ ದಾರಿಯಲ್ಲಿ ನಾನು ಇನ್ನು ಹೆಚ್ಚಿನ ರೀತಿಯಲ್ಲಿ ಕೆಲಸ ಕಾರ್ಯಗಳನ್ನು ಮಾಡಬಹುದೆಂಬ ಆಸೆಯನ್ನು ಇಟ್ಟುಕೊಂಡಿದ್ದೆ. ಆದರೆ ಆ ನನ್ನ ಆಸೆಯನ್ನು ಎರಡು ಜಿಲ್ಲೆಗಳಿಂದ ಬಂದಿರತಕ್ಕಂಥ ಮಾನ್ಯ ಸದಸ್ಯರು ಯಾರೂ ಸಹ ಈಡೇರಿಸುವುದಕ್ಕೆ ಪ್ರಯತ್ನ ಮಾಡಲಿಲ್ಲ. ಮಾನ್ಯ ಅಧ್ಯಕ್ಷರೇ ನಮ್ಮ ರಾಜ್ಯದಲ್ಲಿ ಕಡಲ ಮೀನುಗಾರಿಕೆ ಶೇಕಡ ೮೦ರಷ್ಟು ಯಾಂತ್ರಿಕ ದೋಣಿಗಳಿಂದ ನಡೆಯುತ್ತಿದೆ. ಇದು ನಮ್ಮ ರಾಜ್ಯದಲ್ಲಿ ಒಂದು ವಿಶೇಷವಾದಂಥ ಸ್ಥಾನ ಪಡೆದಿದೆ. ನಮ್ಮ ಕರಾವಳಿ ಪ್ರದೇಶದಲ್ಲಿರತಕ್ಕಂಥ ನೀರಿನ ವಿಸ್ತೀರ್ಣ ಸುಮಾರು ೨೫ ಸಾವಿರ ಚದರ ಕಿಲೋಮೀಟರ್‌ಗಳು. ಮಾನ್ಯ ಸದಸ್ಯರು ಹೇಳಿದ ಹಾಗೆ ಸುಮಾರು ೬ ಲಕ್ಷ ಟನ್‌ಗಳಷ್ಟು ಉತ್ಪಾದನೆ ಮಾಡುವುದಕ್ಕೆ ಅವಕಾಶ ಇದೆ. ಆದರೆ ಇವತ್ತು ನಾವು ಈ ಕರಾವಳಿ ಪ್ರದೇಶದಲ್ಲಿ ಮೀನು ಹಿಡಿಯುತ್ತಿರುವುದು ಕೇವಲ ಒಂದೂವರೆ ಎರಡು ಲಕ್ಷ ಟನ್‌ಗಳಷ್ಟು ಮಾತ್ರ. ಇವತ್ತು ನಮ್ಮಲ್ಲಿ ಯಾಂತ್ರಿಕತೆಯಾಗಿ ಮೀನುಗಳನ್ನು ಸೀಮಿತ ಪ್ರದೇಶದಲ್ಲಿ ಮಾತ್ರ ಹಿಡಿಯುತ್ತಿದ್ದೇವೆ. ನಾವು ಸುಮಾರು ೧೫-೨೦ ಮೈಲಿಗಳ ದೂರದವರೆವಿಗೆ ಮಾತ್ರ ಮೀನುಗಳನ್ನು ಹಿಡಿಯುವುದಕ್ಕೆ ಪ್ರಯತ್ನ ಮಾಡುತ್ತಿದ್ದೇವೆ. ದೋಣಿಗಳ ಕೊರತೆ ಇದೆ. ಪ್ರತಿ ದೋಣಿಯಲ್ಲಿ ಮೀನು ಹಿಡಿಯುವ ಪ್ರಮಾಣ ಬಹಳ ಕಡಿಮೆಯಾಗಿದೆ. ಒಂದು ವರ್ಷದಲ್ಲಿ ಒಂದು ದೋಣಿಯಿಂದ ಸುಮಾರು ೫೦೦ ಟನ್‌ಗಳಷ್ಟು ಮೀನು ಹಿಡಿದರೆ ಮಾತ್ರ ಅದು ಎಕನಾಮಿಕ್ ಆಗಿ ಆ ಪ್ರಾಜೆಕ್ಟ್ ವೈಬಲ್ ಆಗುತ್ತದೆ. ಆದರೆ ಇವತ್ತು ನಾವು ಮೀನು ಹಿಡಿಯುತ್ತಿರುವ ಪ್ರಮಾಣ ಎಷ್ಟಿದೆ ಎಂದು ನೋಡಿದರೆ ಪರ್ಸಿನ್ ಬೋಟ್‌ಗಳಲ್ಲಿ ಸುಮಾರು ೧೬೩ರಿಂದ ೨೮೯ ಟನ್‌ಗಳವರೆವಿಗೂ ದಕ್ಷಿಣ ಕನ್ನಡ ಜಿಲ್ಲೆಯಲ್ಲಿದ್ದರೆ ಅದೇ ಉತ್ತರ ಕನ್ನಡ ಜಿಲ್ಲೆಯಲ್ಲಿ ಸುಮಾರು ೧೮೯ ಟನ್‌ಗಳಿಂದ ೧೬೩ ಟನ್‌ಗಳವರೆವಿಗೆ ಮಾತ್ರ ಇದೆ. ಅದೇ ಟ್ರಾವಲರ್ಸ್ ಬೋಟ್ಸ್‌ಗಳಲ್ಲಿ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಸುಮಾರು ೧೬.೮೮ರಿಂದ ೪೪.೫೪ ಟನ್‌ಗಳವರೆವಿಗೂ ಇದೆ. ಅದೇ ಗ್ರಿಲ್‌ನೆಟ್ಟಿಂಗ್‌ನಲ್ಲಿ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಸುಮಾರು ೧೦.೯೦ ಇದ್ದರೆ ಅದೇ ಉತ್ತರ ಕನ್ನಡ ಜಿಲ್ಲೆಯಲ್ಲಿ ೧೦.೭೯ ಟನ್‌ಗಳು ಮಾತ್ರ ಇದೆ. ನಮ್ಮ ಭಾರತ ದೇಶದಲ್ಲಿ ಒಂದು ಪ್ರಾಜೆಕ್ಟ್‌ನಲ್ಲಿ ಸುಮಾರು ೪೦೦ರಿಂದ ೫೦೦ ಟನ್‌ಗಳಷ್ಟು ಮೀನನ್ನು ಹಿಡಿದರೆ ಆಗ ಅದು ಎಕನಾಮಿಕಲಿ ವೈಬಲ್ ಆಗುತ್ತದೆ. ನಾವು ಯಾವ ಪ್ರಮಾಣದಲ್ಲಿ ಮೀನು ಹಿಡಿಯಬೇಕಾಗಿತ್ತೋ ಆ ಪ್ರಮಾಣದಲ್ಲಿ ಇವತ್ತು ಮೀನುಗಾರಿಕೆ ಮಾಡುತ್ತಿಲ್ಲ. ಮತ್ತು ದಕ್ಷಿಣ ಕನ್ನಡ ಜಿಲ್ಲೆಯಲ್ಲಿರತಕ್ಕಂಥ ಕೆಲವಾರು ಸಂಸ್ಥೆಗಳವರು ಈ ಬಗ್ಗೆ ಒಂದು ಆರ್ಥಿಕ ಚಿಂತನೆಯನ್ನು ನಡೆಸಿ ಅವರು ತಮ್ಮ ಅಭಿಪ್ರಾಯವನ್ನು ವ್ಯಕ್ತಪಡಿಸಿದ್ದಾರೆ. ಈ ಯೋಜನೆಗಳಿಗೆ ಬ್ಯಾಂಕ್‌ಗಳಿಂದ ಸಂದಾಯ ಮಾಡಿರತಕ್ಕಂಥ ೧೨ ಕೋಟಿ ರೂಪಾಯಿಗಳಲ್ಲಿ ಸುಮಾರು ೧೦ ಕೋಟಿ ರೂಪಾಯಿಗಳಷ್ಟು ಬಾಕಿ ಇದೆ. ಇದಕ್ಕೆ ಕಾರಣವಾದರೂ ಏನೆಂದರೆ ಒಂದು ಸೀಮಿತ ಪ್ರದೇಶದಲ್ಲಿ ಮಾತ್ರ ಮೀನುಗಾರಿಕೆ ನಡೆಯುತ್ತಿರುವುದು. ಆ ಕಡೆಯಿಂದ ಬಂದಿರತಕ್ಕಂಥ ಮಾನ್ಯ ಸದಸ್ಯರು ಇಂತಹ ಗಹನವಾದಂಥ ವಿಚಾರದಲ್ಲಿ ಅವರು ತಮ್ಮ ಆಸಕ್ತಿಯನ್ನು ತೋರಿಸುತ್ತಾರೆಂದು ನಾನು ನಿರೀಕ್ಷೆ ಮಾಡಿದ್ದೆ. ಆದರೆ ಅದೂ ಸಹ ನನಗೆ ನಿರಾಸೆಯಾಯಿತು. ಇನ್ನು ಅಲ್ಲಿ ಪ್ರತಿ ನಿತ್ಯ ನಡೆಯುವಂತಹ, ಪ್ರತ್ಯಕ್ಷ ಕಣ್ಣಿನಿಂದ ನೋಡುವಂತಹ ಕಟು ಸತ್ಯವನ್ನು ಹೇಳುವ ಬಗ್ಗೆ ಮಾನ್ಯ ಸದಸ್ಯರು ಒಂದು ಚಕಾರದ ಶಬ್ದವನ್ನು ಸಹ ಎತ್ತದೆ ಇರುವುದನ್ನು ನೋಡಿದಾಗ ನನಗೆ

ಬಹಳ ವ್ಯಥೆಯಾಯಿತು, ಇವತ್ತು ನಾವು ಒಂದು ಆಲೋಚನೆಯನ್ನು ಮಾಡುತ್ತಿದ್ದೇವೆ. ಅದೇನೆಂದರೆ ಆಳ ಸಮುದ್ರದಲ್ಲಿ ಮೀನುಗಳನ್ನು ಹಿಡಿಯುವವರಿಗೆ ಉತ್ತೇಜನ ಕೊಡಬೇಕು. ಅಲ್ಲಿರತಕ್ಕಂಥ ಅಮೂಲ್ಯವಾದಂಥ ಮೀನುಗಳನ್ನು ಹಿಡಿದು ಜನರಿಗೆ ಸರಿಯಾದ ರೀತಿಯಲ್ಲಿ ಒದಗಿಸಿಕೊಡಬೇಕು. ಈ ರಾಷ್ಟ್ರದಲ್ಲಿ ಮೀನಿನ ಉತ್ಪಾದನೆ ಹೆಚ್ಚು ಮಾಡಬೇಕೆಂದು ಆಲೋಚನೆ ಮಾಡುತ್ತಿದ್ದೇವೆ.

ಇದರ ಬಗ್ಗೆ ನನಗೆ ಹೆಚ್ಚಿನ ಮಾಹಿತಿ ಕೊಡುತ್ತಾರೆಂದು ಭಾವಿಸಿದ್ದೆ. ಆದರೆ ಮಾನ್ಯ ಸದಸ್ಯರು ಆ ಕೆಲಸ ಮಾಡಲಿಲ್ಲ. ಇವತ್ತಿನ ದಿವಸ ಕರ್ನಾಟಕ ಮೀನುಗಾರರ ಅಭಿವೃದ್ಧಿ ನಿಗಮದಿಂದ ಎರಡು ಆಳ ಸಮುದ್ರದ ದೋಣಿಗಳನ್ನು ಕೊಂಡುಕೊಳ್ಳಬೇಕೆಂದು ತೀರ್ಮಾನಿಸಿದ್ದೇವೆ. ನಮಗೆ ಸೀಮಿತವಾದಂಥ ಘಟಕದೊಳಗೂ ಸಹ ಮೀನು ಸಿಗುತ್ತದೆ ಎಂಬುದನ್ನು ತೋರಿಸಿಕೊಡಬೇಕಾಗಿದೆ. ಇದರಿಂದ ಮೀನುಗಾರರಿಗೆ ಉತ್ತೇಜನ ಕೊಟ್ಟ ಹಾಗೆ ಆಗುತ್ತದೆ. ಆಳ ಸಮುದ್ರದ ದೋಣಿಗಳಿಂದ ಮೀನುಗಾರರಿಗೆ ಪ್ರಯೋಜನವಾಗುತ್ತದೆ. ಎರಡು ದೋಣಿಗಳನ್ನು ಪ್ರಾಯೋಗಿಕವಾಗಿ, ನಾವೇ ತರಿಸಬೇಕೆಂದು ಆಲೋಚನೆ ಮಾಡಿದ್ದೇವೆ. ನಮ್ಮ ದೇಶದಲ್ಲಿರತಕ್ಕಂಥ ಆಳ ಸಮುದ್ರದ ದೋಣಿಗಳು ಏನಿದ್ದಾವೆ. ಹಡಗುಗಳು ಏನಿದ್ದಾವೆ ಅವೆಲ್ಲಾ ಬರೀ ಕರಾವಳಿ ಪ್ರದೇಶದಲ್ಲಿ ಇವೆ. ವಿಶಾಖಪಟ್ಟಣದಲ್ಲಿ ೭೫ ಆಳ ಸಮುದ್ರದ ದೋಣಿಗಳು ಇವೆ. ನಮ್ಮಲ್ಲೂ ವಿಫುಲವಾದ ಸಂಪತ್ತು ಇದೆ. ಸಂಪತ್ತು ಇದ್ದರೂ ಕೂಡ, ಇದುವರೆಗೂ ಇದರ ಯೋಚನೆ ಮಾಡಿರಲಿಲ್ಲ. ಅದಕ್ಕೋಸ್ಕರವಾಗಿ ಈಗ ನಾವು ಆ ಯೋಚನೆ ಮಾಡಿದ್ದೇವೆ. ಯಾರು ಆಳ ಸಮುದ್ರದ ದೋಣಿಗಳನ್ನು ನಡೆಸುತ್ತಾರೆ, ಅಂತಹವರಿಗೆ ಹೆಚ್ಚಿನ ಸವಲತ್ತುಗಳನ್ನು ಕೊಟ್ಟು ಇರತಕ್ಕಂಥ ಸಂಪತ್ತನ್ನು ರೂಢಿಸಿಕೊಳ್ಳುವ ವ್ಯವಸ್ಥೆ ಮಾಡಬೇಕೆಂಬ ಆಲೋಚನೆಯನ್ನು ಈಗಾಗಲೇ ಮಾಡಿದ್ದೇವೆ. ಇದಕ್ಕೆ ವಿಶೇಷವಾದ ಸವಲತ್ತುಗಳನ್ನು ಕೊಡಬೇಕೆಂಬ ಆಲೋಚನೆಯೂ ಇದೆ. ಕಾರವಾರದಲ್ಲಿ ಇರತಕ್ಕ ವಾಣಿಜ್ಯ ಬಂದರು ಏನಿದೆ, ಅದರ ಬಗ್ಗೆಯೂ ಹೆಚ್ಚಿನ ಆಸಕ್ತಿಯನ್ನು ಕೊಡಬೇಕೆಂಬ ಅಭಿಪ್ರಾಯ ಸರ್ಕಾರಕ್ಕೆ ಇದೆ. ಮಾನ್ಯ ಸದಸ್ಯ ನೀಯರಾದ ಮನೋರಮಾ ಮಧ್ವರಾಜ್ ಅವರ ಕ್ಷೇತ್ರದಲ್ಲಿ ಮಲ್ಪೆಯಲ್ಲೂ ಸಹ ಆಳ ಸಮುದ್ರದ ಮೀನುಗಾರರಿಗೆ ಅನುಕೂಲವಾಗತಕ್ಕ ಬಂದರು ಆಗಿದ್ದರೂ ಕೂಡ ಅಲ್ಲಿರತಕ್ಕಂಥ ಪರಿಸ್ಥಿತಿಯಿಂದ ಆಳ ಸಮುದ್ರದ ಮೀನುಗಾರಿಕೆ ನಡೆಸುವುದಕ್ಕಾಗುತ್ತಾ ಇಲ್ಲ. ಈಗ ಅಲ್ಲಿ ಕೆಲವೊಂದು ಬದಲಾವಣೆ ಮಾಡಿ, ಹೂಳೆತ್ತುವ ಕೆಲಸ ಮಾಡಿ ಆಳ ಸಮುದ್ರದ ಮೀನುಗಾರರನ್ನು ಅಭಿವೃದ್ಧಿ ಮಾಡಬೇಕೆಂಬ ಆಲೋಚನೆ ಸರ್ಕಾರಕ್ಕೆ ಇದೆ. ಇವತ್ತಿನ ದಿವಸ ಮೀನುಗಾರರ ಸಮಾಜಕ್ಕೆ ಮಾನ್ಯ ಮನೋರಮಾ ಮಧ್ವರಾಜ್ ಅವರೂ ಸೇರಿದ್ದಾರೆ, ಆದರೆ ಆ ವರ್ಗಕ್ಕೆ ಅವರು ಸೇರಿಲ್ಲ ಒಬ್ಬ ಬಡ ಮೀನುಗಾರರಿಗೆ ಏನೇನು ಅನಾನುಕೂಲಗಳು ಇವೆ. ಅವುಗಳನ್ನು ಬಗೆಹರಿಸತಕ್ಕಂಥ ಕೆಲಸವನ್ನು ಅವರು ಮಾಡಲಿಲ್ಲ. ಅವರು ಒಂದು ಮಾತು ಹೇಳಿದರು. ಮೀನುಗಾರರು ಸಾಮಾಜಿಕವಾಗಿ, ಆರ್ಥಿಕವಾಗಿ, ಹಿಂದುಳಿದಿದ್ದಾರೆ ಎನ್ನತಕ್ಕಂಥ ಒಂದು ಮಾತನ್ನು ಹೇಳಿದರು, ಇವತ್ತಿನ ದಿವಸ ಮೀನುಗಾರಿಕೆ ಬಗ್ಗೆ ಏನೂ ಗೊತ್ತಿಲ್ಲದ ಸಮುದ್ರವನ್ನೂ ನೋಡದೇ ಇರತಕ್ಕ, ಮೀನನ್ನು ನೋಡದೇ ಇರತಕ್ಕ ವ್ಯಕ್ತಿ ಇದರ ಬಗ್ಗೆ ಕ್ರಮ ತೆಗೆದುಕೊಂಡಿದ್ದಾರೆ ಮೀನುಗಾರರ ಸಾಮಾಜಿಕ, ಆರ್ಥಿಕ ಮತ್ತು ಶೈಕ್ಷಣಿಕ ವಿಚಾರದಲ್ಲಿ ಒಂದು ಸಮಗ್ರವಾದ ಅಧ್ಯಯನವನ್ನು ನಡೆಸಿ, ಆ ಅಧ್ಯಯನದ ವರದಿ ಆಧಾರದ ಮೇಲೆ, ಎಲ್ಲಾ ಅಭಿವೃದ್ಧಿ ಕಾರ್ಯಗಳನ್ನು ಮಾಡುವುದಕ್ಕೆ ಸರ್ಕಾರ ಪ್ರಯತ್ನ ಮಾಡಿ, ಈಗಾಗಲೇ ಕ್ರಮ ತೆಗೆದುಕೊಂಡಿದೆ. ಬೆಂಗಳೂರಿನಲ್ಲಿರತಕ್ಕ ಸಂಸ್ಥೆಗೆ, ಕೆಲವು ಕಾರ್ಯಗಳನ್ನು ವಹಿಸಿದೆ. ಮೀನುಗಾರಿಕೆಯಲ್ಲಿ ತೊಡಗಿರುವವರು ಸಮುದ್ರಕ್ಕೆ ಹೋದರೆ, ಅವರು ವಾಪಸ್ಸು ಬರುವವರೆಗೂ ಯಾವ ನಂಬಿಕೆಯೂ ಇರುವುದಿಲ್ಲ. ಪತಿ ಅವರು ಬದುಕಿ ಬರುತ್ತಾರೋ ಇಲ್ಲ ನಾಪತ್ತೆಯಾಗುತ್ತಾರೋ, ದಡ ಸೇರುತ್ತಾರೋ ಇಲ್ಲವೋ ಎಂಬ ಭಯ ಯಾರಿಗಾದರು ಇದ್ದೇ ಇರುತ್ತದೆ, ಇವತ್ತು ಅನೇಕ ಕಡೆ ಮೀನುಗಾರರಿಗೆ ಅಪಘಾತಗಳು ಆಗುತ್ತಿವೆ. ಆಗಿವೆ. ಇದು ಸಹಜ. ಇದಕ್ಕಾಗಿ ಇನ್‌ಷೂರೆನ್ಸ್ ಯೋಜನೆ ಇದೆ. ಇದಕ್ಕಾಗಿ ಕೇಂದ್ರದಿಂದ ೬ ರೂಪಾಯಿ ಬರುತ್ತದೆ, ೩ ರೂಪಾಯಿ ರಾಜ ಸರ್ಕಾರದವರು ಕೊಡುತ್ತೇವೆ, ಮತ್ತೆ ೩ ಮೂರು ರೂಪಾಯಿ ಮೀನುಗಾರಿಕೆಯಲ್ಲಿ ತೊಡಗಿರತಕ್ಕಂಥವರು ಕೊಡಬೇಕು. ಕಳೆದ ಎರಡು ವರ್ಷಗಳಿಂದ ಇದು ಜಾರಿಗೆ ಬಂದಿದೆ, ಕಳೆದ ವರ್ಷ ಮೀನುಗಾರರ ಸಹಕಾರ ಸಂಘದಲ್ಲಿ ಸದಸ್ಯರಾಗಿರುವವರು ಕೆಲವೇ ಮಂದಿ ಮಾತ್ರ ಈ ೩ ರೂಪಾಯಿ ಕೊಡುವುದಕ್ಕೆ ಸಾಧ್ಯವಾಯಿತು. ಎಲ್ಲರೂ ಕೊಡುವುದಕ್ಕೆ ಸಾಧ್ಯವಾಗಲಿಲ್ಲ. ಆದ್ದರಿಂದ ಈ ವರ್ಷ ಇದರ ಬಗ್ಗೆ ಒಂದು ತೀರ್ಮಾನವನ್ನು ತೆಗೆದುಕೊಂಡು, ಯಾರು ಮೀನುಗಾರರು ಸಹಕಾರ ಸಂಘಗಳ

ಸದಸ್ಯರಾಗಿರುತ್ತಾರೋ ಅಂಥವರಿಗೆಲ್ಲರಿಗೂ ರಾಜ್ಯಸರ್ಕಾರವೇ, ಮೀನುಗಾರರ ಪಾಲನ್ನು, ಅಂದರೆ ಒಟ್ಟು ೬ ರೂಪಾಯಿಗಳನ್ನು ಕೊಡಬೇಕೆಂದು ತೀರ್ಮಾನಿಸಿದೆ ಅದರಂತೆ ಈಗಾಗಲೇ ೪೨ ಸಾವಿರ ರೂಪಾಯಿಗಳ ಇನ್‌ಷೂರೆನ್ಸ್ ಕೊಡತಕ್ಕ ಕೆಲಸವನ್ನು ಮೀನುಗಾರಿಕೆ ಗೊತ್ತಿಲ್ಲದೇ ಇರತಕ್ಕ ಮಂತ್ರಿ ಮಾಡಿದ್ದಾರೆ. ಮತ್ತೆ ಮೀನುಗಾರರಿಗೆ ಇರತಕ್ಕ ಮುಖ್ಯವಾದ ಸಮಸ್ಯೆ ಎಂದರೆ, ಮಧ್ಯಸ್ಥಗಾರರು. ಮೀನುಗಾರರು ಬಡವರು. ಅವರ ಪರಿಸ್ಥಿತಿ ಸುಧಾರಣೆಯಾಗಿಲ್ಲ. ಇದಕ್ಕೆ ಅತಿ ಮುಖ್ಯವಾದ ಕಾರಣ ಮಧ್ಯಸ್ಥಗಾರರು. ಇವರ ಹಾವಳಿಯನ್ನು ತಪ್ಪಿಸದೇ ಹೋದರೆ ಮೀನುಗಾರರ ಅಭಿವೃದ್ಧಿಯಾಗುವುದಿಲ್ಲ. ಈ ಪರಿಸ್ಥಿತಿಯ ಬಗ್ಗೆಯೂ ತೀವ್ರವಾದ ಅಧ್ಯಯನ ನಡೆಸಿದ್ದೇವೆ. ನಾವು ಎಷ್ಟೇ ಬುದ್ಧಿ ಚಮತ್ಕಾರಗಳನ್ನು ಉಪಯೋಗಿಸಿದರೂ ಸಹ ಮಧ್ಯಸ್ಥಗಾರರು ಯಾರಿದ್ದಾರೆ, ಅವರ ತೆಕ್ಕೆಯಿಂದ ಬಿಡಿಸುವುದು ಬಹಳ ಕಷ್ಟವಾದ ಕೆಲಸವಾಗಿದೆ. ಮಾನ್ಯ ಸದಸ್ಯರು ಯಾರೂ ಇದರ ಬಗೆ ಮಾತನಾಡಲಿಲ್ಲ. ಇದಕ್ಕೆ ಬೇರೆ ಬೇರೆ ಕಾರಣಗಳು ಇವೆ, ಸಂದರ್ಭ ಬಂದಾಗ ನಾನು ಹೇಳುತ್ತೇನೆ. ಇದಕ್ಕೆ ಎಲ್ಲರೂ ಸಹಕಾರ ಸಂಘಗಳ ಸದಸ್ಯರಾಗಬೇಕು. ಅವರದೇ ಆದ ಫೆಡರೇಷನ್ ಇದೆ. ಉತ್ತರ ಕನ್ನಡ ಜಿಲ್ಲೆಯಲ್ಲಿ ಮತ್ತು ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಫೆಡರೇಷನ್‌ಗಳು ಇವೆ. ಇವೆರಡೂ ನಷ್ಟದಲ್ಲಿವೆ. ನಾನು ಪ್ರಪ್ರಥಮವಾಗಿ, ಮಂತ್ರಿಯಾಗಿ ಮಾಡಿದ ಕೆಲಸವೆಂದರೆ ೫ ಲಕ್ಷ ರೂಪಾಯಿಗಳನ್ನು ಸರ್ಕಾರದಿಂದ ಶೇರ್ ಕ್ಯಾಪಿಟಲ್ ಆಗಿ, ದಕ್ಷಿಣ ಕನ್ನಡ ಜಿಲ್ಲೆಗೆ ಬಿಡುಗಡೆ ಮಾಡಿದೆ. ಇದರಿಂದ ಅದಕ್ಕೆ ಬಲ ಬಂದು, ಮಾರ್ಕೆಟ್‌ನಲ್ಲಿರತಕ್ಕಂಥ ಮೀನನ್ನು ಕೊಂಡು, ಮೀನುಗಾರರಿಗೆ ಯೋಗ್ಯವಾದ ಬೆಲೆಯನ್ನು ಕೊಡುತ್ತಿದ್ದಾರೆ. ಅಲ್ಲದೆ ಗ್ರಾಹಕರಿಗೆ ಕಡಿಮೆ ಬೆಲೆಯಲ್ಲಿ ಮೀನು ಮಾರಾಟ ಮಾಡಬೇಕೆಂದು, ಮತ್ತು ಅವರ ಆರ್ಥಿಕ ಬಲವನ್ನು, ಬಲಪಡಿಸಬೇಕೆಂದು ೫ ಲಕ್ಷ ರೂಪಾಯಿ ಬಿಡುಗಡೆ ಮಾಡಿದ್ದೇವೆ. ಅದರಂತೆ ಈ ವರ್ಷವೂ ಸಹ ಬಿಡುಗಡೆ ಮಾಡಬೇಕೆಂಬ ತೀರ್ಮಾನವನ್ನು ಮಾಡಿದ್ದೇವೆ ನಮ್ಮ ಮೀನುಗಾರರ ಕಾರ್ಪೊರೇಷನ್ ಗೋಸ್ಕರ ಸಾಕಷ್ಟು ಬಲವನ್ನು ಕೊಡುತ್ತಿದ್ದೇವೆ ೧೯೭೦ನೇ ಇಸವಿಯಿಂದ ಮೀನುಗಾರರ ಡೆವಲಪ್‌ಮೆಂಟ್ ಕಾರ್ಪೊರೇಷನ್ ಸ್ಥಾಪಿತವಾಗಿದ್ದು, ಹತ್ತಾರು ವರ್ಷಗಳು ನಷ್ಟದಲ್ಲಿ ಕೆಲಸ ಮಾಡಿಕೊಂಡು ಬಂದಿವೆ ಇದಕ್ಕೂ ಸಹ ಬಲವನ್ನು ತುಂಬಿ, ನೇರವಾಗಿ ಮೀನುಕೊಂಡು, ಘನೀಕರಿಸಿ, ಬೇರೆ ಕಡೆ ಮಾರಾಟ ಮಾಡುವ ವ್ಯವಸ್ಥೆ ಮಾಡಬೇಕೆಂಬ ದೃಷ್ಟಿಯಿಂದ ಅನೇಕ ಬಾರಿ ಸಭೆಗಳನ್ನು ನಡೆಸಿ, ತಿಳಿಸಿದ್ದೇವೆ. ನಾವು ಅವರಿಗೆ, ಕೋನೇಪಕ್ಷ ಎರಡು ಪಟ್ಟಾದರೂ ಜಾಸ್ತಿ ಮಾಡಬೇಕೆಂದು ನಿರ್ದೇಶನ ಕೊಟ್ಟಿದ್ದೇವೆ ಇವತ್ತಿನ ದಿವಸ ಅದು ಪ್ರಗತಿ ಕೂಡ ಸಾಧಿಸುತ್ತಾ ಇದೆ. ಈ ಎಲ್ಲಾ ಅಂಶಗಳನ್ನೂ ಸಭೆಯ ಗಮನಕ್ಕೆ ತರುವುದು ಸೂಕ್ತವೆಂದು ನನಗೆ ಅನಿಸುತ್ತದೆ.

ಈ ಮೀನುಗಾರಿಕೆ ಅಭಿವೃದ್ಧಿ ನಿಗಮವು ಮಾಡಿರುವ ಪ್ರಯತ್ನವನ್ನು ಹೇಳಬೇಕಾದರೆ ೧೯೮೨-೮೩ರಲ್ಲಿ ಕೇವಲ ೨೪ ದೋಣಿಗಳಲ್ಲಿ ಈ ಮೀನುಗಳನ್ನು ಹಿಡಿದಿದ್ದಾರೆ. ಪರ್-ಸೀನ್ ದೋಣಿಗಳನ್ನು ಉಪಯೋಗಿಸಿ ಅದರಿಂದ ಹಿಡಿಯುತಕ್ಕ ಮೀನುಗಳಿಂದ ಈ ವ್ಯವಹಾರವನ್ನು ನಡೆಸುತ್ತಾ ಇದ್ದೇವೆ. ತಮಗೆ ಹೇಳಬೇಕಾದರೆ ೧೯೮೫-೮೬ರಲ್ಲಿ ಈ ೧೧೦ ದೋಣಿಗಳಲ್ಲಿ ಹಿಡಿದಂಥಾ ಮೀನುಗಳು ಏನು ಇವೆ ಅದರಿಂದ ಈ ನಿಗಮ ತನ್ನ ವ್ಯವಹಾರವನ್ನು ನಡೆಸುತ್ತಾ ಇದೆ. ಇದಕ್ಕೆ ಕಾರಣ ಏನೆಂದರೆ ನಾನು ಮೊದಲೇ ತಿಳಿಸಿದ ಹಾಗೆ ಇದರಲ್ಲಿ ಮಧ್ಯವರ್ತಿ ಜನಗಳು ಏನು ಇದ್ದಾರೆ, ಮಿಡಲ್‌ಮ್ಯಾನ್ ಏನು ಇದ್ದಾರೆ ಅವರನ್ನು ಸಂಪೂರ್ಣವಾಗಿ ತೊಡೆದು ಹಾಕಬೇಕು ಎನ್ನುವ ದೃಷ್ಟಿಯಿಂದ ಈ ಮೀನುಗಾರಿಕೆ ಅಭಿವೃದ್ಧಿ ನಿಗಮ ಕೆಲಸ ಮಾಡುತ್ತಾ ಇದೆ.

(ಉಪಾಧ್ಯಕ್ಷರು ಪೀಠವನ್ನು ಅಲಂಕರಿಸಿದರು)

ಇದರ ಬಗ್ಗೆ ಮಾನ್ಯ ಸದಸ್ಯರು ಯಾರೂ 'ಚ' ಕಾರ ಎತ್ತಲಿಲ್ಲ, ಇನ್ನು ಈ ಘನೀಕರಿಸಿದ ಮೀನಿನ ಪ್ರಮಾಣ ಕೂಡ ಜಾಸ್ತಿಯಾಗಿದೆ. ೧೯೮೦-೮೧ರಲ್ಲಿ ಹೀಗೆ ಘನೀಕರಿಸಿದ ಮೀನು ೬೧೩ ಟನ್ ಆಗಿದೆ, ಅದನ್ನು ಮಾರಾಟ ಮಾಡಿದ್ದೇವೆ ಅನಂತರ ೩೧-೧೨-೧೯೮೫ ರವರೆಗೆ ೫೪೬ ಟನ್‌ನಷ್ಟು ಘನೀಕರಿಸಿದ ಮೀನನ್ನು ಮಾರಾಟ ಮಾಡಿದ್ದೇವೆ. ಇನ್ನು ಸಿಗಡಿ ಮೀನು ಏನು ಇದೆ, ಇದು ೨೦೦ ಟನ್‌ನಷ್ಟನ್ನು ಸಿಗಡಿ ಮೀನನ್ನು ಮಾರಾಟ ಮಾಡಿದ್ದೇವೆ. ನಾನು ಮೊದಲೇ ತಿಳಿಸಿದ ಹಾಗೆ ಇದರಲ್ಲಿ ಮಧ್ಯಸ್ಥಗಾರರನ್ನು ಸಂಪೂರ್ಣವಾಗಿ ತೊಡೆದು ಹಾಕುವ ಪ್ರಯತ್ನವನ್ನು ನಾವು ಸತತವಾಗಿ ಮಾಡುತ್ತಾ ಇದ್ದೇವೆ ಎನ್ನುವುದನ್ನು ತಮ್ಮ ಗಮನಕ್ಕೆ ತರಬಯಸುತ್ತೇನೆ.

ಮಾನ್ಯ ಅಧ್ಯಕ್ಷರೇ, ಇನ್ನು ನಮ್ಮ ಕರಾವಳಿ ಪ್ರದೇಶಗಳಲ್ಲಿರತಕ್ಕಂಥಾ ಉಪ್ಪು ನೀರಿನ ಮೀನುಗಾರಿಕೆ ಬಗ್ಗೆ ಮಾನ್ಯ ರಾಣಿಯುವರು ಸ್ವಲ್ಪ ಸೂಕ್ಷ್ಮವಾಗಿ ಹೇಳಿದರು. ನಾನು ಹೇಳುತ್ತೇನೆ. ಅದು ಅಮೂಲ್ಯವಾದ ಸಂಪತ್ತು. ನಾನು ಮೊನ್ನೆ ದಿವಸ ನಾನು ವಿಶಾಖಪಟ್ಟಣಕ್ಕೆ ಹೋದ ದಿವಸ ಅಲ್ಲಿ ಮಾರ್ಕೆಟಿನಲ್ಲಿ ಈ ಸಿಗಡಿ ಮೀನಿನ ಬೆಲೆ ಎಷ್ಟು ಇದೆ ಎಂದು ವಿಚಾರಿಸಿದಾಗ ಅವರು ಹೇಳಿದರು ಒಂದು ಕೆ.ಜಿ. ಸಿಗಡಿ ಮೀನಿಗೆ ೨೦೩ ರೂಪಾಯಿ ಇದೆ ಎಂದು ಹೇಳಿದರು. ಇಷ್ಟೊಂದು ಆದಾಯ ಯಾವ ವ್ಯವಸಾಯದಲ್ಲಾಗಲಿ, ಡೈರಿಯಿಂದಾಗಲಿ ಅಥವಾ ಹಾರ್ಟಿಕಲ್‌ಚರ್‌ನಲ್ಲಾಗಲಿ, ಯಾವುದರಲ್ಲೂ ಬರುವುದಿಲ್ಲ. ಇಷ್ಟೊಂದು ದೊಡ್ಡ ಪ್ರಮಾಣದಲ್ಲಿ ಆದಾಯ ಬರ ಕ್ಕಂಥಾ ಪರಿಸ್ಥಿತಿ ಯಾವುದರಲ್ಲೂ ಇಲ್ಲ. ಅಲ್ಲಿಗೆ ಹೋದಾಗ ನಾನು ಜಪಾನ್ ತಜ್ಞರನ್ನು ಭೇಟಿ ಮಾಡಿದೆ. ಆಗ ಅವರನ್ನು ಕೇಳಿದಾಗ ಅಲ್ಲಿ ಅವರು ೮ ಸಾವಿರ ಹೆಕ್ಟೇರ್ಸ್‌ನಲ್ಲಿ ಈ ಸಿಗಡಿ ಮೀನನ್ನು ಬೆಳೆಸುತ್ತೇವೆಂದು ಹೇಳಿದರು. ವಿಶಾಖಪಟ್ಟಣದಲ್ಲಿ ಇದರ ಬಗ್ಗೆ ನಾನು ಕೇಳಿದ ಪ್ರಕಾರ ಒಂದು ಹೆಕ್ಟೇರ್ ಪ್ರದೇಶಕ್ಕೆ ೮ ಟನ್ ಅಷ್ಟು ಸಿಗಡಿ ಮೀನನ್ನು ಬೆಳೆಸುವುದಕ್ಕೆ ಅವಕಾಶ ಇದೆ ಎಂದು ಹೇಳಿದರು. ಇದನ್ನು ಯಾರೇ ಆಗಲಿ ಲೆಕ್ಕ ಹಾಕಿದರೆ ಆಶ್ಚರ್ಯ ಪಡಬೇಕಾಗುತ್ತದೆ. ಇಂಥಾ ಒಂದು ವಿಫುಲವಾದ ಸಂಪತ್ತು ನಮ್ಮಲ್ಲಿದ್ದರೂ ಕೂಡ ಈ ಉಪ್ಪು ನೀರಿನ ಬಳಕೆ ನಮ್ಮಲ್ಲಿ ಸರಿಯಾಗಿ ಆಗುತ್ತಾ ಇಲ್ಲ ಆದರೂ ಕೂಡ ಅಲ್ಪಸ್ವಲ್ಪ ಮಟ್ಟದಲ್ಲಿ ಆಗುತ್ತಾ ಇದೆ. ಇದನ್ನು ನಾವು ಇನ್ನೂ ಹೆಚ್ಚಿಗೆ ಬೆಳೆಸುವುದಕ್ಕೆ ಪ್ರಯತ್ನ ಮಾಡಬೇಕು. ಅವರಿಗೆ ಹೆಚ್ಚು ಉತ್ತೇಜನ ಕೊಡಬೇಕು. ಮತ್ತು ಈಗ ಇರತಕ್ಕಂಥಾ ನಮ್ಮ ಸಂಪತ್ತನ್ನು ರೂಡಿಸಿಕೊಂಡು ಮಾಡಬೇಕಾಗಿದೆ. ನಾನಾದರೂ ಇದರ ಬಗ್ಗೆ ಈಗ ಒಂದು ತೀರ್ಮಾನಕ್ಕೆ ಬಂದಿದ್ದೇನೆ. ಇದಕ್ಕೆ ಕಾನೂನಿನ ತೊಡಕುಗಳು ಇವೆ. ಅದನ್ನು ವಿಚಾರ ಮಾಡಬೇಕಾಗಿದೆ. ದಕ್ಷಿಣ ಕನ್ನಡ ಮತ್ತು ಉತ್ತರ ಕನ್ನಡದ ಪ್ರದೇಶಗಳಲ್ಲಿರುವ ಫಲಸಭೂಮಿ ಪ್ರದೇಶಗಳಲ್ಲಿ ಈ ಕೆಲಸಗಳನ್ನು ಮಾಡಬೇಕಾಗಿದೆ. ದಕ್ಷಿಣ ಕನ್ನಡ ಜಿಲ್ಲೆಯ ಕುಂದಾಪುರದಲ್ಲಿ ಇದಕ್ಕೆ ಬೇಕಾದಂಥಾ ಕೃಷಿ ಜಾಗ ಇದೆ, ಅಲ್ಲಿ ಇದಕ್ಕೆ ಬೇಕಾದ ನೀರಿನ ಜಾಗಗಳು ಇವೆ, ಆದುದರಿಂದ ಆ ಜಾಗಗಳನ್ನು ಯಾವರೀತಿಯಾಗಿ ಉಪಯೋಗಿಸಿಕೊಳ್ಳಬೇಕು ಮತ್ತು ಈಗ ಇರತಕ್ಕಂಥ ಅವಕಾಶವನ್ನು ನಾವು ಯಾವರೀತಿಯಾಗಿ ಉಪಯೋಗಿಸಿಕೊಳ್ಳಬೇಕು ಎಂಬುದನ್ನೆಲ್ಲಾ ಯೋಚನೆ ಮಾಡಿ ಈಗ ನಾನಾದರೂ ಇದರ ಬಗ್ಗೆ ಒಂದು ತೀರ್ಮಾನಕ್ಕೆ ಬಂದಿದ್ದೇನೆ. ಇದಕ್ಕೆ ಕಾನೂನು ಮಾರ್ಪಾಡು ಮಾಡಬೇಕಾದರೂ ಮಾಡಿ ಇದನ್ನು ಜಾರಿಗೆ ತರಬೇಕೆಂದಿದ್ದೇನೆ. ಈ ಬಗ್ಗೆ ನಾನು ಮಾನ್ಯ ಕಂದಾಯ ಸಚಿವರು ಕೂತು ಕಾನೂನು ಮಾರ್ಪಾಡು ಮಾಡಿ ಇದರ ಬಗ್ಗೆ ಯಾವರೀತಿಯಾಗಿ ರೂಪಿಸಿಕೊಂಡು ಬರಬಹುದು ಎನ್ನುವುದನ್ನು ಯೋಚನೆ ಮಾಡಿ ಇದನ್ನು ಜಾರಿಗೆ ತರಬೇಕಾಗಿದೆ ಎನ್ನುವ ಮಾತನ್ನು ಹೇಳುತ್ತೇನೆ. ಇದರಲ್ಲಿ ಒಂದು ವಿಚಾರವನ್ನು ತಮ್ಮ ಗಮನಕ್ಕೆ ತರಬೇಕಾಗಿದೆ. ಅದೇನೆಂದರೆ ಇದನ್ನು ಸರ್ಕಾರದ ವತಿಯಿಂದ ಮಾಡುತ್ತೇವೆನ್ನುವುದಾದರೆ ಇದು ಆಗದೇ ಇರತಕ್ಕಂಥಾ ಕೆಲಸ ಆದುದರಿಂದ ಇದರ ಬಗೆ ನಾನು ಒಂದು ತೀರ್ಮಾನಕ್ಕೆ ಬಂದಿದ್ದೇನೆ, ಕಾರಣ ನಮ್ಮಲ್ಲಿರತಕ್ಕಂಥ ಕಳಸಗಿರಿಯಲ್ಲಿ ಒಂದು ಫಾರಂ ಇದೆ. ಅಲ್ಲಿ ಇದರ ಬಗ್ಗೆ ನಡೆದಂಥಾ ಪ್ರಗತಿಯನ್ನು ನೋಡಿದಾಗ ಸರ್ಕಾರ ಇದನ್ನು ಮಾಡುವುದಕ್ಕಾಗುವುದಿಲ್ಲ. ಏನಾದರೂ ಮಾಡಿ ಇದನ್ನು ಖಾಸಗಿಯವರಿಗೆ ಉತ್ತೇಜನ ಕೊಟ್ಟು ಮಾಡಬೇಕಾಗಿದೆ ಅಲ್ಲದೆ ಇದು ಹೆಚ್ಚಿನ ಜನರಿಗೆ ಅನುಕೂಲ ಮಾಡಿಕೊಡತಕ್ಕಂಥಾ ಒಂದು ಉದ್ಯೋಗ. ಆದುದರಿಂದ ಇದನ್ನು ಯುವಕರಿಗೆ ಇದರಲ್ಲಿರತಕ್ಕಂಥಾ ಲಾಭವನ್ನು ತೋರಿಸಿಕೊಟ್ಟು ಅವರಿಗೆ ಅನುಕೂಲ ಮಾಡಿಕೊಡಬೇಕೆಂದಿದ್ದೇವೆ. ಈ ಒಂದು ಉದ್ಯೋಗ ಎಲ್ಲ ಉದ್ಯೋಗಗಳಿಗಿಂತ ಅತ್ಯಂತ ಲಾಭದಾಯಕವಾದಂಥ ಉದ್ಯೋಗ ಆಗಿದೆ ಇಷ್ಟೊಂದು ಲಾಭ ಕೊಡುವ ಉದ್ಯೋಗ ಮತ್ತೆ ಯಾವುದರಲ್ಲೂ ಇಲ್ಲದೇ ಇರುವುದರಿಂದ ಇದಕ್ಕೆ ಕಾನೂನಾದರೂ ಬದಲಾವಣೆ ಮಾಡಿ ಇದಕ್ಕೆ ಹೆಚ್ಚು ಉತ್ತೇಜನ ಕೊಟ್ಟು ಈ ಕೆಲಸವನ್ನು ಮಾಡಬೇಕೆನ್ನುವ ಒಂದು ತೀರ್ಮಾನಕ್ಕೆ ನಾನು ಬಂದಿದ್ದೇನೆ. ಇದರ ಬಗ್ಗೆ ಕರಾವಳಿ ಪ್ರದೇಶದಿಂದ ಬಂದಿರತಕ್ಕಂಥಾ ಮಾನ್ಯ ಸದಸ್ಯರು ಮಾತನಾಡಿದರು. ಅವರು ಮಾತನಾಡಿದ್ದ ರೀತಿ ನೋಡಿದರೆ ನನಗೆ ಆಶ್ಚರ್ಯವಾಯಿತು. ಅದೇ ರೀತಿಯಾಗಿ ಮಾನ್ಯ ಸದಸ್ಯರಾದ ಶ್ರೀಮಂತಿ ಮನೋರಮಾ ಮಧ್ವರಾಜ್ ಅವರೂ ಸಹ ಕೆಲವು ವಿಚಾರಗಳನ್ನು ಪ್ರಸ್ತಾಪ ಮಾಡಿದರು. ನಾನು ಅಲ್ಲಿಗೆ ಯಾವಾಗಲೋ ಹೋದಾಗ ಈ ಮೀನುಗಾರರಿಂದ ಸರ್ಕಾರಕ್ಕೆ ಯಾವರೀತಿಯಾದ ಲಾಭವೂ ಇಲ್ಲ ಅಂತ ಹೇಳಿದ್ದೇನೆಂದು ಹೇಳಿದರು. ನಾನು ಅದೆಲ್ಲವನ್ನು ಹೇಳಿದರೆ ಅವರಿಗೆ ಸಿಟ್ಟು ಬರಬಹುದು ಮಾನ್ಯ ಅಧ್ಯಕ್ಷರೇ ನಾನು ಕೇಳಿ ಬಂದಂಥಾ ವಿಚಾರಗಳನ್ನು ಪ್ರಸ್ತಾಪ ಮಾಡುತ್ತೇನೆ. ಅದೇನೆಂದರೆ ಆ ಮೀನುಗಾರಿಕೆ ಬಂದರಿನಲ್ಲಿ ವಿಧಿವತ್ತಾದ ಕೆಲಸಕಾರ್ಯಗಳು ಮುಗಿದು ೩ ವರ್ಷವಾಗಿದ್ದರೂ ಇಲ್ಲಿಯವರೆಗೆ ಆ ಬಂದರು ಸರ್ಕಾರದ್ದು ಎಂದು ಹೇಳುವಂಥ ಅಧಿಕಾರ ಅಲ್ಲಿರುವ ಅಧಿಕಾರಿಗಳಲ್ಲಿ ಇರಲಿಲ್ಲ. ಅವರಿಗೆ

ಅಲ್ಲಿ ಒಂದು ಭೀಕರ ವಾತಾವರಣ ಇತ್ತು. ಅಲ್ಲಿಯ ಮೀನುಗಾರಿಕೆ ಬಂದರಿನಲ್ಲಿ ಏನೇನು ನಡೆದಿದೆ ಆ ಎಲ್ಲ ವ್ಯವಹಾರಗಳನ್ನೂ ಗಮನಿಸಿ ಮತ್ತು ಅಲ್ಲಿಯ ಅಧಿಕಾರಿಗಳೊಂದಿಗೆ ಪ್ರಸ್ತಾಪ ಮಾಡಿ ನಾನು ಈ ಒಂದು ತೀರ್ಮಾನಕ್ಕೆ ಬಂದಿದ್ದೇನೆ. ಈ ಪರಿಸ್ಥಿತಿ ಏತಕ್ಕೆ ಆಯಿತು ? ಅಲ್ಲದೆ ಅಲ್ಲಿಯ ಅಧಿಕಾರಿಗಳು ಅಲ್ಲಿ ಸುಂಕವನ್ನು ಧೈರ್ಯವಾಗಿ ವಸೂಲ್ಮಾಡುವುದಕ್ಕೆ ಅಂತಹ ವಾತಾವರಣ ಇಲ್ಲ, ಅಲ್ಲಿ ನಡೆಯುತಕ್ಕಂಥ ಸಮಸ್ಯೆಗಳನ್ನು ಅವರು ನನ್ನ ಗಮನಕ್ಕೆ ತಂದರು. ನಾನು ಇದನ್ನು ವಿಚಾರಿಸಿದಾಗ ಇದರ ಬಗ್ಗೆ ಒಂದು ಟರ್ಮಿನಲ್ ಅಥಾರಿಟೀಸ್ ಬಿಲ್ ಅಂತ ಬಂದಿದೆ ಅದು ರಾಷ್ಟ್ರಾಧ್ಯಕ್ಷರ ಒಪ್ಪಿಗೆಗಾಗಿ ಹೋಗಿದೆ ಅದು ಬಂದ ತಕ್ಷಣ ವಿಧಾನ ಸಭೆ ಮತ್ತು ವಿಧಾನ ಪರಿಷತ್ತು ಎರಡೂ ಸದನಗಳಲ್ಲಿ ಇದಕ್ಕೆ ಒಪ್ಪಿಗೆ ಪಡೆಯಬೇಕಾಗುತ್ತದೆ ಆವಾಗ ನಮಗೆ ಅದರ ಬಗ್ಗೆ ಅಧಿಕಾರ ಬರುತ್ತದೆ. ನಾನು ಅಧಿಕಾರಿಗಳಿಗೆ ತಿಳಿಸಿದ್ದೇನೆ. ಅದಕ್ಕೆ ಒಪ್ಪಿಗೆ ಆದಕೂಡಲೆ ಇದರ ಬಗ್ಗೆ ಎಕ್ಸಿಕ್ಯೂಟೀವ್ ಆರ್ಡರ್ಸ್‌ನ್ನು ಹೊರಡಿಸಿದರೆ ಆಗ ಆ ಅಧಿಕಾರಿಗಳಿಗೆ ಅಧಿಕಾರ ಬರುತ್ತದೆ. ಇದರ ಬಗ್ಗೆ ಡಿಪಾರ್ಟ್‌ಮೆಂಟಿನಿಂದಲೂ ಅಭಿಪ್ರಾಯವನ್ನು ತರಿಸಿದ್ದೇನೆ. ಪ್ರಪ್ರಥಮವಾಗಿ ಇದರ ಬಗ್ಗೆ ೩ ವರ್ಷ ಕಳೆದ ನಂತರ ಈ ಮಲ್ಪೆ ಬಂದರಿನಲ್ಲಿ ನಾವು ಯಾವರೀತಿಯಾದ ದರವನ್ನು ನಿಗದಿ ಪಡಿಸಬೇಕು ಮತ್ತು ಅಲ್ಲಿ ಯಾವರೀತಿಯಾಗಿ ವಸೂಲ್ಮಾಡಬೇಕು ಎಂಬುದನ್ನು ಮಾಡುತ್ತೇವೆ. ಇದರಲ್ಲಿ ಒಂದು ಸಂಗತಿ ಏನೆಂದರೆ ಇದರಲ್ಲಿ ಶ್ರೀಮತಿ ಮನೋರಮಾ ಮಧ್ವರಾಜ್ ಅವರೂ ಸದಸ್ಯರಾಗಿದ್ದಾರೆ. ಇದನ್ನು ಈ ಒಂದು ಸರಿಯಾದ ಸ್ಥಿತಿಗೆ ತರಬೇಕಾದರೆ ಬಹಳ ಕಷ್ಟವಾಯಿತು. ನಿಜವಾಗಿಯೂ ಹೇಳಬೇಕಾದರೆ ನಾನು ಇದರ ಬಗ್ಗೆ ರಾಜಕೀಯ ಮಾಡುವುದಕ್ಕೆ ಸಾಧ್ಯ ಇದ್ದರೂ ಅದಕ್ಕೆ ಹೋಗಲಿಲ್ಲ. ಇದಕ್ಕೆ ಇತರೇ ಸದಸ್ಯರು ಯಾರು ಇದ್ದಾರೆ ಎಂದರೆ ದಕ್ಷಿಣ ಕನ್ನಡ ಜಿಲ್ಲೆಯ ಜಿಲ್ಲಾಧಿಕಾರಿಗಳು ಸದಸ್ಯರಾಗಿದ್ದಾರೆ. ದಕ್ಷಿಣ ಕನ್ನಡ ಜಿಲ್ಲೆಯ ಮೀನುಗಾರಿಕೆ ಫೆಡರೇಷನ್ನಿನ ಅಧ್ಯಕ್ಷರು ಇದಕ್ಕೆ ಸದಸ್ಯರಾಗಿದ್ದಾರೆ. ಇವರೆಲ್ಲರೂ ಕೂಡ ಅವರ ಹತ್ತಿರದವರೇ, ಅಲ್ಲದೆ ಇವರೆಲ್ಲರೂ ಅವರಿಗೆ ಅಚ್ಚುಮೆಚ್ಚರಾಗಿರತಕ್ಕಂಥವರೇ. ಬೇಕಾದರೆ ಇವರೆಲ್ಲರನ್ನೂ ತೆಗೆದು ನಮಗೆ ಯಾರು ಬೇಕೋ ಅವರನ್ನು ಮಾಡಬಹುದಾಗಿತ್ತು. ಆ ಕೆಲಸವನ್ನು ನಾವು ಮಾಡುವುದಕ್ಕೆ ಹೋಗದೆ ಮೀನುಗಾರಿಕೆ ಕೆಲಸದಲ್ಲಿ ತೊಡಗಿರುವವರ ಹಿತವನ್ನು ಕಾಪಾಡಬೇಕು ಮೀನುಗಾರಿಕೆಯ ಉದ್ದೆಯಲ್ಲಿರ ತಕ್ಕವರೆಲ್ಲರಿಗೂ ಪ್ರಾಶಸ್ತ್ಯ ಕೊಟ್ಟು ನಾನು ಮೊದಲೇ ಹೇಳಿದ ಹಾಗೆ ಅವರಿಗೆ ಅಚ್ಚುಮೆಚ್ಚಾಗಿರತಕ್ಕಂಥವರನ್ನೇ ಸದಸ್ಯರನ್ನಾಗಿ ಮಾಡಿದ್ದೇವೆ. ಈ ಬಗ್ಗೆ ಆಜ್ಞೆ ಮಾಡಿದ್ದೇವೆ. ಅಲ್ಲದೆ ಅಲ್ಲಿ ಸುಂಕವನ್ನು ವಸೂಲ್ಮಾಡತಕ್ಕಂಥಾದ್ದರ ಬಗ್ಗೆ ದಿನಾಂಕ ೧-೧-೮೬ ರಿಂದ ವಸೂಲ್ಮಾಡುವ ಹಾಗೆ ನಾವು ಒಂದು ತೀರ್ಮಾನಕ್ಕೆ ಬಂದಿದ್ದೇವೆ. ಮೊದಲನೇ ಸಭೆಯಲ್ಲಿ ಶ್ರೀಮತಿ ಮನೋರಮಾ ಮಾಧ್ವರಾಜ್ ಅವರು ಅಲ್ಲಿ ಹಾಜರಿದ್ದರು. ಮೊದಲನೇ ಸಭೆಯ ನಡವಳಿಕೆಗಳನ್ನು ತರಿಸಿದ್ದೇನೆ. ಬೇಕಾದರೆ ಅದನ್ನು ಓದುತ್ತೇನೆ. ಈಗ ಕಾಲಾವಕಾಶ ಇಲ್ಲದೇ ಇರುವುದರಿಂದ ಅದನ್ನು ಓದುವುದಕ್ಕೆ ಹೋಗುವುದಿಲ್ಲ

ಶ್ರೀ ಎಂ. ರಾಮಪ್ಪ.—ಮಾನ್ಯ ಅಧ್ಯಕ್ಷರೇ. ಮಾನ್ಯ ಸಚಿವರು ಇಲ್ಲಿ ಪರ್ಸನಲ್ ಆಗಿ ಒಬ್ಬ ಸದಸ್ಯರ ಹೆಸರನ್ನು ತಂದರೆ ಅದು ತಪ್ಪಾಗುತ್ತದೆ. ಪರ್ಸನಲ್ ಆಗಿ ಹೆಸರು ಹೇಳುವುದು ಸರಿಯಲ್ಲ. ಹಾಗೇನಾದರೂ ಮಾಡಿದರೆ ಅದರ ಬಗ್ಗೆ ಪ್ರಿವಿಲೇಜ್ ತರಬೇಕಾಗುತ್ತದ.

ಶ್ರೀ ಸಿ. ಬೈರೇಗೌಡ.— ಶ್ರೀ ರಾಮಪ್ಪನವರೇ ಪ್ರಿವಿಲೇಜ್ ತರುವುದಾದರೆ ಈಗಲೇ ತನ್ನಿ. ಅದಕ್ಕೆ ನಾನೇನು ಬೇಡ ಅನ್ನುವುದಿಲ್ಲ.

ಉಪಾಧ್ಯಕ್ಷರು.—ಅವರು ಮೊದಲು ಉತ್ತರ ಮುಗಿಸಲಿ. ದಯವಿಟ್ಟು ಕೂತು ಕೊಳ್ಳಿ.

ಶ್ರೀ ಎಂ. ರಾಮಪ್ಪ —ಅವರ ಹೆಸರನ್ನು ಇಲ್ಲಿ ಬಳಸುವುದು ಬೇಡ.

ಶ್ರೀ ಸಿ. ಬೈರೇಗೌಡ.—ಇದರಲ್ಲಿ ನಾನು ಹೇಳಿದ ಯೋಜನೆಗಳನ್ನು ಪುನರ್ವಿಮರ್ಶೆ ಮಾಡಿದ್ದೇನೆ. ಸರ್ಕಾರಕ್ಕೆ ಓದಬೇಕು ಅಂದರೆ ಓದುತ್ತೇನೆ. ಇದರಲ್ಲಿ ಎಲ್ಲ ವಿವರಗಳೂ ಇವೆ,

ಪುನರ್ವಿಮರ್ಶಿತ ದರಗಳನ್ನು ಈ ರೀತಿಯಾಗಿ ನೀವು ಜಾರಿಗೆ ತರುವುದು ಸೂಕ್ತ ಎನ್ನತಕ್ಕಂಥ ತೀರ್ಮಾನಕ್ಕೆ ಬಂದು ಸರ್ಕಾರಕ್ಕೆ ಅವರು ಕಳಿಸಿದರು. ನಾನು ಅದನ್ನು ತಕ್ಷಣ ನೋಡಿ ಅದಕ್ಕೆ ಮಂತ್ರಿ ಮಂಡಲದ ಒಪ್ಪಿಗೆ ಬೇಕಾಗಿದ್ದರೂ ಸಹಿತ ಮಂತ್ರಿಮಂಡಲದಿಂದ ಒಪ್ಪಿಗೆ ಪಡೆದುಕೊಳ್ಳುತ್ತೇನೆ ಎನುವ ವಿಶ್ವಾಸದಿಂದ ಅವರು ಹೇಳಿದಂಥ ಸಲಹೆಯನ್ನು ನಾನು ಒಪ್ಪಿದೆ. ಇವರು ಇದ್ದ ಸಭೆಯಲ್ಲಿ ಏನು ತೀರ್ಮಾನ ಮಾಡಿದರೋ ಅದೇ ದರಗಳನ್ನು ಜಾರಿಗೆ ತನ್ನಿ ಎನ್ನತಕ್ಕಂಥ ನಿರ್ದೇಶನವನ್ನು

ಅಧಿಕಾರಿಗಳಿಗೆ ಕೊಟ್ಟೆ. ಅದಕ್ಕೂ ಕೂಡ ಅಡ್ಡಿ. ಆ ಆಜ್ಞೆ ಪ್ರಕಾರ ಯಾರಿಂದ ವಸೂಲು ಮಾಡುವುದಕ್ಕೆ ಹೋಗುತ್ತಾರೆಂದರೆ, ಮೀನುಗಾರರಿಂದಲ್ಲ. ಮೀನು ಹಿಡಿಯತಕ್ಕವರಿಂದಲ್ಲ, ಮೀನನ್ನು ಕೊಂಡು ತೆಗೆದುಕೊಂಡು ಹೋಗಿ ಲಕ್ಷಾಂತರ ರೂಪಾಯಿ ವ್ಯವಹಾರ ಮಾಡುವಂಥ ವ್ಯಾಪಾರಸ್ಥರಿಂದ ವಸೂಲು ಮಾಡುತ್ತಾರೆ. ಇದು ಅವರಿಗೆ ಹಾಕಿರತಕ್ಕ ಸುಂಕ ಅಥವಾ ಟ್ಯಾಕ್ಸ್. ಆದರೆ ಅದಕ್ಕೂ ಕೂಡ ಅಡ್ಡಿ. ಆದುದರಿಂದ ಇವತ್ತು ಪ್ರಶ್ನೆ ಮಾಡಬೇಕಾಗಿದೆ, ಏನೆಂದರೆ, ಇವರು ಯಾರ ಪ್ರತಿನಿಧಿಗಳಾಗಿದ್ದಾರೆ ಎಂದು, ಬಡ ಮೀನುಗಾರರ ಪ್ರತಿನಿಧಿಗಳೋ ಅಥವಾ ಮೀನುಗಾರರ ರಕ್ತಹೀರತಕ್ಕ ಮಧ್ಯಸ್ಥಗಾರರ ಪ್ರತಿನಿಧಿಗಳೋ ಎಂದು ನಾನು ಪ್ರಶ್ನೆ ಮಾಡಬೇಕಾಗುತ್ತದೆ. ನಾವು ಇದನ್ನು ವ್ಯಾಪಾರ ಮಾಡತಕ್ಕವರಿಂದ ವಸೂಲು ಮಾಡತಕ್ಕದ್ದು. ಹೊನ್ನಾವರ ಮತ್ತು ಮಲ್ಪೆ ಬಂದರುಗಳನ್ನು ಮೇಂಟೇನ್ ಮಾಡಬೇಕಾದರೆ ಸುಮಾರು ೧೪½ ಲಕ್ಷ ರೂಪಾಯಿ ಒಂದು ವರ್ಷಕ್ಕೆ ಬೇಕಾಗುತ್ತದೆ. ಈ ಹದಿನಾಲ್ಕೂವರೆ ಲಕ್ಷ ರೂಪಾಯಿಗಳನ್ನು ಯಾವ ಸರ್ಕಾರವೂ ಕೊಡುವುದಿಲ್ಲ, ನಾವು ಅದನ್ನು ಕೊಡಬೇಕಾಗುತ್ತದೆ. ಅಲ್ಲಿ ಆಗತಕ್ಕ ಖರ್ಚನ್ನು ಸರಿದೂಗಿಸಬೇಕು ಎನ್ನತಕ್ಕ ದೃಷ್ಟಿಯಿಂದ ಇದನ್ನು ನಾವು ಹಾಕಿದ್ದೇವೆಯೇ ವಿನಹ ಬೇರೆ ಮತ್ಯಾವ ಕಾರಣದಿಂದಲೂ ಅಲ್ಲ. ಯಾರಿಗೋಸ್ಕರ ಬಂದರು ಇರತಕ್ಕಂಥಾದ್ದು. ಮೀನುಗಾರರಿಗೋಸ್ಕರ ಬಂದರು ಇರತಕ್ಕಂಥಾದ್ದು. ಅದನ್ನು ನಿರ್ವಹಣೆ ಮಾಡಬೇಕಾದರೆ ನಿರ್ವಹಣಾ ಖರ್ಚನ್ನು ವ್ಯಾಪಾರಸ್ಥರಿಂದ ವಸೂಲು ಮಾಡಬೇಕು, ವ್ಯಾಪಾರಸ್ಥರಿಂದ ಹಣ ಪಡೆದು ಮೀನುಗಾರರಿಗೆ ಹೆಚ್ಚಿನ ಅನುಕೂಲವನ್ನು ಕಲ್ಪಿಸಬೇಕು ಎನ್ನುವ ದೃಷ್ಟಿಯಿಂದ ಹಾಕಿದರೆ ಕೆಲವು ಶಕ್ತಿಗಳನ್ನು ಎತ್ತಿಕಟ್ಟಿ ಮೀನುಗಾರರ ಹೆಸರನ್ನು ಹೇಳಿಕೊಂಡು ವ್ಯಾಪಾರಸ್ಥರ ತಂಡವನ್ನು ಬೆಂಗಳೂರಿಗೆ ತರಲಿಕ್ಕೆ ಪ್ರಯತ್ನಪಟ್ಟರು. ಇದು ಬೇರೆ ಕಡೆ ಎಲ್ಲೂ ಇಲ್ಲ ಎಂದು ಹೇಳುತಾ ಇಲ್ಲ. ಮಾನ್ಯ ಸದಸ್ಯಶ್ರೀಯರಾದ ಶ್ರೀಮತಿ ಮನೋರಮಾ ಮಧ್ವರಾಜ್‌ರವರೂ ಸಹ ಇರುವ ಒಂದೆರಡು ಸಮಿತಿಗಳನ್ನು ಮಾಡಿ ದಕ್ಷಿಣ ರಾಜ್ಯಗಳಲ್ಲಿರುವ ಕೆಲವು ಮೀನುಗಾರರ ಬಂದರುಗಳನ್ನು ಮತ್ತು ಉತ್ತರ ರಾಜ್ಯಗಳಲ್ಲಿರತಕ್ಕ ಕೆಲವು ಮೀನುಗಾರರ ಬಂದರುಗಳನ್ನು ನೋಡಿ ಬರಲಿ ಎಂದು ಅವಕಾಶ ಮಾಡಿದ್ದೇನೆ, ಇಷ್ಟೆಲ್ಲಾ ನಾನು ಮಾಡಿದರೂ ಸಹ ಮೀನುಗಾರರ ಬಗ್ಗೆ ಏನೂ ಗೊತ್ತಿಲ್ಲದೇ ಇರತಕ್ಕವರನ್ನು ಸಚಿವರನ್ನಾಗಿ ಮಾಡಿದ್ದಾರೆ ಎಂದು ಹೇಳಿದ್ದಾರೆ......

ಶ್ರೀಮತಿ ಮನೋರಮಾ ಮಾಧ್ವರಾಜ್.—ಆ ಕಮಿಟಿ ಬೇರೆ ರಾಜ್ಯಗಳಿಗೆ ಹೋಗಿದೆಯೇ ?

(ಮಾನ್ಯ ಅಧ್ಯಕ್ಷರು ತಮ್ಮ ಪೀಠವನ್ನಲಂಕರಿಸಿದರು)

ಶ್ರೀ ಸಿ. ಬೈರೇಗೌಡ.—ಅಷ್ಟರಲ್ಲಿ ವಿಧಾನಸಭೆ ಪ್ರಾರಂಭವಾಯಿತು. ವಿಧಾನಸಭೆಗೆ ಅನಾನುಕೂಲವಾಗುತ್ತದೆ ಎನ್ನುವ ಕಾರಣಕ್ಕೋಸ್ಕರ ಹೋಗಿ ಬಂದಿಲ್ಲ ಎಂದು ಹೇಳುವುದಕ್ಕೆ ಇಷ್ಟಪಡುತ್ತೇನೆ. ಆಮೇಲೆ ಬಂದರಿನಲ್ಲಿ ಹೂಳು ಎತ್ತಬೇಕಾದರೆ, ಒಂದು ಸಾರಿ ಮಾಡಬೇಕಾದರೆ ೪೦ ರಿಂದ ೫೦ ಲಕ್ಷ ರೂಪಾಯಿ ಹಣ ಖರ್ಚಾಗುತ್ತದೆ. ಇದನ್ನೂ ಅವರ ಹತ್ತಿರ ಪ್ರಸ್ತಾಪ ಮಾಡಿದ್ದೇನೆ. ಆಮೇಲೆ ಮೀನುಗಾರಿಕೆಯಿಂದ ಸರ್ಕಾರಕ್ಕೆ ಲಾಭವಿಲ್ಲ ಎಂದು ಹೇಳಿದೆ ಎಂಬುದಾಗಿ ಹೇಳಿದ್ದಾರೆ. ಹಣವನ್ನು ಅಲ್ಲಿ ನಾವು ವ್ಯಾಪಾರಸ್ಥರಿಂದ ಪಡೆಯಬೇಕಾಗುತ್ತದೆ ಎನ್ನುವ ಮಾತನ್ನು ಹೇಳಿದ್ದೇನೆಯೇ ವಿನಹ ಮೀನುಗಾರಿಕೆಯಿಂದ ಸರ್ಕಾರಕ್ಕೆ ಲಾಭ ಇಲ್ಲ ಎನ್ನತಕ್ಕಂಥ ಮಾತನ್ನು ನಾನು ಹೇಳಿದೆ ಎಂದು ಹೇಗೆ ಹೇಳಿದರೂ ನನಗಂತೂ ಅರ್ಥವಾಗುತ್ತಾ ಇಲ್ಲ. ಅದನ್ನು ಅವರು ಸರಿಯಾಗಿ ಅರ್ಥ ಮಾಡಿಕೊಳ್ಳಬೇಕು. ವ್ಯಾಪಾರಸ್ಥರಿಂದ ಹಣ ಪಡೆದು ಬಂದರನ್ನು ಸುವ್ಯವಸ್ಥೆಯಲ್ಲಿಡುವುದಕ್ಕೆ ಸರ್ಕಾರ ಇಚ್ಛಿಸಿದೆ ಎಂದು ಹೇಳಬೇಕಾಗಿದೆ. ಇನ್ನೊಂದು ವ್ಯಥೆಯಿಂದ ಹೇಳಬೇಕಾದ ಅಂಶ ಏನೆಂದರೆ, ಪಶ್ಚಿಮ ಕರಾವಳಿಯಲ್ಲಿ ಆಳ ಸಮುದ್ರದ ಮೀನುಗಾರಿಕೆ ಬಂದರು ಇಲ್ಲ. ಮಹಾರಾಷ್ಟ್ರ, ಗುಜರಾತಿನಲ್ಲಿ ಏನಿದೆಯೋ ನನಗೆ ಗೊತ್ತಿಲ್ಲ. ಗೋವಾದಿಂದ ಹಿಡಿದು ಕೊಚ್ಚಿನ್‌ವರೆಗೂ ನೋಡಿದರೆ ಆಳ ಸಮುದ್ರ ಮೀನುಗಾರಿಕೆ ಬಂದರು ಇಲ್ಲ. ರಾಜ್ಯದ ಹಿತದೃಷ್ಟಿಯಿಂದ ಆಳ ಸಮುದ್ರದಲ್ಲಿರತಕ್ಕ ಅಮೋಘ ಸಂಪತ್ತನ್ನು ರೂಢಿಸತಕ್ಕ ದೃಷ್ಟಿಯಿಂದ ಅತೀ ಮುಖ್ಯವಾದ, ಅಮೂಲ್ಯವಾದ ಬಂದರನ್ನು ಸುವ್ಯವಸ್ಥೆಯಲ್ಲಿಡಬೇಕಾದದು ಸರ್ಕಾರದ ಜವಾಬ್ದಾರಿ ಇದೆ ಎಂದು ತಿಳಿಸುವುದಕ್ಕೆ ಇಷ್ಟಪಡುತ್ತೇನೆ. ಸೀಮಿತವಾದಂಥ ಪ್ರದೇಶದಲ್ಲಿ ಇಂದು ಮೀನುಗಾರಿಕೆ ನಡೆಯುತ್ತಿದೆ. ಅದಕ್ಕೋಸ್ಕರ ಫಿಷಿಂಗ್ ರೆಗ್ಯುಲೇಷನ್ ಬಿಲ್ ತರಬೇಕು ಎಂದು ಆಲೋಚನೆಮಾಡಿ ಕೇಂದ್ರ ಸರ್ಕಾರದಿಂದ ಬಂದಿರತಕ್ಕ ಒಂದು ಮಾಡೆಲ್ ಬಿಲ್ಲನ್ನು ಪುನಃ ನಮ್ಮ ಸರ್ಕಾರ ಪರಿಶೀಲನೆ ಮಾಡಿ ಕೇಂದ್ರಸರ್ಕಾರದ ಒಪ್ಪಿಗೆ ಪಡೆದು ಮೀನುಗಾರರ

ಹಿತವನ್ನು ಕಾಪಾಡುವುದಕ್ಕೋಸ್ಕರ ಸುವ್ಯವಸ್ಥಿತವಾಗಿ ನಡೆಸಬೇಕು ಎನ್ನತಕ್ಕ ದೃಷ್ಟಿಯಿಂದ ಈ ಕಾನೂನನ್ನು ತರಬೇಕು ಎನ್ನುವ ತೀರ್ಮಾನಕ್ಕೆ ಬಂದಿದ್ದಾಗಿದೆ. ಆಮೇಲೆ ಮುಖ್ಯಮಂತ್ರಿಗಳಿಗೆ ಕಾಗದ ಬರೆದೆ, ಟೆಲಿಗ್ರಾಂ ಕಳಿಸಿದೆ, ಅದಕ್ಕೋಸ್ಕರ ಸಭೆ ಕರೆದರು ಎಂದು ಹೇಳಿದರು. ಆ ರೀತಿ ಆಗಿಲ್ಲ. ಅನೇಕ ಸಂದರ್ಭದಲ್ಲಿ ಅಂದರೆ ಪ್ರತಿ ಸಭೆಯಲ್ಲೂ ಪ್ರಸ್ತಾಪ ಮಾಡಿದ್ದೇನೆ. ಇದನ್ನು ಮಾಡುವಾಗ ಅಲ್ಲಿರತಕ್ಕ ಮೀನುಗಾರರು ನಮ್ಮ ಜೊತೆಯಲ್ಲಿ ವಿಚಾರವಿನಿಮಯ ಮಾಡಬೇಕು, ಕನ್ಸಲ್ಟ್ ಮಾಡಬೇಕು ಎಂದು ತಿಳಿಸಿದರು. ಆ ದೃಷ್ಟಿಯಿಂದ ಅವರೆಲ್ಲರನ್ನೂ ಕರೆಸಿ, ಬಹಳ ಸರಳವಾದಂಥ ಕಾನೂನನ್ನು ತರಬೇಕು ಈಗಿರತಕ್ಕಂಥ ಕಾನೂನಿನಲ್ಲಿ ಏನೇನಿದೆ ಎನ್ನುವ ವಿವರಣೆಕೊಟ್ಟು ಸಮಸ್ಯೆಗಳನ್ನು ಬಗೆಹರಿಸತಕ್ಕಂಥದ್ದರ ಬಗ್ಗೆ ಹೇಳಿದಾಗ ಅವರು ತೃಪ್ತಿಯನ್ನು ವ್ಯಕ್ತಪಡಿಸಿ ಹೋಗಿದ್ದಾರೆ. ಆ ಸಭೆಗೆ ಶ್ರೀಮತಿ ಮನೋರಮಾ ಮಧ್ವರಾಜ್‌ರವರು ಬರಲಿಲ್ಲ.

ಶ್ರೀಮತಿ ಮನೋರಮಾ ಮಧ್ವರಾಜ್.—ಅದಕ್ಕೆ ಕಾರಣ ಉಂಟು, ನನಗೆ ಆರೋಗ್ಯ ಸರಿ ಇರಲಿಲ್ಲ.

ಶ್ರೀ ಸಿ. ಬೈರೇಗೌಡ.—ನನಗೂ ಕೂಡ ಅನೇಕ ಕಾರಣಗಳುಂಟು. ಆದರೂ ಇವತ್ತು ಉತ್ತರ ಕೊಡುತ್ತಿದ್ದೇನೆ. ಆ ಮಸೂದೆಯನ್ನು ಇದೇ ಸದನದಲ್ಲಿ ತಂದು ಒಪ್ಪಿಗೆ......

ಶ್ರೀ ಎಂ. ರಾಮಪ್ಪ.—ಅವರು ಮೀಟಿಂಗಿಗೆ ಬರಲಿಲ್ಲ ಅಂದರೆ ಅಪ್ಪನಗಂಟು ಹೋಯಿತ್ತೆ ?...

ಅಧ್ಯಕ್ಷರು.—ನೀವು ಸಮಾಧಾನ ಮಾಡಿಕೊಳ್ಳಬೇಕು.

(ಗೊಂದಲ)

ಶ್ರೀ ಬಸವರಾಜ ರಾಯರೆಡ್ಡಿ.—ನಮಗೆ ಹೊಟ್ಟೆ ಹಸಿದಿದೆ.

ಶ್ರೀ ಕೆ. ಹೆಚ್. ಶ್ರೀನಿವಾಸ್.—ಅನಾರೋಗ್ಯದ ನಿಮಿತ್ತ ಅವರು ಬರಲಿಲ್ಲ. ಆ ದಿವಸ ಅವರ ಪ್ರಾಣಕ್ಕೆ ಅಪಾಯ ಆಗಿತ್ತು ಎಂದು ಅವರು ತಮ್ಮ ಭಾಷಣದಲ್ಲಿ ಹೇಳಿದ್ದಾರೆ. ಅದನ್ನು ಬಿಟ್ಟು ಹೇಳಿ.

ಶ್ರೀ ಸಿ. ಬೈರೇಗೌಡ.—ಆಮೇಲೆ ಡೀಸಲ್ ಸಬ್ಸಿಡಿ ಬಗ್ಗೆ ಹೇಳಿದ್ದಾರೆ. ಮಾನ್ಯ ಮುಖ್ಯಮಂತ್ರಿಗಳು ಮತ್ತು ನಾನು ಇಬ್ಬರೂ ಸೇರಿ ಒಂದು ತೀರ್ಮಾನಕ್ಕೆ ಬಂದಿದ್ದೇವೆ. ಈ ವರ್ಷ ಒಂದು ಕೋಟಿ ರೂಪಾಯಿಯಷ್ಟು ಹಣವನ್ನು ಈಗಾಗಲೇ ನಾವು ಅದಕ್ಕೆ ಮೀಸಲಿಟ್ಟಿದ್ದೇವೆ. ದಕ್ಷಿಣ ಕನ್ನಡಕ್ಕೆ ೫೦ ಲಕ್ಷ ರೂಪಾಯಿ, ಉತ್ತರ ಕನ್ನಡಕ್ಕೆ ೨೫ ಲಕ್ಷ ರೂಪಾಯಿಗಳನ್ನು ಬಿಡುಗಡೆ ಮಾಡಿದ್ದೇವೆ. ಅದು ಇಲ್ಲಿಯವರೆಗೂ ಖರ್ಚಾಗಿಲ್ಲ.

ನಾನು ಮಾನ್ಯ ಸದಸ್ಯರಿಗೆ ವಿನಂತಿ ಮಾಡಿಕೊಳ್ಳುತ್ತೇನೆ. ಇದನ್ನು ಖರ್ಚು ಮಾಡುವುದಕ್ಕೆ ನಮ್ಮ ಕೈಯಲ್ಲಿ ಹಣ ಇದೆ. ಹಾಗೂ ಅಧಿಕಾರಿಗಳು ಎಲ್ಲಾ ಕಡೆ ಹೋಗಿ ಪ್ರಚಾರ ಮಾಡಿದ್ದಾರೆ. ಈ ರೀತಿಯ ವ್ಯವಸ್ಥೆ ಇದೆ ದಯಮಾಡಿ ಉಪಯೋಗಿಸಿಕೊಳ್ಳಿ ಎಂದು ಹೇಳುತ್ತಿದ್ದಾರೆ. ಇದಕ್ಕೆ ಏನು ಹೇಳುತ್ತಾರೆ ಎಂದರೆ, ನಾನಾ ಕಾರಣಗಳನ್ನು, ನಿಬಂಧನೆಗಳನ್ನು ಹಾಕಿದ್ದಾರೆಂದು ಹೇಳುತ್ತಿದ್ದಾರೆ. ಒಂದು ಮಾತನ್ನು ನಾನು ಇಲ್ಲಿ ಸ್ಪಷ್ಟವಾಗಿ ಹೇಳುತ್ತೇನೆ. ಕಾರಣ ಏನೆಂದರೆ, ನಾನು ಆಗಲೇ ಹೇಳಿದ ಹಾಗೆ ಮೀನುಗಾರಿಕೆಯಲ್ಲಿ ಮಧ್ಯಸ್ಥಗಾರರು ಇದ್ದಾರೆ, ಅವರನ್ನು ತೊಡೆದುಹಾಕಬೇಕೆಂಬ ದೃಢ ನಿರ್ಧಾರ ಇದು ಆಗಿದೆ. ಅವತ್ತು ಅಲ್ಲಿ ಮೀನುಗಾರರದೇ ಆದ ಸಹಕಾರ ಸಂಘಗಳು ಇವೆ. ಇವತ್ತು ಅವರು ಡೀಸೆಲ್‌ನ್ನು ಅಲ್ಲಿಂದಲೇ ಪಡೆಯಬಹುದು. ಹಾಗೂ ಅಲ್ಲಿ ಇವರದ್ದೇ ಆದ ಫೆಡರೇಷನ್‌ಗಳು ಏನಿವೆ ಅಲ್ಲಿ ಡೀಸೆಲ್ ಕೊಳ್ಳಲಿ ಎಂದು ನಿಬಂಧನೆಗಳನ್ನು ಮಾಡಿದ್ದೇವೆ. ಇದನ್ನು ಇವರ ಒಂದು ಒಳ್ಳೆಯ ದೃಷ್ಟಿಯನ್ನು ಇಟ್ಟುಕೊಂಡು ಮಾಡಿರುವುದು. ಮತ್ತು ಇದು ಸಾಧ್ಯವಿಲ್ಲದೆ ಕಡೆ ಫಿಶರೀಸ್ ಡೆವಲಪ್‌ಮೆಂಟ್ ಕಾರ್ಪೊರೇಷನ್ ಎಂದರೆ ಅದರ ಮೂಲಕ ಮೀನನ್ನು ಮಾರಾಟ ಮಾಡಬೇಕೆನ್ನತಕ್ಕ ವ್ಯವಸ್ಥೆ ಮಾಡಿದ್ದೇವೆ. ಇನ್ನು ಆಜ್ಞೆಯನ್ನು ಪೂರ್ವಾನ್ವಯವಾಗಿ ಜಾರಿಗೆ ಕೊಡುವುದು ಸಾಧುವಲ್ಲವೆನ್ನುವ ತೀರ್ಮಾನಕ್ಕೆ ನಾನು ಬಂದಿದ್ದೇನೆ. ಇದು ೬-೮-೧೯೮೫ರಲ್ಲಿ ಜಾರಿಗೆ ಬಂದಿದೆ. ಹಿಂದೆ ಏನು ಇತ್ತೋ ಅದೂ ಕೂಡಾ ದಾಖಲೆಗಳು ಇಲ್ಲದೇ ಇರತಕ್ಕದ್ದು ನಿಜ. ಅದನ್ನು ಸರಳ ಮಾಡಿ ಹಿಂದಿನ ಅವಧಿಯಲ್ಲಿ ಇರತಕ್ಕ ಡೀಸೆಲ್ ಪಡೆದವರಿಗೆ ಸಡಿಲ ಮಾಡಿ ಪ್ರಯೋಜನವನ್ನು ಉಂಟು

ಮಾಡಬೇಕೆನ್ನುವ ತೀರ್ಮಾನಕ್ಕೂ ಕೂಡಾ ನಾವು ಬಂದಿದ್ದೇವೆ. ಇನ್ನು ಮಾನ್ಯ ರಾಮಪ್ಪನವರು ಒಳನಾಡಿಗೆ ಬನ್ನಿ ಎಂದು ಹೇಳುತ್ತಿದ್ದಾರೆ. ಇವತ್ತು ಸಮುದ್ರ ಎಷ್ಟು ಇದೆಯೋ ಅಷ್ಟೇ ಅಗಾಧವಾಗಿ ಮೀನುಗಾರಿಕೆ ಇದೆ. ಸಮಯದ ಅಭಾವ ಇರುವುದರಿಂದ ನಾನು ಈಗ ಒಳನಾಡಿಗೆ ಬರಬೇಕಾಗಿದೆ. ನಮ್ಮ ರಾಜ್ಯದಲ್ಲಿ ಒಳನಾಡು ಮೀನುಗಾರಿಕೆ ಬಗ್ಗೆ ಸಾಕಷ್ಟು ಅವಕಾಶ ಇದೆ. ನಮ್ಮಲ್ಲಿ ೪.೫ ಲಕ್ಷ ಹೆಕ್ಟೇರ್‌ನಷ್ಟು ನೀರಾವರಿ ಪ್ರದೇಶ ಒಳನಾಡು ಮೀನುಗಾರಿಕೆ ಅಭಿವೃದ್ಧಿಗೆ ಇದೆ. ಒಳನಾಡಿನಲ್ಲಿ ಮೀನುಗಾರಿಕೆಗೆ ಮುಖ್ಯವಾಗಿ ಬೇಕಾಗಿರತಕ್ಕ ಅಂಶ ಎಂದರೆ ಮೀನಿನ ಮರಿಗಳ ಉತ್ಪಾದನೆ. ನಮಗೆ ಪ್ರತಿವರ್ಷ ೮೦ ಕೋಟಿ ಮೀನಿನ ಮರಿಗಳ ಅವಶ್ಯಕತೆ ಇದೆ. ಇದರಲ್ಲಿ ಈಗ ಉತ್ಪಾದನೆ ಆಗುತ್ತಿರತಕ್ಕದ್ದು ಕೇವಲ ೧೫ ರಿಂದ ೧೬ ಕೋಟಿ ಮೀನಿನ ಮರಿಗಳು ಮಾತ್ರ. ಇದು ನಮ್ಮ ಅವಶ್ಯಕತೆಯ ಕಾಲುಭಾಗದಷ್ಟೂ ಕೂಡಾ ಆಗುತ್ತಿಲ್ಲ. ಇದಕ್ಕೆ ಮುಖ್ಯ ಕಾರಣ, ಅನೇಕ ಕಡೆಗಳಲ್ಲಿ ಮೀನಿನ ಉತ್ಪಾದನೆಗೆ ಕಟ್ಟಿರತಕ್ಕ ಕೊಳಗಳು ಬಹಳ ಹಳೆಯದಾಗಿದ್ದು ೧೫–೨೦ ವರ್ಷಗಳ ಹಿಂದೆ ಕಟ್ಟಿದಂತಹವುಗಳು ಆಗಿವೆ. ಇಂತಹ ಅನೇಕ ಕೊಳಗಳು ಸುಸ್ಥಿತಿಯಲ್ಲಿ ಇಲ್ಲದೇ ಅಲ್ಲಿ ನೀರೂ ಸಹಾ ನಿಲ್ಲುತ್ತಿಲ್ಲ. ಇವನ್ನೆಲ್ಲಾ ಬದಲಾವಣೆ ಮಾಡಬೇಕಾಗುತ್ತದೆ. ಇದಕ್ಕೋಸ್ಕರ ಇನ್ ಲ್ಯಾಂಡ್ ಫಿಶರೀಸ್ ಡೆವಲಪ್‌ಮೆಂಟ್ ಕಾರ್ಪೊರೇಷನ್ ಇದ್ದು ಇದರ ಬಗ್ಗೆ ಕೆಲವು ಸದಸ್ಯರು ಪ್ರಶ್ನೆ ಮಾಡಿದ್ದಾರೆ. ಯಾರೋ ಒಬ್ಬರಿಗೆ ಅಧಿಕಾರ ಕೊಡುವುದಕ್ಕೆ ಇದನ್ನು ಮಾಡಿದ್ದೀರಿ ಎನ್ನುವ ರೀತಿ ಪ್ರಸ್ತಾಪವನ್ನು ಮಾಡಿದ್ದಾರೆ. ಇದನ್ನು ಸ್ಥಾಪನೆ ಮಾಡಿರತಕ್ಕದ್ದು ಆ ಉದ್ದೇಶಕ್ಕೆ ಅಲ್ಲ. ಮೀನಿನ ಮರಿಗಳ ಉತ್ಪಾದನೆ ಬಗ್ಗೆ ಹೆಚ್ಚು ಆಸಕ್ತಿ ವಹಿಸಿ ಹೆಚ್ಚು ಸೌಕರ್ಯ ಒದಗಿಸಿ ಹೆಚ್ಚು ಉತ್ಪಾದನೆ ಮಾಡುವ ದೃಷ್ಟಿಯಿಂದ ಕೆಲವು ಜವಾಬ್ದಾರಿಗಳನ್ನು ಅವರಿಗೆ ಕೊಟ್ಟಿದ್ದೇವೆ. ಕಳೆದ ೨ ತಿಂಗಳಿಂದೀಚೆಗೆ ನಾವು ಈ ತೀರ್ಮಾನವನ್ನು ತೆಗೆದುಕೊಂಡಿದ್ದೇವೆ. ಮುಂದೆ ಮೀನಿನ ಮರಿಗಳು ಹೆಚ್ಚು ಉತ್ಪಾದನೆ ಆಗುತ್ತದೆ. ಇದರಿಂದ ಒಳನಾಡು ಮೀನು ಸಾಕಷ್ಟು ಅಭಿವೃದ್ಧಿಯಾಗುತ್ತದೆ. ಜೊತೆಗೆ ವಿಶ್ವಬ್ಯಾಂಕ್ ನೆರವಿನಿಂದ ೪೭ ಕೋಟಿ ರೂಪಾಯಿಗಳ ಯೋಜನೆಯನ್ನು ನಾವು ಈಗಾಗಲೇ ಸಿದ್ಧಪಡಿಸಿದ್ದೇವೆ. ಕೇಂದ್ರ ಸರ್ಕಾರದ ಪರ್ಯಾಲೋಚನೆಯಲ್ಲಿ ಈ ಯೋಜನೆ ಇದೆ. ಅವರು ಒಪ್ಪಿದ ಮೇಲೆ ೫೯೦ ಜಲಾಶಯಗಳಲ್ಲಿ ಅವುಗಳನ್ನು ಅಭಿವೃದ್ಧಿ ಮಾಡಿ ಮೀನನ್ನು ನಾವು ಹೆಚ್ಚು ಬೆಳೆಯುವುದಕ್ಕೆ ಅವಕಾಶವನ್ನು ಉಂಟು ಮಾಡಬೇಕೆಂಬ ತೀರ್ಮಾನ ಇದೆ. ಅದಕ್ಕೆ ವಿಶ್ವಬ್ಯಾಂಕ್ ಯೋಜನೆ ಮಂಜೂರು ಆಗಬೇಕಾದರೆ ಕನಿಷ್ಟ ಒಂದೂವರೆಯಿಂದ ಎರಡು ವರ್ಷಗಳು ಬೇಕಾಗುತ್ತದೆ. ಅದರ ಒಂದು ಅವಧಿಯಲ್ಲಿ ಕಂಟೆಂಜೆನ್ಸಿ ಪ್ಲಾನ್ ಎಂದು ಮಾಡಿ ಎನ್. ಸಿ. ಡಿ. ಸಿ. ಯವರ ಸಹಯೋಗದಿಂದ, ಅವರ ಆರ್ಥಿಕ ನೆರವಿನಿಂದ ಮೈಸೂರು ಜಿಲ್ಲೆಯಲ್ಲಿ ಒಂದು ಯೋಜನೆ ಕಾರ್ಯಗತ ಮಾಡಬೇಕೆನ್ನುವ ತೀರ್ಮಾನಕ್ಕೆ ಬಂದು ಈಗಾಗಲೇ ಜಿಲ್ಲಾ ಮಟ್ಟದ ಫೆಡರೇಷನ್ ರಿಜಿಸ್ಟರ್ ಆಗಿದೆ. ಅದರ ಮುಖಾಂತರ ಸರ್ಕಾರದ ಕೆಲಸಗಳು ಆಗುತ್ತವೆ. ಅಲ್ಲಿ ಸಾಲ ನೀಡಿ ಮೀನನ್ನು ಹೆಚ್ಚಿನ ರೀತಿಯಲ್ಲಿ ಅಭಿವೃದ್ಧಿ ಮಾಡುವುದಕ್ಕೆ ಸರ್ಕಾರ ಮುಂದೆ ಬಂದಿದೆ ಎಂದು ಹೇಳುತ್ತೇನೆ. ಹಾಗೂ ಇನ್ನೊಂದು ವಿಷಯದ ಬಗ್ಗೆ ಯಾರೂ ಪ್ರಸ್ತಾಪ ಮಾಡಿಲ್ಲ. ಅದು ಬಂದರು ಇಲಾಖೆ ಬಗ್ಗೆ. ಈ ಬಂದರು ಇಲಾಖೆಯಲ್ಲಿ......

ಒಬ್ಬ ಮಾನ್ಯ ಸದಸ್ಯರು.—ಅಧ್ಯಕ್ಷರೇ, ಪದೇ ಪದೇ ಪ್ರಸ್ತಾಪ ಮಾಡಿಲ್ಲ ಎಂದು ಮಾನ್ಯ ಸಚಿವರು ಹೇಳುತ್ತಿದ್ದಾರೆ. ೫–೬ ಇಲಾಖೆಗಳ ಬೇಡಿಕೆಗಳನ್ನು ಒಟ್ಟಿಗೆ ಹಾಕಿ ಮಾತನಾಡಿ ಎಂದು ಹೇಳುತ್ತೀರಿ? ಅನಂತರ ಈ ರೀತಿಯಾಗಿ ಏಕೆ ಅವರು ಹೇಳಬೇಕು ?

ಅಧ್ಯಕ್ಷರು.—ಮಾನ್ಯ ಸದಸ್ಯರುಗಳು ಅನೇಕ ಸಲಹೆ ಸೂಚನೆಗಳನ್ನು ಕೊಟ್ಟಿದ್ದಾರೆ. ನೀವು ಏಕೆ ಹಾಗೆ ಹೇಳುತ್ತೀರಿ ?

(ಗೊಂದಲ)

ಶ್ರೀ ಎಂ. ರಾಮಪ್ಪ.—ಮಾನ್ಯ ಮಂತ್ರಿಗಳು ಒಳನಾಡ ಮೀನುಗಾರಿಕೆ ಬಗ್ಗೆ ಸರಿಯಾಗಿ ಹೇಳಲಿಲ್ಲ. ಆಗಲೇ ಬಂದರು ಬಗ್ಗೆ ಹೋಗಿದ್ದಾರೆ.

ಅಧ್ಯಕ್ಷರು.—ಈಗಾಗಲೇ ೪೦ ನಿಮಿಷ ಆಗಿದೆ. ನಿಮಗೆ ಅವಶ್ಯಕ ಇರುವುದನ್ನು ಹೇಳುತ್ತಾರೆ.

ಶ್ರೀ ಸಿ. ಬೈರೇಗೌಡ.—ಪ್ರಪಂಚದಲ್ಲೇ ಇರುವಂತಹ ನೈಸರ್ಗಿಕ ಬಂದರುಗಳಲ್ಲಿ ಕಾರವಾರ ಬಂದರು ಕೂಡಾ ಉತ್ತಮವಾದಂತಹ ಒಂದು ಬಂದರಾಗಿದೆ. ಅದನ್ನು ಬಹಳ ಹಿಂದೆಯೇ ಅಭಿವೃದ್ಧಿ ಮಾಡಿದ್ದರೆ ನಮ್ಮ ರಾಜ್ಯದಲ್ಲಿನ ಆರ್ಥಿಕ ಪರಿಸ್ಥಿತಿ ಇನ್ನೂ ಮುಂದುವರಿಯುತ್ತಿತ್ತೆಂಬುದರಲ್ಲಿ ಯಾವ

ಅನುಮಾನವೂ ಇಲ್ಲ, ಈಗ ಅಲ್ಲಿ ಕೆಲಸಕಾರ್ಯಗಳು ನಡೆದಿದ್ದು ಎರಡು ಬರ್ತ್‌ಗಳನ್ನು ಕಟ್ಟುವ ಕೆಲಸಕಾರ್ಯಗಳಾಗಿವೆ. ಮತ್ತು ಅಲ್ಲಿ ಡ್ರೆಜ್ಜಿಂಗ್ ಕೆಲಸ ಆಗುತ್ತಿದ್ದು ಇನ್ನು ಟ್ರಾನ್ಸಿಟ್ ಶೆಡ್ ಮುಂತಾದ ಕೆಲಸಗಳು ಬಾಕಿ ಇವೆ. ಇನ್ನು ಒಂದೆರಡು ತಿಂಗಳಲ್ಲಿ ಆ ಬಂದರನ್ನು ಪ್ರಾರಂಭ ಮಾಡತಕ್ಕ ಸ್ಥಿತಿಯಲ್ಲಿ ಇದ್ದೇವೆ ಎನ್ನುವ ಮಾತನ್ನು ಹೇಳುವುದಕ್ಕೆ ಇಷ್ಟಪಡುತ್ತೇನೆ. ಇದೇ ರೀತಿಯಲ್ಲಿ ಮಂಗಳೂರಿನಲ್ಲೂ ಕೂಡಾ ೭ನೇ ಪಂಚವಾರ್ಷಿಕ ಯೋಜನೆಯಲ್ಲಿ ೧೮ ಕೋಟಿ ರೂಪಾಯಿಗಳ ಒಂದು ಯೋಜನೆ ಇದ್ದು ಹಳೇ ಮಂಗಳೂರು ಬಂದರು ಯೋಜನೆಗೇ ಇದನ್ನು ಇಟ್ಟಿದ್ದೇವೆ. ನಮ್ಮ ಯೋಜನೆಗೆ ಹಣದ ಕಡಿತ ಆಗಿರುವುದರಿಂದ ೧೧-೧೨ ಕೋಟಿ ರೂಪಾಯಿ ಕಡಿತ ಇದ್ದರೂ ಕೆಲಸವನ್ನು ತ್ವರಿತವಾಗಿ ಮಾಡಿ, ಮಂಗಳೂರಿನಲ್ಲಿ ಇರತಕ್ಕ ಹಳೇ ಬಂದರನ್ನು ಕೂಡಾ ಅಭಿವೃದ್ಧಿಗೊಳಿಸಬೇಕೆಂದು ಮಾಡಿದ್ದೇವೆ. ಅದೇ ರೀತಿಯಲ್ಲಿ ಮಂಗಳೂರು ಮೀನುಗಾರಿಕಾ ಬಂದರನ್ನು ೧ ಕೋಟಿ ರೂಪಾಯಿಯಲ್ಲಿ ಅಭಿವೃದ್ಧಿ ಮಾಡಬೇಕೆನ್ನುವ ಕೆಲಸವನ್ನು ಕೈಗೆ ತೆಗೆದುಕೊಂಡಿದ್ದೇವೆ. ಈಗ ಕೆಲಸ ನಡೆಯುತ್ತಿದೆ ಎಂದು ಹೇಳುತ್ತೇನೆ. ಇನ್ನು ಉಳಿದಿರತಕ್ಕ ಮೀನುಗಾರಿಕಾ ಬಂದರುಗಳಲ್ಲಿ ಹೂಳು ತುಂಬಿರತಕ್ಕದ್ದು ನಿಜ. ಹಾಗೂ ಇದರಿಂದ ಅಲ್ಲಿರತಕ್ಕ ಮೀನುಗಾರರ ಪರಿಸ್ಥಿತಿ ಕಠಿಣವಾಗಿರುವುದೂ ನಿಜ. ಇರತಕ್ಕ ಆರ್ಥಿಕ ಪರಿಸ್ಥಿತಿಗೆ ಅನುಗುಣವಾಗಿ ಕೆಲಸ ಮಾಡತಕ್ಕಂಥ ಆಲೋಚನೆಯನ್ನು ಮಾಡುತ್ತೇವೆಂದು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಷ್ಟಪಡುತ್ತೇನೆ. ಇನ್ನು ಸಮುದ್ರ ಮೀನುಗಾರಿಕೆಯನ್ನು ನಮ್ಮ ರಾಜ್ಯದ ಹಿತದೃಷ್ಟಿಯಿಂದ ಹೆಚ್ಚಿನ ಶ್ರದ್ಧೆ ಮತ್ತು ಆಸಕ್ತಿಯಿಂದ ಮಾಡಬೇಕಾಗಿರುವುದು ನಿಜ. ಅದರ ಬಗ್ಗೆ ಎಲ್ಲಾ ಸದಸ್ಯರು ಸಲಹೆ ಸೂಚನೆಗಳನ್ನು ಕೊಟ್ಟಿದ್ದಾರೆ. ಆ ಬಗ್ಗೆ ಹೆಚ್ಚು ಹೇಳಬೇಕೆಂದಿದ್ದರೂ ಸಹ ಸಮಯದ ಬಗ್ಗೆ ತಾವು ಗಂಟೆ ಬಾರಿಸುತ್ತಿರುವುದರಿಂದ ತಮ್ಮ ಆಜ್ಞೆಯನ್ನು ಮೀರುವುದಕ್ಕೆ ನನಗಾಗುವುದಿಲ್ಲ.

ಶ್ರೀ ಎಂ. ರಾಮಪ್ಪ.—ಇನ್‌ಲ್ಯಾಂಡ್ ಫಿಶರೀಸ್ ಬಗ್ಗೆ ಏನು ಉತ್ತೇಜನವನ್ನು ಕೊಡುತ್ತಾರೆಂದು ಹೇಳಲೇ ಇಲ್ಲ.

ಶ್ರೀ ಸಿ. ಬೈರೇಗೌಡ.—ಅವರು ಮೀನು ಅಭಿವೃದ್ಧಿಗೆ ಕೊಳ ಕಟ್ಟುವುದಾದರೆ ಅವರಿಗೆ ೧೦ ಸಾವಿರ ರೂಪಾಯಿಗಳ ಸಬ್ಸಿಡಿ ಕೊಡುತ್ತೇವೆ. ಇಷ್ಟು ಹೇಳಿ......

ಶ್ರೀ ಕೆ. ಎಚ್. ಶ್ರೀನಿವಾಸ್.—ನಮಗೆ ಹಸಿವು ಜಾಸ್ತಿಯಾಗುತ್ತಿದೆ. ಈಗ ಅವರು ಮೀನುಗಾರಿಕೆ ಬಗ್ಗೆ ಹೇಳುತ್ತಲೇ ಹೋಗುತ್ತಿದ್ದಾರೆ.

ಶ್ರೀ ಸಿ. ಬೈರೇಗೌಡ.—ಇಷ್ಟು ಹೇಳಿ, ನನ್ನ ಬೇಡಿಕೆ ಏನು ಇದೆಯೋ ಅದಕ್ಕೆ ಸರ್ವಾನುಮತದಿಂದ ಒಪ್ಪಿಗೆ ಕೊಡಬೇಕೆಂದು ತಮ್ಮ ಮೂಲಕ ಮಾನ್ಯ ಸದಸ್ಯರಲ್ಲಿ ಬೇಡಿ ಇಷ್ಟು ಮಾತನಾಡಲು ಅವಕಾಶ ಕೊಟ್ಟ ಅಧ್ಯಕ್ಷರಿಗೆ ವಂದಿಸಿ ನನ್ನ ನಾಲ್ಕು ಮಾತುಗಳನ್ನು ಮುಗಿಸುತ್ತೇನೆ.

ಅಧ್ಯಕ್ಷರು.—ಶ್ರೀಮತಿ ಮನೋರಮಾ ಅವರೇ, ತಾವು ಏನಾದರೂ ವಿವರಣೆ ಕೇಳುತ್ತೀರಾ ?

ಶ್ರೀಮತಿ ಮನೋರಮ ಮಧ್ವರಾಜ್.—ನಾನೇನೂ ಕೇಳುವುದಕ್ಕೆ, ಮಾತನಾಡುವುದಕ್ಕೆ ಹೋಗುವುದಿಲ್ಲ.

ಶ್ರೀ ಕೆ. ಎಚ್. ಪಾಟೀಲ್.—ಆ ಒಂದು ಸಭೆಗೆ ಶ್ರೀಮತಿ ಮನೋರಮಾ ಮಧ್ವರಾಜ್ ಅವರು ಏತಕ್ಕಾಗಿ ಬರಲಾಗಲಿಲ್ಲ ಎನ್ನುವ ಬಗ್ಗೆ ಇಲ್ಲಿ ಹೇಳಿದ್ದಾರೆ. ಅವರಿಗೆ ಜ್ವರ ಬಂದಿತ್ತು ಎನ್ನುವ ಕಾರಣದಿಂದಾಗಿ ಅಂದು ಅವರು ಸಭೆಗೆ ಬರಲಾಗಲಿಲ್ಲವೆಂಬ ಮಾತನ್ನು ಹೇಳಿದ್ದಾರೆ. ಅವರ ಮನೋವೇದನೆಯನ್ನು ಅರಿತು ಅವರು ಹೇಳಿದ ಕೆಲಸವನ್ನು ಮಾಡಿಕೊಡಿ ಎಂದು ಫಿಶರೀಸ್ ಬಗ್ಗೆ ಈಗ ಪರಿಣಿತಿಯನ್ನು ಹೊಂದಿರತಕ್ಕಂತಹ ಮಾನ್ಯ ಮಂತ್ರಿಗಳಿಗೆ ಹೇಳಿಕೊಡಬೇಕಾಗಿಲ್ಲ. ಅವರು ಏನೇ ಮಾಡಿದರೂ ಕೂಡಾ ಅನೇಕ ಸಾರಿ......

ಶ್ರೀ ಕೆ. ಎಚ್. ಶ್ರೀನಿವಾಸ್.—Fishing in troubled waters.

ಶ್ರೀ ಕೆ. ಎಚ್. ಪಾಟೀಲ್.—ಇವತ್ತು ತಾವು ಆಲೋಚನೆ ಮಾಡಬೇಕು. ಇವತ್ತು ತಮ್ಮ ಇಲಾಖೆಯ ಬಗ್ಗೆ ಅನೇಕ ಕಾರ್ಯಕ್ರಮಗಳನ್ನು ಹೇಳಿದ್ದೀರಿ. ಮಾನ್ಯ ಸದಸ್ಯರುಗಳು ಕೂಡ ಅನೇಕ ಸಲಹೆಗಳನ್ನು ನೀಡಿದ್ದಾರೆ. ಇವತ್ತು ಆಳ ಸಮುದ್ರದಲ್ಲಿಯೋ ಆಗಲೀ, ಕರಾವಳಿಯಲ್ಲಿಯೋ ಆಗಲಿ, ಎಲ್ಲಿ ಮೀನುಗಳು ಇಲ್ಲವೋ ಅಲ್ಲಿ ಅವನ್ನು ಉತ್ಪಾದನೆ ಮಾಡತಕ್ಕ ಸಾಮರ್ಥ್ಯ ನಿಮ್ಮ ಹತ್ತಿರ ಇದೆ

ಎಂದು ರಾಮಕೃಷ್ಣ ಹೆಗ್ಡೆಯವರು ನಿಮಗೆ ಈ ಖಾತೆಯನ್ನು ಒಪ್ಪಿಸಿದ್ದಾರೆ. ಇಲ್ಲದ್ದನ್ನು ಹಿಡಿಯುವವರು ನೀವು ಎಂಬುದನ್ನು ಅರಿತು ನಿಮಗೆ ಇದನ್ನು ಒಪ್ಪಿಸಿದ್ದಾರೆ.

ಆ ದೃಷ್ಟಿಯಿಂದ ನಾವು ನಿಮ್ಮ ಯೋಗ್ಯತೆಯನ್ನು ಪರೀಕ್ಷೆ ಮಾಡಬೇಕಾದರೆ ಎಲ್ಲೆಲ್ಲಿ ಮೀನುಗಳು ಇಲ್ಲ ಅಲ್ಲಲ್ಲಿ ಮೀನುಗಳ ಉತ್ಪಾದನೆ ಮಾಡತಕ್ಕ ಕೆಲಸ ಮಾಡಿದರೆ ಶ್ರೀಮತಿ ಮನೋರಮ ಮಧ್ವರಾಜ್ ರವರಿಗೆ ಸಮಾಧಾನವಾಗುತ್ತದೆ ಎನ್ನುವ ಮಾತನ್ನು ಹೇಳುತ್ತೇನೆ.

ಶ್ರೀ ಎಸ್. ಪ್ರಭಾಕರ್ ರಾಣೆ.—ಮಾನ್ಯ ಸಚಿವರು ಸೀಗಡಿ ಮೀನಿನ ಕೃಷಿ ಬಗ್ಗೆ ಹೇಳಿದ್ದಾರೆ. ಸೀಗಡಿ ಮೀನು ಕೃಷಿಗೆ ಗಜನಿ ಭೂಮಿಯನ್ನು ಮಾಡಲಿಕ್ಕೆ ಸರ್ಕಾರದಿಂದ ಸಾಧ್ಯವಿಲ್ಲ ಖಾಸಗಿಯವರು ಮಾಡುವುದಾದರೆ ಪ್ರೋತ್ಸಾಹ ಕೊಡುತ್ತೇವೆಂದು ಹೇಳಿದ್ದಾರೆ. ಗಜನಿ ಭೂಮಿ ರೆವಿನ್ಯೂ ಇಲಾಖೆಯಲ್ಲಿ ಮತ್ತು ಪೋರ್ಟ್ಸ್ ಇಲಾಖೆಯಲ್ಲಿ ಸೇರಿದೆ ಅದನ್ನು ಹೆಚ್ಚು ಕಾಲದವರೆಗೆ ಕೊಡುವ ವ್ಯವಸ್ಥೆ ಇಲ್ಲ ಇರತಕ್ಕ ಕಾನೂನನ್ನು ತಿದ್ದುಪಡಿ ಮಾಡಿ ಕೊಡುವ ವ್ಯವಸ್ಥೆ ಮಾಡಿ. ಮೀನುಗಾರಿಕೆ ಇಲಾಖೆಗೆ ಕರ್ನಾಟಕ ಲೋಕಸೇವಾ ಆಯೋಗದಿಂದ ಫಿಶರೀಸ್ ಸೂಪರಿಂಟೆಂಡೆಂಟ್‌ಗಳನ್ನು ಆಯ್ಕೆ ಮಾಡಿದ್ದಾರೆ. ೧೯೮೫ರಲ್ಲಿ ಆಯ್ಕೆ ಮಾಡಿದ್ದರೂ ಇದುವರೆಗೆ ಅವರನ್ನು ನೇಮಕ ಮಾಡಿಲ್ಲ. ೨೦ ಸ್ಥಳಗಳಿಗೆ ಅವರನ್ನು ನೇಮಕ ಮಾಡಬೇಕಾಗಿದೆ. ೩೦ ಸೂಪರ್‌ವೈಸರ್ ಹುದ್ದೆಗಳಿಗೆ ಆಯ್ಕೆ ಮಾಡುವಾಗ ಯಾರು ಎಸ್.ಎಸ್.ಎಲ್.ಸಿ. ಪಾಸ್ ಮಾಡಿದ್ದಾರೆ ಯಾರಿಗೆ ಕ್ವಾಲಿಫಿಕೇಶನ್ ಇಲ್ಲ ಅಂತಹವರಿಗೆ ಪ್ರಮೋಷನ್ ಕೊಟ್ಟಿದ್ದಾರೆ. ನ್ಯಾಯವಾಗಿ ಅವಕಾಶ ಸಿಗಬೇಕಾದ ಜನರು ವಂಚಿತರಾಗಿದ್ದಾರೆ, ನಿಯಮದ ಪ್ರಕಾರ ಪ್ರಮೋಷನ್ ಕೊಡುವ ವ್ಯವಸ್ಥೆ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ. ಮಾನ್ಯ ಮಂತ್ರಿಗಳು ಸಬ್ಸಿಡಿ ಬಗ್ಗೆ ಹೇಳಿದ್ದಾರೆ. ೫೨ ಕೋಟಿ ರೂಪಾಯಿ ಸಬ್ಸಿಡಿಯನ್ನು ನಾವು ಬಿಡುಗಡೆ ಮಾಡಿದ್ದೇವೆ, ಯಾರೂ ಅದನ್ನು ಉಪಯೋಗಿಸಿಕೊಂಡಿಲ್ಲವೆಂದು ಹೇಳಿದ್ದಾರೆ. ನಿಮ್ಮ ಷರತ್ತುಗಳು ಏನಿವೆ ಅದರಿಂದ ಅದನ್ನು ಉಪಯೋಗಿಸಿಕೊಳ್ಳಲಿಕ್ಕೆ ಆಗಿಲ್ಲ. ಜನರಿಗೆ ಸಬ್ಸಿಡಿ ಕೊಡುತ್ತಾರೆನ್ನುವ ಕಲ್ಪನೆ ಇರಲಿಲ್ಲ. ಅಂತಹವರಿಗೆ ಏನಾದರೂ ಕಮೀಷನ್ ಕೊಡುವ ವ್ಯವಸ್ಥೆಯನ್ನು ಮಾಡುತ್ತೀರಾ?

ಶ್ರೀ ಸಿ. ಭೈರೇಗೌಡ.—ಮಾನ್ಯ ಸದಸ್ಯರು ಗಜನಿ ಭೂಮಿಯ ಬಗ್ಗೆ ಹೇಳಿದ್ದಾರೆ. ನಾನು ಈಗಾಗಲೇ ಅದರ ಬಗ್ಗೆ ಹೇಳಿದ್ದೇನೆ. ಮಾನ್ಯ ಕಂದಾಯ ಸಚಿವರು ಮತ್ತು ನಾನು ಕಾನೂನನ್ನು ಮಾರ್ಪಾಡು ಮಾಡತಕ್ಕದರ ಬಗ್ಗೆ ವಿಚಾರ ಮಾಡುತ್ತೇವೆ. ಕರ್ನಾಟಕ ಲೋಕ ಸೇವಾ ಆಯೋಗದವರು ಆಯ್ಕೆ ಮಾಡಿದಂತಹ ಸೂಪರಿಂಟೆಂಡೆಂಟ್‌ಗಳನ್ನು ಇನ್ನು ನೇಮಕ ಮಾಡಿಕೊಂಡಿಲ್ಲವೆಂದು ಹೇಳಿದ್ದಾರೆ ರಾಜ್ಯದಲ್ಲಿ ಬರಗಾಲವಿರುವುದರಿಂದ ಒಳನಾಡಿನ ಮೀನು ಅಭಿವೃದ್ಧಿ ಕಾರ್ಯಕ್ರಮ ಸಗಿತಗೊಂಡಿದೆ. ಹುದ್ದೆಗಳು ಖಾಲಿ ಇವೆ, ಕೆಲಸ ಇಲ್ಲ. ಅವರನ್ನು ನೇಮಕ ಮಾಡಿಕೊಂಡು ಸುಮ್ಮನೆ ಸಂಬಳ ಕೊಡುವುದು ನನಗೆ ಸರಿ ಕಾಣುವುದಿಲ್ಲ. ನಾವು ವೆಚ್ಚ ಮಾಡುವ ಒಂದು ಪೈಸೆ ಹಣವನ್ನು ಕೇಳತಕ್ಕ ಹಕ್ಕು ಎಲ್ಲರಿಗೂ ಇದೆ. ಆದುದರಿಂದ ಕೆಲಸವಿಲ್ಲದೆ ಸಂಬಳ ಕೊಡುವ ಇಚ್ಛೆ ನನಗಿಲ್ಲವೆಂದು ಹೇಳುವುದಕ್ಕೆ ಇಚ್ಛೆಪಡುತ್ತೇನೆ. ಡೀಸಲ್ ಸಬ್ಸಿಡಿ ಕೊಡುವುದರಲ್ಲಿ ಸದಸ್ಯರು ಹೇಳಿರುವುದರಲ್ಲಿ ಅರ್ಥವಿದೆ. ದಿನಾಂಕ ೮-೮-೮೫ ರಿಂದ ಹಿಂದೆ ಸಬ್ಸಿಡಿ ಇದೆಯೆಂದು ಅವರಿಗೆ ಗೊತ್ತಿರಲಿಲ್ಲ. ಇರತಕ್ಕ ತೊಡಕುಗಳನ್ನು ಮತ್ತು ಶರತ್ತುಗಳನ್ನು ಸಡಿಲಗೊಳಿಸುವ ತೀರ್ಮಾನಕ್ಕೆ ಬಂದಿದ್ದೇವೆ. ಒಂದೆರಡು ದಿವಸಗಳಲ್ಲಿ ಆ ತೀರ್ಮಾನವನ್ನು ಹೇಳುತ್ತೇನೆ.

ಶ್ರೀ ಬಿ. ಸ್ವಾಮಿರಾವ್.—ಮಾನ್ಯ ಮೀನುಗಾರಿಕೆ ಮಂತ್ರಿಗಳ ಇಲಾಖೆಯ ನೌಕರರೊಬ್ಬರು ಸುಮಾರು ೩೦೦-೪೦೦ ದಿವಸಗಳಿಂದ ಸತ್ಯಾಗ್ರಹ ಮಾಡುತ್ತಿದ್ದಾರೆ. ಅವರನ್ನು ಯಾರೂ ಕೂಡ ಕೇಳಿಲ್ಲ. ನಿಮ್ಮ ಕಷ್ಟವೇನು ಏತಕ್ಕೆ ಎಂದು ವಿಚಾರ ಮಾಡಿದ್ದರೆ ಒಳ್ಳೆಯದಿತ್ತು. ಅವರ ಬಗ್ಗೆ ಏತಕ್ಕೆ ವಿಚಾರ ಮಾಡಲಿಲ್ಲ? ಮಾನ್ಯ ಮುಖ್ಯಮಂತ್ರಿಗಳು ಮಂತ್ರಿಗಳು, ಶಾಸಕರು ಬರತಕ್ಕ ದಾರಿಯಲ್ಲಿ ವಿಧಾನಸೌಧದ ಪಕ್ಕದಲ್ಲಿ ದೀರ್ಘಕಾಲದಿಂದ ಸತ್ಯಾಗ್ರಹ ಮಾಡುತ್ತಿದ್ದಾರೆ ಅವರ ಸಮಸ್ಯೆ ಏನೆಂಬುದನ್ನು ಹೇಳಬೇಕು.

ಶ್ರೀ ಸಿ. ಭೈರೇಗೌಡ.—ಮಾನ್ಯ ಅಧ್ಯಕ್ಷರೆ ಈ ಪ್ರಶ್ನೆಗೆ ಅನೇಕ ಸಾರಿ ಉತ್ತರ ಕೊಟ್ಟಿದ್ದೇನೆ. ಮತ್ತೊಂದು ಸಾರಿ ಹೇಳುವುದಕ್ಕೆ ತಾವು ಅವಕಾಶ ಕೊಟ್ಟರೆ ನಾನು ಹೇಳುತ್ತೇನೆ.

ಶ್ರೀ ಬಸವರಾಜ್.—ಮೀನು ಕೃಷಿ ವಿಮಾ ಯೋಜನೆಯನ್ನು ಕರ್ನಾಟಕ ರಾಜ್ಯದಲ್ಲಿ ಜಾರಿಗೆ ತರಬೇಕು. ಹೆಚ್ಚು ಜನರು ಮೀನು ಕೃಷಿ ಮಾಡುತ್ತಿದ್ದಾರೆ. ಈ ಕಾರ್ಯಕ್ರಮವನ್ನು ಸರ್ಕಾರ ಕೂಡಲೇ ಜಾರಿಗೆ ತರಬೇಕೆಂದು ಹೇಳುತ್ತೇನೆ.

ಶ್ರೀ ಸಿ. ಭೈರೇಗೌಡ.—ಮಾನ್ಯ ಸದಸ್ಯರು ಹೊಸ ವಿಚಾರವನ್ನು ಪ್ರಸ್ತಾಪ ಮಾಡಿದ್ದಾರೆ. ಅದರ ಬಗ್ಗೆ ಆಳವಾಗಿ ವಿಚಾರಮಾಡಿ ಕಾರ್ಯಕ್ರಮವನ್ನು ಕೈಗೊಳ್ಳುತ್ತೇನೆ.

ಅಧ್ಯಕ್ಷರು.—ಈ ಬೇಡಿಕೆಯ ಮೇಲಿನ ಉತ್ತರ ಇಲ್ಲಿಗೆ ಮುಕ್ತಾಯವಾಯಿತು.

ತೋಟಗಾರಿಕೆ ಇಲಾಖೆಯ ಬೇಡಿಕೆಯ ಮೇಲಿನ ಚರ್ಚೆಗೆ ಉತ್ತರ

ಶ್ರೀ ಬಿ ಸೋಮಶೇಖರ್ (ತೋಟಗಾರಿಕೆ ರಾಜ್ಯ ಸಚಿವರು)–ಮಾನ್ಯ ಅಧ್ಯಕ್ಷರೇ, ನನ್ನ ಇಲಾಖೆ ಬಗ್ಗೆ ಟೀಕೆ ಮಾಡಿರತಕ್ಕದ್ದನ್ನು ಕೇಳಿದ್ದೇನೆ. ಟೀಕೆ ಮಾಡಿಗತಕ್ಕದ್ದು, ಒಳ್ಳೆಯ ಆಡಳಿತವನ್ನು ನನ್ನ ಇಲಾಖೆಯ ಮುಖಾಂತರ ಕೊಡಬೇಕೆಂದು ಟೀಕೆ ಮಾಡಿದ್ದಾರೆಂದು ನಾನು ತಿಳಿದುಕೊಂಡಿದ್ದೇನೆ. ತೋಟಗಾರಿಕೆ ಇಲಾಖೆಯು ಇದೊಂದು ಅಭಿವೃದ್ಧಿಯಾಗತಕ್ಕ ಇಲಾಖೆ, ಬೆಳೆಯುತಕ್ಕ ಇಲಾಖೆ ಈ ಇಲಾಖೆ ಎಷ್ಟರಮಟ್ಟಿಗೆ ಬೆಳೆಯಬೇಕಾಗಿತ್ತೋ ಅಷ್ಟರಮಟ್ಟಿಗೆ ಸಮಾಗು ೧೦–೧೫ ವರ್ಷಗಳಿಂದ ಬೆಳವಣಿಗೆ ಆಗಿಲ್ಲ, ಇದರ ಬಗ್ಗೆ ಅನೇಕ ಸದಸ್ಯರು ತಮ್ಮ ಭಾಷಣದಲ್ಲಿ ಮಾತನಾಡಿದ್ದಾರೆ. ನಮ್ಮ ರಾಜ್ಯದಲ್ಲಿ ಎರಡನೆಯ ಪಂಚವಾರ್ಷಿಕ ಯೋಜನೆಯ ಅಂತ್ಯದವರೆಗೆ ಸುಮಾರು ೩.೫ ರಿಂದ ಆರನೆಯ ಪಂಚವಾರ್ಷಿಕ ಯೋಜನೆಯ ಅವಧಿಯೊಳಗೆ ಶೇಕಡ ೧೦ರಷ್ಟಕ್ಕೆ ನಾವು ವಿಸ್ತರಣೆಯನ್ನು ಮಾಡಿದ್ದೇವೆ, ಅಂದರೆ ಕೃಷಿ ವ್ಯವಸಾಯ ಉತ್ಪಾದನೆಯಾಗಿರತಕ್ಕ ಪ್ರದೇಶದಲ್ಲಿ ಶೇಕಡ ೧೦ರಷ್ಟು ತೋಟಗಾರಿಕೆ ಬೆಳೆಗಳನ್ನು ಬೆಳೆಯುತ್ತಿದ್ದೇವೆ. ಅದರ ಉತ್ಪಾದನೆ ಶೇಕಡ ೩೦ರಷ್ಟು. ಇದು ತೋಟಗಾರಿಕೆ ಬೆಳೆಗಳಿಂದ ಬರುತ್ತಿದೆ. ನಮ್ಮ ರಾಜ್ಯ ತೋಟಗಾರಿಕೆ ಬೆಳೆಗಳಿಗೆ ಬಹಳ ಹೇಳುವಾಸಿಯಾದ ರಾಜ್ಯ ಇದಕ್ಕೆ ಕಾರಣ ಉತ್ತಮವಾದ ಹವಾಗುಣ ಮಣ್ಣಿನ ಗುಣ, ಬೇರೆ ಯಾವುದೇ ರಾಜ್ಯಗಳಲ್ಲಿ ಇಲ್ಲ. ನಮ್ಮ ರಾಜ್ಯದಲ್ಲಿ ಎಲ್ಲಾ ವಿಧವಾದ ಹಣ್ಣುಗಳನ್ನು ತರಕಾರಿಗಳನ್ನು ಹೂವುಗಳನ್ನು ಗಿಡಗಳನ್ನು ಎಲ್ಲಾ ಕಾಲದಲ್ಲಿ ಬೆಳೆಯುತಕ್ಕ ಅವಕಾಶ ನಮ್ಮ ರಾಜ್ಯದಲ್ಲಿದೆ. ಇದೊಂದು ಪ್ರಕೃತಿದತ್ತವಾದ ಸಂಪತ್ತು ಎಂದು ಹೇಳಿದರೆ ತಪ್ಪಾಗಲಾರದು ಕಾಫಿ ಮತ್ತು ಅಡಿಕೆ ಬೆಳೆಯಲ್ಲಿ ಇಡೀ ರಾಷ್ಟ್ರದಲ್ಲೇ ಮೊದಲನೆಯ ಸ್ಥಾನವನ್ನು ನಾವು ಗಳಿಸಿದ್ದೇವೆ. ಗೋಡಂಬಿ, ಕೋಕೊ. ಈ ಬೆಳೆಗಳಲ್ಲಿ ಈ ವರ್ಷ ಎರಡನೆಯ ಸ್ಥಾನವನ್ನು ತೆಗೆದುಕೊಂಡಿದ್ದೇವೆ. ತೆಂಗು ಇದರಲ್ಲಿ ರಾಷ್ಟ್ರದಲ್ಲಿಯೇ ನಮ್ಮ ರಾಜ್ಯ ೩ನೇ ಸ್ಥಾನವನ್ನು ಗಳಿಸಿದ್ದೇವೆ. ತೋಟಗಾರಿಕೆ ಬೆಳೆಯನ್ನು ೧೦ ಲಕ್ಷ ಹೆಕ್ಟೇರುಗಳಲ್ಲಿ ಬೆಳೆಯುತ್ತಿದ್ದೇವೆ. ೭ನೇಯ ಪಂಚವಾರ್ಷಿಕ ಯೋಜನೆಯ ಕೊನೆಯಲ್ಲಿ ಸುಮಾರು ೩೦ ಲಕ್ಷ ಹೆಕ್ಟೇರು ಪ್ರದೇಶದಲ್ಲಿ ಬೆಳೆಯುತಕ್ಕ ಯೋಜನೆಯನ್ನು ನಾವು ಹಾಕಿಕೊಂಡಿದ್ದೇವೆ ಅದಕ್ಕೋಸ್ಕರ ಅನೇಕ ಅಭಿವೃದ್ಧಿ ಕಾರ್ಯಕ್ರಮ ಯೋಜನೆಗಳನ್ನು ನಮ್ಮ ಸರ್ಕಾರ ತೆಗೆದುಕೊಂಡಿದೆ. ಪ್ರಪ್ರಥಮವಾಗಿ ಸುಮಾರು ೭–೮ ವರ್ಷಗಳಿಂದ ಆಗದೇ ಇರತಕ್ಕ ಕೆಲಸವನ್ನು ನಮ್ಮ ಸರ್ಕಾರ ಅಧಿಕಾರಕ್ಕೆ ಬಂದಮೇಲೆ ಸಮಗ್ರ ತೋಟಗಾರಿಕೆ ಅಭಿವೃದ್ಧಿಯ ರೂಪುರೇಷೆಗಳನ್ನು ತಯಾರು ಮಾಡಿ ಸುಮಾರು ೫೫ ಕೋಟಿ ರೂಪಾಯಿ ವೆಚ್ಚದಲ್ಲಿ ವಿಶ್ವಬ್ಯಾಂಕಿನಿಂದ ಹಣವನ್ನು ಸಾಲ ತೆಗೆದುಕೊಂಡು ಕಾರ್ಯಕ್ರಮವನ್ನು ರೂಪಿಸತಕ್ಕ ಯೋಜನೆಯನ್ನು ನಮ್ಮ ಸರ್ಕಾರ ತಯಾರು ಮಾಡಿ ಕೇಂದ್ರ ಸರ್ಕಾರಕ್ಕೆ ಕಳುಹಿಸಿಕೊಟ್ಟಿದೆ ಅದು ಕೇಂದ್ರ ಸರ್ಕಾರದ ಪರ್ಯಾಲೋಚನೆಯಲ್ಲಿರುವುದರಿಂದ ಈ ಸಂದರ್ಭದಲ್ಲಿ ಕೇಂದ್ರ ಸರ್ಕಾರ ಆ ಯೋಜನೆಯನ್ನು ಮಂಜೂರು ಮಾಡಬೇಕೆಂದು ಕೇಳಿಕೊಳ್ಳುತ್ತೇನೆ. ತೆಂಗು ಅಭಿವೃದ್ಧಿಗೋಸ್ಕರ ಸುಮಾರು ೩೬ ಕೋಟಿ ರೂಪಾಯಿ ವೆಚ್ಚದಲ್ಲಿ ಒಂದು ಯೋಜನೆಯನ್ನು ತಯಾರು ಮಾಡಿದ್ದೇವೆ. ೧೬ ಸಾವಿರ ಹೆಕ್ಟೇರು ಪ್ರದೇಶದಲ್ಲಿ ತೆಂಗು ಅಭಿವೃದ್ಧಿ ಮಾಡುವ ಯೋಜನೆಯನ್ನು ಹಾಕಿಕೊಂಡಿದ್ದೇವೆ ಅದನ್ನು ಕೂಡ ಕೇಂದ್ರ ಸರ್ಕಾರ ಆದಷ್ಟು ಬೇಗ ಮಂಜೂರು ಮಾಡಿಕೊಡಬೇಕೆಂದು ಈ ಸಂದರ್ಭದಲ್ಲಿ ಕೇಳಿಕೊಳ್ಳುತ್ತೇನೆ. ಬಹಳಷ್ಟು ಯೋಜನೆಗಳು ನಮ್ಮ ಇಲಾಖೆಯಲ್ಲಿರುವುದರಿಂದ ಅದನ್ನೆಲ್ಲಾ ಹೇಳುವುದಕ್ಕೆ ಸಮಯದ ಅಭಾವದಿಂದ ನಾನು ಕೆಲವು ಪ್ರಾಮುಖ್ಯವಾದ ವಿಷಯಗಳನ್ನು ಮಾತ್ರ ಈ ಸಂದರ್ಭದಲ್ಲಿ ನಾನು ಹೇಳುವುದಕ್ಕೆ ಇಚ್ಛೆಪಡುತ್ತೇನೆ.

ಪ್ರಥಮವಾಗಿ, ನಮ್ಮ ಇಲಾಖೆ ಒಂದು ಆಯಿಲ್ ಫಾರ್ಮ್ ಅಭಿವೃದ್ಧಿ ಮಾಡಬೇಕು ಎಂದು ಬೇಡಿಕೆ ಇಟ್ಟುಕೊಂಡಿತ್ತೋ ಅದನ್ನು ಈ ವರ್ಷದಿಂದ ಮಾಡುವ ಯೋಜನೆ ಮಾಡಿದ್ದೇವೆ. ಸುಮಾರು ೧೧೫ ವರ್ಷಗಳ ಹಿಂದೆ ಮಲೇಷ್ಯಾ ದೇಶದಲ್ಲಿ ಡಿಗ್ರಿಷನ್ ಪ್ಲ್ಯಾಂಟ್ ಎಂದು ಉಪಯೋಗಿಸುತ್ತಿದ್ದರು ಇದರಿಂದ ಹೆಚ್ಚು ಪಾಮ್ ಆಯಿಲ್ ತೆಗೆದು ಬೇಕಾದಷ್ಟು ಮಾರಿ ಹಣ ಸಂಪಾದಿಸುತ್ತಿದ್ದರು. ಇದರ ಪ್ರಭಾವದಲ್ಲೇ ನಮ್ಮ ಕೇರಳ ಮತ್ತು ನಿಕೋಬಾರ್ ಇದನ್ನು ಬೆಳೆಯಲಾರಂಭಿಸಿದರು. ಈ

ವಾತಾವರಣವನ್ನೇ ಗಮನದಲ್ಲಿಟ್ಟುಕೊಂಡು ನಮ್ಮ ರಾಜ್ಯದಲ್ಲೂ ಇದನ್ನು ಬೆಳೆಯುವ ಅವಕಾಶ ಇದೆ. ಆ ದೃಷ್ಟಿಯಿಂದ ಕರಾವಳಿ ಪ್ರದೇಶ ಏನಿದೆ ನಾರ್ತ್ ಕೆನರಾ ಮತ್ತು ಸೌತ್ ಕೆನರಾ ಪ್ರದೇಶ ಗಳಲ್ಲಿ ಇದನ್ನು ಬೆಳೆಯುವ ಅವಕಾಶ ಜಾಸ್ತಿ. ಎಲ್ಲಿ ನೀರಾವರಿ ಪ್ರದೇಶಗಳು ಇವೆಯೋ ಅಲ್ಲಿ ಇದನ್ನು ಬೆಳೆಯುವ ಅವಕಾಶ ಇರುವುದರಿಂದ ಈ ವರ್ಷದಿಂದಲೇ ನಮ್ಮ ರಾಜ್ಯದಲ್ಲಿ ಇದನ್ನು ಅಭಿವೃದ್ಧಿಪಡಿಸ ಬೇಕೆಂದು ಪ್ರಾರಂಭ ಮಾಡಿದ್ದೇವೆ. ನಮ್ಮ ದೇಶದ ಜನಸಂಖ್ಯೆ ಜಾಸ್ತಿ ಇರುವುದರಿಂದ ಎಣ್ಣೆಯು ಶೇಕಡ ೨೦ರಷ್ಟನ್ನು ಆಮದು ಮಾಡಿಕೊಳ್ಳುತ್ತಿದ್ದೇವೆ. ಅಂದರೆ ಸುಮಾರು ೬೦೦ ಕೋಟಿ ರೂ. ಗಳ ವಿದೇಶೀ ವಿನಿಮಯ ಎಣ್ಣೆ ಬಾಬ್ತಿಗಾಗಿ ವ್ಯಯ ಮಾಡುತ್ತಿದ್ದೇವೆ. ಅದನ್ನು ತಡೆಗಟ್ಟಬೇಕಾದರೆ ನಾವೂ ಎಣ್ಣೆಯನ್ನು ಹೆಚ್ಚಾಗಿ ಉತ್ಪತಿ ಮಾಡುವ ಕಾರ್ಯಕ್ರಮವನ್ನು ಹಾಕಿಕೊಳ್ಳಬೇಕು. ಈಗಾಗಲೇ ತೆಂಗಿನ ಎಣ್ಣೆ ಕಡಲೆಕಾಯಿ ಎಣ್ಣೆ, ಸೂರ್ಯಕಾಂತಿ ಎಣ್ಣೆ ಏನಿವೆ ಅವೆಲ್ಲಕ್ಕಿಂತ ತಾಳೆ ಎಣ್ಣೆಯಲ್ಲಿ ಹೆಚ್ಚಿನ ಎಣ್ಣೆ ಅಂಶ ಇರುವುದು ಕಂಡುಬಂದಿದೆ. ಆದ್ದರಿಂದ ಇದಕ್ಕೆ ಹೆಚ್ಚಿನ ಪ್ರಾಮುಖ್ಯತೆಯನ್ನು ಕೇಂದ್ರ ದವರೂ ಕೊಟ್ಟಿದ್ದಾರೆ. ಆದ್ದರಿಂದ ಈ ಅವಕಾಶವನ್ನು ಉಪಯೋಗಿಸಿಕೊಂಡು ಒಂದು ದೊಡ್ಡ ಯೋಜನೆಯನ್ನು ತಯಾರು ಮಾಡಿ ಅದನ್ನು ೧೯೮೭-೮೮ನೇ ಸಾಲಿನಲ್ಲಿ ಮಾಡುವುದಕ್ಕೆ ಪ್ರಯತ್ನ ಮಾಡುತ್ತೇವೆಂದು ಹೇಳುವುದಕ್ಕೆ ಇಷ್ಟಪಡುತ್ತೇವೆ.

ಮತ್ತೆ ನಮ್ಮ ತೆಂಗಿನಕಾಯಿ ಬಗ್ಗೆ ಹೇಳುವುದಾದರೆ ಇದು ನಮ್ಮ ರಾಷ್ಟ್ರದಲ್ಲಿಯೇ ಮೂರನೇ ಸ್ಥಾನದಲ್ಲಿದೆ ನಮ್ಮ ರಾಜ್ಯ ಕೇರಳ ಮೊದಲನೆಯದು. ಅಂದರೆ ನಮ್ಮ ದೇಶದಲ್ಲಿ ೧೧ ಲಕ್ಷ ಹೆಕ್ಟೇರ್‌ನಲ್ಲಿ ತೆಂಗು ಬೆಳೆಯುತ್ತಿದ್ದಾರೆ. ಕರ್ನಾಟಕದಲ್ಲಿ ೩ ಲಕ್ಷ ಹೆಕ್ಟೇರ್‌ನಲ್ಲಿ ತೆಂಗು ಬೆಳೆಯುತ್ತಿದ್ದೇವೆ. ಅಂದರೆ ನಮ್ಮ ರಾಜ್ಯದಲ್ಲಿ ತೆಂಗಿಗೆ ಅವಕಾಶ ಜಾಸ್ತಿ ಇದೆ. ಈ ಎಲ್ಲ ಯೋಜನೆಗಳನ್ನೂ ನಾವು ಹಾಕಿಕೊಂಡಿ ದ್ದೇವೆ ಮತ್ತು ತೆಂಗು ಬೆಳೆಯಲ್ಲಿ ಹೆಚ್ಚಿನ ಸಾಧನೆಯನ್ನೂ ಸಹ ನಾವು ಮಾಡಿದ್ದೇವೆ. ೧೯೮೩-೮೪ರಲ್ಲಿ ೪,೭೮,೦೦೦ ತೆಂಗು ಸಸಿಗಳನ್ನು ವಿತರಣೆ ಮಾಡಿದ್ದು ಈ ವರ್ಷದ ಅಂತ್ಯದೊಳಗಾಗಿ ೨೦ ಲಕ್ಷ ಸಸಿಗಳನ್ನು ವಿತರಣೆ ಮಾಡುವ ಯೋಜನೆ ಹಾಕಿಕೊಂಡಿದ್ದೇವೆ. ಆದ್ದರಿಂದ ಈ ತಿಂಗಳ ಅಂತ್ಯ ದೊಳಗೆ ಗುರಿ ಸಾಧನೆ ಮಾಡುತ್ತೇವೆ. ಮತ್ತೆ ಈ ತೆಂಗು ಅಭಿವೃದ್ಧಿಗೋಸ್ಕರ ಮತ್ತು ಸಣ್ಣ ಹಿಡುವಳಿದಾರರು ಭೂರಹಿತರ ಅಭಿವೃದ್ಧಿಪಡಿಸುವ ಉದ್ದೇಶದಿಂದ ಬೇರೊಂದು ಯೋಜನೆ ಶ್ರೀ ರಮೇಶ್ ಕುಮಾರ್ ಅವರೂ ಅದರ ಬಗ್ಗೆ ಹೇಳಿದ್ದಾರೆ. ನಾಳೆಗಳ ಬಡಾವಣೆಗಳಲ್ಲಿ ಭೂ ರಹಿತರಿಗೆ ತಲಾ ೩೦ ತೆಂಗಿನ ಗಿಡಗಳನ್ನು ಕೊಟ್ಟು ಅವರ ಆರ್ಥಿಕ ಪರಿಸ್ಥಿತಿಯನ್ನು ಉತ್ತಮಗೊಳಿಸ ಬೇಕೆಂದು ಹೇಳಿದ್ದಾರೆ. ನಾವು ತಂದಿರುವ ಈ ಯೋಜನೆ ಎಷ್ಟು ಒಳ್ಳೆಯದೆಂದರೆ ಬಹಳ ಜನಗಳಿಂದ ಮೆಚ್ಚುಗೆ ಪತ್ರಗಳು ಬಂದಿವೆ. ನಮ್ಮ ರಾಜ್ಯದ ೭ ಸಾವಿರ ಕಿಲೋಮೀಟರ್ ತೀರದಲ್ಲಿ ೧೦ ಲಕ್ಷ ಸಸಿಗಳನ್ನು ನೆಡುವ ಅವಕಾಶ ಇದೆ. ಮತ್ತು ೩೩ ಸಾವಿರ ಭೂರಹಿತರಿಗೆ ಉದ್ಯೋಗ ಕೊಡಬಹುದು. ಸರ್ಕಾರದಿಂದ ಗೊಬ್ಬರದ ಖರ್ಚು ಮತ್ತು ಬೆಳೆಸುವ ಖರ್ಚು ಎಂದು ಕೊಟ್ಟು ಬೆಳೆಸುವ ಯೋಚನೆ ಇದೆ. ೫ ವರ್ಷಗಳಲ್ಲಿ ಬೆಳೆದಂಥ ಬೆಳೆಗಳ ಫಲವನ್ನು ಅವರು ತೆಗೆದುಕೊಳ್ಳುವುದು, ಭೂಮಿಯ ಹಕ್ಕು, ಗಿಡಗಳ ಹಕ್ಕು ಅವರಿಗೆ ಇರಬಾರದು. ಯೋಜನೆಯ ವೆಚ್ಚ ೬ ಕೋಟಿ ರೂ. ಇವನ್ನು ತಯಾರು ಮಾಡಿ ಕೇಂದ್ರ ತೆಂಗು ಅಭಿವೃದ್ಧಿ ಮಂಡಲಿ ಎಂದು ಏನಿದೆ ಅದಕ್ಕೆ ಪ್ರಸಾವವನ್ನು ಕೊಟ್ಟಿ ದ್ದೇವೆ. ಅವರೂ ಸಹ ಮೀಟಿಂಗ್‌ನಲ್ಲಿ ಚರ್ಚೆ ಮಾಡಿ ತಾತ್ವಿಕವಾಗಿ ಯೋಜನೆಯನ್ನು ಒಪ್ಪಿ ಕೊಂಡಿದ್ದಾರೆ. ೧೯೮೭-೮೮ನೇ ಸಾಲಿಗೆ ಇದನ್ನು ಅನುಷ್ಠಾನಕ್ಕೆ ತರಬಹುದೆಂದು ಒಪ್ಪಿಗೆ ಕೊಟ್ಟಿದ್ದಾರೆ. ಆದರೆ ಸಾಕಷ್ಟು ಪ್ರಮಾಣದ ಹಣ ಅವರಲ್ಲಿಲ್ಲ. ಆದ್ದರಿಂದ ಕೇಂದ್ರ ಸರ್ಕಾರವನ್ನು ಕೇಳಿ ಹೆಚ್ಚಿನ ಹಣ ತೆಗೆದುಕೊಳ್ಳುವುದಕ್ಕೆ ಪ್ರಯತ್ನ ಮಾಡುತ್ತೇವೆ. ನಮ್ಮ ಮುಖ್ಯಮಂತ್ರಿ ಗಳಿಂದಲೇ ಪತ್ರವನ್ನು ಪ್ರಧಾನಮಂತ್ರಿಗಳಾಗಲೀ ಕೇಂದ್ರ ಮಂತ್ರಿಗಳಾಗಲೀ ಬರೆಸಿ ಸಾಕಷ್ಟು ಹಣ ತರಿಸಿಕೊಳ್ಳುತ್ತೇವೆ ಎಂದು ಹೇಳಬಯಸುತ್ತೇನೆ.

ಇನ್ನೊಂದು ಮುಖ್ಯವಾದುದ್ದೆಂದರೆ ಒಣ ಬೇಸಾಯ. ಇದರಲ್ಲಿ ಮೂರು ವರ್ಷಗಳಿಂದಲೂ ತೋಟಗಾರಿಕೆ ಬೆಳೆಗಳನ್ನು ಸೇರಿಸಿಲ್ಲ. ಕೇವಲ ಅರಣ್ಯ ಬೆಳೆಗಳು ಮುಖ್ಯ ಕೃಷಿ ಬೆಳೆಗಳನ್ನು ಮಾತ್ರ ಸೇರಿಸಿದ್ದಾರೆ. ಮುಖ್ಯಮಂತ್ರಿಗಳಿಂದಲೇ ಒತ್ತಾಯ ತಂದ ಮೇಲೆ ಅಂದರೆ ತೋಟಗಾರಿಕೆ ವ್ಯಾಪ್ತಿಗೆ ಬರುವ ಬೇರೆ ಬೇರೆ ಹಣ್ಣುಗಳ ಬೆಳೆಗಳನ್ನೂ ಒಣ ಬೇಸಾಯದಲ್ಲಿ ತರಬೇಕೆಂದು ಒತ್ತಾಯ ತಂದ ಮೇಲೆ ಅವರು ಒಪ್ಪಿಕೊಂಡು ತೋಟಗಾರಿಕೆ ಇಲಾಖೆಯನ್ನೂ ಒಣ ಬೇಸಾಯ ಯೋಜನೆಯಲ್ಲಿ ಸೇರಿಸಿಕೊಂಡಿದ್ದಾರೆ. ಇದನ್ನು ಸಹ ವಿಶ್ವಬ್ಯಾಂಕಿನ ಯೋಜನೆಯಲ್ಲಿ ಸೇರಿಸಿಕೊಳ್ಳಲಾಗಿದೆ. ಎಲ್ಲ

ಜಿಲ್ಲೆಯಲ್ಲೂ ಮುಂದಿನ ವರ್ಷದಿಂದ ಈ ಯೋಜನೆ ಕಾರ್ಯರೂಪಕ್ಕೆ ಬರುತ್ತಿದೆ ಇದರ ಬಗ್ಗೆ ಮುಖ್ಯಮಂತ್ರಿಗಳು ದೊಡ್ಡ ಮನಸ್ಸು ಮಾಡಿದ್ದರಿಂದ ಇಷ್ಟೆಲ್ಲ ಆಯಿತು ಆದ್ದರಿಂದ ಅಭಿವೃದ್ಧಿ ಜಾಸ್ತಿಯಾಗುತ್ತಿದೆ ಎಂದು ಹೇಳುತ್ತೇನೆ.

ಇನ್ನೊಂದು ವಿಷಯ, ಬೀಜ ಅಭಿವೃದ್ಧಿ ಸೀಡ್ ಪ್ರೋಜೆಕ್ಟ್ ಎಂದು ಈಗಾಗಲೇ ಎರಡು ಯೋಜನೆಗಳು ಕಾರ್ಯರೂಪಕ್ಕೆ ಬಂದಿವೆ. ಇವೆರಡರಲ್ಲೂ ಸಹ ತೋಟಗಾರಿಕೆ ಬೆಳೆಗಳ ಬೀಜಗಳನ್ನು ಸೇರಿಸಿರಲಿಲ್ಲ. ಕೇವಲ ಕೃಷಿ ಬೀಜಗಳನ್ನು ಸೇರಿಸಿಕೊಂಡಿದ್ದರು. ಈ ಸಲ ನಮ್ಮ ಸರ್ಕಾರ ಎನ್.ಎಸ್.ಡಿ. ೩ ಎಂದು ಮಾಡಿ ತೋಟಗಾರಿಕೆಯ ಬೀಜಗಳನ್ನು ತಯಾರು ಮಾಡುವ ಯೋಜನೆಯನ್ನು ಸೇರಿಸಿ ೧೧ ಕೋಟಿ ರೂ.ಗಳ ಯೋಜನೆಯಲ್ಲಿ ನಮ್ಮ ತೋಟಗಾರಿಕೆ ಬೀಜಗಳ ಅಭಿವೃದಿ ಗೋಸ್ಕರ ೧.೭೫ ಕೋಟಿ ರೂ. ಗಳನ್ನು ಖರ್ಚು ಮಾಡುತ್ತಿದ್ದೇವೆ. ಅದರಲ್ಲಿ ೧೫ ಲಕ್ಷ ಹಣ್ಣಿನ ಗಿಡಗಳು, ೨೦ ಲಕ್ಷ ತೆಂಗಿನ ಬೆಳೆಗಳು ೧೫೮೦ ಕ್ವಿಂಟಾಲ್ಸ್ ಶುದ್ಧೀಕರಿಸಿದ ಬೀಜಗಳನ್ನು ತಯಾರು ಮಾಡುವಂಥ ಅವಕಾಶ ಇದೆ. ಇದರಲ್ಲಿ ಸೀಡ್ ಟೆಸ್ಟಿಂಗ್ ಲ್ಯಾಬೋರೇಟರಿ ಎಂದು ಬೆಂಗಳೂರಿನಲ್ಲಿ ಇರುವಂಥಾ...

ಶ್ರೀ ಎಂ. ರಾಮಪ್ಪ.—ಬರೀ ಭಾಷಣ ಈಗ ಬೇಕಾಗಿಲ್ಲ.

ಅಧ್ಯಕ್ಷರು.—ಈಗ ಮುಗಿಸಿಬಿಡುತ್ತಾರೆ.

ಶ್ರೀ ಎಂ. ಸೋಮಶೇಖರ್.—ಈ ವರ್ಷದಲ್ಲಿ ರಾಷ್ಟ್ರೀಯ ಬೀಜ ಉತ್ಪಾದನೆಯನ್ನು ನಾವು ಮೂರನೇ ಹಂತದಲ್ಲಿ ಜಾರಿಗೊಳಿಸುತ್ತಿದ್ದೇವೆ. ಇದರಿಂದ ಶುದ್ಧ ರೀತಿಯಲ್ಲಿ ತೋಟಗಾರಿಕೆ ಬೆಳೆಗಳನ್ನು ಬೆಳೆಯಬಹುದು.

ಮತ್ತೆ, ಮಾನ್ಯ ಅಧ್ಯಕ್ಷರೇ ಹಣಬೆ ಬೇಸಾಯ ಬಗ್ಗೆ ಯೋಜನೆಯನ್ನು ಕೇಂದ್ರಕ್ಕೆ ಕಳಿಸಿ ಕೊಟ್ಟಿದ್ದೆವು. ಅದಕ್ಕೆ ಕೇಂದ್ರದ ಅನುಮತಿಯೂ ಸಿಕ್ಕಿದೆ. ಈ ವರ್ಷದಿಂದಲೇ ಅದನ್ನು ಪ್ರಾರಂಭ ಮಾಡುವುದಕ್ಕೆ ಪ್ರಯತ್ನ ಮಾಡುತ್ತೇವೆ.

ಮತ್ತೆ ತೋಟಗಾರಿಕೆ ಹಣ್ಣು ಮತ್ತು ತರಕಾರಿಗಳನ್ನು ಮಾರಾಟ ಮಾಡುವ ವ್ಯವಸ್ಥೆ ಬಗ್ಗೆ ಟೀಕೆ ಮಾಡಿದ್ದಾರೆ. ಅದಕ್ಕೋಸ್ಕರ ಬೆಂಗಳೂರು ಮೈಸೂರು, ಬೆಳಗಾಂ ಮತ್ತು ಹುಬ್ಬಳ್ಳಿ, ಧಾರವಾಡ ಮಂಗಳೂರು ಇಂಥಾ ಕಡೆ ನಿರುದ್ಯೋಗಿ ವಿದ್ಯಾವಂತರಿಗೆ ಬ್ಯಾಂಕುಗಳಿಂದ ಮತ್ತು ನಮ್ಮ ಇಲಾಖೆಯಿಂದ ಹಣ ಕೊಟ್ಟು ಹಣ್ಣು ಮತ್ತು ತರಕಾರಿಗಳನ್ನು ದೊಡ್ಡ ದೊಡ್ಡ ಪಟ್ಟಣಗಳಲ್ಲಿ ಮಾರಾಟ ಮಾಡುವ ಯೋಜನೆ ತಯಾರು ಮಾಡಿದ್ದೇವೆ. ಈಗಾಗಲೇ ಬ್ಯಾಂಕುಗಳ ಜೊತೆ ಚರ್ಚೆ ಮಾಡಿದ್ದೇವೆ ನಾವೇ ನೇರವಾಗಿ ವ್ಯವಹರಿಸುತ್ತಿರುವುದರಿಂದ ಮಧ್ಯವರ್ತಿಗಳು ತಿನ್ನುವ ಪಾಲನ್ನು ತಪ್ಪಿಸಿದಂತಾಗುತ್ತದೆ.

ಗ್ರಾಹಕರಿಗೆ ಮತ್ತು ವರ್ತಕರಿಗೆ ಹೆಚ್ಚಿನ ಸಹಾಯವಾಗುತ್ತದೆ, ಇನ್ನೊಂದು ಬಹುಮುಖ್ಯವಾದ ವಿಷಯ, ನಮ್ಮ ಮಾನ್ಯ ಮುಖ್ಯಮಂತ್ರಿಗಳು ಅವರ ಬಡ್ಜೆಟ್ ಭಾಷಣದಲ್ಲಿ 'ತೀವ್ರ ಕೃಷಿ ಅಭಿವೃದ್ಧಿ' ಮುಂದಿನ ೧೫ವರ್ಷಗಳಿಗಾಗಿ ಕರ್ನಾಟಕದಭವಿಷ್ಯವನ್ನು ದೃಷ್ಟಿಯಲ್ಲಿರಿಸಿಕೊಂಡಂತಹ ಒಂದು ಯೋಜನೆಯನ್ನು ತಯಾರಿಸಲು, ಕಾರ್ಯಕಾರಿ ತಂಡ ಅಥವಾ ತಜ್ಞ ಮಂಡಳಿಯೊಂದನ್ನು ನೇಮಕ ಮಾಡಲು ಉದ್ದೇಶಿಸಿದ್ದೇನೆಂದು ಹೇಳಿದ್ದಾರೆ. ಕೃಷಿ ಕ್ಷೇತ್ರದಲ್ಲಿ ತೋಟಗಾರಿಕೆ ಆಗಬಹುದು, ಪಶು ಸಂಗೋಪನೆ ಆಗಬಹುದು, ಕೃಷಿ ಕ್ಷೇತ್ರದಲ್ಲಿ ಧಾನ್ಯಗಳ ಉತ್ಪಾದನೆ, ಎಣ್ಣೆ ಬೀಜಗಳನ್ನು ಹೆಚ್ಚಿಸಲು ಅಗತ್ಯವಾದದ್ದೆಲ್ಲವನ್ನು ಮಾಡುವ ಮೂಲಕ ಈ ಹೆಚ್ಚಳವನ್ನು ಯಶಸ್ವಿಯಾಗಿ ಸಾಧಿಸಬಹುದೆಂದು ಹೇಳಿದ್ದಾರೆ.

ಶ್ರೀ ಎಂ ರಾಮಪ್ಪ.—ಇವರದೇ ಒಂದು ಸೊಸೈಟಿಯಲ್ಲಿ ಹಣ್ಣು ಮಾರುತ್ತಿದ್ದಾರೆ, ಅಲ್ಲಿ ಬಜಾರ್ ರೇಟ್‌ಗಿಂತ ಕಡಿಮೆ ರೇಟಿನಲ್ಲಿ ಹಣ್ಣುಗಳನ್ನು ಮಾರುತ್ತಿಲ್ಲ.

ಶ್ರೀ ಬಿ. ಸೋಮಶೇಖರ್.—ತಾಂತ್ರಿಕ ಮಂಡಳಿಯೊಂದನ್ನು ರಚನೆ ಮಾಡಿ, ಉದಾಹರಣೆಗೆ ನಂಜನಗೂಡಿನ ರಸಬಾಳೆ, ದೇವನಹಳ್ಳಿಯ ಚಕೋತ, ಮೈಸೂರು ವಿಳ್ಳೇದೆಲೆ, ಇಂತಹ ಹೆಸರು ವಾಸಿಯಾದ ಹಣ್ಣುಗಳ ಹೆಸರು ನಶಿಸಿ ಹೋಗುತ್ತಿರುವುದರಿಂದ ಯಾವ್ಯಾವ ಪ್ರದೇಶದಲ್ಲಿ ಯಾವ್ಯಾವ ಮಣ್ಣಿನಲ್ಲಿ

ಯಾವ ಹವಾಗುಣದಲ್ಲಿ ಯಾವ್ಯಾವ ಗಿಡಗಳನ್ನು ಬೆಳೆಯಬಹುದೋ ಅಂತಹ ಪ್ರದೇಶಗಳನ್ನು ಗುರುತಿಸಿ ಹಣ್ಣು ಬೆಳೆಯತಕ್ಕ ಪ್ರದೇಶವನ್ನು ಅಭಿವೃದ್ಧಿಪಡಿಸತಕ್ಕ ಯೋಜನೆಯನ್ನು ತಯಾರು ಮಾಡಲು ತಾಂತ್ರಿಕ ತಂಡವನ್ನು ರಚನೆ ಮಾಡಿದ್ದೇವೆ. ಆ ತಂಡ ಆರು ತಿಂಗಳುಗಳೊಳಗೆ ಇಡೀ ರಾಜ್ಯದಲ್ಲಿ ಸುತ್ತಿ ಅದರ ಪ್ರಕಾರ ಕಾರ್ಯಕ್ರಮವನ್ನು ಹಾಕಿಕೊಂಡು, ತೋಟಗಾರಿಕೆ ಬೆಳೆಗಳನ್ನು ಯಾವ ರೀತಿ ಬೆಳೆಯಬಹುದು ಎಂಬುದರ ಬಗ್ಗೆ ಯೋಚಿಸುತ್ತಿದ್ದೇವೆ. ಕಳೆದ ಸಲ ೯ ಹೊಸ ಯೋಜನೆಗಳನ್ನು ಮಂಜೂರು ಮಾಡಿಕೊಟ್ಟಿದ್ದೇವೆ. ಆ ೯ ಹೊಸ ಯೋಜನೆಗಳು ಕಾರ್ಯರೂಪದಲ್ಲಿವೆ. ಈ ಸಾರಿ ಹೊಸ ಯೋಜನೆಗಳನ್ನು ಹಾಕಿಕೊಂಡು ಮೈಸೂರು ಮಂಡ್ಯ ಜಿಲ್ಲೆಗಳಲ್ಲಿ ಜಾರಿಗೆ ತರುತ್ತಿದ್ದೇವೆ. ಸುಗಂಧ ದ್ರವ್ಯವನ್ನು ಸೂಸುವ ಹೂವುಗಳಾದ ಸಿಟ್ರೋನೆಲ್ಲ, ಸುಗಂಧರಾಜ, ಮೈಸೂರು ಮಲ್ಲಿಗೆ ಇಂತಹ ಹೆಸರುವಾಸಿಯಾದ ಹೂಗಳಿಂದ ಬೇರೆ ರಾಜ್ಯಗಳವರು ಅನುಕೂಲ ಪಡೆಯುತ್ತಿದ್ದಾರೆ. ನಾವು ಯೋಚನೆ ಮಾಡುತ್ತಿದ್ದೇವೆ. ತೋಟಗಾರಿಕೆ ಕ್ಷೇತ್ರದಲ್ಲಿ ಸುಗಂಧ ದ್ರವ್ಯವನ್ನು ಕೊಡತಕ್ಕ ಹೂವುಗಳ ಸಸಿಗಳನ್ನು ರೈತರಿಗೆ ವಿತರಣೆ ಮಾಡುವುದು ಅವರು ಬೆಳೆದಂತಹ ಸುಗಂಧ ದ್ರವ್ಯ ಇರತಕ್ಕ ಹೂವುಗಳನ್ನು ತೆಗೆದುಕೊಂಡು ಅದರಲ್ಲಿರತಕ್ಕ ಸುಗಂಧವನ್ನು ತೆಗೆದು ಸಂಸ್ಕರಣೆ ಮಾಡಿ ಹೊರದೇಶಗಳಿಗೆ ಕಳುಹಿಸುವುದು ಹಾಗೂ ಅಗರಬತ್ತಿ, ಸಾಬೂನು ಇಂತಹ ಪದಾರ್ಥಗಳನ್ನು ತಯಾರು ಮಾಡುವುದಕ್ಕೆ ಅವಕಾಶವಾಗುತ್ತದೆ. ಆದುದರಿಂದ ಈ ಯೋಜನೆಯನ್ನು ನಾವು ಈ ವರ್ಷದಿಂದಲೇ ಪ್ರಾರಂಭ ಮಾಡಬೇಕೆಂದು ಇದ್ದೇವೆ. ಯಾರು ಇಂತಹ ಬೆಳೆಯನ್ನು ಬೆಳೆಯುತ್ತಾರೆ ಅಂಥವರಿಗೆ ಸಹಕಾರ ಸಂಘವನ್ನು ಮಾಡಿ ನಮ್ಮ ಇಲಾಖೆಯಿಂದ ಸಹಾಯಧನ ಕೊಟ್ಟು ಅವರಿಗಾಗಿ ಒಂದು ಸಂಸ್ಕರಣ ಘಟಕ ಪ್ರಾರಂಭ ಮಾಡುವುದಕ್ಕೆ ಯೋಜನೆ ಮಾಡುತ್ತಿದ್ದೇನೆ.

ಇನ್ನು ತೋಟಗಾರಿಕೆ ಕ್ಷೇತ್ರದಲ್ಲಿ ಸುಮಾರು ೩೮೦ ತೋಟಗಾರಿಕೆ ಕ್ಷೇತ್ರಗಳಿವೆ. ಈ ಎಲ್ಲ ಕ್ಷೇತ್ರಗಳಲ್ಲಿ ಎಷ್ಟು ಸಸಿಗಳನ್ನು ಉತ್ಪಾದನೆ ಮಾಡಬೇಕು, ಎಷ್ಟು ಉತ್ಪಾದನೆ ತರಬೇಕು, ಆದಾಯ ಎಷ್ಟಿರಬೇಕೆಂಬುದರ ಬಗ್ಗೆ ಯಾರೂ ಕೂಡ ಕಾರ್ಯಕ್ರಮವನ್ನು ಹಾಕಿಕೊಂಡಿರಲಿಲ್ಲ. ನಾನು ರಾಜ್ಯದ ಎಲ್ಲಾ ಜಿಲ್ಲೆಗಳಿಗೂ ಅಧಿಕಾರಿಗಳ ಸಮೇತ ಹೋಗಿ ಜಿಲ್ಲೆಗಳಲ್ಲಿ ಎಷ್ಟು ತೋಟಗಾರಿಕೆ ಕ್ಷೇತ್ರಗಳಿವೆ. ಆ ಕ್ಷೇತ್ರಗಳಲ್ಲಿ ಎಷ್ಟು ಜಾತಿಯ ಸಸಿಗಳನ್ನು ಉತ್ಪಾದನೆ ಮಾಡಲಾಗುತ್ತಿದೆ ಎಂಬುದನ್ನು ನೋಡಿದ್ದೇನೆ. ಉದಾಹರಣೆಗೆ ಮಾವಿನ ಗಿಡ ಸಪೋಟ ಗಿಡ ಇವುಗಳನ್ನು ಎಷ್ಟು ಉತ್ಪಾದನೆ ಮಾಡಬೇಕು ಅವುಗಳಿಂದ ಎಷ್ಟು ಆದಾಯ ತರಬೇಕು ಎನ್ನುವುದರ ಬಗ್ಗೆ ಒಂದು ವೈಜ್ಞಾನಿಕ ಗುರಿಯನ್ನು ಕೊಟ್ಟು ಮುಂದಿನ ವರ್ಷ ಇಷ್ಟು ಸಸಿಗಳನ್ನು ಉತ್ಪಾದನೆ ಮಾಡಿ ಇಷ್ಟು ಆದಾಯ ಕೊಡಬೇಕೆಂದು ಕಾರ್ಯಕ್ರಮವನ್ನು ಹಾಕಿಕೊಂಡಿದ್ದೇವೆ ನಾನು ನಮ್ಮ ರಾಜ್ಯದ ೮ ಜಿಲ್ಲೆಗಳಲ್ಲಿ ಪ್ರವಾಸ ಮಾಡಿ ಅಧಿಕಾರಿಗಳನ್ನು ಜೊತೆಯಲ್ಲಿಯೇ ಕರೆದುಕೊಂಡು ಹೋಗಿ ಈ ಗುರಿಯನ್ನು ಕೊಟ್ಟಿದ್ದೇನೆ. ಈಗ ಉದಾಹರಣೆಗೆ ಶಿವಮೊಗ್ಗ ಜಿಲ್ಲೆಯಲ್ಲಿ ೧೯೮೪–೮೫ರಲ್ಲಿ ೩,೨೯,೩೯೦ ಗಿಡಗಳನ್ನು ಉತ್ಪಾದನೆ ಮಾಡಿದ್ದರೆ, ೧೯೮೫–೮೬ರಲ್ಲಿ ೧೭,೬೪,೦೦೦ ಗಿಡಗಳನ್ನು ಉತ್ಪಾದನೆ ಮಾಡತಕ್ಕ ಗುರಿಯನ್ನು ಇಟ್ಟುಕೊಂಡಿದ್ದೇವೆ. ಒಂದು ಜಿಲ್ಲೆಯಲ್ಲಿ ಮೂರು ಲಕ್ಷದಿಂದ ೧೭ ಲಕ್ಷ ಸಸಿಗಳನ್ನು ಉತ್ಪಾದನೆ ಮಾಡಬೇಕೆಂದು ಗುರಿಯನ್ನಿಟ್ಟುಕೊಂಡಿದ್ದೇವೆ. ಬೆಂಗಳೂರು ಜಿಲ್ಲೆಯಲ್ಲಿ ೧೦ ಲಕ್ಷ ಗಿಡಗಳನ್ನು ಉತ್ಪಾದನೆ ಮಾಡುತ್ತಿದ್ದರೆ ೧೯೮೫–೮೬ರಲ್ಲಿ ೨೮ ಲಕ್ಷ ಗಿಡಗಳನ್ನು ಉತ್ಪಾದನೆ ಮಾಡಬೇಕೆಂದು ಹೇಳಿದ್ದೇವೆ. ಇದೇ ರೀತಿ ತೋಟಗಾರಿಕೆ ಇಲಾಖೆಯಲ್ಲಿ ಕಾರ್ಯಕ್ರಮವನ್ನು ಹಾಕಿಕೊಂಡರೆ ತೋಟಗಾರಿಕೆ ಅಭಿವೃದ್ಧಿಯಾಗುತ್ತದೆ, ಸಂಪತ್ತು ಜಾಸ್ತಿಯಾಗುತ್ತದೆಂದು ಹೇಳುತ್ತೇನೆ.

ಇನ್ನು ತೆಂಗು ಬೆಳೆಗೆ ಕಪ್ಪುತಲೆ ಹುಳುವಿನ ಬಾಧೆಯನ್ನು ತಪ್ಪಿಸಬೇಕೆಂದು ಹೇಳಿದ್ದಾರೆ. ಅದನ್ನು ನಾನು ಸಹ ಒಪ್ಪುತ್ತೇನೆ, ತೆಂಗನ್ನು ಪೆಸ್ಟ್ ಆ್ಯಕ್ಟ್ ವ್ಯಾಪ್ತಿಯಲ್ಲಿ ತರಬೇಕು. ಅದರ ಬಗ್ಗೆ ಅಧಿಕಾರಿಗಳು ಕೆಲಸ ಮಾಡಬೇಕೆಂದು ಸರ್ಕ್ಯುಲರ್ ಹೊರಡಿಸಿ ತೆಂಗನ್ನು ಪೆಸ್ಟ್ ಆಕ್ಟ್ ಒಳಗೆ ತರಬೇಕೆಂದು ಕಾರ್ಯಕ್ರಮವನ್ನು ಹಾಕಿಕೊಂಡು ತುಮಕೂರು ಜಿಲ್ಲೆಯಲ್ಲಿ ಎಲ್ಲಾ ತೋಟಗಳಿಗೂ ಹೋಗಿ ಚಿಕಿತ್ಸೆ ಕೊಡತಕ್ಕ ಕಾರ್ಯಕ್ರಮವನ್ನು ಹಾಕಿಕೊಂಡಿದ್ದೇವೆ. ಮಾನ್ಯ ರಮೇಶ್‌ಕುಮಾರ್‌ವರು ಬಡವರ ಮನೆಮುಂದೆ ಎರಡು ತೆಂಗಿನ ಗಿಡಗಳನ್ನು ಕೊಡಬೇಕು ಬೇರೆ ತರಕಾರಿ ಗಿಡಗಳನ್ನು ಕೊಡಬೇಕೆಂದು ಒಂದು ಒಳ್ಳೆಯ ಸಲಹೆಯನ್ನು ಕೊಟ್ಟಿದ್ದಾರೆ. ಅದರ ಬಗ್ಗೆ ಈ ವರ್ಷ ಬೇರೆ ಬೇರೆ ಇಲಾಖೆಯವರ ಜೊತೆಯಲ್ಲಿ ಚರ್ಚೆಮಾಡಿ ಅದನ್ನು ಈ ವರ್ಷದಿಂದಲೇ ಕಾರ್ಯರೂಪಕ್ಕೆ ತರುವುದಕ್ಕೆ ಪ್ರಯತ್ನ ಮಾಡುತ್ತೇನೆಂದು ಹೇಳುತ್ತಿದ್ದೇನೆ.

ಮಾನ್ಯ ಸದಸ್ಯರು ಹಣ್ಣು ಸಂಸ್ಕರಣ ಕೇಂದ್ರವನ್ನು ಮಾಡಬೇಕೆಂದು ಹೇಳಿದ್ದಾರೆ. ಕೇಂದ್ರ ಸರ್ಕಾರದವರನ್ನು ಈ ಬಗ್ಗೆ ನಾವು ಕೇಳಿಕೊಂಡಿದ್ದೇವೆ. ನಾವು ಹಣ್ಣು ಸಂಸ್ಕರಣ ಕೇಂದ್ರವನ್ನು ಪ್ರಾರಂಭ ಮಾಡುವುದಾದರೆ ಶೇಕಡ ೭೫ರಷ್ಟು ಹಣವನ್ನು ಕೊಡಬೇಕು. ಶೇಕಡ ೨೫ರಷ್ಟು ಹಣ ಹಾಕಿದರೆ ಕಾರ್ಪೊರೇಷನ್ ಮಾಡಿಯೆಂದು ನಾವು ಈ ಬಗ್ಗೆ ಕೇಂದ್ರವನ್ನು ಕೇಳಿಕೊಂಡಿದ್ದೇವೆ. ಬಿಹಾರ ರಾಜ್ಯದಲ್ಲಿ ಈಗಾಗಲೇ ಪ್ರಾರಂಭ ಮಾಡಿದ್ದಾರೆ. ನಮ್ಮ ರಾಜ್ಯದಲ್ಲಿ ಮಾಡುವುದಕ್ಕೆ ಅದರ ಬಗ್ಗೆ ಪರಿಶೀಲನೆ ಮಾಡಿ ಸಚಿವಸಂಪುಟದ ಮುಂದೆ ಇಡಬೇಕಾಗುತ್ತದೆ. ನಾನು ಮತ್ತು ರಮೇಶ್‌ಕುಮಾರ್‌ರವರು ಇದರ ಬಗ್ಗೆ ಒತ್ತಾಯ ಮಾಡುತ್ತೇವೆಂದು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಚ್ಛೆಪಡುತ್ತೇನೆ. ಮಾನ್ಯ ವೆಂಕಟರಾಮಯ್ಯನವರು ಕೋಲ್ಡ್ ಸ್ಟೋರೇಜ್ ಬಗ್ಗೆ ಹೇಳಿದರು. ನಾನು ಮಾಡಲಿಲ್ಲವೆಂದು ಹೇಳುವುದು ತಪ್ಪು. ಒಂದು ವರ್ಷಕ್ಕೆ ೭ ಲಕ್ಷ ರೂಪಾಯಿ ರಿಪೇರಿ ಖರ್ಚು ಆಗುತ್ತದೆ. ೭ ಲಕ್ಷ ರೂಪಾಯಿಗಳನ್ನು ನಾವು ಖರ್ಚು ಮಾಡಿದ್ದೇವೆ. ಇದು ಕೆ.ಎಂ.ಎಫ್.ನವರು ಮಾಡತಕ್ಕ ಕೆಲಸ ಆದಷ್ಟು ಬೇಗ ಈ ಕೆಲಸವನ್ನು ಮಾಡಬೇಕೆಂದು ಹೇಳಿದ್ದೇವೆ ಅವರು ಒಪ್ಪಿಕೊಂಡಿದ್ದಾರೆ. ಮಾನ್ಯ ಶಿವನಂಜಪ್ಪನವರು ಒಂದು ಆಪಾದನೆ ಮಾಡಿದರು ಅದೇನೆಂದರೆ ಜಯಚಾಮರಾಜೇಂದ್ರಪುರ ಫಾರಂನಲ್ಲಿ ಮಾವಿನ ಹಣ್ಣುಗಳನ್ನು ಹರಾಜ ಹಾಕಿದ್ದಾರೆ ಅಲ್ಲಿ ನಷ್ಟವಾಗಿದೆಯೆಂದು ಹೇಳಿದ್ದಾರೆ. ೮೪,೫,೦೫೫ ರೂಪಾಯಿಂಗಳಿಗೆ ತೋಟಗಾರಿಕೆ ಇಲಾಖೆಯಲ್ಲಿ ಹಣ್ಣುಗಳನ್ನು ಹರಾಜು ಹಾಕಲಾಗುತ್ತಿತ್ತು. ನಿರ್ದೇಶಕರನ್ನು ಹರಾಜಿನಿಂದ ತಪ್ಪಿಸಿ ಮಾರಿದ್ದರಿಂದ ೧೧ ಸಾವಿರಕ್ಕೆ ಇಳಿಯಿತು, ಈ ವರ್ಷ ಮತ್ತೆ ೧೬,೩೨೦ ರೂಪಾಯಿ ಅಂದರೆ ೫ ಸಾವಿರ ರೂಪಾಯಿ ಹೆಚ್ಚು ಬಂತು. ತೋಟಗಾರಿಕೆ ಇಲಾಖೆಯಲ್ಲಿ ಎಷ್ಟೇ ಆದಾಯ ಬಂದರೂ ಅದರಲ್ಲಿ ಕಾಲು ಭಾಗ ಮಾತ್ರ ಲೆಕ್ಕಕ್ಕೆ ತೋರಿಸುತ್ತಿದ್ದರು. ಎಷ್ಟು ಗಿಡಗಳು ಇವೆ, ಎಷ್ಟು ಆದಾಯ ಬರಬೇಕು ಈ ರೀತಿಯ ಜವಾಬ್ದಾರಿಯನ್ನು ಇಟ್ಟು ಗುರಿಯನ್ನು ಕೊಟ್ಟು ವ್ಯವಸ್ಥೆ ಮಾಡಲಾಗಿದೆ. ಮುಂದಿನ ವರ್ಷ ಹೆಚ್ಚಿನ ಆದಾಯ ಬರುತ್ತದೆ. ಒಟ್ಟಿನಲ್ಲಿ ಹೇಳುವುದಾದರೆ ನಮ್ಮ ಇಲಾಖೆ ಆದಾಯ ತರತಕ್ಕ ಇಲಾಖೆಯಾದರೂ ರಾಜ್ಯದ ಸೇವೆ ಮಾಡತಕ್ಕ ಇಲಾಖೆ. ಗಿಡಗಳನ್ನು ಉತ್ಪಾದನೆ ಮಾಡಿ ಆದಾಯ ಪಡೆಯಲಿಕ್ಕೆ ಜನಗಳಿಗೆ ಹಂಚುತ್ತೇವೆ. ಇವುಗಳನ್ನೆಲ್ಲ ಪರಿಶೀಲನೆ ಮಾಡಿ ಕಾರ್ಯಕ್ರಮಗಳನ್ನು ಹಾಕಿಕೊಂಡಿದ್ದೇವೆ. ಮುಂದಿನ ಆಗಸ್ಟ್‌ನಲ್ಲಿ ರಾಷ್ಟ್ರ ಮಟ್ಟದಲ್ಲಿ ಫಲಪುಷ್ಪ ಪ್ರದರ್ಶನವನ್ನು ಬೆಂಗಳೂರಿನಲ್ಲಿ ಏರ್ಪಾಡು ಮಾಡಬೇಕೆಂದು ಘೋಷಣೆ ಮಾಡಿದ್ದೇವೆ.

ಮತ್ತೆ ಮಾನ್ಯ ಸದಸ್ಯರು ಇನ್ನೊಂದು ಬಹಳ ಪ್ರಮುಖವಾದ ವಿಚಾರವನ್ನು ಹೇಳಿದ್ದಾರೆ. ಅದೇನೆಂದರೆ, ಇಲಾಖೆಯಲ್ಲಿ ೨೦-೨೫ ವರ್ಷಗಳಿಂದ ಸೀನಿಯಾರಿಟಿ ಪಟ್ಟಿ ಪ್ರಶ್ನೆ ಇತ್ಯರ್ಥವಾಗಿರಲಿಲ್ಲ. ಅದರ ಬಗ್ಗೆ ನಾವು ಈಗ ಕ್ರಮ ತೆಗೆದುಕೊಂಡಿದ್ದೇವೆ. ಅದನ್ನು ಬೇಗ ಬಗೆಹರಿಸಬೇಕೆಂಬ ಉದ್ದೇಶವನ್ನು ಇಟ್ಟುಕೊಂಡು ಅದಕ್ಕಾಗಿ ಸಮಿತಿಯೊಂದನ್ನು ರಚನೆ ಮಾಡಿದ್ದೇವೆ. ಅವರು ಈಗಾಗಲೇ ತನ್ನ ವರದಿಯನ್ನೂ ಕೂಡ ಕೊಟ್ಟಿದ್ದಾರೆ. ಅದು ಸರ್ಕಾರದ ಮಟ್ಟದಲ್ಲಿ ಪರಿಶೀಲನಾ ಹಂತದಲ್ಲಿದೆ. ಆದಷ್ಟು ಶೀಘ್ರವಾಗಿ ಈ ಒಂದು ಸಮಸ್ಯೆಯನ್ನು ಪರಿಹಾರ ಮಾಡುತ್ತೇವೆಂದು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಷ್ಟಪಡುತ್ತೇನೆ. ಯಾರು ೫ ವರ್ಷಗಳವರೆಗೆ ದಿನಗೂಲಿ ನೌಕರರಾಗಿ ಕೆಲಸ ಮಾಡುತ್ತಿದ್ದಾರೆ, ಅಂತಹ ೪ ಸಾವಿರ ದಿನಗೂಲಿ ನೌಕರರನ್ನು ಪೆನ್‌ಷನ್ ರಹಿತ ನೌಕರರನ್ನಾಗಿ ಮಾಡತಕ್ಕಂತಹ ಕಾರ್ಯಕ್ರಮವನ್ನು ಹಾಕಿಕೊಂಡಿದ್ದೇವೆ. ಮತ್ತೆ ಎಲ್ಲ ಸರ್ಕಾರಿ ಕಟ್ಟಡಗಳಲ್ಲಿ ಉದ್ಯಾನವನ್ನು ಮಾಡಬೇಕೆಂಬ ಯೋಜನೆಯನ್ನು ಹಾಕಿಕೊಂಡಿದ್ದೇವೆಂದು ನಾನು ಕಳೆದ ಸಾರಿ ಪ್ರಸ್ತಾಪ ಮಾಡಿದ್ದೆ. ಮಾನ್ಯ ಮುಖ್ಯಮಂತ್ರಿಗಳು ಈ ಸಾಲಿನಲ್ಲಿ ಅದಕ್ಕೆ ಮಂಜೂರಾತಿಯನ್ನು ಕೊಟ್ಟಿದ್ದಾರೆ. ಎಲ್ಲ ಸರ್ಕಾರಿ ಕಟ್ಟಡಗಳ ಅಕ್ಕಪಕ್ಕದಲ್ಲಿರತಕ್ಕ ಜಾಗದಲ್ಲಿ ಸರಿಯಾದ ಉದ್ಯಾನವನ್ನು ಬೆಳೆಯಬೇಕೆಂಬ ಕಾನೂನನ್ನು ಮಾಡುತ್ತಿದ್ದೇವೆ. ಯಾವ ಯಾವ ಇಲಾಖೆಯವರು ತಮ್ಮ ಸ್ವಂತಕಟ್ಟಡವನ್ನು ಕಟ್ಟಿಸಿದ್ದಾರೆ, ಆ ಇಲಾಖೆಯವರು ಉದ್ಯಾನವನಕ್ಕಾಗಿ ಖರ್ಚು ಮಾಡುವಂಥ ಹಣವನ್ನು ನಮ್ಮ ಇಲಾಖೆಯ ವತಿಯಿಂದ ಕೊಡುತ್ತೇವೆ. ಈ ಒಂದು ಕೆಲಸವನ್ನು ರಾಷ್ಟ್ರದಲ್ಲೇ ಪ್ರಪ್ರಥಮವಾಗಿ ನಮ್ಮ ರಾಜ್ಯದಲ್ಲಿ ಪ್ರಾರಂಭ ಮಾಡಿದ್ದೇವೆ. ಮಾನ್ಯ ಸದಸ್ಯರು ಇನ್ನೂ ಅನೇಕ ವಿಷಯಗಳನ್ನು ಹೇಳಿದರು. ಆ ಎಲ್ಲ ವಿಷಯಗಳಿಗೂ ಉತ್ತರ ಕೊಡಲಾಗಲಿಲ್ಲ. ಕಾರಣ ಸಮಯದ ಅಭಾವ ಇದೆ. ಒಂದು ವೇಳೆ ಯಾರಿಗಾದರೂ ಉತ್ತರ ಕೊಡಲಾಗದಿದ್ದರೆ, ಅವರಿಗೆ ಪತ್ರದ ಮುಖೇನ ಉತ್ತರ ಬರೆದು ಕಳುಹಿಸುತ್ತೇನೆ. ಇಷ್ಟು ವಿಚಾರಗಳನ್ನು ಹೇಳಿದ್ದೇನೆ. ನನ್ನ ಇಲಾಖೆಯ ಬೇಡಿಕೆಗಳನ್ನು ಈ ಸಭೆಯು ಸರ್ವಾನುಮತದಿಂದ ಮಂಜೂರು ಮಾಡಿಕೊಡಬೇಕೆಂದು ಬೇಡಿಕೊಳ್ಳುತ್ತೇನೆ,

ಶ್ರೀ ಬಿ. ಲಕ್ಕಪ್ಪ.—ಮಳೆಯ ಅಭಾವದಿಂದಾಗಿ ತೆಂಗಿನ ಬೆಳೆ ೧೦,೦೦೦ ಕಾಯಿ ಬರುತ್ತಿದ್ದುದು ಇಂದು ೩,೨೦೦ ಕಾಯಿಗಳು ಬರುತ್ತಾ ಇವೆ. ಈಗಿನ ಮಳೆ ಅಭಾವದಿಂದಾಗಿ ೧,೦೦೦ ಕಾಯಿ ಬರುವುದೂ ಕೂಡ ಕಷ್ಟವಾಗಿದೆ. ಇವತ್ತು ತೂಕ ಕೂಡ ವ್ಯತ್ಯಾಸವಾಗಿದೆ. ಇದರಿಂದಾಗಿ, ತೆಂಗಿನ ಬೆಳೆ ಇಟ್ಟುಕೊಂಡಿರುವವರು ಬಹಳ ನಷ್ಟವನ್ನು ಅನುಭವಿಸುತ್ತಿದ್ದಾರೆ. ಇದಕ್ಕಾಗಿ ಒಂದು ಬೆಂಬಲ ಬೆಲೆಯನ್ನು ಸರ್ಕಾರ ನಿಗದಿ ಮಾಡುತ್ತದೆಯೇ ? ತೆಂಗನ್ನು ಬೆಳೆಯುತ್ತಿರುವ ರಾಜ್ಯದಲ್ಲಿ ಕೇರಳ ಬಿಟ್ಟರೆ ಎರಡನೆಯದು ಕರ್ನಾಟಕ, ಅದಕ್ಕಾಗಿ ಕರ್ನಾಟಕದಲ್ಲಿ ತೆಂಗಿನ ಮಂಡಲಿಯನ್ನು ಮಾಡುತ್ತಾರೆಯೇ ?

ಶ್ರೀ ಬಿ. ಸೋಮಶೇಖರ್.—ತೆಂಗಿನ ಬೆಂಬಲ ಬೆಲೆಯನ್ನು ನಿಗದಿ ಮಾಡುವಂತಹದ್ದು ಕೇಂದ್ರ ಸರ್ಕಾರ, ಇದರ ಬಗ್ಗೆ ಈಗಾಗಲೇ ಸಂಬಂಧಪಟ್ಟ ಸಚಿವರಿಗೆ ಪತ್ರ ಬರೆದು ಒತ್ತಾಯ ಮಾಡಿದ್ದೇವೆ.

ಪಶು ಸಂಗೋಪನಾ ಇಲಾಖೆಯ ಬೇಡಿಕೆಯ ಮೇಲಿನ ಚರ್ಚೆಗೆ ಉತ್ತರ

ಶ್ರೀ ಸಿದ್ದರಾಮಯ್ಯ (ಪಶುಸಂಗೋಪನಾ ರಾಜ್ಯ ಸಚಿವರು).—ಮಾನ್ಯ ಅಧ್ಯಕ್ಷರೆ ನನ್ನ ಇಲಾಖೆಯ ಬೇಡಿಕೆಯ ಮೇಲೆ ಸುಮಾರು ೯ ಜನ ಮಾನ್ಯ ಸದಸ್ಯರು ಮಾತನಾಡಿದ್ದಾರೆ. ಅನೇಕ ಉಪಯುಕ್ತ ಸಲಹೆಗಳನ್ನೂ ಕೂಡ ಕೊಟ್ಟಿದ್ದಾರೆ ಮತ್ತೆ ಕೆಲವರು ಟೀಕೆಗಳನ್ನೂ ಕೂಡ ಮಾಡಿದ್ದಾರೆ. ಮಾನ್ಯ ಸದಸ್ಯರು ಏನು ಸಲಹೆಗಳನ್ನು ಹಾಗೂ ಟೀಕೆಗಳನ್ನು ಮಾಡಿದ್ದಾರೆ, ಅವೆಲ್ಲವನ್ನು ಸ್ವಾಗತಿಸುತ್ತೇನೆ. ಮತ್ತೆ ಯಾವೊಂದು ಉತ್ತಮವಾದ ಸಲಹೆಗಳನ್ನು ಕೊಟ್ಟಿದ್ದಾರೆ, ಆ ಸಲಹೆಗಳನ್ನೆಲ್ಲಾ ಗಮನದಲ್ಲಿಟ್ಟುಕೊಂಡು ಅವುಗಳನ್ನು ಕಾರ್ಯರೂಪಕ್ಕೆ ಮುಂದಿನ ದಿನಗಳಲ್ಲಿ ತರುವುದಕ್ಕೆ ಪ್ರಯತ್ನ ಮಾಡುತ್ತೇನೆ. ಮತ್ತೆ ಟೀಕೆಗಳನ್ನು ಏನು ಮಾಡಿದ್ದಾರೆ, ಅವುಗಳ ಬಗ್ಗೆ ಗಮನಹರಿಸುವುದಕ್ಕೆ ಪ್ರಯತ್ನ ಮಾಡುತ್ತೇನೆ, ಅವರೆಲ್ಲರಿಗೂ ಅಭಿನಂದನೆಗಳನ್ನು ಸಲ್ಲಿಸುತ್ತೇನೆ. ಕಾಲದ ಅಭಾವದಿಂದ...

ಶ್ರೀ ಕೆ. ಎಚ್ ಪಾಟೀಲ್.—ಸ್ವಲ್ಪ ತಡೆಯಿರಿ. ಹೊಸದಾಗಿ ಮಂತ್ರಿಗಳಾಗಿದ್ದಾರೆ, ಅವರು ಏನು ಹೇಳುತ್ತಾರೆಂಬುದನ್ನು ಕೇಳೋಣ.

ಶ್ರೀ ಸಿದ್ದರಾಮಯ್ಯ.—ನಮ್ಮ ದೇಶ ಕೃಷಿ ಪ್ರಧಾನವಾದ ದೇಶ. ಪ್ರಿಯಾಂಬಲ್‌ನಲ್ಲಿ ಬಹಳ ಚೆನ್ನಾಗಿ ಹೇಳಿದ್ದೇವೆ,

ಶ್ರೀ ಕೆ. ಎಚ್. ಶ್ರೀನಿವಾಸ್.—ಒಟ್ಟಿನಲ್ಲಿ ನಿಮ್ಮನ್ನು ನಾವು ಏನನ್ನೂ ಕೇಳುತ್ತಿಲ್ಲ ಏನೇನು ಮಾಡಬೇಕು ಅಂತ ಇದ್ದೀರಿ ಅದನ್ನು ಹೇಳಿ ಸಾಕು.

ಶ್ರೀ ಸಿದ್ದರಾಮಯ್ಯ.—ಪಶುಸಂಗೋಪನಾ ಕೃಷಿಗೆ ಪೂರಕವಾದ ಉಪ ಕಸುಬಾಗಿದೆ. ಇದು ಅತ್ಯಂತ ಪ್ರಮುಖವಾದುದು. ಕರ್ನಾಟಕ ರಾಜ್ಯದಲ್ಲಿ ಸುಮಾರು ೨ ಕೋಟಿ ೬೦ ಲಕ್ಷ ಜಾನುವಾರುಗಳು ಇವೆ. ೧ ಕೋಟಿ ೨೦ ಲಕ್ಷ ಕೋಳಿಗಳು ಇವೆ. ಕುರಿಗಳು ೪೭ ಲಕ್ಷ ಇವೆ. ಸಾಮಾನ್ಯವಾಗಿ ಮನುಷ್ಯನ ಸಂಖ್ಯೆಗಿಂತ ಸ್ವಲ್ಪ ಕಡಿಮೆ ಇದೆ. ಈ ಎಲ್ಲ ಜಾನುವಾರುಗಳ ಆರೋಗ್ಯ ರಕ್ಷಣೆ ಮಾಡತಕ್ಕಂತಹದ್ದು ಅವುಗಳನ್ನು ಅಭಿವೃದ್ಧಿಪಡಿಸತಕ್ಕಂಥದ್ದು ಮತ್ತೆ ಅವುಗಳ ಉತ್ಪಾದನೆಯನ್ನು ಹೆಚ್ಚು ಮಾಡತಕ್ಕಂತಹದ್ದು ಈ ಇಲಾಖೆಯ ಜವಾಬ್ದಾರಿ. ಮಾನ್ಯ ರಮೇಶ್‌ಕುಮಾರ್‌ರವರು ಹೇಳಿದ ಹಾಗೆ, ಯಾರು ದುರ್ಬಲವರ್ಗದ ಜನರು ಇದ್ದಾರೆ, ಯಾರು ಅನಕ್ಷರಸ್ಥ ಬಡವರು ಇದ್ದಾರೆ, ಈ ಎಲ್ಲ ಜನರಿಗೆ ಉದ್ಯೋಗವನ್ನು ಕೊಡತಕ್ಕಂತಹ, ಅವರ ಆರ್ಥಿಕ ಪ್ರಗತಿಯಲ್ಲಿ ಬೆಳಕನ್ನು ಚೆಲ್ಲತಕ್ಕಂಥ ಆ ಒಂದು ದಿಕ್ಕಿನಲ್ಲಿ ಪ್ರಾಮಾಣಿಕ ಪ್ರಯತ್ನವನ್ನು ಪಶುಸಂಗೋಪನಾ ಇಲಾಖೆ ಮಾಡುತ್ತಿದೆಯೇ ಎನ್ನುವ ಮಾತನ್ನು ಹೇಳಿದ್ದಾರೆ. ನಾನು ಕೂಡ ಆ ವಿಚಾರವನ್ನು ಒಪ್ಪಿಕೊಳ್ಳುತ್ತೇನೆ. ಈ ಎಲ್ಲ ಪ್ರಾಣಿಗಳ ಆರೋಗ್ಯ ರಕ್ಷಣೆ ಮಾಡಬೇಕಾದರೆ ಅಂದರೆ ಇರತಕ್ಕಂತಹ ಒಟ್ಟು ೩ ಕೋಟಿ ೮೧ ಲಕ್ಷ ಪ್ರಾಣಿಗಳ ಆರೋಗ್ಯವನ್ನು ರಕ್ಷಣೆ ಮಾಡಬೇಕಾದರೆ, ಸುಮಾರು ೨,೦೧೧ ಪಶುಸಂಗೋಪನಾ ಇಲಾಖೆಯ ವೈದ್ಯ ಸಂಸ್ಥೆಗಳು ಬೇಕು ಈ ರಾಜ್ಯದಲ್ಲಿ. ಆದರೆ ನಮ್ಮಲ್ಲಿ ೧೨೩೩ ಪಶು ವೈದ್ಯ ಸಂಸ್ಥೆಗಳು ಇವೆ. ಇನ್ನೂ ೭೮೮ ಪಶು ವೈದ್ಯ ಸಂಸ್ಥೆಗಳನ್ನು ಸ್ಥಾಪನೆ ಮಾಡಬೇಕಾಗಿದೆ, ಈಗಿರತಕ್ಕ ಜಾನುವಾರು ಸಂಖ್ಯೆ ಗಣನೆಯಾಗಿ. ಇದನ್ನು ಅನೇಕ ಮಾನ್ಯ ಸದಸ್ಯರು ಸಂಕ್ಷಿಪ್ತವಾಗಿ ಪ್ರಸ್ತಾಪ ಮಾಡಿದರು. ಎಲ್ಲ ಕಡೆ ಪಶು ವೈದ್ಯರಿಲ್ಲ, ಪಶು ಪರೀಕ್ಷಕರು ಇಲ್ಲ ಅಂತ ಹೇಳಿದರು. ಪ್ರತಿ ವರ್ಷ ವೈದ್ಯರು ಬರುತ್ತಾ

ಇಲ್ಲವೇ, ಅವರನ್ನು ಭರ್ತಿ ಮಾಡಿಕೊಳ್ಳುತ್ತಿಲ್ಲ ಎನ್ನತಕ್ಕಂತಹ ವಿಚಾರವನ್ನು ಶ್ರೀಮಾನ್ ಶಿವನಂಜಪ್ಪನವರು ಹೇಳಿದರು. ಬಹುಶಃ ಅವರು ಸರಿಯಾದ ಮಾಹಿತಿಯನ್ನು ಪಡೆದುಕೊಂಡಿಲ್ಲವೆಂಬುದು ನನ್ನ ಅಭಿಪ್ರಾಯ. ಪಶು ವೈದ್ಯರ ಕೊರತೆ ಇರತಕ್ಕಂತಹದ್ದು ನಿಜ. ಪಶು ಪರೀಕ್ಷಕರ ಕೊರತೆ ಇರತಕ್ಕಂತಹದ್ದು ನಿಜ. ಸುಮಾರು ೧೯೯ ಪಶುವೈದ್ಯರ ಕೊರತೆ ರಾಜ್ಯದಲ್ಲಿ ಇದೆ. ಸುಮಾರು ೬೫೭ ಪಶುಪರೀಕ್ಷಕರ ಕೊರತೆ ಇದೆ. ೩೪೯ ವಿಶ್ರಣಕಾರರ ಕೊರತೆ ಇದೆ. ಈ ಕೊರತೆ ಏನಿದೆ, ಇದು ಕಳೆದ ಎರಡು–ಮೂರು ವರ್ಷಗಳಿಂದ ಬಂದಿರತಕ್ಕಂಥ ಕೊರತೆ ಅಲ್ಲ. ಸುಮಾರು ಎಂಟು–ಹತ್ತು ವರ್ಷಗಳಿಂದ ಬಂದಿರತಕ್ಕಂಥ ಕೊರತೆ ಎಷ್ಟೋ ವರ್ಷಗಳಿಂದ ಕೂಡ ಈ ಕೊರತೆಯನ್ನು ನಿವಾರಿಸತಕ್ಕಂಥ ಪ್ರಯತ್ನವನ್ನು ಸರ್ಕಾರ ಮಾಡಿರಲಿಲ್ಲ, ಕಳೆದವರ್ಷ ೬೫೭ ಪಶು ಪರೀಕ್ಷಕರ ಕೊರತೆಯನ್ನು ನೀಗಿಸುವುದಕ್ಕಾಗಿ, ೩೮೯ ಪಶುಪರೀಕ್ಷಕರನ್ನು ತರಬೇತಿಗಾಗಿ ಆಯ್ಕೆ ಮಾಡಲಾಗಿದೆ. ೩೮೦ ಮಂದಿ ಮಿಶ್ರಣಕಾರರನ್ನು ತರಬೇತಿಗಾಗಿ ಆಯ್ಕೆ ಮಾಡಲಾಗಿದೆ. ಇಷ್ಟೊಂದು ಜನರ ತರಬೇತಿ ಮುಗಿದಿದೆ. ಈಗ ೩೬೭ ಪಶುಪರೀಕ್ಷಕರು ಮತ್ತು ೩೫೧ ಜನ ಮಿಶ್ರಣಕಾರರ ಆಯ್ಕೆ ನಡೆಯುತ್ತಿದೆ. ಮುಂದಿನ ಒಂದು ತಿಂಗಳಲ್ಲಿ ಇದನ್ನು ಪೂರ್ತಿ ಮಾಡತಕ್ಕಂಥ ಕಾರ್ಯಕ್ರಮವನ್ನು ಹಾಕಿಕೊಂಡಿದ್ದೇವೆ. ಹಿಂದಿನ ಸರ್ಕಾರ ಉಳಿಸಿಕೊಂಡು ಬಂದಿದ್ದ ಕೊರತೆಯನ್ನು ನಾವು ಈಗ ನೀಗಿಸುತ್ತಿದ್ದೇವೆ. ಈ ಕಾರಣದಿಂದ ಹೊಸ ಪಶುವೈದ್ಯ ಶಾಲೆಗಳನ್ನು ತೆರೆಯತಕ್ಕಂಥ ಪ್ರಯತ್ನವನ್ನು ಮಾಡಿರಲಿಲ್ಲ. ಇದು ವಾಸ್ತವಾಂಶ ಮತ್ತೊಂದು ವಿಚಾರವನ್ನು ಅಂದರೆ ನಮ್ಮಲ್ಲಿ ಪಶುವೈದ್ಯರು ಇದ್ದರೂ ಅವರನ್ನು ಭರ್ತಿಮಾಡಿಕೊಂಡಿಲ್ಲವೆಂದು ಹೇಳಿದರು. ಕಳೆದವರ್ಷದ ವರೆಗೆ ಒಂದೇ ಒಂದು ಪಶುವೈದ್ಯ ಕಾಲೇಜು ಇದ್ದಿತು, ಪ್ರತಿವರ್ಷ ಕಾಲೇಜಿನಿಂದ ತೇರ್ಗಡೆಯಾಗುವವರು ೮೦ ಜನರು. ೧೯೮೪ರಲ್ಲಿ ೮೦ ಜನರನ್ನು ನೇಮಕ ಮಾಡಿಕೊಂಡಿದ್ದೇವೆ. ಅಲ್ಲಿಂದ ಈಚೆಗೆ ೧೫೦ ಜನ ವೈದ್ಯರನ್ನು ನೇಮಕ ಮಾಡಿಕೊಳ್ಳಬೇಕೆಂಬ ವಿಚಾರವನ್ನು ಈಗಾಗಲೇ ಲೋಕಸೇವಾ ಆಯೋಗದವರಿಗೆ ಹೇಳಿದ್ದೇವೆ. ಆದ್ದರಿಂದ ಈ ಇಲಾಖೆಯಲ್ಲಿ ಪಶುವೈದ್ಯರ ಕೊರತೆ ಇರುವುದನ್ನು ನೀಗುವುದಕ್ಕೆ ನಮ್ಮೆಲ್ಲ ಪ್ರಯತ್ನವನ್ನು ಮಾಡಿದ್ದೇವೆ. ಅಲ್ಲಿಂದ ಬರತಕ್ಕಂಥ ಎಲ್ಲಾ ವೈದ್ಯರನ್ನು ನೇಮಕ ಮಾಡಿಕೊಳ್ಳುವುದಕ್ಕೆ ಪ್ರಯತ್ನ ಮಾಡಿದ್ದೇವೆ. ಆದ್ದರಿಂದ ಈ ಕೊರತೆ ಅನೇಕ ವರ್ಷಗಳಿಂದ ಇದ್ದಿದ್ದು, ಕಳೆದ ಎರಡು–ಮೂರು ವರ್ಷಗಳಿಂದ ನಮ್ಮ ಸರ್ಕಾರ ಬಂದಮೇಲೆ ಇದರ ಬಗ್ಗೆ ತೀವ್ರವಾಗಿ ಪ್ರಾಮಾಣಿಕ ಪ್ರಯತ್ನವನ್ನು ಮಾಡಿದ್ದೇವೆ ಎಂದು ಹೇಳುತ್ತೇನೆ. ಹಾಗೆಯೇ ಎಲ್ಲಾ ಜಾನುವಾರುಗಳಿಗೆ ರಕ್ಷಣೆ ಕೊಡಬೇಕೆಂಬ ಉದ್ದೇಶದಿಂದ ಹೊಸ ಪಶುವೈದ್ಯಶಾಲೆಗಳನ್ನು ತೆರೆಯಬೇಕೆಂದು ಮಾಡಿದ್ದೇವೆ. ಇವತ್ತು ಕನಿಷ್ಟ ೭೫೦೦ ದನಗಳ ಘಟಕಕ್ಕೆ ಒಂದು ಪಶುವೈದ್ಯ ಸಂಸ್ಥೆ ಬೇಕಾಗುತ್ತದೆ. ಆದರೆ ಈಗ ಇರತಕ್ಕಂಥಾದ್ದು ೧೧–೧೨ ಸಾವಿರದ ಘಟಕಕ್ಕೆ ಒಂದು ಸಂಸ್ಥೆಯಂತೆ. ಸಂಪೂರ್ಣವಾಗಿ ಇರತಕ್ಕಂಥ ಎಲ್ಲಾ ಜಾನುವಾರುಗಳಿಗೆ ಆರೋಗ್ಯ ರಕ್ಷಣೆಯನ್ನು ಮಾಡುತ್ತಿದ್ದೇವೆ ಎಂದು ಹೇಳುವುದಕ್ಕೆ ನಾನು ಸಿದ್ಧನಿಲ್ಲ. ಈ ೩೫೮ ಹೊಸ ಪಶುವೈದ್ಯಶಾಲೆಗಳನ್ನು ತೆರೆದಮೇಲೆ ಸಂಪೂರ್ಣವಾಗಿ ಆರೋಗ್ಯ ರಕ್ಷಣೆ ಮಾಡುವುದಕ್ಕೆ ಸಾಧ್ಯವಾಗುತ್ತದೆ ಎಂದು ತಿಳಿದುಕೊಂಡು ಪ್ರಾಮಾಣಿಕ ಪ್ರಯತ್ನ ಮಾಡುತ್ತಿದ್ದೇವೆ ಎಂದು ಹೇಳುವುದಕ್ಕೆ ಇಚ್ಛೆಪಡುತ್ತೇನೆ. ಕಳೆದ ಬಾರಿ ನಾನು ಒಂದು ಮಾತನ್ನು ಹೇಳಿದ್ದೆ. ಆಮೇಲೆ ಚರ್ಚೆ ನಡೆಯತಕ್ಕಂಥ ಸಂದರ್ಭದಲ್ಲಿ ಕೂಡ ಒಂದು ಮಾತನ್ನು ಹೇಳಿದ್ದೇನೆ, ಇದರ ಬಗ್ಗೆ ಶಾಸನಸಭೆಯಲ್ಲಿ ಕೂಡ ಪ್ರಸ್ತಾಪ ಆಗಿತ್ತು, ಅದೇನೆಂದರೆ ನಮ್ಮ ಇಲಾಖೆಯಲ್ಲಿ ಸಹಾಯಕ ಪಶುವೈದ್ಯರು ಮತ್ತು ಸಹಾಯಕ ನಿರ್ದೇಶಕರು ಇವರಿಗೆ ಇರತಕ್ಕಂಥ ಸಂಬಳದಲ್ಲಿ ತಾರತಮ್ಯ ಇದೆ ಎಂಬ ವಿಚಾರವನ್ನು ಪ್ರಸ್ತಾಪ ಮಾಡಿದ್ದರು. ನಾನು ನನ್ನ ಉತ್ತರದಲ್ಲಿ ಒಂದು ಆಶ್ವಾಸನೆಯನ್ನು ಕೊಟ್ಟಿದ್ದೆ. ಏನೆಂದರೆ ಈ ತಾರತಮ್ಯ ಏನಿದೆ, ಇದನ್ನು ತೆಗೆದುಹಾಕಲಿಕ್ಕೆ ಪ್ರಯತ್ನ ಮಾಡುತ್ತೇನೆ ಎಂದು ಹೇಳಿದ್ದೆ. ಮತ್ತು ಜಿಲ್ಲಾಮಟ್ಟದಲ್ಲಿ ಒಂದು ಉಪನಿರ್ದೇಶಕರ ಹುದ್ದೆ ಇಲ್ಲ, ಆ ಮಟ್ಟದ ಅಧಿಕಾರಿಗಳು ಇಲ್ಲವೆಂದು ಹೇಳಿದ್ದರು. ಏಕೆಂದರೆ ಅವರು ಸಹಾಯಕ ಪಶುವೈದ್ಯರಾಗಿ ಕೆಲಸಕ್ಕೆ ಸೇರಿದವರು ಸಹಾಯಕ ನಿರ್ದೇಶಕರಾಗಿ ನಿವೃತ್ತಿಯಾಗುವ ಪರಿಸ್ಥಿತಿ ಇತ್ತು. ಇದು ಬಹಳ ದಿವಸಗಳಿಂದ ನೆನೆಗುದಿಗೆ ಬಿದ್ದಿರತಕ್ಕಂಥ ವಿಚಾರ. ನಾನು ಇಲಾಖೆಯ ಜವಾಬ್ದಾರಿಯನ್ನು ಹೊತ್ತಮೇಲೆ ಜಿಲ್ಲಾಮಟ್ಟದಲ್ಲಿ ಉಪನಿರ್ದೇಶಕರಾಗಿ ಬಡ್ತಿ ಕೊಡತಕ್ಕಂಥ ನಿರ್ಣಯ ಮಾಡಿ ಇವತ್ತು ೧೯ ಜಿಲ್ಲೆಗಳಲ್ಲಿ ಈ ಒಂದು ವ್ಯವಸ್ಥೆಯನ್ನು ಸುಸೂತ್ರವಾಗಿ ನಡೆಸಿಕೊಂಡು ಹೋಗುವುದಕ್ಕಾಗಿ ಜಿಲ್ಲಾ ಮಟ್ಟದ ಅಧಿಕಾರಿಗಳನ್ನು ಭಡ್ತಿ ಕೊಟ್ಟು ನೇಮಕ ಮಾಡತಕ್ಕಂಥ ಕಾರ್ಯಕ್ರಮ

ವನ್ನು ಈಗಾಗಲೇ ಮಾಡಿದ್ದೇವೆ. ಈ ತಾರತಮ್ಯ ಏನಿತ್ತು, ಇದನ್ನು ನೀಗಲಿಕ್ಕೆ ಸಹಾಯಕ ಪಶು ವೈದ್ಯ ಮತ್ತು ಸಹಾಯಕ ನಿರ್ದೇಶಕರ ಒಂದೇ ತರಹ ವೇತನಮಾಡಿ, ವೇತನದಲ್ಲಿ ಹೆಚ್ಚಳ ಕೂಡ ಮಾಡಿ ಬಹಳ ಸಮಯದಿಂದ ನೆನೆಗುದಿಗೆ ಬಿದ್ದಿರುವ ವಿಚಾರವನ್ನು ಪರಿಹಾರ ಮಾಡಿದ್ದೇವೆಯೆಂದು ಹೇಳುವುದಕ್ಕೆ ಬಯಸುತ್ತೇನೆ. ಜೊತೆಗೆ ಇದರಿಂದ ಆಡಳಿತ ವ್ಯವಸ್ಥೆಯಲ್ಲಿ ಇರುವ ನ್ಯೂನತೆಗಳನ್ನು ಸರಿಪಡಿಸಲಿಕ್ಕೆ ಪ್ರಯತ್ನವನ್ನು ಮಾಡಿದ್ದೇನೆ ಎನ್ನತಕ್ಕಂಥ ಮಾತನ್ನು ಈ ಸಂದರ್ಭದಲ್ಲಿ ಹೇಳಲಿಕ್ಕೆ ಇಚ್ಛೆಪಡುತ್ತೇನೆ. ಮತ್ತೆ ಇನ್ನೊಂದು ವಿಚಾರವನ್ನು ಹೇಳಿದರು. ಹಾಲಿನ ಬೆಲೆಯನ್ನು ೩೦ಪೈಸೆ ಹೆಚ್ಚುಮಾಡಿ ಕೇವಲ ೧೭ಪೈಸೆ ಮಾತ್ರ ರೈತರಿಗೆ ಕೊಟ್ಟಿದ್ದಾರೆ, ಉಳಿದಿದ್ದನ್ನು ಏತಕ್ಕೋ ಖರ್ಚು ಮಾಡಿದ್ದಾರೆ ಎಂದು ಹೇಳಿದರು. ಇದರ ಬಗ್ಗೆ ನಾನು ಹೇಳಬೇಕೆಂದರೆ ಒಂದೇ ಒಂದು ಪೈಸೆ ಕೂಡ ಗ್ರಾಹಕರಿಗೆ ವಿನಿಯೋಗಿಸದೆ ಸಂಪೂರ್ಣವಾಗಿ ಉತ್ಪಾದಕರಿಗೆ ಇದು ತಲುಪಿದೆ.

ಮಾನ್ಯ ಸದಸ್ಯರು ಯಾವುದೇ ಹಾಲು ಉತ್ಪಾದಕರನ್ನು ಸಂಪರ್ಕಿಸಿಲ್ಲವೆಂದು ತೋರುತ್ತದೆ. ಅವರು ಮತ್ತೊಮ್ಮೆ ಹಾಲು ಉತ್ಪಾದಕರನ್ನು ಕೇಳಿ ಈ ವಿಚಾರವನ್ನು ತಿಳಿದುಕೊಳ್ಳಬೇಕೆಂದು ಹೇಳುತ್ತೇನೆ. ೧೬-೬-೮೫ರಿಂದ ಯಾವ ನಿರ್ಣಯವನ್ನು ಮಾಡಿದ್ದೇನೆ, ಅದರ ಪ್ರಕಾರ ಈ ೩೦ ಪೈಸೆ ಹೆಚ್ಚಳ ಸಂಪೂರ್ಣವಾಗಿ ಯಾರನ್ನು ತಲುಪಬೇಕೋ ಅವರಿಗೆ ತಲುಪಿದೆ. ಆಮೇಲೆ ಇನ್ನೊಂದು ವಿಚಾರವನ್ನು ಹೇಳಬೇಕಾಗಿದೆ.

ಅಧ್ಯಕ್ಷರು,—ಬೇಗ ಮುಕ್ತಾಯ ಮಾಡಿಬಿಡಿರಿ.

ಶ್ರೀ ಸಿದ್ದರಾಮಯ್ಯ,—ಅಧ್ಯಕ್ಷರೇ, ಸ್ವಲ್ಪ ಹೇಳಬೇಕಾಗುತ್ತದೆ. ಕೆಲವು ವಿಚಾರಗಳ ಬಗ್ಗೆ ಆಪಾದನೆಗಳನ್ನು ಮಾಡಿದ್ದಾರೆ. ಅದರ ಬಗ್ಗೆ ಉತ್ತರ ಹೇಳಬೇಕಾಗುತ್ತದೆ. ಸರಿಯಾಗಿ ಔಷಧಿಗಳು ಸಿಗುತ್ತಿಲ್ಲ, ವೈದ್ಯರು ಇಲ್ಲ, ಕಂಪೌಂಡರ್ ಇಲ್ಲ ಎಂದು ಏನು ಹೇಳಿದ್ದಾರೆ, ಇದು ಸತ್ಯಕ್ಕೆ ದೂರವಾಗಿರತಕ್ಕಂಥ ವಿಚಾರ.

ಗ್ರಾಮಾಂತರ ಪ್ರದೇಶಗಳಲ್ಲಿರುವಂತಹ ಪಶುವೈದ್ಯ ಶಾಲೆಗಳಿಗೆ, ೫೦೦ರೂ ಗಳ ಔಷಧಿಗಳನ್ನು ಒಂದು ವರ್ಷಕ್ಕೆ ಕೊಡುತ್ತಿದ್ದೇವೆ. ಮೊದಲು ೪-೫ ಸಾವಿರ ರೂಪಾಯಿಗಳ ಔಷಧಿಗಳನ್ನು ಕೊಡುತ್ತಾ ಇದ್ದರು. ಪಶುವೈದ್ಯ ಶಾಲೆಗಳಿಗೆ ೧೯,೦೦೦ ರೂ.ಗಳ ಔಷಧಿಗಳನ್ನು ಕೊಡುತ್ತಿದ್ದೇವೆ. ಜಿಲ್ಲಾ ಮಟ್ಟದಲ್ಲಿರುವ ಆಸ್ಪತ್ರೆಗಳಿಗೆ ೩೮,೦೦೦ ರೂ.ಗಳ ಔಷಧಿಗಳನ್ನು ಕೊಡುತ್ತಿದ್ದೇವೆ. ಇಂದು ನಾವು ಏನು ಔಷಧಿಗಳನ್ನು ಕೊಡುತ್ತಿದ್ದೇವೆ ಅವುಗಳು ಹಳ್ಳಿಗಳಲ್ಲಿ ಇರತಕ್ಕಂತಹ ಜಾನುವಾರುಗಳಿಗೆ ತಲುಪಬೇಕೆಂಬ ಉದ್ದೇಶದಿಂದ ಹಾಗೂ ಪ್ರಾಣಿಗಳಿಗೆ ಇದರಿಂದ ಸ್ವಲ್ಪಮಟ್ಟಿನ ಉಪಯೋಗವಾದರೂ ಆಗಬೇಕೆಂಬ ಉದ್ದೇಶದಿಂದ ಸಾರ್ವಜನಿಕರ ಮಾಹಿತಿಗಾಗಿ ಪ್ರತಿಯೊಂದು ಪಶುವೈದ್ಯಶಾಲೆಯ ಮುಂದುಗಡೆ ಔಷಧಿಗಳ ದಾಸ್ತಾನಿನ ಪಟ್ಟಿಯನ್ನು ಲಗತ್ತಿಸಿರಬೇಕೆಂಬ ಸೂಚನೆಯನ್ನೂ ಕೂಡ ಈಗಾಗಲೇ ಕೊಟ್ಟಿದ್ದೇವೆ, ಈ ರೀತಿಯ ಬದಲಾವಣೆಯನ್ನು ನಮ್ಮಲ್ಲಿರುವ ಎಲ್ಲ ೧೨೫೩ ಗ್ರಾಮಾಂತರ ಪಶುವೈದ್ಯ ಶಾಲೆಗಳಲ್ಲೂ ಮಾಡಿದ್ದೇವೆ. ಎಲ್ಲಿ ಔಷಧಿ ಸಿಕ್ಕಲಿಲ್ಲವೆಂಬ ನಿಖರವಾದ ದೂರು ಇದ್ದರೆ ಅಂತಹ ವಿಚಾರವನ್ನು ಮಾನ್ಯ ಸದಸ್ಯರುಗಳು ನನ್ನ ಗಮನಕ್ಕೆ ತಂದರೆ ಅದರ ಬಗ್ಗೆ ನಾನು ಕ್ರಮ ತೆಗೆದುಕೊಳ್ಳುತ್ತೇನೆ. ಮಾನ್ಯ ರಮೇಶ್ ಕುಮಾರ್ ರವರು ಕೆಲವು ಉತ್ತಮವಾದ ಸಲಹೆಗಳನ್ನು ನೀಡಿದ್ದಾರೆ. ಹಂದಿ ಸಾಕಾಣಿಕೆ ಕಸುಬು ಆರ್ಥಿಕವಾಗಿ ಅತ್ಯಂತ ಉತ್ತಮವಾದುದು ಎಂಬುದನ್ನು ನಾನೂ ಕೂಡ ಒಪ್ಪುತ್ತೇನೆ.

ಶ್ರೀ ಕೆ. ಎಚ್. ಶ್ರೀನಿವಾಸ್,—ಅವರು ಮಾಂಸದಲ್ಲೆಲ್ಲಾ ರುಚಿಕರವಾದ ಮಾಂಸ ಬನ್ನೂರು ಕುರಿ ಮಾಂಸ ಅಂತ ಹೇಳಿದ್ದಾರೆ. ಅದರ ಬಗ್ಗೆ ಹೇಳಿ.

ಶ್ರೀ ಸಿದ್ದರಾಮಯ್ಯ,—ಅದು ನನಗೆ ಮನವರಿಕೆಯಾಗಿದೆ. ಅವರು ಮಾಂಸದ ಬಗ್ಗೆ ಹೆಚ್ಚು ಮಾತನಾಡಿದ್ದಾರೆ. ಅವರು ಹೇಳಿದ ಬನ್ನೂರು ಕುರಿ ತಳಿಯನ್ನು ಅಭಿವೃದ್ಧಿಪಡಿಸುವುದಕ್ಕೋಸ್ಕರ ದಸಕೂರು ಎಂಬ ಕುರಿ ಅಭಿವೃದ್ಧಿ ಕೇಂದ್ರವನ್ನು ಮಾಡಿದ್ದೇವೆ. ಇಲ್ಲಿ ಸ್ವತಃ ಬನ್ನೂರು ಟಗರುಗಳನ್ನು ತಯಾರು ಮಾಡಿ ರೈತರಿಗೆ ಹಂಚಿ ಆ ಮೂಲಕ ಬನ್ನೂರು ತಳಿಯನ್ನು ಅಭಿವೃದ್ಧಿ ಪಡಿಸುವುದಕ್ಕೆ ಪ್ರಯತ್ನ ಮಾಡುತ್ತಿದ್ದೇವೆ. ಮಾಂಸದ ರುಚಿಯ ಬಗ್ಗೆ ಹೇಳುವುದಾದರೆ ದೇಶದಲ್ಲೇ ಹೆಸರುವಾಸಿಯಾದಂತಹ ಜಾತಿ ಇದು.

ಶ್ರೀ ಕೆ. ಎಚ್. ಪಾಟೀಲ್.—ಮಾಂಸದ ರುಚಿಯನ್ನು ಬಲ್ಲವರಿಗೆ ಅದರ ರುಚಿ ಗೊತ್ತಿರುತ್ತದೆ. ಅದು ಸಹಜವಾದುದು. ಆದರೆ ಉಳಿದವರಿಗೆ ಅದರ ರುಚಿ ಗೊತ್ತಾಗುವುದಿಲ್ಲವಲ್ಲ.

ಶ್ರೀ ಸಿದ್ದರಾಮಯ್ಯ.—ಅದಕ್ಕೇ ಒಂದು ಕೇಜಿ ಮಾಂಸಕ್ಕೆ ೩೮ ರೂ.ಗಳು ಆಗಿದೆ.

ಶ್ರೀ ಎಂ. ರಾಮಪ್ಪ.—ಬಳ್ಳಾರಿ ಕುರಿಯ ಬಗ್ಗೆ ಹೇಳಿ.

ಶ್ರೀ ಸಿದ್ದರಾಮಯ್ಯ.—ನಮ್ಮಲ್ಲಿ ಹೆಸರುವಾಸಿಯಾದ ನಾಲ್ಕು ಜಾತಿಯ ಕುರಿಗಳಿವೆ. ಬನ್ನೂರು ಡೆಕ್ಕನ್, ಹಾಸನ್ ಹಾಗೂ ಬಳ್ಳಾರಿ. ಈ ತಳಿಗಳು ಮಾಂಸದಲ್ಲಿ ದೇಶದಲ್ಲಿ ಅತ್ಯಂತ ಹೆಸರುವಾಸಿಯಾದ ರುಚಿಕರವಾದ ಮಾಂಸ ಎಂದು ರುಜುವಾತಾಗಿದೆ.

ಶ್ರೀ ಕೆ. ಎಚ್. ಶ್ರೀನಿವಾಸ್.—ಮೊದಲು ಇತ್ತು ಈಗ ಇಲ್ಲ ಅದು.

ಶ್ರೀ ಸಿದ್ದರಾಮಯ್ಯ.—ಈ ತಳಿಗಳು ಏನು ಇವೆ. ಅವುಗಳನ್ನು ಅಭಿವೃದ್ಧಿಪಡಿಸುವುದಕ್ಕೆ ಎಲ್ಲ ಕಾರ್ಯಕ್ರಮವನ್ನೂ ಹಾಕಿಕೊಂಡಿದ್ದೇವೆ ಎನ್ನತಕ್ಕಂತಹದ್ದನ್ನು ಈ ಒಂದು ಸಂದರ್ಭದಲ್ಲಿ ಹೇಳುತ್ತೇನೆ ಇನ್ನು ಶ್ರೀಮಾನ್ ಕೆ. ಎಚ್. ಪಾಟೀಲ್ ರವರು ಒಂದು ವಿಚಾರವನ್ನು ಹೇಳಿದರು. ಅದೇನೆಂದರೆ, ನಮ್ಮಲ್ಲಿರತಕ್ಕ ಕುರಿಗಳನ್ನು ಅಭಿವೃದ್ಧಿಪಡಿಸುವುದಕ್ಕೆ ಸೂಕ್ತವಾದ ಕಾರ್ಯಕ್ರಮವನ್ನು ಹಾಕಿಕೊಂಡಿಲ್ಲ ಆಸ್ಟ್ರೇಲಿಯಾದಿಂದ ವಿದೇಶಿ ತಳಿಗಳ ಕುರಿಗಳನ್ನು ತಂದು ಅಭಿವೃದ್ಧಿಪಡಿಸಬೇಕೆಂಬ ಸಲಹೆಯನ್ನು ನೀಡಿದರು. ಆಸ್ಟ್ರೇಲಿಯಾದ ಕಾರಿಡೈಲ್ ಹಾಗೂ ನಮ್ಮಲ್ಲಿರತಕ್ಕ ಡೆಕ್ಕನ್ ಈ ಎರಡು ತಳಿಗಳನ್ನು ಚಳ್ಳಕೆರೆಯಲ್ಲಿರುವ ದೊಡ್ಡ ಪ್ರಮಾಣದ ಸಂವರ್ಧನಾ ಕೇಂದ್ರದಲ್ಲಿ ಅಭಿವೃದ್ಧಿಪಡಿಸತಕ್ಕಂಥ ಕಾರ್ಯಕ್ರಮ ಈಗಾಗಲೇ ಇದೆ. ಪ್ರತಿ ವರ್ಷ ಸುಮಾರು ೭೦೦ಕ್ಕೂ ಹೆಚ್ಚು ಟಗರುಗಳನ್ನು ರೈತರಿಗೆ ಹಂಚುತ್ತಿದ್ದೇವೆ. ಅದರಿಂದ ಹೊಸದಾಗಿ ಅಲ್ಲಿಂದ ತರಬೇಕಾದುದೇನೂ ಇಲ್ಲ. ಆಸ್ಟ್ರೇಲಿಯಾದ ಮೆರಿನೋ ಜಾತಿ ಹಾಗೂ ಕಾರಿಡೈಲ್ ಜಾತಿಯ ವಿದೇಶಿ ತಳಿಗಳನ್ನು ತಂದು ನಮ್ಮಲ್ಲಿರತಕ್ಕ ಸ್ಥಳೀಯ ಜಾತಿಯ ಕುರಿಗಳ ಮೇಲೆ ಕ್ರಾಸ್ ಮಾಡಿಸಿ ಅದರಿಂದ ಬರತಕ್ಕಂತಹ ಮರಿಗಳನ್ನು ರೈತರಿಗೆ ಹಂಚತಕ್ಕಂಥ ಕಾರ್ಯಕ್ರಮವನ್ನು ಈಗಾಗಲೇ ನಾವು ಹಾಕಿಕೊಂಡಿದ್ದೇವೆ. ಆದರೆ ಇನ್ನೂ ಹೆಚ್ಚಿನ ಪ್ರಮಾಣದಲ್ಲಿ ಆ ಮರಿಗಳನ್ನು ಹಂಚಬೇಕೆಂಬ ಸಲಹೆಯನ್ನು ನಾನು ಸಂಪೂರ್ಣವಾಗಿ ಒಪ್ಪುತ್ತೇನೆ. ಆ ದಿಕ್ಕಿನಲ್ಲಿ ಪ್ರಯತ್ನ ಮಾಡುತ್ತೇನೆ ಎಂದು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಷ್ಟಪಡುತ್ತೇನೆ. ಶ್ರೀಮಾನ್ ರಮೇಶ್ ಕುಮಾರ್ ರವರು. ಶ್ರೀಮಾನ್ ಲಕ್ಕಪ್ಪನವರು ಹಾಗೂ ಶ್ರೀಮಾನ್ ಕೆ. ಎಚ್. ಪಾಟೀಲ್ ರವರು ಮಾತನಾಡುತ್ತಾ, ಕುರಿ ಉತ್ಪಾದನಾ ಅಭಿವೃದ್ಧಿ ಮಂಡಲಿ ಏನು ಇದೆ, ಅದು ಸ್ಥಾಪನೆಯಾಗಿದ್ದು ೧೯೭೫ರಲ್ಲಿ ಅಂದಿನಿಂದ ಇಂದಿನವರೆಗೆ ಕುರಿ ಅಭಿವೃದ್ಧಿ ಬಗ್ಗೆ ಪರಿಣಾಮಕಾರಿಯಾದ ಕಾರ್ಯಕ್ರಮಗಳನ್ನು ಏನನ್ನೂ ಹಾಕಿಕೊಂಡಿಲ್ಲವೆಂದು ಹೇಳಿದ್ದಾರೆ. ಅವರು ಹೇಳಿರತಕ್ಕಂಥ ಮಾತನ್ನು ನಾನು ಒಪ್ಪುತ್ತೇನೆ. ಆ ಒಂದು ಕುರಿ ಅಭಿವೃದ್ಧಿ ಮಂಡಲಿ ಕಳೆದ ೧೦ ವರ್ಷಗಳಲ್ಲಿ ಈ ರಾಜ್ಯದಲ್ಲಿರತಕ್ಕ ಕುರಿಗಳನ್ನು ಅಭಿವೃದ್ಧಿಪಡಿಸುವ ದಿಕ್ಕಿನಲ್ಲಿ ಸಾಕಷ್ಟು ಪ್ರಮಾಣದಲ್ಲಿ ಕಾರ್ಯಕ್ರಮಗಳನ್ನು ಹಾಕಿಕೊಂಡಿಲ್ಲ ಎಂಬ ಮಾತನ್ನು ನಾನು ಒಪ್ಪುತ್ತೇನೆ. ಅದಕ್ಕಾಗಿಯೇ ಕಳೆದ ವರ್ಷ ೩೨ ಕೋಟಿ ರೂಪಾಯಿಗಳ ಅಂದಾಜಿನ ಬೃಹತ್ ಯೋಜನೆಯನ್ನು ತಯಾರು ಮಾಡಿ ವಿಶ್ವ ಬ್ಯಾಂಕಿನ ನೆರವನ್ನು ಕೋರಿ ಕೇಂದ್ರ ಸರ್ಕಾರಕ್ಕೆ ಕಳುಹಿಸಿದ್ದೇವೆ. ಮಂಜೂರಾಗಿ ಕರ್ನಾಟಕ ರಾಜ್ಯದಲ್ಲಿರತಕ್ಕ ಜಿಲ್ಲೆಗಳ ಪೈಕಿ ೯ ಜಿಲ್ಲೆಗಳಲ್ಲಿ ಇರತಕ್ಕ ಸ್ಥಳೀಯ ಜಾತಿ ಕುರಿಗಳನ್ನು ಅಭಿವೃದ್ಧಿಪಡಿಸುವುದಕ್ಕೆ ಕಾರ್ಯಕ್ರಮಗಳನ್ನು ಹಾಕಿಕೊಂಡಿದ್ದೇವೆ. ನಮ್ಮಲ್ಲಿರತಕ್ಕ ಸ್ಥಳೀಯ ಕುರಿಗಳಲ್ಲಿ ೪೦೦ ರಿಂದ ೫೦೦ ಗ್ರಾಂ ವರೆಗೆ ಒಂದು ಕುರಿಯಲ್ಲಿ ತುಪ್ಪಟ (ಉಣ್ಣೆ) ಬರುತ್ತದೆ. ೧೦ ರಿಂದ ೧೫ ಕೇಜಿವರೆಗೆ ಮಾಂಸ ಒಂದು ಕುರಿಯಲ್ಲಿ ಬರುತ್ತಿದೆ. ಆದರೆ ವಿದೇಶಿ ತಳಿಯ ಕುರಿಗಳಿಂದ ಒಂದು ಕುರಿಯಲ್ಲಿ ೧ ರಿಂದ ೨ ಕೇಜಿವರೆಗೆ ತುಪ್ಪಟ (ಉಣ್ಣೆ) ಬರುತ್ತಿದೆ. ೩೦ ರಿಂದ ೪೦ ಕೇಜಿವರೆಗೆ ಮಾಂಸ ಒಂದು ಕುರಿಯಲ್ಲಿ ಬರುತ್ತಿದೆ. ಯಾರು ಈ ಕುರಿಯ ಸಾಕಾಣಿಕೆಯನ್ನು ಅವಲಂಬಿಸಿ ಜೀವನ ಮಾಡುತ್ತಿದ್ದಾರೆ, ಅವರ ಆರ್ಥಿಕ ಸ್ಥಿತಿಯನ್ನು ಸುಧಾರಣೆ ಮಾಡುವ ದಿಕ್ಕಿನಲ್ಲಿ ಪ್ರಯತ್ನ ಮಾಡುತ್ತಿದ್ದೇವೆ ಆ ಬಗ್ಗೆ ನಾನು ಈಗಾಗಲೇ ಕೇಂದ್ರ ಸರ್ಕಾರದ ಜೊತೆ ಎರಡು ಭಾರಿ ಮಾತನಾಡಿದ್ದೇನೆ. ಆ ಒಂದು ಯೋಜನೆಗೆ ಮಂಜೂರಾತಿಯನ್ನು ದೊರಕಿಸಿಕೊಡಬೇಕೆಂದು ಒತ್ತಾಯವನ್ನು ಕೂಡ ಮಾಡಿದ್ದೇನೆ. ಅದು ಆದ ಮೇಲೆ ಕರ್ನಾಟಕ ,ರಾಜ್ಯದಲ್ಲಿ ಇರತಕ್ಕ ಕುರಿಗಳನ್ನು ಅಭಿವೃದ್ಧಿಪಡಿಸುವುದಕ್ಕೆ ಸಾಧ್ಯವಾಗುತ್ತದೆ ಎಂಬುದಾಗಿ ಹೇಳುತ್ತೇನೆ. ಮಾನ್ಯ ಲಕ್ಕಪ್ಪನವರು ಹೇಳಿದ ಹಾಗೆ ಈ ಒಂದು ಯೋಜನೆಯಲ್ಲಿ ಕುರಿ

ಕಾರರ ಸಹಕಾರಿ ಸಂಘಗಳನ್ನು ಯಾರು ಸಂಘಟನೆ ಮಾಡಿದ್ದಾರೆ, ಅವರ ಮೂಲಕ ಕುರಿಕಾರರಿಗೆ ಮಾರುಕಟ್ಟೆ ವ್ಯವಸ್ಥೆಯನ್ನು ಮಾಡತಕ್ಕಂತಹದ್ದು, ಅವರಿಗೆ ಸಾಕಾಣಿಕೆಯಲ್ಲಿ ಬೇಕಾದಂತಹ ತಾಂತ್ರಿಕ ಜ್ಞಾನವನ್ನು ಒದಗಿಸಿಕೊಡತಕ್ಕಂತಹದ್ದು, ಅವರ ಆರ್ಥಿಕ ಸ್ಥಿತಿಯನ್ನು ಸುಧಾರಣೆಯನ್ನು ಮಾಡುವ ಬಗ್ಗೆ ಕಾರ್ಯಕ್ರಮಗಳನ್ನು ಆ ಒಂದು ಯೋಜನೆಯಲ್ಲಿ ಹಮ್ಮಿಕೊಂಡಿದ್ದೇವೆ. ಆದ್ದರಿಂದ ಈ ಯೋಜನೆಯನ್ನು ಮಂಜೂರು ಮಾಡುವುದಕ್ಕೆ ನನ್ನ ಕೈಲಾದ ಸರ್ವ ಪ್ರಯತ್ನ ಮಾಡುತ್ತೇನೆಂದು ಹೇಳುತ್ತೇನೆ. ಕುರಿ ಸಾಕಾಣಿಕೆಯನ್ನು ಉತ್ತಮ ಪಡಿಸಬೇಕಾದರೆ, ಹುಲ್ಲುಗಾವಲಿನ ಅವಶ್ಯಕತೆ ಬಹಳವಾಗಿದೆ ಎನ್ನುವ ವಿಚಾರವನ್ನು ಹೇಳಿದ್ದಾರೆ, ಅದಕ್ಕಾಗಿ ನಾವು ಸರ್ಕಾರಿ ಭೂಮಿ ಎಲ್ಲೆಲ್ಲಿದೆ. ಗೋಮಾಳ ಎಲ್ಲೆಲ್ಲಿದೆ. ಅದರಲ್ಲಿ ಬಹುಪಾಲು ಈಗಾಗಲೇ ಒತ್ತುವರಿಯಾಗಿಬಿಟ್ಟಿದು ಜಾಗವೇ ಇಲ್ಲದ ಹಾಗೇ ಆಗಿದೆ. ನಾನು ಈ ಖಾತೆಯ ಜವಾಬ್ದಾರಿಯನ್ನು ತೆಗೆದುಕೊಂಡ ಮೇಲೆ ಕಂದಾಯ ಇಲಾಖೆಯವರ ಜೊತೆಯಲ್ಲಿ ಸಮಾಲೋಚನೆ ಮಾಡಿ, ಉಳಿದಿರತಕ್ಕ ಸರ್ಕಾರಿ ಭೂಮಿ ಹಾಗೂ ಗೋಮಾಳಗಳನ್ನು ಹಾಗೇ ಉಳಿಸಬೇಕು, ಬೇರೆ ಯಾರಿಗೂ ಸಾಗುವಳಿಗಾಗಿ ಕೊಡಕೂಡದು ಎಂಬ ವಿಚಾರವನ್ನು ಮಾಡಿದ್ದೇವೆ. ಆದರ ಬಗ್ಗೆ ತೀರ್ಮಾನ ತೆಗೆದುಕೊಳ್ಳುವುದು ಸರ್ಕಾರದ ಮುಂದಿದೆ. ಕುರಿಯನ್ನು ಅರಣ್ಯದಲ್ಲಿ ಮೇಯಿಸುವುದಕ್ಕೆ ಅರಣ್ಯ ಇಲಾಖೆಯ ಯಾವುದೇ ನಿರ್ಬಂದ ಇಲ್ಲ. ಆದರೆ ಮೇಕೆಗಳನ್ನು ಮೇಯಿಸುವುದಕ್ಕೆ ನಿರ್ಬಂದ ಇದೆ. ಏಕೆಂದರೆ ಮೇಕೆಗಳು ಸಸಿಗಳನ್ನು ತಿಂದುಬಿಡುತ್ತವೆ ಅದಕ್ಕೆ ನಿರ್ಬಂದವನ್ನು ಹಾಕಿದ್ದಾರೆ. ನಂತರ ಅಮೃತ ಮಹಲ್ ಕಾವಲಿನ ವಿಚಾರದಲ್ಲಿ ಸರ್ಕಾರ ಸಂಪೂರ್ಣವಾಗಿ ನಿರ್ಲಕ್ಷತನ ತೋರಿಸಿದೆ ಎಂಬ ವಿಚಾರವನ್ನು ಮಾನ್ಯ ಸದಸ್ಯರು ಹೇಳಿದ್ದಾರೆ. ಅದನ್ನು ನಾನು ಒಪ್ಪಿಕೊಳ್ಳುತ್ತೇನೆ. ಈಗಿರತಕ್ಕ ೫೦ ಸಾವಿರ ಎಕರೆಯಲ್ಲಿ ೧೪,೦೦೦ ಎಕರೆಯಲ್ಲಿ ಮೇವನ್ನು ಬೆಳೆಸುವುದಕ್ಕೆ ಸಾಧ್ಯತೆ ಇದ್ದು, ಅದನ್ನು ಉಪಯೋಗ ಮಾಡಿಕೊಳ್ಳುವುದಕ್ಕಾಗಿ ೧೦ ಕೋಟಿ ರೂಪಾಯಿಗಳ ಯೋಜನೆಯೊಂದನ್ನು ತಯಾರು ಮಾಡಿದ್ದೇವೆ. ಆ ಒಂದು ಪ್ರದೇಶದಲ್ಲಿ ಮೇವನ್ನು ಬೆಳೆಸುವುದಕ್ಕೆ ಪ್ರಯತ್ನ ಮಾಡುತ್ತೇವೆ ಎನ್ನತಕ್ಕಂತಹ ಮಾತನ್ನು ಈ ಒಂದು ಸಂದರ್ಭದಲ್ಲಿ ಹೇಳುವುದಕ್ಕೆ ಬಯಸುತ್ತೇನೆ.

ಮಾನ್ಯ ಶಿವನಂಜಪ್ಪನವರು ಒಂದು ವಿಷಯ ಹೇಳಿದ್ದಾರೆ. ಎಲ್ಲ ವಿದೇಶಿ ತಳಿಗಳನ್ನೇ ತಯಾರು ಮಾಡುತ್ತಿದ್ದೀರಿ, ನಮ್ಮ ಹಳ್ಳಿಗಳ ಕಡೆಯ ತಳಿಗಳನ್ನು ಅಭಿವೃದ್ಧಿ ಪಡಿಸುತ್ತಿಲ್ಲ ಎಂದು ಹೇಳಿದ್ದಾರೆ. ಇದು ಸರಿಯಾದ್ದಲ್ಲ. ಏಕೆಂದರೆ ನಮ್ಮ ಸರ್ಕಾರದ ನೀತಿ ಏನೆಂದರೆ ರಾಜ್ಯದಲ್ಲಿರುವ ಸ್ಥಳೀಯ ತಳಿಗಳಾದ ಹಳ್ಳಿಕಾರ್, ದಾವಡೆ, ಅಮೃತ ಮಹಲ್ ಮುಂತಾದ ತಳಿಗಳೇನಿವೆ ಅವುಗಳ ಜೊತೆ ಜೆರ್ಸಿ, ಹೆಚ್. ಎಫ್. ಮತ್ತು ರೆಟೀನ್ ತಳಿಗಳನ್ನು ಕೂಡ ಅಭಿವೃದ್ಧಿ ಪಡಿಸಬೇಕೆಂಬುದು ವಿದೇಶಿ ತಳಿಗಳ ವೀರ್ಯವನ್ನು ತೆಗೆದು ಸ್ಥಳೀಯ ತಳಿಗಳ ಮೇಲೆ ಪ್ರಯೋಗ ಮಾಡಿ ಉತ್ತಮ ಮಿಶ್ರ ತಳಿಗಳನ್ನು ತಯಾರು ಮಾಡುತ್ತಿದ್ದೇವೆ. ಮತ್ತು ಸ್ಥಳೀಯ ತಳಿಗಳನ್ನು ಬೀದರಿನಲ್ಲಿನ ಕಾರಂಜ ಫಾರ್ಮಿನಲ್ಲಿ ಹಾಗೂ ನಿಮ್ಮ ಜಿಲ್ಲೆಯಲ್ಲಿರುವ ಅಮೃತ ಮಹಲ್ ತಳಿಗಳನ್ನು ಅಭಿವೃದ್ಧಿ ಪಡಿಸುವ ಕಾರ್ಯಕ್ರಮ ಇದೆ. ಅದರ ಜೊತೆಯಲ್ಲಿ ಕುಣಿಕೇನಹಳ್ಳಿಯಲ್ಲಿ ಹಳ್ಳಿಕಾರ್ ತಳಿ ಅಭಿವೃದ್ಧಿ ಪಡಿಸುತ್ತಿದ್ದೇವೆ.

ನೀವು ಹೇಳಿರುವುದು ಎಂದರೆ ನಾವು ಸಂವರ್ಧನಾಕೇಂದ್ರವನ್ನಾಗಿ ಮಾಡಿದ್ದು ೧೯೮೪–೧೯೮೫ರಲ್ಲಿ. ಅಲ್ಲಿಂದ ಈಚೆಗೆ ೪೯ ರಾಸುಗಳಿಂದ ಶುದ್ಧವಾದ ಹಳ್ಳಿಕಾರ್ ತಳಿಗಳ ವೀರ್ಯವನ್ನು ತೆಗೆದು ಬರೀ ಕೃತಕ ಗರ್ಭಧಾರಣೆ ಮಾಡಿಸಿದ್ದೇವೆ. ಬರೀ ೪೯ ರಾಸುಗಳನ್ನು ಮಾತ್ರ ಸಾಕಿದ್ದೇವೆಂದು ಅಲ್ಲ. ಈ ನಿಟ್ಟಿನಲ್ಲಿ ಇನ್ನೂ ಅಭಿವೃದ್ಧಿಯನ್ನು ಸಾಧಿಸುತ್ತೇವೆ.

ಶ್ರೀ ಇದಿನಬ್ಬ ಅವರು ಒಂದು ವಿಷಯ ಹೇಳಿದರು. ಕೊಯ್ಲ್ಲ ಫಾರಮ್ ಏನಿದೆ ದಕ್ಷಿಣ ಕನ್ನಡದಲ್ಲಿ ಅಲ್ಲಿ ಲಾಭವೇ ಇಲ್ಲ, ನಷ್ಟದಲ್ಲಿ ಸಾಗಿದೆ ಎಂದು. ಮಾನ್ಯ ಕೆ. ಹೆಚ್. ಪಾಟೀಲರಿಗೆ ಗೊತ್ತು ಈ ಸಂವರ್ಧನ ಕೇಂದ್ರಗಳನ್ನು ಮಾಡಿದ್ದು ಲಾಭದ ದೃಷ್ಟಿಯಿಂದಲ್ಲ. ಸಂವರ್ಧನಾ ಕೇಂದ್ರಗಳ ಕೆಲಸ ಉತ್ತಮ ತಳಿಗಳ ಅಭಿವೃದ್ಧಿ ಪಡಿಸುವಿಕೆ. ಅಲ್ಲದೆ ತಳಿಗಳ ಬಗ್ಗೆ ತರಬೇತಿಯನ್ನು ರೈತರಿಗೆ ಕೊಡುವುದು. ಉದಾಹರಣೆಗೆ ಕೊಯ್ಲ್ಲಾ ಫಾರಮ್‌ನಲ್ಲಿ ಕಳೆದ ವರ್ಷದಲ್ಲಿ ೮೦ ಜನ ರೈತರಿಗೆ ತರಬೇತಿ ಕೊಟ್ಟಿದ್ದೇವೆ. ಯಾವುದರ ಬಗ್ಗೆ ಎಂದರೆ ಪಶು ಸಾಕಾಣಿಕೆ, ಕೋಳಿ ಸಾಕಾಣಿಕೆ, ಹಂದಿ ಸಾಕಾಣಿಕೆ ಇವುಗಳ ಬಗ್ಗೆಯೆಲ್ಲ ತರಬೇತಿ ಆಗಬೇಕು. ಇದನ್ನು ಮಾಡುತ್ತಿದ್ದೇವೆ. ಈ ಕಾರಣದಿಂದ ಇದಿನಬ್ಬರು ತಿಳಿದಿರುವ ಅಭಿಪ್ರಾಯ ಸರಿಯಾದುದಲ್ಲ ಲಾಭಗಳಿಸುವ ಉದ್ದೇಶ ಇದಕ್ಕಿಲ್ಲ. ನಾವು ತಯಾರು ಮಾಡುವ ವೀರ್ಯಕ್ಕೆ ಬೆಲೆ ಹಾಕಲಾಗುವುದಿಲ್ಲ. ಆದ್ದರಿಂದ ಲಾಭ ಮಾಡುವ ಪ್ರಶ್ನೆಯೇ ಇಲ್ಲ,

ರೈತರಿಗೆ ಹೈನುಗಾರಿಕೆಯಲ್ಲಿ ತರಬೇತಿ ಕೊಡುವುದು ಮತ್ತು ಅವರಿಗೆ ಉತ್ತಮವಾದ ಫಲ ಪಡೆಯುವುದು ಹೇಗೆ ಎಂದು ತೋರಿಸಿಕೊಡುವುದು ಉತ್ತಮ ತಳಿಗಳನ್ನು ಅಭಿವೃದ್ಧಿ ಪಡಿಸುವುದು ನಮ್ಮ ಕಾರ್ಯಕ್ರಮವಾಗಿದೆ. ಆದ್ದರಿಂದ ಜಾನುವಾರುಗಳಿಗಾಗಿ ೧೩ ಕೇಂದ್ರಗಳಿವೆ. ಕುರಿಗಾಗಿ ೬ ಇವೆ. ಈ ಎಲ್ಲ ಕೇಂದ್ರಗಳ ಮೂಲಕ ನಾವು ತಳಿಯನ್ನು ಅಭಿವೃದ್ಧಿಪಡಿಸುತ್ತಿದ್ದೇವೆ. ಸ್ಥಳೀಯ ತಳಿ ಮತ್ತು ವಿದೇಶಿ ತಳಿಗಳಿಂದ ಮಿಶ್ರ ತಳಿ ಮಾಡುವುದೇ ನಮ್ಮ ಕಾರ್ಯಕ್ರಮ.

ಶ್ರೀ ರಮೇಶ್‌ಕುಮಾರ್ ಅವರು ಈ ಹೈನುಗಾರಿಕೆ ವಿಷಯದಲ್ಲಿ ಒಂದೆರಡು ಮಾತು ಆಡಿ ನನಗೆ ಶಹಭಾಷ್‌ಗಿರಿಯನ್ನೂ ಕೊಟ್ಟಿದ್ದಾರೆ. ರೈತರಿಗೆ ಬೇಕಾದಂಥ ಪಶು ಆಹಾರವನ್ನು ಹಾಲು ಉತ್ಪಾದಕರ ಮಹಾ ಮಂಡಲಿ ತಯಾರು ಮಾಡುತ್ತಿದೆ. ಬೇಡಿಕೆಗೆ ತಕ್ಕಂತೆ ಆ ಪ್ರಮಾಣದಲ್ಲಿ ಆಹಾರ ತಯಾರು ಮಾಡುತ್ತಿಲ್ಲ ಎಂದು ಹೇಳಿದ್ದಾರೆ. ಅವರಿಗೆ ಸರಿಯಾದ ಮಾಹಿತಿ ಸಿಕ್ಕಿಲ್ಲವೆಂದು ಹೇಳುತ್ತೇನೆ. ನಮ್ಮ ರಾಜ್ಯದಲ್ಲಿ ಈಗ ೨೬೭೫ ಸಹಕಾರ ಸಂಘಗಳಿವೆ. ಇಲ್ಲಿ ರಾಜ್ಯದಲ್ಲಿ ಬೇಡಿಕೆ ಇರುವುದು ತಿಂಗಳಿಗೆ ಸುಮಾರು ೩ ಸಾವಿರ ಟನ್. ನಾವು ತಯಾರು ಮಾಡುವುದೇ ಎರಡು ಪಶು ಆಹಾರಗಳನ್ನು. ನಮ್ಮಲ್ಲಿ ಎರಡು ಪ್ಲಾಂಟ್ ಇವೆ. ಒಂದು ರಾಜನಕುಂಟೆಯಲ್ಲಿದೆ, ಇನ್ನೊಂದು ಗುಬ್ಬಿಯಲ್ಲಿದೆ. ಒಂದು ದಿನಕ್ಕೆ ೧೦೦ ಟನ್ ಪಶು ಆಹಾರ ತಯಾರಿಸುವ ಸಾಮರ್ಥ್ಯ ಇದ್ದು ತಿಂಗಳಿಗೆ ೩ ಸಾವಿರ ಟನ್ ತಯಾರು ಮಾಡುತ್ತೇವೆ. ಆದ್ದರಿಂದ ಪಶು ಆಹಾರದ ಬೇಡಿಕೆ ಪೂರೈಕೆಯನ್ನು ಕೆ. ಎಂ. ಎಫ್. ಮಾಡುತ್ತಿದೆ. ಆಪರೇಷನ್ ಫ್ಲಡ್ ಟುನಲ್ಲಿ ಕೆ.ಡಿ.ಡಿ.ಸಿ. ವ್ಯಾಪ್ತಿಗೆ ೮ ಜಿಲ್ಲೆಗಳನ್ನು ತಂದಿದ್ದೇವೆ. ಇನ್ನುಳಿದ ೧೨ ಜಿಲ್ಲೆಗಳಲ್ಲಿ ರೈತರನ್ನು ಸಂಘಟನೆ ಮಾಡುವ ಕೆಲಸವನ್ನು ತೆಗೆದುಕೊಂಡಿದ್ದೇವೆ. ಧಾರವಾಡದಲ್ಲಿ ಇನ್ನೊಂದು ಪಶು ಆಹಾರ ತಯಾರು ಮಾಡುವ ಪ್ಲಾಂಟನ್ನು ಸ್ಥಾಪಿಸುವ ಯೋಜನೆ ಇದೆ. ಆದ್ದರಿಂದ ಎಷ್ಟು ಪಶು ಆಹಾರದ ಬೇಡಿಕೆ ಇದೆಯೋ ಅಷ್ಟನ್ನೂ ಪೂರೈಸುವ ಶಕ್ತಿ ನಮಗೆ ಇದೆ. ಇನ್ನೂ ಪೂರೈಸುತ್ತೇವೆ.

ಇನ್ನು ಹಂದಿಯ ಬಗ್ಗೆ ಹೇಳಿದರು. ಏನೆಂದರೆ ಮೂರು ತಳಿಯ ಹಂದಿಗಳಿವೆ ಯಾರ್ಕ್‌ಷೈರ್, ಹ್ಯಾಂಪ್‌ಷೈರ್, ಮತ್ತು ಲ್ಯಾಂಡ್ರೇಸ್ ಎಂದು. ಈ ಹಂದಿಗಳಿಗಾಗಿ ಮೂರು ಸಂವರ್ಧನ ಕೇಂದ್ರಗಳನ್ನು ಒಂದು ಹೆಸರುಘಟ್ಟ, ಇನ್ನೊಂದು ಕೂಡಿಗೆ ಮತ್ತೊಂದು ಕೊಯ್ನಾಗಳಲ್ಲಿ ಮಾಡಿದ್ದೇವೆ. ರೈತರಿಗೆ ಮರಿಗಳನ್ನು ಹಂಚುವ ಕಾರ್ಯವನ್ನೂ ಕೈಗೊಂಡಿದ್ದೇವೆ. ಈಗಾಗಲೇ ಐಆರ್‌ಡಿಪಿಯಲ್ಲಿ ಹಂಚಿದ್ದೇವೆ. ಸ್ಪೆಷಲ್ ಕಾಂಪೋನೆಂಟ್ ಯೋಜನೆಯಲ್ಲಿ ಹಂಚಿದ್ದೇವೆ. ಇದು ಲಾಭದಾಯಕವಾದ ಉದ್ಯಮವೆಂದು ಒಪ್ಪಿಕೊಳ್ಳುತ್ತೇನೆ. ಮರಿಗಳ ವೃದ್ಧಿಯಲ್ಲೂ ಅಷ್ಟೇ, ವಿದೇಶೀ ತಳಿಯ ಹಂದಿಗಳು ಒಂದು ವರ್ಷದಲ್ಲಿ ಎರಡು ಬಾರಿ ಮರಿ ಹಾಕುತ್ತವೆ. ಒಂದು ಸಲಕ್ಕೆ ೮ ಮರಿ ಹಾಕುತ್ತವೆ. ಆದ್ದರಿಂದ ಜನರೂ ಕೂಡ ಸಾಮಾಜಿಕ ನಿಬಂಧನೆಗಳಿರುವುದರಿಂದ ಅನೇಕ ಜನ ಮುಂದೆ ಬರುತ್ತಿಲ್ಲ. ಸಾಕುವುದರಿಂದ ಆರ್ಥಿಕ ಪರಿಸ್ಥಿತಿ ಸುಧಾರಣೆಯಾಗುತ್ತದೆಂದು ನಾನು ಒಪ್ಪಿಕೊಳ್ಳುತ್ತೇನೆ. ಇದಕ್ಕೆ ಹೆಚ್ಚು ಜನ ಮುಂದೆ ಬರಬೇಕು. ನಬಾರ್ಡ್‌ನಿಂದ ಸಾಲವನ್ನು ಕೊಡಿಸುತ್ತೇವೆ, ಬ್ಯಾಂಕ್‌ನವರೂ ಸಿದ್ಧರಿದ್ದಾರೆ.

ಹಂದಿ ಸಾಕಾಣಿಕೆಯ ಕಾರ್ಯಕ್ರಮ ಮಾಡಬೇಕೆಂದು ರಮೇಶ್‌ಕುಮಾರ್ ಹೇಳಿದರು. ನಾವು ಈಗಾಗಲೇ ಕೆ.ಎಸ್.ಎಫ್.ಸಿ.ಯವರಿಗೆ ಬರೆದಿದ್ದೇವೆ. ಇದನ್ನೂ ಕೂಡ ಆಗ್ರೋ ಇಂಡಸ್ಟ್ರೀಸ್ ಆಗಿ ಪರಿಗಣಿಸಿ ಎಂದು. ಅವರು ಒಪ್ಪಿಕೊಳ್ಳುವುದಿಲ್ಲ. ಆದ್ದರಿಂದ ಶ್ರೀ ಕೆ.ಹೆಚ್. ಪಾಟೀಲರು ಮತ್ತು ಆ ಕಡೆಯ ಸದಸ್ಯರು ಕೇಂದ್ರ ಸರ್ಕಾರಕ್ಕೆ ಒತ್ತಾಯ ತಂದು ಆಗ್ರೋ ಇಂಡಸ್ಟ್ರೀ ಎಂದು ಪರಿಗಣಿಸಲು ಕೋರುವಂತೆ ಇವರನ್ನು ಕೋರುತ್ತೇನೆ. ಇದರಿಂದ ಜನತೆಗೆ ಸಹಾಯವಾಗುತ್ತದೆ. ಕೆಲವು ರಿಯಾಯಿತಿಗಳೂ ಸಿಗುತ್ತವೆ. ಆ ಕಾರಣದಿಂದ ತಾವು ಪ್ರಯತ್ನ ಮಾಡಬೇಕೆಂದು ಹೇಳುತ್ತಾ ನಮ್ಮ ಇಲಾಖೆಯ ವತಿಯಿಂದ ನಾವು ಈಗಾಗಲೇ ಪ್ರಯತ್ನ ಮಾಡಿದ್ದೇವೆ ಎಂದು ತಿಳಿಸಲು ಬಯಸುತ್ತೇನೆ. ಮತ್ತೆ ಮಾನ್ಯ ಜಯಕುಮಾರ್ ಅವರು ಗುಜರಾತ್‌ನಲ್ಲಿ ಇರತಕ್ಕ "ಆನಂದ್" ರೀತಿ ಇಲ್ಲಿಯೂ ಕ್ಷೀರಕ್ರಾಂತಿ ಆಗಬೇಕೆಂದು ಕೇಳಿದ್ದಾರೆ. ನಾವು ಆ ದಿಕ್ಕಿನಲ್ಲಿ ಹೋಗುವುದಕ್ಕೆ ಹೆಜ್ಜೆಯನ್ನು ಇಟ್ಟು ಪ್ರಯತ್ನ ಮಾಡುತ್ತಿದ್ದೇವೆ. ನಾವು ಸುಮಾರು ೨,೯೦೦ ಸೊಸೈಟಿಗಳನ್ನು ಸ್ಥಾಪನೆ ಮಾಡುವುದರ ಮೂಲಕ ನಾಲ್ಕೂವರೆ ಲಕ್ಷಕ್ಕೂ ಹೆಚ್ಚು ರೈತರನ್ನು ಈಗಾಗಲೇ ಸಂಘಟನೆ ಮಾಡಿದ್ದೇವೆ. ಮತ್ತೆ ಮುಂದಿನ ವರ್ಷದಲ್ಲಿ ೬ ಲಕ್ಷ ರೈತರನ್ನು ಸಂಘಟನೆ ಮಾಡತಕ್ಕ ಕಾರ್ಯಕ್ರಮವನ್ನು ರೂಪಿಸಿಕೊಂಡಿದ್ದೇವೆ. ಆಪರೇಷನ್ ಫ್ಲಡ್-೨ನಲ್ಲಿ ೫ ಸಾವಿರ ಸಹಕಾರ ಸಂಘಗಳನ್ನು ರಚನೆ ಮಾಡಿ

ಅವರನ್ನು ಸಂಘಟನೆ ಮಾಡಿ ೧೦ ಸಾವಿರ ಲೀಟರ್ ಹಾಲು ಸಂಗ್ರಹಣೆ ಮಾಡಿ ಮಾರಾಟ ಮಾಡಬೇಕು ಎಂದು ಇದೆ. ಇನ್ನೊಂದು ವಿಚಾರ ಏನೆಂದರೆ, ಅಲ್ಲಿ ರೈತರೇ ಪೂರ್ಣ ಮಾಲೀಕತ್ವವನ್ನು ಅವರೇ ಪಡೆದುಕೊಂಡಿರುತ್ತಾರೆ ಎಂದು ಹೇಳಿದ್ದಾರೆ. ನಾವೂ ಕೂಡಾ ಈ ದಿಕ್ಕಿನಲ್ಲಿ ತಾತ್ವಿಕವಾಗಿ ನಿರ್ಣಯಕ್ಕೆ ಬಂದಿದ್ದೇವೆ. ಕೆ. ಡಿ. ಡಿ. ಸಿ. ವಿಭಾಗದಲ್ಲಿ ಈಗಾಗಲೇ ೮ ಜಿಲ್ಲೆಯಲ್ಲಿ ಏನು ೪ ಹಾಲು ಉತ್ಪಾದಕರ ಒಕ್ಕೂಟ ಇದೆಯೋ ಏನು ಡೈರಿಗಳು ಇವೆಯೋ ಅವುಗಳ ಪೂರ್ಣ ಜವಾಬ್ದಾರಿಯನ್ನು ರೈತರೇ ಹೊರ ತಕ್ಕ, ಅಡ್ಮಿನಿಸ್ಟ್ರೇಷನ್ ನೋಡಿಕೊಳ್ಳತಕ್ಕ ಅವುಗಳ ಯೂನಿಯನ್‌ಗೆ ವಹಿಸಿರಬೇಕು ಎನ್ನುವ ತಾತ್ವಿಕ ನಿರ್ಣಯವನ್ನು ಮಾಡಿದ್ದೇವೆ. ಇದಕ್ಕೆ ಸರ್ಕಾರದ ಒಪ್ಪಿಗೆ ಆಗಬೇಕಾಗಿದೆ. ಈ ದಿಕ್ಕಿನಲ್ಲಿ ನಾವು ಹೆಜ್ಜೆ ಇಟ್ಟಿದ್ದೇವೆ ಎನ್ನುವ ಮಾತನ್ನು ಹೇಳುವುದಕ್ಕೆ ಇಷ್ಟಪಡುತ್ತೇನೆ. ಮತ್ತೆ ಶ್ರೀಮಂತಿ ನಾಗರತ್ನಮ್ಮ ನವರು ಹಳ್ಳಿಗಾಡಿನ ಜನ ದನಗಳ ತೊಪ್ಪೆ, ಸೆಗಣಿ ಕಡೆ ಲಕ್ಷ್ಯ ಕೊಡದೇ ಕಷ್ಟಪಟ್ಟು ದನಗಳ ಪಾಲನೆ ಹಸುಗಳ ಪಾಲನೆ ಮಾಡುತ್ತಿರುವ ಬಗ್ಗೆ ಹೇಳಿದ್ದನ್ನು ನಾನು ಒಪ್ಪುತ್ತೇನೆ. ನಾನೂ ಕೂಡಾ ಹಳ್ಳಿ ಯಿಂದ ಬಂದವನಾಗಿರುವುದರಿಂದ ಹಸುಗಳ ಪಾಲನೆ ಮಾಡತಕ್ಕದ್ದು ಕಷ್ಟ ಇದೆ ಎಂಬುದನ್ನು ನಾನು ಒಪ್ಪುತ್ತೇನೆ. ಆದುದರಿಂದ ನಾವು ಒಂದು ದಿಕ್ಕಿನಲ್ಲಿ ಹಾಲಿನ ಬೆಲೆಯನ್ನೂ ಕೂಡಾ ೧೬–೬–೮೫ ರಲ್ಲಿ ೫೦ ಪೈಸೆಯಷ್ಟು ಹೆಚ್ಚು ಮಾಡಿದ್ದೇವೆ. ನಾನು ಮೊದಲೇ ಹೇಳಿದಹಾಗೆ, ತಾತ್ವಿಕವಾಗಿ ಡೈರಿ ಗಳನ್ನು ಅವರಿಗೇ ವಹಿಸಿಕೊಡುವುದರಿಂದ ಅವರೇ ಹಾಲಿನ ಬೆಲೆಯನ್ನು ನಿಗದಿ ಮಾಡತಕ್ಕ ಅಧಿಕಾರ ವನ್ನು ಪಡೆದುಕೊಳ್ಳುತ್ತಾರೆ. ಹಾಲಿನ ಮಾರಾಟದ ಬೆಲೆ ಮತ್ತು ಉತ್ಪಾದಕರಿಗೆ ಕೊಡತಕ್ಕ ಬೆಲೆ...

ಅಧ್ಯಕ್ಷರು.— ತಾವು ಬೇಗ ಮುಗಿಸಿ. ವಿರೋಧ ಪಕ್ಷದವರೇ ಬೇಗ ಮುಗಿಸಲು ಅವಸರ ಪಡಿಸು ತ್ತಿದ್ದಾರೆ. ಆಗಲೇ ಸಾಕಷ್ಟು ವೇಳೆ ಕೂಡಾ ಆಗಿದೆ.

ಶ್ರೀ ಸಿದ್ಧರಾಮಯ್ಯ.— ಅವನ್ನು ಅವರಿಗೆ ವಹಿಸಿಕೊಟ್ಟಮೇಲೆ ಅವರೇ ಬೆಲೆಯ ಬಗ್ಗೆ ತೀರ್ಮಾನವನ್ನು ತೆಗೆದುಕೊಳ್ಳುತ್ತಾರೆ ಎನ್ನುವ ವಿಚಾರವನ್ನು ಹೇಳುತ್ತಾ, ಇನ್ನು ಏನು ಸಲಹೆಗಳನ್ನು ಕೊಟ್ಟಿದ್ದಾರೆ, ಹಾಗೂ ಏನೇನು ಟೀಕೆಗಳನ್ನು ಮಾಡಿದ್ದಾರೆ ಅವೆಲ್ಲವನ್ನೂ ಗಮನದಲ್ಲಿ ಇಟ್ಟುಕೊಂಡು ಕಾರ್ಯರೂಪಕ್ಕೆ ತರುವುದಕ್ಕೆ ಪ್ರಯತ್ನಪಡುತ್ತೇನೆ. ಹಾಗೂ ಈ ನನ್ನ ಬೇಡಿಕೆಗಳಿಗೆ ಎಲ್ಲರೂ ಸರ್ವಾನುಮತದಿಂದ ಅಂಗೀಕಾರವನ್ನು ಕೊಡಬೇಕೆಂದು ಹೇಳಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಎಂ. ರಾಮಪ್ಪ.— ಮಾನ್ಯ ಮಂತ್ರಿಗಳು ತಮ್ಮ ಭಾಷಣವನ್ನು ಬಹಳ ದೀರ್ಘ ಮಾಡಿ ದರು. ಇವತ್ತು ಕೋಳಿ ಬಗ್ಗೆ ತಾವು ಹೇಳಿದರು. ಇದರಲ್ಲಿ ತಮ್ಮದೇ ಆದ ತಳಿ ಏನಾದರೂ ಇದೆಯೇ ? ಇವತ್ತು ನಿಮ್ಮ ಫಾರಂನಲ್ಲಿ ಯಾವುದೋ ಒಂದು ಬ್ರೀಡ್ ತಯಾರು ಮಾಡಿಕೊಡ ತಕ್ಕದ್ದನ್ನು ನಾವು ಖರೀದಿ ಮಾಡುತ್ತೇವೆ ಇವತ್ತು ನಿಮ್ಮದೇ ಸ್ವಂತದ್ದು ಏನಾದರೂ ಬ್ರೀಡ್ ತಯಾರು ಮಾಡತಕ್ಕ ಕಾರ್ಯಕ್ರಮ ಇದೆಯೇ ?

ಶ್ರೀ ಸಿದ್ಧರಾಮಯ್ಯ.— ಅಧ್ಯಕ್ಷರೇ, ಕೋಳಿ ಬಗ್ಗೆ ಅವರು ಸಾಕಷ್ಟು ತಿಳಿದುಕೊಂಡಿಲ್ಲ ಎನಿಸು ತ್ತದೆ. ಕರ್ನಾಟಕದಲ್ಲಿ ನಮ್ಮ ಇಲಾಖೆಯ ವತಿಯಿಂದ ಇರತಕ್ಕದ್ದು ಮೈಚಿಕ್ಸ್ ತಳಿ. ಇದು ರಾಜ್ಯ ದಲ್ಲೇ ಅಲ್ಲ ದೇಶದಲ್ಲೇ ಉತ್ತಮವಾದ ತಳಿ ಎಂಬ ಹೆಸರನ್ನು ಪಡೆದಿದೆ. ಈ ತಳಿಯನ್ನು ನಾವು ಅಭಿವೃದ್ಧಿಪಡಿಸುತ್ತಿದ್ದೇವೆ. ಇದನ್ನು ರೈತರಿಗೆ ಕೊಡತಕ್ಕ ಕಾರ್ಯಕ್ರಮವನ್ನು ಇಟ್ಟುಕೊಂಡಿದ್ದೇವೆ. ಆದುದರಿಂದ ಮಾನ್ಯ ರಾಮಪ್ಪನವರಿಗೆ ನಮ್ಮ ಇಲಾಖೆಯ ವತಿಯಿಂದ ಮೈಚಿಕ್ಸ್ ತಳಿಯನ್ನು ಅಭಿವೃದ್ಧಿ ಮಾಡುತ್ತಿರುವ ವಿಷಯ ತಿಳಿದಿರಲಿ ಎಂದು ಇದನ್ನು ಹೇಳುತ್ತಿದ್ದೇನೆ.

ಶ್ರೀ ಆರ್. ಎಲ್. ಜಾಲಪ್ಪ.— ಅಧ್ಯಕ್ಷರೇ, ನಾನು ರಾಮಪ್ಪನವರ ಫಾರಂಗೆ ಹೋಗಿದ್ದೆ. ಅವರು ಯಾವಾಗ ನೋಡಿದರೂ ಲಾಸ್ ಲಾಸ್ ಎಂದು ಹೇಳುತ್ತಿದ್ದರು. ಮಾನ್ಯ ರಾಮಪ್ಪನವರ ಅವರ ಫಾರಂನಲ್ಲಿರುವ ಅರ್ಧ ಭಾಗ ಕೋಳಿಗಳನ್ನು ತಿಂದುಹಾಕುತ್ತಾರೆ. ಲಾಸ್ ಆಗದೇ ಮತ್ತೆ ಇನ್ನೇನು ಆಗುತ್ತದೆ ?

ಅಧ್ಯಕ್ಷರು.— ಈಗ ಉತ್ತರ ಹಾಗೂ ವಿತರಣೆ ಮುಕ್ತಾಯವಾಯಿತು. ಬೇಡಿಕೆ ಸಂಖ್ಯೆ, ೧, ೧೧, ೧೨ ಮತ್ತು ೪೭— ಇವುಗಳಿಗೆ ಸಂಬಂಧಪಟ್ಟಹಾಗೆ ಮಂತ್ರಿಗಳು ನಾಳೆ ಸಭೆಗೆ ಉತ್ತರವನ್ನು ಕೊಡುತ್ತಾರೆ. ಈಗ ಉಳಿದಿರತಕ್ಕ ಬೇಡಿಕೆಗಳನ್ನು ಮತಕ್ಕೆ ಹಾಕುತ್ತೇನೆ.

“೩೧–೩–೧೯೮೭ಕ್ಕೆ ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ಬೇಡಿಕೆ ಸಂಖ್ಯೆ ೪, ೪೭, ೨ ಮತ್ತು ೩ — ಇವುಗಳಿಗೆ ಸಂಬಂಧಿಸಿದಂತೆ ಸಂದಾಯ ಮಾಡುವಲ್ಲಿ ಬರತಕ್ಕ ವೆಚ್ಚವನ್ನು

ವಹಿಸಲು ಸರ್ಕಾರಕ್ಕೆ ಲೇಖಾನುದಾನದಲ್ಲಿ ಮಂಜೂರಾದ ಮೊತ್ತವೂ ಸೇರಿದಂತೆ ಬೇಡಿಕೆಯ ಪಟ್ಟಿಯಲ್ಲಿರುವ ಮೊತ್ತಕ್ಕೆ ಮೀರದ ಮೊಬಲಗನ್ನು ಮಂಜೂರು ಮಾಡಬೇಕು.''
ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಮತ್ತು ಬೇಡಿಕೆಗಳಿಗೆ ಮಂಜೂರಾತಿ ನೀಡಲಾಯಿತು.

(ಸಭಾಧ್ಯಕ್ಷರ ಅಪ್ಪಣೆ ಮೇರೆಗೆ ಮಂಜೂರಾದ ಬೇಡಿಕೆಗಳನ್ನು ಪುನರ್‌ನಮೂದಿಸಲಾಗಿದೆ)

ಅಭಿಯಾಚನೆ ಕ್ರಮಾಂಕ ೪ — ಮೀನುಗಾರಿಕೆ ;

ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ ೩೧-೩-೧೯೮೭ ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ಮೀನುಗಾರಿಕೆಗೆ ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರ್ಕಾರಕ್ಕೆ ರಾಜಸ್ವ ಖಾತೆಯಲ್ಲಿ ೫೪, ೪೦,೦೦೦ರೂ. ಗಳಿಗಿಂತ ಮೀರದ ಮೊತ್ತವನ್ನು ಮತ್ತು ಬಂಡವಾಳ ಖಾತೆಯಲ್ಲಿ ೯೬, ೦೫,೦೦೦ ರೂಗಳಿಗಿಂತ ಮೀರದ ಮೊತ್ತವನ್ನು ಮಂಜೂರು ಮಾಡುವುದು.

ಅಭಿಯಾಚನೆ ಕ್ರಮಾಂಕ ೪೭ — ರೇವು ಮತ್ತು ಜಲ ಸಾರಿಗೆ ಸೇವೆ.

ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ ೩೧-೩-೧೯೮೭ ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ರೇವು ಮತ್ತು ಜಲ ಸಾರಿಗೆ ಸೇವೆಗಳಿಗೆ ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರಕಾರಕ್ಕೆ ರಾಜಸ್ವ ಖಾತೆಯಲ್ಲಿ ೧೫, ೩೮,೦೦೦ ರೂ.ಗಳಿಗಿಂತ ಮೀರದ ಮೊತ್ತವನ್ನು ಮತ್ತು ಬಂಡವಾಳ ಖಾತೆಯಲ್ಲಿ ೪೯೮, ೫೦,೦೦೦ ರೂ.ಗಳಿಗಿಂತ ಮೀರದ ಮೊತ್ತವನ್ನು ಮಂಜೂರು ಮಾಡುವುದು.

ಅಭಿಯಾಚನೆ ಕ್ರಮಾಂಕ ೭ — ತೋಟಗಾರಿಕೆ.

ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ ೩೧-೩-೧೯೮೭ ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ತೋಟಗಾರಿಕೆಗೆ ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರಕಾರಕ್ಕೆ ರಾಜಸ್ವ ಖಾತೆಯಲ್ಲಿ ೯, ೮೭, ೩೧,೦೦೦ ರೂ.ಗಳಿಗಿಂತ ಮೀರದ ಮೊತ್ತವನ್ನು ಮಂಜೂರು ಮಾಡುವುದು.

ಅಭಿಯಾಚನೆ ಕ್ರಮಾಂಕ ೩ — ಪಶುಸಂಗೋಪನ ಮತ್ತು ಡೇರಿ ಅಭಿವೃದ್ಧಿ.

ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ ೩೧-೩-೧೯೮೭ ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ಪಶುಸಂಗೋಪನಾ ಮತ್ತು ಡೈರಿ ಅಭಿವೃದ್ಧಿಗಳಿಗೆ ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರ್ಕಾರಕ್ಕೆ ರಾಜಸ್ವ ಖಾತೆಯಲ್ಲಿ ೭೬, ೬೮, ೮೪,೦೦೦ ರೂ.ಗಳಿಗಿಂತ ಮೀರದ ಮೊತ್ತವನ್ನು ಮತ್ತು ಬಂಡವಾಳ ಖಾತೆಯಲ್ಲಿ ೩,೦೦,೦೦,೦೦೦ ರೂ.ಗಳಿಗಿಂತ ಮೀರದ ಮೊತ್ತವನ್ನು ಮಂಜೂರು ಮಾಡುವುದು.

ಅಧ್ಯಕ್ಷರು.-- ಸಭೆಯು ಈಗ ಮುಕ್ತಾಯವಾಗಿ ಮತ್ತೆ ನಾಳೆ ಬೆಳಿಗ್ಗೆ ೯ ಗಂಟೆಗೆ ಸಮಾವೇಶಗೊಳ್ಳುವುದು.

(ಸಭೆಯು ೧೦ ಗಂಟೆ ೪೫ ನಿಮಿಷಗಳಿಗೆ ಮುಕ್ತಾಯವಾಗಿ ಪುನ: ೧೩ನೇ ಮಾರ್ಚಿ ೧೯೮೬ನೇ ಗುರುವಾರ ಬೆಳಿಗ್ಗೆ ೯-೦೦ ಗಂಟೆಗೆ ಸಮಾವೇಶಗೊಳ್ಳಲು ನಿಶ್ಚಯಿಸಲಾಯಿತು.)